ಪ್ರ: ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ, ಮೂರುಸಾವಿರಮಠ, ಹುಬ್ಬಳ್ಳಿ. ೧೯೩೭ (ಪ್ರ. ಆ)

ಕುಸ್ತಿ ಆಗಮದ ವಚನಗಳು*
(ಇದು ವಚನ ಸಂಕಲನ ಸಂಪುಟ–೧ ಈ ಕೃತಿಯ ಒಂದು ಭಾಗ)
ಸಂ: ಡಾ. ಬಿ. ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನಸಂಸ್ಥೆ ಶ್ರೀ ತೋಂಟದಾರ್ಯಮಠ, ಗದಗ, ೧೯೯೦ (ಪ್ರ. ಆ)

ಗಣದಾಸಿವೀರಣ್ಣನ ವಚನಗಳು
–ಗಣದಾಸಿ ವೀರಣ್ಣ
ಸಂ: ಶ್ರೀ ಎಸ್. ಎಸ್. ಭೂಸರಡ್ಡಿ
ಪ್ರ: ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ ಮೂರುಸಾವಿರಮಠ, ಹುಬ್ಬಳ್ಳಿ, ೧೯೭೭ (ಪ್ರ. ಆ)

ಗಣಭಾಷಿತ ರತ್ನಮಾಲೆ
–ಗುಬ್ಬಿಯ ಮಲ್ಲಣ್ಣ
ಸಂ: ಶ್ರೀ ಪ್ರಭುಸ್ವಾಮಿಗಳು
ಪ್ರ: ಶ್ರೀ ಬಾಲಲೀಲಾ ಮಹಾಂತಶೀವಯೋಗಿಶ್ವರ ಗ್ರಂಥಮಾಲೆ ಮುರುಘಾಮಠ, ಧಾರವಾಡ. ೧೯೪೮ (ಪ್ರ. ಆ.)

---

* 'ಕುಸ್ತಿ ಆಗಮ' ಹೆಸರಿನ ಕಾವ್ಯದಲ್ಲಿಯ ವಚನಗಳ ಪ್ರಾಚೀನ ಸಂಗ್ರಹವಿದು

ಗುರುಭೋದಾಮೃತ (ಕಾವ್ಯ)
–ವಿರತ ಮಹಾಲಿಂಗದೇವರು
ಸಂ: ಡಿ. ಸಿದ್ಧಲಿಂಗಯ್ಯ ಬಿ. ಮರಿಬಸವಾರಾಧ್ಯ
ಪ್ರ: ಕನ್ನಡ ಅಧ್ಯಯನಸಂಸ್ಥೆ, ಮೈಸೂರು, ೧೯೭೪ (ಪ್ರ. ಆ.)

ಗೊಹೇಶ್ವರಯ್ಯನ ವಚನ
(ಇದು ವಚನ ಸಂಕಲ ಸಂಪುಟ–೧ ಈ ಕೃತಿಯ ಒಂದು ಭಾಗ)
ಸಂ: ಡಾ. ಬಿ. ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ, ೧೯೯೦ (ಪ್ರ. ಆ)

ಘನಲಿಂಗಿದೇವರ ವಚನಗಳು
ಸಂ: ಶಿವರಾತ್ರಿ ರಾಜೇಂದ್ರ ಸ್ವಾಮಿಗಳು
ಪ್ರ: ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೬೪ (ಪ್ರ. ಆ)

ಚಿತ್ಕ್ರಿಯಾ ಸಂಗ್ರಹ
–ಜಿಗುನಿ ಮರುಳದೇವರು
(ಇದು 'ಜಿಗುನಿ ಮರುಳದೇವರ ಕೃತಿಗಳು' ಈ ಕೃತಿಯ ಒಂದು ಭಾಗ)
ಸಂ: ಡಾ. ಎಸ್. ವಿದ್ಯಾಶಂಕರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯಮಠ, ಗದಗ, ೧೯೮೩ (ಪ್ರ. ಆ)

ಚಿದ್ಭಸ್ಮಮಣಿಮಂತ್ರಮಹಾತ್ಮೆಯ ಸ್ಥಲದ ವಚನ
–ಜಟಾಶಂಕರದೇವರು
(ಇದು ವಚನ ಸಂಕಲನ ಸಂಪುಟ–೧ ಈ ಕೃತಿಯ ಒಂದು ಭಾಗ)
ಸಂ: ಡಾ. ಬಿ. ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನಸಂಸ್ಥೆ ಶ್ರೀ ತೋಂಟದಾರ್ಯಮಠ, ಗದಗ, ೧೯೯೦ (ಪ್ರ. ಆ)

ಚಿದೈಶ್ವರ್ಯ ಚಿದಾಭರಣ
–ಗುರುಸಿದ್ಧದೇವರು
ಸಂ: ಪಿ. ಎಂ. ಗಿರಿರಾಜು
ಪ್ರ: ಶರಣ ಸಂತಾನ ಸಂಪಾದನ, ಶರಣ ಸಂತಾನ (ತ್ರೈಮಾಸಿಕ) ೪೪೭ ಸಂತೆಪೇಟೆ, ಮೈಸೂರು, ೧೯೮೫ (ಪ್ರ. ಆ)

ಚೆನ್ನಬಸವಣ್ಣನವರ ಷಡುಸ್ಥಲದ ನಿರ್ಣಯ
(ಇದು "ಚೆನ್ನಬಸವಣ್ಣನವರ ಷಟ್‌ಸ್ಥಲ ವಚನ ಮಹಾಸಂಪುಟ"ದ ಒಂದು ಭಾಗ)
ಸಂ: ಡಾ. ಎಂ. ಎಂ. ಕಲಬುರ್ಗಿ
ಪ್ರ: ವೀರಶೈವ ಅಧ್ಯಯನಸಂಸ್ಥೆ ಶ್ರೀ ತೋಂಟದಾರ್ಯಮಠ, ಗದಗ, ೧೯೯೦ (ಪ್ರ. ಆ)

ಚೆನ್ನಬಸವರಾಜದೇವರ ಷಡುಸ್ಥಲದ ವಚನ
(ಇದು "ಚೆನ್ನಬಸವಣ್ಣನವರ ಷಟ್‌ಸ್ಥಲ ವಚನ ಮಹಾಸಂಪುಟ"ದ ಒಂದು ಭಾಗ)
ಸಂ: ಡಾ. ಎಂ. ಎಂ. ಕಲಬುರ್ಗಿ
ಪ್ರ: ವೀರಶೈವ ಅಧ್ಯಯನಸಂಸ್ಥೆ ಶ್ರೀ ತೋಂಟದಾರ್ಯಮಠ, ಗದಗ, ೧೯೯೦ (ಪ್ರ. ಆ)

ಚೆನ್ನಬಸವೇಶ್ವರದೇವರ ರಾಜಯೋಗದ ವಚನ
(ಇದು ವಚನ ಸಂಕಲನ ಸಂಪುಟ–೨ ಈ ಕೃತಿಯ ಒಂದು ಭಾಗ)
ಸಂ: ಪ್ರೊ. ಜಿ ಎ. ಶಿವಲಿಂಗಯ್ಯ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯಮಠ, ಗದಗ, ೧೯೯೦ (ಪ್ರ. ಆ)

ಚೆನ್ನಬಸವೇಶ್ವರದೇವರು ನಿರೂಪಿಸಿದ ಅನುಭಾವ ಷಟ್ಸ್ಥಲದ ವಚನಗಳು
(ಇದು "ಚೆನ್ನಬಸವಣ್ಣನವರ ಷಟ್‌ಸ್ಥಲ ವಚನ ಮಹಾಸಂಪುಟ"ದ ಒಂದು ಭಾಗ)
ಸಂ: ಡಾ. ಎಂ. ಎಂ. ಕಲಬುರ್ಗಿ
ಪ್ರ: ವೀರಶೈವ ಅಧ್ಯಯನಸಂಸ್ಥೆ ಶ್ರೀ ತೋಂಟದಾರ್ಯಮಠ, ಗದಗ, ೧೯೯೦ (ಪ್ರ. ಆ)

ಚೆನ್ನಬಸವೇಶ್ವರದೇವರ ಸ್ತೋತ್ರದ ವಚನಗಳು
ಸಂ: ಜಿ ಎ. ಶಿವಲಿಂಗಯ್ಯ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯಮಠ, ಗದಗ, ೧೯೯೧ (ಪ್ರ. ಆ)

ಜಂಗಮಸ್ಥಲದ ಆಚರಣೆಯ ನಿರ್ಣಯದ ವಚನಗಳು
(ಇದು ವಚನ ಸಂಕಲನ ಸಂಪುಟ–೧ ಈ ಕೃತಿಯ ಒಂದು ಭಾಗ)
ಸಂ: ಡಾ. ಬಿ. ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯಮಠ, ಗದಗ, ೧೯೯೦ (ಪ್ರ. ಆ)

'ನಂಜುಂಡ ಶಿವಾ' ಅಂಕಿತದ ವಚನಗಳು
(ಇದು ವಚನ ಸಂಕಲನ ಸಂಪುಟ–೧ ಈ ಕೃತಿಯ ಒಂದು ಭಾಗ)
ಸಂ: ಡಾ. ಬಿ. ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ, ೧೯೯೦ (ಪ್ರ. ಆ)

'ನಿಜಗುರು ನಿರಾಲಂಬ ಪ್ರಭುವೆ' ಅಂಕಿತದ ವಚನಗಳು
(ಇದು ವಚನ ಸಂಕಲನ ಸಂಪುಟ-೧ ಈ ಕೃತಿಯ ಒಂದು ಭಾಗ)
ಸಂ: ಡಾ. ಬಿ. ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ, ೧೯೯೦ (ಪ್ರ. ಆ)

ನಿರಸನದ ವಚನಗಳು
(ಇದು ವಚನ ಸಂಕಲನ ಸಂಪುಟ-೧ ಈ ಕೃತಿಯ ಒಂದು ಭಾಗ)
ಸಂ: ಡಾ. ಬಿ. ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ, ೧೯೯೦ (ಪ್ರ. ಆ)

ನಿರಾಲಂಬ ಪ್ರಭುದೇವನ ವಚನಗಳು
(ಇದು ವಚನ ಸಂಕಲನ ಸಂಪುಟ-೧ ಈ ಕೃತಿಯ ಒಂದು ಭಾಗ)
ಸಂ: ಡಾ. ಬಿ. ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ, ೧೯೯೦ (ಪ್ರ. ಆ)

ನಿರಾಳ ಮಂತ್ರಗೋಪ್ಯ
-ಜಕ್ಕಣ್ಣಯ್ಯ
ಸಂ: ಡಾ. ಬಿ. ವ್ಹಿ. ಶಿರೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ
೧೯೮೨ (ಪ್ರ. ಆ)

ಪರಂಜ್ಯೋತಿಯರ ವಚನ
(ಇದು ವಚನ ಸಂಕಲನ ಸಂಪುಟ-೧ ಈ ಕೃತಿಯ ಒಂದು ಭಾಗ)
ಸಂ: ಡಾ. ಬಿ. ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ,೧೯೯೦ (ಪ್ರ. ಆ)

ಪರಮಮೂಲಜ್ಞಾನ ಷಟ್‌ಸ್ಥಲ
-ಚಿಕ್ಕವೀರಣ್ಣೊಡೆಯ
ಸಂ: ಡಾ: ಎಂ. ಎಸ್. ಸುಂಕಾಪೂರ
ಪ್ರ: ಕನ್ನಡ ಅಧ್ಯಯನಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೭ (ಪ್ರ. ಆ)

ಪ್ರಭುದೇವರ ಪಟ್‌ಸ್ಥಲ ಜಂಗಮಸ್ಥಲ ನಿರ್ದೇಶ
ಸಂ: ಡಾ. ಎಂ. ಎಸ್. ಸುಂಕಾಪೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀತೋಂಟದಾರ್ಯಮಠ, ಗದಗ, ೧೯೮೯ (ಪ್ರ. ಆ)

ಪ್ರಭುದೇವರ ಸ್ತೋತ್ರದ ವಚನಗಳು
–ಸಂಪಾದನೆಯ ಸಿದ್ಧವೀರಣ್ಣದೇವರು
(ಇದು ವಚನ ಸಂಕಲನ ಸಂಪುಟ–೨ ಈ ಕೃತಿಯ ಒಂದು ಭಾಗ)
ಸಂ : ಎಸ್. ಶಿವಣ್ಣ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀತೋಂಟದಾರ್ಯಮಠ, ಗದಗ, ೧೯೯೧ (ಪ್ರ. ಆ)

ಪ್ರಭುಲಿಂಗಲೀಲೆ(ಕಾವ್ಯ)
–ಚಾಮರಸ
ಸಂ: ಶ್ರೀ ಶಿ. ಶಿ. ಬಸವನಾಳ
ಪ್ರ: ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಧಾರವಾಡ, ೧೯೩೮(ಪ್ರ. ಆ.)

ಪ್ರಭುಲಿಂಗದ ಕಂದ(ಕಾವ್ಯ)
(ಇದು "ಮುರಿಗೆ ಶಾಂತವೀರಸ್ವಾಮಿಗಳ ಕೃತಿಗಳು" ಈ ಗ್ರಂಥದ ಒಂದು ಭಾಗ)
ಸಂ : ಎಸ್. ಶಿವಣ್ಣ
ಪ್ರ: ಶ್ರೀ ಬ್ರಹನ್ಮಠ ಸಂಸ್ಥಾನ ಚಿತ್ರದುರ್ಗ, ೧೯೮೯(ಪ್ರ.ಆ)

ಪ್ರಸಾದಿಸ್ಥಲದ ವಚನಗಳು
ಸಂ: ಡಾ. ಎಂ. ಎಸ್. ಸುಂಕಾಪೂರ
ಪ್ರ: ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೭(ಪ್ರ. ಆ)

ಬಸವಣ್ಣನವರ ಷಟ್‌ಸ್ಥಳದ ವಚನಗಳು
ಸಂ: ಶ್ರೀ ಶಿ. ಶಿ. ಬಸವನಾಳ
ಪ್ರ: ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಧಾರವಾಡ, ೧೯೬೨(ಪ್ರ. ಆ.–ಗ್ರಂಥಾಲಯ ಸಂಸ್ಕರಣ)

ಬಸವಸ್ತೋತ್ರದ ವಚನಗಳು : ೧
–ಬೋಳಬಸವರಾಜದೇರು
ಸಂ: ಡಾ ಎಂ. ಎಂ. ಕಲಬುರ್ಗಿ
ಪ್ರ: ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೬ (ಪ್ರ. ಆ)

ಬಸವಸ್ತೋತ್ರದ ವಚನಗಳು
-ಚೆನ್ನಂಜೆದೇವರು
ಸಂ: ಡಾ. ಎಂ. ಎಂ. ಕಲಬುರ್ಗಿ
ಪ್ರ: ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬ (ಪ್ರ. ಆ)

ಬಸವಸ್ತೋತ್ರದ ವಚನಗಳು-೨
-ಸಂಪಾದನೆಯ ಬೋಳಬಸವೇಶ್ವರದೇವರು
(ಇದು ವಚನ ಸಂಕಲ ಸಂಪುಟ-೧ ಈ ಕೃತಿಯ ಒಂದು ಭಾಗ)
ಸಂ: ಡಾ. ಬಿ. ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀತೋಂಟದಾರ್ಯಮಠ, ಗದಗ, ೧೯೯೦ (ಪ್ರ. ಆ)

ಬಾಲಸಂಗಯ್ಯನ ವಚನಗಳು
-ಬಾಲಸಂಗಯ್ಯ
ಸಂ: ಡಾ. ಎಂ. ಎಸ್. ಸುಂಕಾಪೂರ
ಪ್ರ: ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೬ (ಪ್ರ. ಆ)

ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ
-ಕರಸ್ಥಲದ ಮಲ್ಲಿನಾಥ ಒಡೆಯ
ಸಂ: ಡಾ. ಆರ್. ಸಿ. ಹಿರೇಮಠ
ಪ್ರ: ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೩ (ಪ್ರ. ಆ)

ಭಕ್ತ್ಯಾನಂದಸುಧಾರ್ಣವ
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯಮಠ, ಗದಗ, ೧೯೮೫ (ಪ್ರ. ಆ)

ಭಿಕ್ಷದ ಸಂಗಯ್ಯನ ವಚನಗಳು
-ಭಿಕ್ಷದ ಸಂಗಯ್ಯ
ಹೇಮಕೂಟ (ಪತ್ರಿಕೆ) : ೧-೧೦ (೧೯೭೬) ಕೊಟ್ಟೂರೇಶ್ವರಮಠ, ಹೊಸಪೇಟೆ.

ಮಹಾದೇವಿಯಕ್ಕನ ಸಾಂಗತ್ಯ
-ರಾಚಕವಿ
ಸಂ: ಎಸ್. ವಿದ್ಯಾಶಂಕರ
ಪ್ರ: ತರಳಬಾಳು ಪ್ರಕಾಶನ, ಸಿರಿಗೆರೆ, ೧೯೮೫ (ಪ್ರ. ಆ)

ಮಿಶ್ರಸ್ತೋತ್ರದ ವಚನ
–ಸಂಪಾದನೆಯ ಶ್ರೀ ಚೆನ್ನಂಜೇದೇವರು
ಸಂ: ಪ್ರಭುಸ್ವಾಮಿಗಳು ಹೊಸಹಳ್ಳಿ.
ಪ್ರ: ಬೂದಿಸ್ವಾಮಿ ಸಂಸ್ಥಾನಮಠ ಹೊಸಹಳ್ಳಿ.

ಮಿಶ್ರಸ್ತೋತ್ರದ ವಚನಗಳು
–ಎಳಮಲೆಯ ಗುರುಶಾಂತದೇವರು
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯಮಠ, ಗದಗ, ೧೯೮೩ (ಪ್ರ. ಆ)

ಮುಕ್ತ್ಯಂಗನಾ ಕಂಠಮಾಲೆ
–ಸ್ವತಂತ್ರ ಸಿದ್ಧಲಿಂಗೇಶ್ವರ
ಸಂ: ಡಾ. ಎಚ್. ಪಿ. ಮಲ್ಲೇದೇವರು
ಪ್ರ: ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೫ (ಪ್ರ. ಆ)

ಮುಕ್ತಿಕಂಠಾಭರಣ*
ಸಂ: ಡಾ. ಆರ್. ಸಿ ಹಿರೇಮಠ
ಪ್ರ: ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೧ (ಪ್ರ. ಆ)

ಮುದ್ವೀರಸ್ವಾಮಿಯ ಶಾಂಭವಿನಿರ್ಣಯದ ವಚನ
(ಇದು "ಹಾಗಲವಾಡಿ ಮುದ್ವೀತ ಸ್ವಾಮಿಯ ಸ್ವರವಚನಗಳು" ಈ ಕೃತಿಯ ಒಂದು ಭಾಗ)
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ, ೧೯೮೬ (ಪ್ರ. ಆ)

ಲಿಂಗಚಿದಮೃತಬೋಧೆ
–ಶಾಂತಬಸವೇಶ್ವರ
ಸಂ: ಡಾ. ಎಂ. ಎಸ್. ಸುಂಕಾಪೂರ
ಪ್ರ: ಕನ್ನಡ ಅಧ್ಯಯನಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೫ (ಪ್ರ. ಆ)

---

* ಈ ಪುಸ್ತಕದಿಂದ ಸಿದ್ಧವೀರದೇಶೀಕೇಂದ್ರನನ್ನು ಮಾತ್ರ ಪರಿಗಣಿಸಲಾಗಿದೆ.

ಲಿಂಗಮ್ಮನ ಬೋಧೆಯ ವಚನಗಳು

(ಇದು "ಶಿವಶರಣೆಯರ ವಚನಗಳು" ಕೃತಿಯ ಒಂದು ಭಾಗ)

ಸಂ: ಡಾ. ಆರ್. ಸಿ. ಹಿರೇಮಠ

ಪ್ರ: ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೬೮ (ಪ್ರ. ಆ)

ಲಿಂಗಲೀಲಾವಿಲಾಸ ಚಾರಿತ್ರ

-ಕಲ್ಲುಮಠದ ಪ್ರಭುದೇವರು

ಸಂ: ಸಂ. ಶಿ. ಭೂಸನೂರಮಠ

ಪ್ರ: ಶ್ರೀ ನಿ. ಪ್ರ. ಸ್ವ. ಮಹಾಂತಸ್ವಾಮಿಗಳು ಗುರು ಮೃತ್ಯುಂಜಯ ಮಹಾಸ್ವಾಮಿಗಳು ಮುರುಘಾಮಠ, ಧಾರವಾಡ, ೧೯೫೬ (ಪ್ರ. ಆ)

ಲಿಂಗವಿಕಳಾವಸ್ಥೆಯ ವಚನಗಳು

-ಎಳಮಲೆಯ ಗುರುಶಾಂತದೇವರು

ಸಂ: ಡಾ. ವೀರಣ್ಣ ರಾಜೂರ

ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ, ೧೯೮೩ (ಪ್ರ. ಆ)

ಲಿಂಗಸಾವಧಾನದ ವಚನಗಳು

-ಸಣ್ಣ ಬರಹದ ಗುರುಬಸವರಾಜದೇವರು

(ಇದು ವಚನ ಸಂಕಲನ ಸಂಪುಟ-೧ ಈ ಕೃತಿಯ ಒಂದು ಭಾಗ)

ಸಂ: ಡಾ. ಬಿ. ಆರ್. ಹಿರೇಮಠ

ಪ್ರ: ವೀರಶೈವ ಅಧ್ಯಯನಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ,೧೯೯೦ (ಪ್ರ. ಆ)

ಲಿಂಗಸ್ತೋತ್ರದ ವಚನಗಳು

-ಸಂಪಾದನೆಯ ಸಿದ್ಧವೀರಣ್ಣದೇವರು

ಸಂ: ಶ್ರೀ ವೀರಭದ್ರಪ್ಪ ಕೊಪ್ಪಳ

ಪ್ರ: ಶ್ರೀ ಗುರು ಬಸವ ಮಂಟಪ ಟ್ರಸ್ಟ ಕಮೀಟಿ, ಹುಬ್ಬಳ್ಳಿ, ೧೯೬೪ (ಪ್ರ. ಆ)

ವಚನಸಾರ

ಸಂ: ಡಾ. ವೀರಣ್ಣ ರಾಜೂರ

ಪ್ರ: ವೀರಶೈವ ಅಧ್ಯಯನಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ, ೧೯೮೯ (ಪ್ರ. ಆ)

ವಚನಾಮೃತ ಸಾರ
ಸಂ: ಪ್ರೋ. ಕಾಶಿಪುಟ್ಟಸೋಮಾರಾಧ್ಯ ಡಾ. ವೀರಣ್ಣ ರಾಜೂರ
ಪ್ರ: ಮಂಗಳ ಪ್ರಕಾಶನ ಕಲ್ಯಾಣನಗರ, ಧಾರವಾಡ, ೧೯೭೯ (ಪ್ರ. ಆ)

ವಚನೈಕೋತ್ತರ ಶತಸ್ಥಲ
–ಚೆನ್ನಬಸವಣ್ಣ
ಸಂ: ಜಿ. ಎ. ಶಿವಲಿಂಗಯ್ಯ
ಪ್ರ: ವೀರಶೈವ ಅಧ್ಯಯನಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ, ೧೯೮೩ (ಪ್ರ. ಆ)

ವಿರತಾಚರಣೆಯ ಶರಣಸಂಬಂಧದ ವಚನಗಳು
–ಶಂಕರದೇವರು
ಸಂ: ಪಿ. ಎಂ. ಗಿರಿರಾಜು
ಪ್ರ: ಶರಣ ಸಂತಾನ ಸಂಪಾದನ, ಶರಣಸಂತಾನ (ತ್ರೈಮಾಸಿಕ) ೪೪೭ ಸಂತೆಪೇಟೆ, ಮೈಸೂರು, ೧೯೭೯ (ಪ್ರ. ಆ)

ವಿಶೇಷಾನುಭವಷಟ್‌ಸ್ಥಲ
–ಚೆನ್ನವೀರಾಚಾರ್ಯ
ಸಂ: ಡಾ. ಆರ್. ಸಿ. ಹಿರೇಮಠ
ಪ್ರ: ಕನ್ನಡ ಅಧ್ಯಯನಸಂಸ್ಥೆ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೧ (ಪ್ರ. ಆ)

ವೀರಶೈವ ಚಿಂತಾಮಣಿ
–ಮಹದ್ದೇವಯೋಗಿ
ಸಂ: ಡಾ. ಆರ್. ಸಿ. ಹಿರೇಮಠ
ಪ್ರ: ಕನ್ನಡ ಅಧ್ಯಯನಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೧(ಪ್ರ. ಆ)

ವೇದಸಂಜೀವಿನಿಯು
–ಮುಮ್ಮಡಿ ಕಾರ್ಯೇಂದ್ರ
ಸಂ: ಮೈಸೂರು ಹೊಸಮಠದ ಚರಮೂರ್ತಿ ಶ್ರೀ ಬಸವಲಿಂಗ ಸ್ವಾಮಿಗಳು ಮುದ್ರಣ: ಜಿ.ಟಿ.ಎ. ಪ್ರೆಸ್, ಮೈಸೂರು, ೧೯೦೯ (ಪ್ರ. ಆ)

ಶರಣ ಚಾರಿತ್ರದ ವಚನಗಳು
–ಸಂಪಾದನೆಯ ಸಣ್ಣ ಬರಹದ ಗುರುಬಸವರಾಜದೇವರು
ಸಂ: ಡಾ. ಬಿ. ವ್ಹಿ. ಶಿರೂರ
ಪ್ರ: ವೀರಶೈವ ಅಧ್ಯಯನಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ, ೧೯೮೪ (ಪ್ರ. ಆ)

ಶರಣಮುಖಮಂಡನ
ಸಂ: ಡಾ. ಬಿ. ವ್ಹಿ. ಶಿರೂರ
ಶ್ರೀ ಬಿ. ಆರ್. ಹೂಗಾರ
ಪ್ರ: ವೀರಶೈವ ಅಧ್ಯಯನಸಂಸ್ಥೆ ಶ್ರೀ ತೋಂಟದಾರ್ಯಮಠ, ಗದಗ, ೧೯೮೮ (ಪ್ರ. ಆ)

ಶರಣಸ್ತೋತ್ರದ ವಚನಗಳು
–ಎಳಮಲೆಯ ಗುರುಶಾಂತದೇವರು
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನಸಂಸ್ಥೆ, ಶ್ರೀ ತೋಂಟದಾರ್ಯ ಮಠ, ಗದಗ, ೧೯೮೩ (ಪ್ರ. ಆ)

ಶಿಖಾರತ್ನ ಪ್ರಕಾಶವು
–ಕೂಡಲಸಂಗಮಾವಧೂತ (ಬಾಲಸಂಗಯ್ಯ)
ಸಂ: ?
ಮುದ್ರಣ : ಬಳ್ಳಾರಿಯ ಚಿತ್ರಲಿಪಿ ಶಾರದಾ ಮುದ್ರಾಕ್ಷರ ಶಾಲೆ, ೧೮೮೩ (ಪ್ರ. ಆ)

ಶಿವತತ್ತ್ವ ಚಿಂತಾಮಣಿ (ಕಾವ್ಯ)
–ಲಕ್ಕಣ್ಣ ದಂಡೇಶ
ಸಂ: ಎಚ್. ದೇವೀರಪ್ಪ
ಪ್ರ: ಓರಿಯಂಟಲ್ ರೀಸರ್ಚ ಇನ್ಸ್ಟಿಟ್ಯೂಟ್ ಮೈಸೂರು, ೧೯೬೦ (ಪ್ರ. ಆ)

ಶಿವನ ಬಿರುದಾವಳಿ ಸ್ತೋತ್ರದ ವಚನಗಳು
–ಸಂಪಾದನೆಯ ಸಿದ್ಧವೀರಣ್ಣದೇವರು
(ಇದು ವಚನ ಸಂಕಲನ ಸಂಪುಟ–೩ ಈ ಕೃತಿಯ ಒಂದು ಭಾಗ)
ಸಂ: ಎಸ್. ಶಿವಣ್ಣ
ಪ್ರ: ವೀರಶೈವ ಅಧ್ಯಯನಸಂಸ್ಥೆ, ಶ್ರೀ ತೋಂಟದಾರ್ಯ ಮಠ, ಗದಗ,೧೯೯೧ (ಪ್ರ. ಆ)

ಶಿವಮಹಿಮಾಸ್ತೋತ್ರದ ವಚನ
–ವೀರಸಂಗಯ್ಯ
ಸಂ: ವೀರಣ್ಣ ರಾಜೂರ ಕರ್ನಾಟಕ ಭಾರತೀ ೧೯–೨–೧೯೮೬
ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಶಿವಯೋಗ ಚಿಂತಾಮಣಿ
–ಜಾಳಿಗೆಕಂತೆ ಸಿದ್ಧಲಿಂಗ ಶಿವಯೋಗಿ
ಸಂ: ಡಾ. ಉಮಾದೇವಿ
ಪ್ರ: ವೀರಶೈವ ಅಧ್ಯಯನಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ, ೧೯೮೭(ಪ್ರ. ಆ)

ಶೀಲಸಂಪಾದನೆ
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ, ೧೯೮೪ (ಪ್ರ. ಆ)

ಶೂನ್ಯಸಂಪಾದನೆ
–ಶಿವಗಣ ಪ್ರಸಾದಿ ಮಹಾದೇವಯ್ಯ
ಸಂ: ಆರ್. ಸಿ. ಹಿರೇಮಠ
ಪ್ರ: ಕನ್ನಡ ಅಧ್ಯಯನ ಸಂಸ್ಥೆ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೧(ಪ್ರ. ಆ)

ಶೂನ್ಯಸಂಪಾದನೆ
–ಗುಮ್ಮಳಾಪುರದ ಸಿದ್ಧಲಿಂಗದೇವರು
ಸಂ: ಡಾ. ಆರ್. ಸಿ. ಹಿರೇಮಠ
ಪ್ರ: ಕನ್ನಡ ಅಧ್ಯಯನಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೨ (ಪ್ರ.ಆ)

ಶೂನ್ಯಸಂಪಾದನೆ
–ಗೂಳೂರು ಸಿದ್ಧವೀರಣ್ಣೊಡೆಯರು
ಸಂ: ಪ್ರೊ. ಸಂ. ಶಿ. ಭೂಸನೂರಮಠ
ಪ್ರ: ರಾವೂರ ಶ್ರೀ ಸಿದ್ಧಲಿಂಗೇಶ್ವರ ಮಠ ಮತ್ತು ಆದವಾನಿಯ ಕಲ್ಲುಮಠದ ಅಧಿಪತಿಗಳು ೧೯೮೬ (ಪ್ರ. ಆ)

ಷಟ್‌ಸ್ಥಲ ಲಿಂಗಾಂಗ ಸಂಬಂಧದ ನಿರ್ವಚನಗಳು
–ಗುಮ್ಮಳಾಪುರದ ಸಿದ್ಧಲಿಂಗದೇವರು
(ಇದು ವಚನ ಸಂಕಲನ ಸಂಪುಟ–೧ ಈ ಕೃತಿಯ ಒಂದು ಭಾಗ)
ಸಂ: ಡಾ. ಬಿ. ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನಸಂಸ್ಥೆ ಶ್ರೀ ತೋಂಟದಾರ್ಯಮಠ, ಗದಗ, ೧೯೯೦ (ಪ್ರ. ಆ)

ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ ಸಂಪಾದನೆಯ ವಚನಗಳು
–ಬೋಳಬಸವೇಶ್ವರದೇವರು
ಸಂ: ಪ್ರೊ. ಎಸ್. ಉಮಾಪತಿ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯಮಠ ಗದಗ,
೧೯೮೪ (ಪ್ರ. ಆ)

ಷಟ್‌ಸ್ಥಲ ಸ್ತೋತ್ರದ ವಚನಗಳು
–ಎಳಮಲೆಯ ಗುರುಶಾಂತದೇವರು
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ ಗದಗ,
೧೯೮೩ (ಪ್ರ. ಆ)

ಷಟ್‌ಸ್ಥಲಜ್ಞಾನ ಸಾರಾಮೃತ
–ತೋಂಟದ ಸಿದ್ಧಲಿಂಗ ಶಿವಯೋಗಿ
ಸಂ: ಡಾ. ಆರ್. ಸಿ. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ ಗದಗ,
೧೯೮೩ (ಪ್ರ. ಆ)

ಷಟ್ಪ್ರಕಾರ ಸಂಗ್ರಹ
–ಶಾಂತದೇವರು
ಸಂ: ಜಿ. ಎ. ಶಿವಲಿಂಗಯ್ಯ
ಪ್ರ: ವೀರಶೈವ ಅಧ್ಯಯನಸಂಸ್ಥೆ ಶ್ರೀ ತೋಂಟದಾರ್ಯ ಮಠ ಗದಗ, ೧೯೮೭ (ಪ್ರ. ಆ)

ಷಣ್ಮುಖಸ್ವಾಮಿಗಳ ಷಟ್‌ಸ್ಥಲದ ವಚನ*
ಸಂ: ಶ್ರೀ ಪ್ರಭುಸ್ವಾಮಿಗಳು ಹೊಸಹಳ್ಳಿ
ಪ್ರ: ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಮುರುಘಾಮಠ, ಧಾರವಾಡ.
೧೯೪೪ (ಪ್ರ. ಆ)

---

* ಶ್ರೀ ಮುರುಘಾಮಠದಿಂದ ಇದು "ಅಖಂಡೇಶ್ವರ ವಚನಗಳು" ಎಂಬ ಶೀರ್ಷಿಕೆಯಿಂದ ಪ್ರಕಟವಾಗಿದ.

ಸಂಪಾದನೆಯ ಸಾರಾಮೃತ
–ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿ
ಸಂ: ಡಾ. ಬಿ. ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ.
೧೯೮೮ (ಪ್ರ. ಆ)

ಸಂಬಂಧಾಚರಣೆಯ ವಚನಗಳು
ಸಂ: ಪಿ. ಎಂ. ಗಿರಿರಾಜು
ಪ್ರ: ಶರಣ ಸಂತಾನ ಸಂಪಾದನ, ಶರಣ ಸಂತಾನ (ತ್ರೈಮಾಸಿಕ) ೪೪೭ ಸಂತೆಪೇಟೆ, ಮೈಸೂರು, ೧೯೮೬ (ಪ್ರ. ಆ)

ಸಕಲಪುರಾತನರ ವಚನಗಳು–೧
ಸಂ: ಡಾ. ಆರ್. ಸಿ. ಹಿರೇಮಠ
ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೨(ಪ್ರ. ಆ)

ಸಕಲಪುರಾತನರ ವಚನಗಳು–೨
ಸಂ: ಡಾ. ಎಂ. ಎಸ್. ಸುಂಕಾಪೂರ
ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೧೯೭೬ (ಪ್ರ. ಆ)

ಸಕಲಪುರಾತನರ ವಚನಗಳು–೩
ಸಂ: ಡಾ. ಎಂ. ಎಸ್. ಸುಂಕಾಪೂರ
ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮ (ಪ್ರ. ಆ)

ಸಕಲಪುರಾತನರ ಬೆಡಗಿನ ವಚನಗಳು
–ಸಿಂಗಳದ ಸಿದ್ಧಬಸವರಾಜದೇವರು
ಸಂ: ಡಾ. ಎಂ. ಎಸ್. ಸುಂಕಾಪೂರ
ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮ (ಪ್ರ. ಆ)

ಸರ್ವಾಚಾರ ಸಾರಾಮೃತ ಸುಧೆ
–ಮೂರುಸಾವಿರ ಮುಕ್ತಿಮುನಿಸ್ವಾಮಿ
ಸಂ: ಡಾ ಬಿ. ವಿ. ಶಿರೂರ
ಪ್ರ: ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟದಾರ್ಯಮಠ, ಗದಗ, ೧೯೮೯(ಪ್ರ. ಆ)

ಸ್ವತಂತ್ರಸಿದ್ಧಲಿಂಗೇಶ್ವರನ ವಚನಗಳು
-ಸ್ವತಂತ್ರ ಸಿದ್ಧಲಿಂಗೇಶ್ವರ
(ಇದು 'ಸ್ವತಂತ್ರ ಸಿದ್ಧಲಿಂಗೇಶ್ವರನ ಕೃತಿಗಳು' ಗ್ರಂಥದ ಒಂದು ಭಾಗ)
ಸಂ: ಡಾ. ಎಚ್. ಪಿ. ಮಲ್ಲೇದೇವರು
ಪ್ರ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫ (ಪ್ರ. ಆ)

ಸಿಂಗಿರಾಜಪುರಾಣ (ಕಾವ್ಯ)
-ಸಿಂಗಿರಾಜ
ಸಂ: ಎಚ್. ದೇವೀರಪ್ಪ
ಪ್ರ: ಓರಿಯಂಟಲ್ ರೀಸರ್ಚ ಇನ್‌ಸ್ಟಿಟ್ಯೂಟ್, ಮೈಸೂರು, ೧೯೫೦ (ಪ್ರ. ಆ)

ಸಿದ್ಧಮಲ್ಲಪ್ಪನ ವಚನ
(ಬಸವಪಥ ೧-೬ (೧೯೭೦)
ಬಸವ ಸಮಿತಿ, ಬೆಂಗಳೂರು

ಸಿದ್ಧರಾಮಯ್ಯನ ಶಿವಯೋಗ ಷಟ್ಸ್ಥಲಾನುಭಾವದ ವಚನ
-ಮುತ್ತಿನಪೆಂಡೆಯ ಓದುವ ಅನ್ನದಾನಿದೇವರು
ಸಂ: ಎಸ್. ಶಿವಣ್ಣ
ಪ್ರ: ಬಸವ ಸಮಿತಿ ಬಸವ ಭವನ ಶ್ರೀ ಭಸವೇಶ್ವರ ವೃತ್ತ, ಬೆಂಗಳೂರು, ೧೯೮೬ (ಪ್ರ. ಆ)

ಸುಖಸಂಪಾದನೆಯ ವಚನಗಳು
ಸಂ: ಡಾ. ಬಿ. ಆರ್. ಹಿರೇಮಠ
ಪ್ರ: ವೀರಶೈವ ಅಧ್ಯಯನಸಂಸ್ಥೆ ಶ್ರೀ ತೋಂಟದಾರ್ಯ ಮಠ, ಗದಗ, ೧೯೮೭ (ಪ್ರ. ಆ)

ಸೂಕ್ಷ್ಮಮಿಶ್ರಷಟ್ಸ್ಥಲ
-ಮಹಾಲಿಂಗದೇವರು
ಸಂ: ಡಾ. ವೀರಣ್ಣ ರಾಜೂರ
ಪ್ರ: ವೀರಶೈವ ಅಧ್ಯಯನಸಂಸ್ಥೆ, ಶ್ರೀ ತೋಂಟದಾರ್ಯ ಮಠ, ಗದಗ, ೧೯೮೭ (ಪ್ರ. ಆ)
❖❖❖

ಅಪ್ರಕಟಿತ

ಏಕೋತ್ತರಶತಸ್ಥಲ ಬೊಲ್ಲಿ
(ಕರ್ನಾಟಕ ವಿಶ್ವವಿದ್ಯಾಲಯ, ಕನ್ನಡ ಅಧ್ಯಯನಪೀಠದ ಹಸ್ತಪ್ರತಿ)
ಏಕೋತ್ತರ ಶತಸ್ಥಲ ಸಾರಾಮೃತ
–ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿ
(ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ)

ಕುಸ್ತಿ ಆಗಮ (ಕಾವ್ಯ)*
(ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ)

ಗುರುಕಾರುಣ್ಯದೊಳಗಣ ಕೆಲವು ವಚನಗಳು
(ಜಿ. ಎ. ಶಿವಲಿಂಗಯ್ಯ ಮೈಸೂರು ಅವರ ಹಸ್ತಪ್ರತಿ)

ಚೆನ್ನಯ್ಯನ ವಚನಗಳು
(ಗದುಗಿನ ತೋಂಟದಾರ್ಯ ಮಠದ ಹಸ್ತಪ್ರತಿ)

ಜ್ಞಾನಷಟ್‌ಸ್ಥಲಸಾರ
–ಗುರುಶಂಕರಸ್ವಾಮಿಗಳು
(ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ಹಸ್ತಪ್ರತಿ)

ದೇಶಿಕೇಂದ್ರ ಸಂಗನ ಬಸವಯ್ಯಗಳ ಷಟ್ಸ್ಥಲದ ವಚನಗಳು
–ದೇಶೀಕೇಂದ್ರ ಸಂಗನ ಬಸವಯ್ಯ
(ಶ್ರೀ ಚೆನ್ನವೀರ ಗಂಗದೆ ಕರಜಗಿ ಅವರ ಹಸ್ತಪ್ರತಿ)

ನಿಷ್ಕಳ ಲಿಂಗ ಚಿದಾನಂದಲೀಲೆ (ಕಾವ್ಯ)
(ಮೈಸೂರು ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ಹಸ್ತಪ್ರತಿ)

ಬೊಮ್ಮಲಿಂಗನ ಕಾವ್ಯ
(ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ಹಸ್ತಪ್ರತಿ)

---

* ಈ ಕಾವ್ಯದಿಂದ ಆಯ್ದುಕೊಂಡ ವಚನಗಳ ಸಂಕಲನವೊಂದು ಸಿಗುತ್ತದೆ

ಮಿಶ್ರಷಟ್‌ಸ್ಥಲದ ವಚನ
(ಜಿ. ಎ. ಶಿವಲಿಂಗಯ್ಯ ಮೈಸೂರು ಅವರ ಹಸ್ತಪ್ರತಿ)

ಮೋಕ್ಷದರ್ಶನ ಸಂಗ್ರಹ (ಶಾಸ್ತ್ರಕಾವ್ಯ)
ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ)

ಲಿಂಗಾಂಗ ಸಮರಸದ ಲಿಂಗ ಸ್ತೋತ್ರದ ವಚನ
–ಪ್ರಭುದೇವ
(ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯ ಪೀಠದ ಹಸ್ತಪ್ರತಿ)

ವೀರಶೈವ ಶಿಖಾರತ್ನ(ಶಾಸ್ತ್ರಕಾವ್ಯ)
(ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ)

ವೀರಶೈವಾಭರಣ(ಶಾಸ್ತ್ರಕಾವ್ಯ)
–ಗೌರವಾಂಕ
(ಜಿ. ಎ. ಶಿವಲಿಂಗಯ್ಯ ಮೈಸೂರು ಅವರ ಹಸ್ತಪ್ರತಿ)

ಶಿವಾಧಿಕ್ಯ ಪುರಾಣ (ಕಾವ್ಯ)
–ಬಸವಲಿಂಗ
(ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ)

ಶೂನ್ಯಸಂಪಾದನೆ–ಹಲಗೆದೇವರು
(ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ)

ಸಕಲಾಗಮ ಶಿಖಾಮಣಿ–ಬಾಲಸಂಗಯ್ಯ
(ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ)

ಹೇಮಗಲ್ಲ ಷಟ್ಸ್ಥಲ–ಹೇಮಗಲ್ಲ ಹಂಪ
(ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ)

❖❖

ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ದಾಖಲು ಸಾಹಿತ್ಯ

(ಎಡೆಯೂರು-ಡಂಬಳ-ಗದಗ ಮಠಗಳಿಗೆ ಸಂಬಂಧಿಸಿದ ದಾಖಲೆಗಳು)

(ಸಂಪುಟ : ಒಂದು)

ಸಂಪಾದಕರು
ಡಾ. ಎಂ.ಎಂ. ಕಲಬುರ್ಗಿ
ಡಾ. ಪಂಡಿತ ರಾಠೋಡ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ
ಬೆಂಗಳೂರು
೨೦೦೮



ಎಡೆಯೂರು - ಡಂಬಳ - ಗದುಗಿನ
ಶ್ರೀ ಜಗದ್ಗುರು ತೋಂಟದಾರ್ಯಮಠದ ೧೯ನೆಯ ಪೀಠಾಧಿಪತಿಗಳಾದ
ತ್ರಿವಿಧ ದಾಸೋಹಿ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು



ಕೆಳದಿ ಮಲ್ಲಮ್ಮಾಜಿ–ವೀರಭದ್ರನಾಯಕ ದಂಪತಿಗಳ ಹೆಸರಿನಲ್ಲಿ ಡಂಬಳದ
ಶ್ರೀ ಮಜ್ಜಗದ್ಗುರು ತೋಂಟದ ಸ್ವಾಮಿಗಳವರಿಗೆ ಅರ್ಪಿಸಿದ ಬಂಗಾರದ ಪಾದುಕೆ
(ರಾಜದಂಪತಿಗಳ ಚಿತ್ರಗಳನ್ನು ಗಮನಿಸಿ)
ಪತ್ರ : ೨೯



ಡಂಬಳ ಶ್ರೀಮಠಕ್ಕೆ ಕೆಳದಿ ಅರಸರು ಮಾಡಿಸಿಕೊಟ್ಟ ಚಿನ್ನದ ರಾಜಗೊಂಡೆ ಮತ್ತು ಚಿನ್ನದ ಮೊಗ್ಗಿಗಳು



ಶ್ರೀ ಜಗದ್ಗುರುಗಳವರಿಗೆ ಕೆಳದಿ ಅರಸರು ಮಾಡಿಸಿಕೊಟ್ಟ ಬಂಗಾರದ ಕಿರೀಟ,
ಅಡ್ಡಪಲ್ಲಕ್ಕಿಗಾಗಿ ಬಂಗಾರದ ಪಂಚಕಳಸ, ಬಂಗಾರದ ಚಿಕ್ಕ ರಾಜಗೊಂಡೆಗಳು, ಬೆಳ್ಳಿಯ ಬೆತ್ತಗಳು



ಕೆಳದಿ (ಬೂದಿ) ಬಸವಪ್ಪನಾಯಕರು ಡಂಬಳದ ತೋಂಟದಾರ್ಯಮಠಕ್ಕೆ
ಮಾಡಿಸಿಕೊಟ್ಟ ಕಳಸ
ಪತ್ರ : ೫



ಕೆಳದಿ ಅರಸರು
ಶ್ರೀ ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳವರಿಗೆ
ಡಂಬಳದಲ್ಲಿ ಕಟ್ಟಿಸಿಕೊಟ್ಟ ಮಠ



ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ಮಹಾದ್ವಾರ
ಗದಗ

*

ಪ್ರಸ್ತಾವನೆ

ನಮ್ಮ ನಾಡಿನ ಪ್ರಮುಖ ಧಾರ್ಮಿಕ ಸಂಸ್ಥೆಯಾದ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ(ಎಡೆಯೂರು–ಡಂಬಳ–ಗದಗ)ಕ್ಕೆ ಭವ್ಯ ಇತಿಹಾಸವಿದೆ. ಶ್ರೀಮಠದ ಇತಿಹಾಸ ಎಡೆಯೂರ ತೋಂಟದ ಶ್ರೀ ಸಿದ್ಧಲಿಂಗಯತಿಗಳಿಂದ (೧೬ನೆಯ ಶತಮಾನ) ಪ್ರಾರಂಭವಾಗುತ್ತದೆ. ಶ್ರೀ ಸಿದ್ಧಲಿಂಗೇಶ್ವರರು ಮೈಸೂರ ಪ್ರಾಂತದಲ್ಲಿ ಸಂಚರಿಸುತ್ತ ಕಗ್ಗೆರೆಗೆ ಬಂದರು. ಈ ಗ್ರಾಮದ ನಾಗಿಣಿ ನದಿಯ ತೀರದಲ್ಲಿರುವ ಹೂವಿನ ತೋಟದಲ್ಲಿ ತಪಸ್ಸಿಗೆ ಕುಳಿತುಕೊಂಡರು. ಮೈತುಂಬಾ ಹುತ್ತ ಬೆಳೆದು ಅದರಲ್ಲಿಯೇ ಅನೇಕ ದಿವಸಗಳವರೆಗೆ ಇದ್ದರು. ಆ ಸ್ಥಳದ ನಿಂಬೆಣ್ಣ ಶೆಟ್ಟಿ ಮತ್ತು ಗಿರಿಯಣ್ಣ ಗೌಡರು ಹಾಗೂ ಭಕ್ತರು ಹುತ್ತದಿಂದ ಇವರನ್ನು ಹೊರತೆಗೆದರು. ತೋಟದಲ್ಲಿ ಬಹುಕಾಲದ ವರೆಗೆ ತಪಸ್ಸಿಗೆ ಕುಳಿತಿದ್ದರಿಂದ ತೋಟದ ಸ್ವಾಮಿಯವರೆಂದು ಹೆಸರಾದರು. ಅಂದಿನಿಂದ ಈ ನಿರಂಜನಪೀಠವನ್ನು ಅಲಂಕರಿಸಿದ ಎಲ್ಲ ಜಗದ್ಗುರುಗಳಿಗೆ ತೋಂಟದಾರ್ಯರೆಂದು; ಅವರ ಮಠಗಳಿಗೆ ತೋಂಟದಾರ್ಯಮಠವೆಂದು ಕರೆಯಲಾಗುತ್ತದೆ. ಕಾಲಕಾಲಕ್ಕೆ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ಅನೇಕ ಬದಲಾವಣೆಗಳು ಉಂಟಾದರೂ ಎಡೆಯೂರು–ಡಂಬಳ–ಗದಗ ಶ್ರೀ ತೋಂಟದಾರ್ಯಮಠ ಮಹತ್ವದ ಧಾರ್ಮಿಕ ಕೇಂದ್ರವಾಗಿ ಉಳಿದುಕೊಂಡು ಬಂದಿದೆ.

ಶ್ರೀ ತೋಂಟದಸಿದ್ಧಲಿಂಗ ಯತಿಗಳ ತರುವಾಯ ಆಗಿಹೋದ ಬೋಳಬಸವ ಸ್ವಾಮಿಗಳು (ಮಧುಗಿರಿ), ಗೂಳೂರ ಸಿದ್ಧವೀರೇಶ್ವರಸ್ವಾಮಿಗಳು (ಗೂಳೂರ), ಉದ್ದಾನಾರ್ಯಸ್ವಾಮಿಗಳು (ಭದ್ರರಾಜಪುರ), ಹರಿಹರಸ್ವಾಮಿಗಳು (ಹಡಗಲಿ), ಭಿಕ್ಷುಕದ ಬಸವಲಿಂಗಸ್ವಾಮಿಗಳು (ರುದ್ನೂರು), ರಾಚೋಟಿಸ್ವಾಮಿಗಳು (ಕಟ್ಟಿಗೆಹಳ್ಳಿ), ವೈರಾಗ್ಯಶಾಲಿಗಳಾದ ಕೌದಿಮಹಾಂತ ಸ್ವಾಮಿಗಳೆಲ್ಲರು ಒಂದೆಡೆ ನಿಲ್ಲದೆ ಸಂಚರಿಸುತ್ತ ಬಂದರು. ಇವರಲ್ಲಿ ಕೌದಿ ಮಹಾಂತಸ್ವಾಮಿಗಳು ಬಾಚಿಗೊಂಡನ ಹಳ್ಳಿಯ ಹತ್ತಿರದ ಹಗರಿ ಹಳ್ಳದ ತೀರಕ್ಕೆ ಬಂದು ಅಲ್ಲಿಯೇ ನೆಲೆಸಿದರು. ಇವರ ತರುವಾಯದವರಾದ ಅರ್ಧನಾರೀಶ್ವರ ಸ್ವಾಮಿಗಳು ೧೬೭೫ರ ಸುಮಾರಿಗೆ ಡಂಬಳಕ್ಕೆ ಬಂದಿದ್ದು, ಇವರ ಬಗ್ಗೆ ಈ ರೀತಿ ತಿಳಿದುಬರುತ್ತದೆ. ಕೋರಿಶೆಟ್ಟಿ ಎಂಬ ಬಣಜಿಗ ವ್ಯಕ್ತಿ ವ್ಯಾಪಾರ ಕಾಯಕದಲ್ಲಿ ಗುರುವಿಗೆ ಅರ್ಧಪಾಲು ಎಂಬ ನಿಯಮ ಪಾಲಿಸಿಕೊಂಡು ಶ್ರೀ ಕೌದಿಮಹಾಂತ ಸ್ವಾಮಿಗಳ ದರ್ಶನಕ್ಕಾಗಿ ಬಂದು, ಶ್ರೀಗಳಲ್ಲಿ ಸಮಯಾಚಾರಕ್ಕೆ ಒಬ್ಬ ಕ್ರಿಯಾಮೂರ್ತಿ

ಬಾಲಕನನ್ನು ಅನುಗ್ರಹಿಸಬೇಕೆಂದು ಬಿನ್ನವಿಸಿಕೊಂಡನು. ಆಗ ಶ್ರೀಗಳು ಇದು ಶಿವನಿಚ್ಛೆಯೆಂದು ಭಾವಿಸಿ ತಮ್ಮ ಉತ್ತರಾಧಿಕಾರಿಯಾದ ಬಾಲಕ ಅರ್ಧನಾರೀಶ್ವರನನ್ನೇ ಆತನೊಡನೆ ಕಳುಹಿಸಿಕೊಟ್ಟರು.

ಕೋರಿಶೆಟ್ಟಿಯು ತನ್ನ ಸಮಯಾಚಾರದ ಪುಟ್ಟ ಗುರುವನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡು ಸಂಚರಿಸುತ್ತ, ಹೆತ್ತತಾಯಿಯೋಪಾದಿಯಲ್ಲಿ ಬಾಲಕ ಅರ್ಧನಾರೀಶ್ವರನನ್ನು ನೋಡಿಕೊಂಡನು.

ಕೋರಿಶೆಟ್ಟಿಯು ಸಂಚರಿಸುತ್ತ ಡಂಬಳಕ್ಕೆ ಬಂದು, ಗ್ರಾಮದ ಹೊರಗೆ ಹಳ್ಳದ ತೀರದಲ್ಲಿರುವ ದೊಡ್ಡ ಬಸವೇಶ್ವರ ಗುಡಿಯ ಹತ್ತಿರ ವಾಸ್ತವ್ಯ ಮಾಡಿದನು. ಹೀಗಿರುತ್ತಿರಲು ಡಂಬಳ ಸಂಸ್ಥಾನದ ದೊರೆ ಸೀನಪ್ಪ (ಶ್ರೀನಿವಾಸ) ನಾಯಕನು ಕುಷ್ಟರೋಗದಿಂದ ಜೀವನದಲ್ಲಿ ಜಿಗುಪ್ಸೆಹೊಂದಿದ್ದನು. ಇಹಪರಗಳ ಗತಿಗೆ ಕಾರಣವಾದ ಶರೀರವೇ ರೋಗಗ್ರಸ್ತವಾದ ಮೇಲೆ ಇಹದ ಸೌಖ್ಯಕ್ಕೆ ಎರವಾದಂತೆ ಪರದ ಸದ್ಗತಿಗೂ ದೂರನಾಗಬೇಕಾಗುವುದೆಂದು ಭಾವಿಸಿ, ಅಪಾರದುಃಖಿಯಾಗಿದ್ದನು. ''ವಾರಣಾಸಿಯಲ್ಲಿ ಮರಣವಾದರೆ ಮೋಕ್ಷವಾಗುವದೆಂದು'' ಆಶಿಸಿ ತನ್ನ ಶೇಷಾಯುಷ್ಯವನ್ನು ಕಾಶಿಯಲ್ಲೆ ಕಳೆಯಬೇಕೆಂದು ಸಂಕಲ್ಪ ಮಾಡಿಕೊಂಡನು. ಒಂದು ದಿನ ಬೆಳಗಿನ ಜಾವ ಅವನ ಮನೆದೇವರಾದ ಆಂಜನೇಯನು ಅರಸನ ಸ್ವಪ್ನದಲ್ಲಿ ಪ್ರಕಟವಾಗಿ ''ಕಾಶಿವಿಶ್ವನಾಥನು ದೊಡ್ಡಬಸವೇಶ್ವರ ಗುಡಿಗೆ ಬಂದಿದ್ದಾನೆ. ಆತನ ದರ್ಶನ ತೆಗೆದುಕೊಳ್ಳಬೇಕು'' ಎಂದು ಅಪ್ಪಣೆ ಮಾಡಿದನು. ಆ ಮೇರೆಗೆ ಅರಸನು ಪರಿವಾರ ಸಹಿತವಾಗಿ ಹೋಗಿ, ಸಾಕ್ಷಾತ್ ಶಿವನೋಪಾದಿಯಲ್ಲಿದ್ದ ಅರ್ಧನಾರೀಶ್ವರರ ದರ್ಶನ ಪಡೆಯುತ್ತಲೇ ಅವನ ರೋಗ ಮಾಯವಾಯಿತು. ಆಗ ಗುರುಗಳಿಂದ ಪ್ರಭಾವಿತನಾದ ಅರಸನು ಶ್ರೀಗಳಿಗೆ ಇಲ್ಲಿಯೇ ನೆಲೆಸಿ, ತನ್ನ ಭಕ್ತಿಸೇವೆ ಸ್ವೀಕರಿಸಿ ಕೃತಾರ್ಥನನ್ನಾಗಿ ಮಾಡಬೇಕೆಂದು ಬೇಡಿಕೊಂಡನು. ಅಲ್ಲದೇ ಅರಮನೆಗೆ ಮರಳಿ, ಅದರ ಕೆಲವು ಭಾಗವನ್ನು ಕೆಡವಿಸಿ, ಅಲ್ಲಿ ಶ್ರೀಗಳವರಿಗೆ ಇಂದು ನಾವು ನೋಡುತ್ತಲಿರುವ ಒಂದು ವಿಶಾಲವಾದ ಮಠವನ್ನು ಕಟ್ಟಿಸಿದನು. ಇದೇ ಸಮಯಕ್ಕೆ ''ಶ್ರೀ ಮಜ್ಜಗದ್ಗುರು ತೋಂಟದಮಹಾಸ್ವಾಮಿಗಳವರ ಪಾದಕ್ಕೆ ಕೆಳದಿ ವೀರಭದ್ರನಾಯಕರ ಧರ್ಮಪತ್ನಿಯರಾದ ಮಲ್ಲಂಮಾಜಿಯವರ ಭಕ್ತಿ; ಶ್ರೀ ಮಜ್ಜಗದ್ಗುರು ತೋಂಟದ ಮಹಾಸ್ವಾಮಿಗಳವರ ಪಾದಕ್ಕೆ ಕೆಳದಿ ಬಸವಪ್ಪನಾಯಕರ ಪುತ್ರರಾದ ವೀರಭದ್ರಪ್ಪನಾಯಕರ ಭಕ್ತಿ'' (ಕೆ.ಅ.ಶಾ.ನಂ. ೨೭೧) ಎಂದು ಕೆತ್ತಿಸಿದ ಬಂಗಾರದ ಪಾದುಕೆಗಳನ್ನು ಶ್ರೀಮಠದ ಸ್ವಾಮಿಗಳಿಗೆ ಕೆಳದಿ ದಂಪತಿಗಳು ಅರ್ಪಿಸಿದರು. ಅಲ್ಲದೆ ಪೂಜಾಕಾರ್ಯಕ್ಕಾಗಿ ಅನೇಕ ದಾನ ದತ್ತಿಗಳನ್ನು ಅರ್ಪಿಸಿ, ತಮ್ಮ ಜನ್ಮಸಾರ್ಥಕ ಮಾಡಿಕೊಂಡರು. ಅರ್ಧನಾರೀಶ್ವರರ ಕೀರ್ತಿಗೆ ಆಕರ್ಷಿತರಾದ ಮಾನಪ್ಪ ಪಂಡಿತ, ಮರಿತೋಂಟದಾರ್ಯ ಮುಂತಾದ ಘನವಿದ್ವಾಂಸರು ಡಂಬಳದಲ್ಲಿ, ಸನ್ನಿಧಿಯ ಸೇವೆಗೆ ನಿಂತರು. 'ವೀರಶೈವಾನಂದ ಚಂದ್ರಿಕೆ' ಮುಂತಾದ ಮಹತ್ವದ ಗ್ರಂಥಗಳು ಈ ಕಾಲದಲ್ಲಿಯೇ ರಚಿತವಾದವು.

ಕೆಳದಿ, ಹರಪನಳ್ಳಿ, ಮುಂತಾದ ಅರಸರು, ಡಂಬಳಕ್ಕೆ ಆಗಮಿಸಿ ಶ್ರೀಗಳವರಿಗೆ ಶಕ್ತ್ಯಾನುಸಾರ ಅನೇಕ ದಾನದತ್ತಿಗಳನ್ನು ಹಾಕಿಕೊಟ್ಟರು. ಕೆಳದಿ ಭೂಪಾಲನಿಗೆ ಸಂತಾನವೇ ಇರಲಿಲ್ಲ. ಶ್ರೀ ಅರ್ಧನಾರೀಶ್ವರರು ಅನುಗ್ರಹಿಸಿಕೊಟ್ಟ ಭಸ್ಮದಿಂದ ಸಂತಾನ ಪ್ರಾಪ್ತಿಯಾದ ಕಾರಣ, ಆತನು

ಬೂದಿಬಸಪ್ಪ ನಾಯಕನೆಂದು ಇತಿಹಾಸದಲ್ಲಿ ಪ್ರಸಿದ್ಧನಾಗಿದ್ದಾನೆ. ಶ್ರೀ ಅರ್ಧನಾರೀಶ್ವರರ ಪ್ರಭಾವ ಕಾರಣವಾಗಿ ಸೊಂಡೂರು, ಉರವಕೊಂಡ, ಮೈಸೂರು ಮುಂತಾದ ಸ್ಥಳಗಳಲ್ಲಿ ತೋಂಟದಾರ್ಯ ಮಠಗಳು ನಿರ್ಮಾಣಗೊಂಡವು.

ಶ್ರೀ ಅರ್ಧನಾರೀಶ್ವರರ ಶಿವಯೋಗ ಸಮಾಧಿ ಡಂಬಳದಲ್ಲಿದ್ದು ಅತ್ಯಂತ ಜಾಗೃತ ಸ್ಥಾನವಾಗಿದೆ. ಎರಡನೇ ಎಡೆಯೂರು ಎನಿಸಿದೆ. ಈ ಮಠವನ್ನು ತದನಂತರ ಅಲಂಕರಿಸಿದವರು ಮಹಾತಪಸ್ವಿಗಳಾದ ನಂದೀಶ್ವರಸ್ವಾಮಿಗಳು. ಇವರು ಅಣ್ಣಿಗೇರಿ ದೇಸಾಯರ ಭಕ್ತಿಗೆ ಪಾತ್ರರಾದವರು.ಇವರ ತರುವಾಯ ಪೀಠವೇರಿದ ಉಗ್ಗದ ತೋಂಟದಾರ್ಯರು ವೈರಾಗ್ಯಶಾಲಿಗಳು. ಇವರ ನಂತರ ಶಿಷ್ಯೋದ್ಧಾರಕ ಶ್ರೀ ಸದಾಶಿವ ಸ್ವಾಮಿಗಳು, ಮಹಾಂತಸ್ವಾಮಿಗಳು, ಶ್ರೀ ವೃದ್ಧತೋಂಟದಾರ್ಯರು, ಮೃತ್ಯುಂಜಯಸ್ವಾಮಿಗಳು, ಸಿದ್ದೇಶ್ವರ ಸ್ವಾಮಿಗಳು, ಗುರುಬಸವ ಸ್ವಾಮಿಗಳು, ಶಿವಕುಮಾರಸ್ವಾಮಿಗಳು ಪೀಠಾಧ್ಯಕ್ಷರಾದರು. ಈಗ ೧೯ನೇ ಜಗದ್ಗುರುಗಳಾದ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಪೀಠವನ್ನಲಂಕರಿಸಿ ಭಕ್ತಾದಿಗಳ ಬಾಳಿನ ಬೆಳಕಾಗಿದ್ದಾರೆ.

ಕನ್ನಡ ಜಗದ್ಗುರುವೆಂದೇ ಪ್ರಸಿದ್ಧರಾದ ಶ್ರೀಗಳು ಹಮ್ಮಿಕೊಂಡ ಹತ್ತು ಹಲವಾರು ಯೋಜನೆಗಳಲ್ಲಿ ಹಸ್ತಪ್ರತಿ ಸಂಗ್ರಹವೂ ಒಂದಾಗಿದೆ. ನಾಡಿನ ಮೂಲೆ ಮೂಲೆಗಳಲ್ಲಿ ಸಂಚರಿಸಿ ಭಕ್ತಸಮೂಹದ ಕಲ್ಯಾಣಗೈಯುತ್ತ, ಪ್ರಾಚೀನ ಕಾಲದ ಹಸ್ತಪ್ರತಿಗಳನ್ನು ಸಂಗ್ರಹಿಸುತ್ತ ಬಂದಿದ್ದಾರೆ. ಈ ಕಾರಣವಾಗಿ ಇಂದು ಹಸ್ತಪ್ರತಿ ಭಾಂಡಾರವಾಗಿ ಬೆಳೆದು ನಿಂತಿದೆ. ಹಾಗೂ ಶ್ರೀಮಠದ ಪೂರ್ವದ ಜಗದ್ಗುರುಗಳಿಗೆ ನೀಡಿದ ದಾನ-ದತ್ತಿ ಇನಾಮುಗಳ ಕಾಗದ ಪತ್ರಗಳನ್ನು ಸಂರಕ್ಷಿಸುತ್ತ ಬಂದಿದ್ದಾರೆ. ಅವುಗಳನ್ನೆಲ್ಲ ಸಂಗ್ರಹಿಸಿ 'ಶ್ರೀ ತೋಂಟದಾರ್ಯಮಠದ ದಾಖಲೆಗಳು' ಎಂಬ ಹೆಸರಿನಲ್ಲಿ ಈ ಪುಸ್ತಕ ಹೊರಬರುತ್ತಿದೆ.

ಆಕರಗಳು : ಶ್ರೀ ತೋಂಟದಾರ್ಯ ಸಂಸ್ಥಾನಮಠದ ಚರಿತ್ರೆಯ ಮೇಲೆ ಹೊಸ ಬೆಳಕು ಚೆಲ್ಲುವ ಅನೇಕ ಸಾಮಗ್ರಿಗಳು ಮಠದಲ್ಲಿ ದೊರೆತಿದ್ದು, ಅವು ವೈವಿಧ್ಯಮಯವಾಗಿವೆ. ಕೆಳದಿ, ಬೀಳಗಿ, ಬಾಗಳಿ ಅರಸರು ಶ್ರೀಮಠಕ್ಕೆ ಹಾಕಿಕೊಟ್ಟ ಬಿನ್ನವತ್ತಳೆ, ನಿರೂಪ, ಭೂದಾನ, ಹಣದಾನಗಳಿಗೆ ಸಂಬಂಧಿಸಿದ ಶಾಸನ ಪತ್ರಗಳು ಇಲ್ಲಿವೆ.

ಬಾಗಳಿ ಸಂಸ್ಥಾನಿಕರು ನೀಡಿದ ದಾನ-ದತ್ತಿಗಳು, ಯಲಬುರ್ಗಿ, ಸಿಂಧನೂರು, ರವುಡಕುಂದೆ, ಕಲಕೇರಿ, ಬದಾಮಿ, ಮುಧೋಳ, ಅಣ್ಣಿಗೇರಿ, ಕೊಪ್ಪಳ, ನರಗುಂದ ಮುಂತಾದ ದೇಸಾಯರು ಹಾಗೂ ಘೋರ್ಪಡೆ ಮನೆತನದವರು ನೀಡಿದ ಭೂದಾನ, ಹಣದಾನ, ಯಿನಾಮುಗಳಲ್ಲದೆ, ಗದಗ, ಕುರ್ತಕೋಟಿ, ಕೊರ್ಲಹಳ್ಳಿ, ಬ್ಯಾಹಟ್ಟಿ, ಮುಂಡರಗಿ ಗ್ರಾಮುಗಳ ಸಮಸ್ತ ದೈವದವರು ನೀಡಿದ ಯಿನಾಮು, ಭೂದಾನ ಮುಂತಾದವುಗಳು. ಧರ್ಮ, ಸಾಹಿತ್ಯ, ಇತಿಹಾಸದ ಮೇಲೆ ಹೊಸ ಬೆಳಕು ಬೀರುತ್ತವೆ.

ಪ್ರಸ್ತುತ ಗ್ರಂಥ ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನಮಠ (ಡಂಬಳ ಗದಗ)ದ ಹಸ್ತಪ್ರತಿ ಭಾಂಡಾರದಲ್ಲಿಯ ಚಾರಿತ್ರಿಕ ದಾಖಲೆಗಳಿಗೆ ಸೀಮಿತವಾಗಿದ್ದು, ಈ ದಾಖಲೆಗಳನ್ನು ಅಭ್ಯಾಸದ ಅನುಕೂಲಕ್ಕಾಗಿ ಹೀಗೆ ವಿಭಜಿಸಲಾಗಿದೆ.

ಒಟ್ಟು ೮೯ ಪ್ರಾಚೀನ ಕಾಗದ ಪತ್ರಗಳು

- ಕೆಳದಿ ಶಾಸನ ಪತ್ರಗಳು
- ಬಿಳಗಿ ಮತ್ತು ಬಾಗಳಿ ಅರಸರ ಪತ್ರಗಳು
- ದೇಸಾಯರ ಪತ್ರಗಳು
- ಗೌಡ ಕುಲಕರ್ಣಿ ಪತ್ರಗಳು
- ವಿಶೇಷ ಪತ್ರಗಳು

೧. ಕೆಳದಿ ಅರಸರ ಶಾಸನ ಪತ್ರಗಳು :

ಈ ವಿಭಾಗದಲ್ಲಿ ಒಟ್ಟು ೩೯ ದಾನಶಾಸನ ಪತ್ರಗಳು ಸಮಾವೇಶಗೊಂಡಿವೆ. ನಂ.೫, ನಂ.೨೯ ಹೊರತುಪಡಿಸಿ, ಮಿಕ್ಕ ಪತ್ರರೂಪದ ಇವು ಎಲ್ಲಿಯೂ ಪ್ರಕಟವಾಗಿಲ್ಲ. ಚರಿತ್ರೆಯ ದೃಷ್ಟಿಯಿಂದ ಇವು ತುಂಬಾ ಮಹತ್ವ ಪಡೆದಿವೆ. ಕೆಳದಿ ಅರಸರು ಭದ್ರರಾಜಪುರದಲ್ಲಿ ಶ್ರೀ ತೋಂಟದಾರ್ಯಮಠ ಕಟ್ಟಿಸಿದುದನ್ನು ಮತ್ತು ಡಂಬಳ ಮಠಕ್ಕೆ ದಾನ ನೀಡಿದುದನ್ನು ಇಲ್ಲಿ ಕಾಣಬಹುದಾಗಿದೆ. ಉದಾ:
''ದುರ್ಮತಿ ಸಂವತ್ಸರದ ಮಾಘ ಬ ೧೦ ಲ್ಲೂ ಶ್ರೀಮತ್ಕೆಳದಿ ಬಸಪ್ಪನಾಯಕರು।
ನಾಗಗೆ ಬರಸಿ ಕಳುಹಿದ ಕಾರ್ಯ। ಬಿದರೂರು ಪೆಠೆ ವಳಗಣ ಬಾಳೆಕೊಪ್ಪವೆಂಬ ಸ್ಥಳಕ್ಕೆ ನಂಮ ಪಿತೃಗಳು ವೀರಭದ್ರಪ್ಪನಾಯಕರೈಯ್ಯನವರ ಹೆಸರಲ್ಲೂ ಭದ್ರರಾಜಪುರವೆಂದು ಮಾಡಿಯಿೂ। ಸ್ಥಳದಲ್ಲೂ ನಂಮ ಮಾತೃಗಳು ಮಲ್ಲಂಮಾಜಿ ಅಂಮನವರ ಭಕ್ತಿಯಲು ತೋಟಸ್ವಾಮಿಯವರ ಹೆಸರಲ್ಲಿ ಕಟ್ಟಿಸಿದ ವಿರಕ್ತಮಠ ಪ್ರತಿಷ್ಠೆ ಮಾಡಿದ ತೋಟದ ಸಿದ್ಧೇಶ್ವರ ದೇವರ ಕಟ್ಟಲೆ ಕಂದಾಚಾರ ನಡೆಸುವ ಗಣಾರಾಧನೆ ಮುಂತಾದ ಬಗ್ಗೆ ಉತ್ತಾರವ ಕೊಟ್ಟೆದು.''

ಹೀಗೆ ಕೆಳದಿ ಬಸಪ್ಪನಾಯಕರು ಭದ್ರರಾಜಪುರದಲ್ಲಿ ತೋಂಟದ ಸಿದ್ಧೇಶ್ವರ ಹೆಸರಿನಲ್ಲಿ ವಿರಕ್ತಮಠ ಸ್ಥಾಪಿಸಿ, ಮತ್ತೆ ಮತ್ತೆ ದಾನ ಅರ್ಪಿಸಿದ ವಿಷಯವನ್ನು, ಕೆಳದಿ ಚನ್ನಬಸಪ್ಪನಾಯಕರು ಡಂಬಳದ ತೋಂಟದಾರ್ಯಮಠದ ಗದ್ದಿಗೆಗೆ ತಮ್ಮ ತಂದೆ ಹೊಸದಾಗಿ ನಿರ್ಮಿಸಿಕೊಟ್ಟ ರಥದ ಉತ್ಸವ-ಗಣಾರಾಧನೆಗಾಗಿ ಮತ್ತು ದಾಸೋಹಕ್ಕಾಗಿ ದಾನ ನೀಡಿದುದನ್ನು ಇಲ್ಲಿಯ ಶಾಸನ ಪತ್ರಗಳಿಂದ ತಿಳಿಯಬಹುದಾಗಿದೆ.

೨. ಬಿಳಗಿ ಮತ್ತು ಬಾಗಳಿ ಅರಸರ ಪತ್ರಗಳು :

ಬಿಳಗಿ ಅರಸರ ೧ ಪತ್ರ, ಬಾಗಳಿ ಅರಸರ ೭ ಪತ್ರಗಳು ಇಲ್ಲಿವೆ. ಶ್ರೀಗಳಿಗೆ ಪತ್ರ ಬರೆಯುತ್ತ ''ನಾವು ತಂಮ್ಮ ಕಾರುಣ್ಯಭಕ್ತರಾದಂಥ ಶ್ರೀಮನ್ ಮಹಾನಾಯಕಾಚಾರ್ಯರಾದ ಬಾಗಳಿ ಸೋಮಸೇಖರ ನಾಯಕರವರು ಸದುವಿನಯ ಭಯ-ಭಕ್ತಿಯಿಂದ ಶ್ರೀಸ್ವಾಮಿ ರಥೋತ್ಸವಕ್ಕೆ ಪರಿವಾರ ಸಮೇತವಾಗಿ ಬರುತ್ತೇವೆ'' ಎಂದು ಬಿಂನ್ನವಿಸಿಕೊಂಡ ಪತ್ರಗಳನ್ನು ಗಮನಿಸಿದಾಗ, ಇವರು ಶ್ರೀಗಳಲ್ಲಿ ಇಟ್ಟ ಭಕ್ತಿ ವೇದ್ಯವಾಗುತ್ತದೆ. ಹಾಗೆಯೇ ಶ್ರೀಮಠಕ್ಕೆ ಭೂಮಿದಾನವಾಗಿ ನೀಡಿದುದನ್ನು ಇಲ್ಲಿಯ ಪತ್ರಗಳಲ್ಲಿ ಗಮನಿಸಬಹುದಾಗಿದೆ.

೩. ದೇಸಾಯರ ಪತ್ರಗಳು :

ಈ ಭಾಗದಲ್ಲಿ ೧೩ ಪತ್ರಗಳು ಸಮಾವೇಶಗೊಂಡಿವೆ. ಯಲಬುರ್ಗಿ, ರವುಡಕುಂದೆ, ಕಲಕೇರಿ, ಬಾದಾಮಿ, ಅಣ್ಣಿಗೇರಿ, ಮುಧೋಳ, ಸಿಂಧನೂರ ಮುಂತಾದ ಊರಿನ ದೇಸಾಯಿಗಳು ಶ್ರೀ ತೋಂಟದಾರ್ಯಮಠಕ್ಕೆ ಭೂದಾನ, ಹಣದಾನ, ರಥೋತ್ಸವಕ್ಕೆ ಹಲವಾರು ರೀತಿಯ ದಾನ-ದತ್ತಿ ಕೊಟ್ಟಿರುವುದನ್ನು ಕಾಣಬಹುದು. ''ಶ್ರೀಮನ್ನೃಪ ಶಾಲಿವಾಹನ ಶಕವರುಷ ೧೬೪೦ನೆಯ ವಿಳಂಬನಾಮ ಸಂವತ್ಸರ ಕಾರ್ತಿಕ ಬ। ೫ಲ್ಲು ಸ್ಥಿರವಾರದಲ್ಲು ರಾಜೇಶ್ರೀ ಪ್ರ ॥ ಗದಗು ವುಡಕುಂದ ಶಿಮೆ ದೇಸಾಯಿ ಸಿಂಧನೂರ ಶಿಮೆ ಸರದೇಸಾಯಿ ಕಿಲ್ಲೆ ಬಾದಾಮಿ ಸ॥ ಕಲಕೆರ ಶೀಮೆ ನಾಡಗೌಡರಾದ ಬಹದರ ವೆಂಕಪ್ಪಯ್ಯನವರು ಬರಸಿಕೊಟ್ಟ ದಾನಪತ್ರ: ಗ್ರಾಮವನು ರಾ। ದೇಸಾಯಿ ಆಚಪ್ಪನಾಯಕರು ಲಿಂಗಮುದ್ರಾಸ್ಥಾಪ್ಯದಿಂದ ದಾರಾಧತ್ತವಾಗಿ ದಾನವ ಮಾಡಿಕೊಟ್ಟಿದ್ದಾರೆ. ಆ ಗ್ರಾಮದಲ್ಲಿ ನಂಮ ನಾಡ ಗೌಡಿಕೆ ಸ್ವಾಸ್ತಿಯಿದ್ದ ಬಿ ॥ತ॥ ಗ೩ಲ ವರ್ತನೆ ಮೂರು ವರಹ ಜ॥೧ ವಂದು ಮೂರು ಭೂಮಿ ಯಿ ಪ್ರಕಾರ ನಂಮ ವೃತ್ತಿಯಿದ್ದರದನು ದೇವರ ದೇವರಲಿ ಮಠದ ಸೇವಾರ್ಥವಾಗಿ ನಾವು ಆತ್ಮ ಸಂತೋಷದಿಂದ ದಾನವ ಮಾಡಿಕೊಟ್ಟು ಯಿದ್ದೆವೆ.'' ಹೀಗೆ ದೇಸಾಯಿಗಳು ತಮ್ಮ ಶಕ್ತ್ಯಾನುಸಾರವಾಗಿ ದಾನ-ದತ್ತಿಗಳನ್ನು ನೀಡಿರುವುದನ್ನು ಇಲ್ಲಿಯ ಪತ್ರಗಳಲ್ಲಿ ಗಮನಿಸಬಹುದಾಗಿದೆ.

ಇನ್ನೊಂದು ಪತ್ರದಲ್ಲಿ ದೇಸಾಯಿ ಮತ್ತು ಕುಲಕರ್ಣಿಗಳು ಶ್ರೀಮಠಕ್ಕೆ ಭೂದಾನ ಮಾಡಿದ್ದು, ಹೀಗಿದೆ : ''ಶ್ರೀ ಸದಾಶಿವಸ್ವರೂಪರಾದ ರಾಜಪೂಜಿತರಾದ ರಾಜೇಶ್ರೀ ತೋಂಟದಸ್ವಾಮಿಗಳವರ ಸಂಜ್ಞಾನ ಸುಜಾತರಾದ ಅನ್ನದಾನ ಸ್ವಾಮಿಗಳವರಿಗೆ ಕಿಲ್ಲೆ ಕೊಪ್ಪಳದ ಸೀಮೆ ದೇಸಾ॰ ದೇಶಕುಲಕರ್ಣಿ ವಿಟಪ್ಪಯ್ಯಾವಾ ತಿಮ್ಮಪ್ಪಯ್ಯವಾ ವೆಂಕಟಪ್ಪನವರು ಬರಕೊಟ್ಟ ಭೂದಾನ ಪತ್ರದ ಕಾಗದಲು ಪ್ರಮಾಣೆನ ಉಂಮಳಿ ಗ್ರಾಮ ಬೆಣಿಕಲ್ಲ ಸ್ಥಳದಲ್ಲಿ ಮಠಕ್ಕೆ ಧರ್ಮಾರ್ಥವಾಗಿ ಭೂದಾನ ಕೊಟ್ಟಿದು.'' ಹೀಗೆ ದೇಸಾಯಿಗಳು ಶ್ರೀಮಠದ ಉನ್ನತಿಗಾಗಿ ಶ್ರಮಿಸಿದ್ದಾರೆ ಎಂಬುದು ಈ ಪತ್ರಗಳಿಂದ ವಿದಿತವಾಗುತ್ತದೆ.

೪. ಗೌಡರು ಮತ್ತು ಶಾನುಭೋಗರ ಪತ್ರಗಳು :

ಈ ಭಾಗದಲ್ಲಿ ೧೫ ಪತ್ರಗಳಿವೆ. ಬ್ಯಾಹಟ್ಟಿ, ಗಾಡಗೋಳಿ, ಹಿರೇಸಿಂದೋಗಿ, ಮಂಡಲಗೇರಿ, ಹುಲಗಿ, ಹಿರೇಶಲವಡಿ ಮಜಕೂರಿನ ದಾಟಕನಾಳ, ಅಣ್ಣಿಗೇರಿ, ಅಸೂಟಿ, ಹಾರೊಗೇರಿ, ಕೊಪ್ಪಳ ಸೀಮೆಯ ಕುಲಕರ್ಣಿಗಳು, ಜಾಲಿಹಾಳ ಪ್ಯಾಟಿಗೌಡರು, ಕಿಲ್ಲೆ ಕೊಪ್ಪಳದ ಹಿರೇ ನರಸಣ್ಣಗೌಡ, ಹೀಗೆ ಅನೇಕ ಊರುಗಳ ಸಮಸ್ತಗೌಡರು ಶಾನಭೋಗರು ಶ್ರೀ ತೋಂಟದಾರ್ಯ ಮಠಕ್ಕೆ ಪಲ್ಲಕ್ಕಿ ಉತ್ಸವಕ್ಕಾಗಿ, ಗಣಾರಾಧನೆಗಾಗಿ ಹಲವು ರೀತಿಯ ದಾನಗಳನ್ನು ನೀಡಿದ್ದಾರೆ. ಉದಾಹರಣೆಗೆ ಹಿರೇಸಿಂದೋಗಿಯ ಗೌಡ ಮತ್ತು ಕುಲಕರ್ಣಿಗಳು ತೋಂಟದಾರ್ಯಮಠಕ್ಕೆ ಭೂದಾನವನ್ನು ನೀಡಿದ್ದು ಹೀಗಿದೆ: ''ನಿಂಮ್ಮ ಕಾರುಣ್ಯ ಭಕ್ತರಾದ ಮೊ॥ ಹಿರೇಸಿಂದೋಗಿ ಗೌಡ ಕುಲಕರ್ಣಿಗಳು ಬರಕೊಟ್ಟ ಭೂದಾನ ಪತ್ರಕ್ರಮವೆಂದರೆ: ನಮ್ಮ ಗ್ರಾಮದಲ್ಲಿಯ ಮಠ ದಾಸೋಹಕ್ಕೆ ಆಗಬೇಕೆಂದು ಬಹುಕಾಲಕೆ ಹೇಳಿಕೊತ್ತಾ ಬಂದಲ್ಲಿಗೆ ಯಿವತ್ತಿಗೆ ನಾಲು ಮನಸ್ಸಿಗೆ ತಂದು ಅರವತ್ತು ಬಿಗೆ ದಾನ ಪೈಕೆ ನಾಮದವರಾ ಬಾಬತಿ ೬। ಬಿಳದಾ ಹೊಲ ಯಿದಕ್ಕೆ ಕುರಿಗೆ ೪ಕ್ಕೆ ತಾಲು

ಸ್ವತಂತ್ರರು ಯಂದು ಕೊಟ್ಟು ಯಿಧೆವೆ.'' ಹೀಗೆಯೇ ತಮ್ಮ ಹಿರಿಯರ ಪುಣ್ಯಕ್ಕಾಗಿ, ನೀಡಿದ ಭೂದಾನಗಳನ್ನು ಕೆಲವು ಪತ್ರಗಳಲ್ಲಿ ಗಮನಿಸಬಹುದಾಗಿದೆ.

ಅಣ್ಣಿಗೇರೆ ಸೀಮೆಯ ದೇಶ ಕುಲಕರ್ಣಿಗಳು ಇನಾಮು ನೀಡಿದ ದಾನ ಹೀಗಿದೆ: ''ಕಸಬಾ ಅಂಣಿಗೇರಿಯ ಸೀಮೆಯಾ ದೇಶಕುಲ್ಲಕರಣಿ ಜಿನಕುಲವೃದ್ಧವನಾದ ಹಿರಿಯನಾಗಪ್ಪಯ್ಯ ×× ಚಂದಪ್ಪಯ್ಯ ಸುಪುತ್ರನಾಗಪ್ಪಯ್ಯನ ಪತ್ನಿ ಪುತ್ರ ಸಖರೆವಾರಾ ಮಾರಸಯ್ಯನು ಬರಕೊಟ್ಟ ಭೂದಾನ ಪಟ್ಟೆ ಕ್ರಮವೆಂತೆಂದರೆ ನಾಲು ನಂಮ ವಂಶಾಭಿವೃದ್ಧಿಯಾಗಿ ಪುಂಣ್ಯ ಸಂಗ್ರಹ ನಿಮಿತ್ಯವಾಗಿ ನಂಮ್ಮ ಯಿನಾಮತಿ ಹಿರೆಮಾಂನ್ಯೆದೊಳಗೆ ಕೊಂಡಿಕೊಪ್ಪದ ಸೀಮೆಯಲ್ಲಿ ಕ್ಲರ್ಸ್ಸಿ ಭೂಮಿ ಮೂವತ್ತಾರು ಭಿಗೆದ ಹುಲ್ಲಮಾರು ೧। ಮೂರು ಕಾಲು ಭೂಮಿಯನ್ನು ಧಾರಾಪೂರ್ವಕ ಕಡಿಂದಾ ಕೊಟ್ಟುಯಿಧೆವೆ.'' ನಮ್ಮ ವಂಶವು ಸುಖಸಂತೋಷವಾಗಿ ಬಾಳಲಿ–ಎಂದು ಆತ್ಮ ಸಂತೋಷದಿಂದ ದಾನ ನೀಡಿದ್ದನ್ನು ಇಲ್ಲಿ ಕಾಣಬಹುದಾಗಿದೆ.

೫. ವಿಶೇಷ ಪತ್ರಗಳು :

ಈ ಭಾಗದಲ್ಲಿರುವ ೧೪ ಪತ್ರಗಳು ತುಂಬಾ ಮಹತ್ವ ಪಡೆದಿವೆ. ಇವುಗಳಲ್ಲಿ ಗದುಗಿನ ತೋಂಟದಾರ್ಯಮಠದ ಸ್ವಾಮಿಗಳೇ ಎಡೆಯೂರಿನ ಮಠದ ಅಧಿಕಾರಿಗಳೆಂಬುದನ್ನು ೭೯, ೮೩, ೮೫, ೮೬ ನೆಯ ಪತ್ರಗಳು ತಿಳಿಸುತ್ತವೆ. ಎಡೆಯೂರಿನ ನಮ್ಮ ಮಠವನ್ನು ನಮ್ಮ ವಶಕ್ಕೆ ಕೊಡಬೇಕೆಂದು ೧೬ನೇ ಪೀಠಾಧಿಪತಿ ಶ್ರೀಸಿದ್ಧೇಶ್ವರ ಶ್ರೀಗಳು ತಮ್ಮ ಎಜೆಂಟರ ಮೂಲಕ ಮೈಸೂರ ದಿವಾನರಿಗೆ ಮಾಡಿಕೊಂಡ ಅರ್ಜಿ (೮೫), ವಾಡಿಕೆಯಂತೆ ಎಡೆಯೂರು ರಥೋತ್ಸವಕ್ಕೆ ಬರಬೇಕೆಂದು ವಿಶೇಷ ಅಧಿಕಾರಿಗಳಾದ N.P.M ನಂಜಯ್ಯನವರು ಶ್ರೀಗಳವರಿಗೆ ಬರೆದ ಪತ್ರ (೮೬), ಎಡೆಯೂರು ಗದ್ದುಗೆಯ ಮಾಲಕರಾಗಿರುವ ನಾವು ಪ್ರಾರಂಭದಿಂದಲೂ ಅದರ ಮೇಲು ಉಸ್ತುವಾರಿ ನೋಡಿಕೊಳ್ಳುತ್ತ ಬಂದಿದ್ದು, ಈಗ ಗದ್ದುಗೆಗೆ ಕಾಣಿಕೆ ರೂಪದಿಂದ ಬಂದ ಹಣವನ್ನು ನಮಗೆ ಕೊಡಬೇಕೆಂದು ಕುಣಿಗಲ್ ಮಾಮಲೆದಾರರಿಗೆ–ತುಮಕೂರು ಜಿಲ್ಲಾಧಿಕಾರಿಗಳಿಗೆ ಬರೆದ ಪತ್ರ (೮೩) ಮುಖ್ಯವಾಗಿವೆ. ೭೯ನೆಯ ಪತ್ರ ಮುಂದುವರಿದು, ಎಡೆಯೂರ ಗದ್ದುಗೆ ದರ್ಶನಕ್ಕೆ ಹೋಗಲಿರುವ ಗದುಗಿನ ಶ್ರೀಗಳಿಗೆ ಸರಕಾರದ ರಕ್ಷಣೆ–ಗೌರವ ನೀಡಬೇಕೆಂದು ದಿವಾನರಾದ ಎಂ. ವಿಶ್ವೇಶ್ವರಯ್ಯನವರಿಗೆ ಬರೆದುದಾಗಿದೆ. ಅರಟಾಳ ರುದ್ರಗೌಡರು ಶ್ರೀಗಳವರಿಗೆ ಬರೆದ ಎರಡು ಕನ್ನಡ ಪತ್ರಗಳು, ಒಂದು ಇಂಗ್ಲಿಷ್ ಪತ್ರ ಇಲ್ಲಿವೆ. ಇವುಗಳಲ್ಲಿ ಒಂದು ಪತ್ರ (೮೭) ಗದುಗಿನ ಶ್ರೀಗಳನ್ನು ಎರಡನೆಯ ವರ್ಗದ ಸರದಾರರೆಂದು ಪರಿಗಣಿಸಲು ಕೋರಿದುದಾಗಿದ್ದು, ಇದಕ್ಕೆ ೧೨೬೫ ಜನರ ಸಹಿಗಳಿವೆ. ಸರ್ ಸಿದ್ಧಪ್ಪ ಕಂಬಳಿಯವರು ಶ್ರೀಗಳಲ್ಲಿ ಸಾಕ್ಷಿದಾರರ ಯಾದಿಯನ್ನು ಕಳಿಸಲು ಕೋರಿ ಬರೆದ ಪತ್ರ, ಎಡೆಯೂರುಮಠದ ಜಾತ್ರೆಯ ಹ್ಯಾಂಡಬಿಲ್‌ಗಳು ಇಲ್ಲಿ ಸಮಾವೇಶಗೊಂಡಿವೆ. ಈ ಎಲ್ಲ ಪತ್ರಗಳು ಶ್ರೀಮಠದ ಘನತೆ ಗೌರವಗಳನ್ನು ತಿಳಿಸುತ್ತವೆ. ಇದರಲ್ಲಿ ಶ್ರೀ ತೋಂಟದಾರ್ಯಮಠದಲ್ಲಿ ಚಿನ್ನ ಬೆಳ್ಳಿ ಎಷ್ಟು ಪ್ರಮಾಣದಲ್ಲಿದ್ದಿತೆನ್ನುವ ಪತ್ರವೂ ಇದೆ.

ನಾಡಿನ ಮೂಲೆ ಮೂಲೆಗಳಿಂದ, ಹಳ್ಳಿ ಪಳ್ಳಿಗಳಿಂದ ಶ್ರೀಗಳವರ ಭಕ್ತಸಮೂಹ ಹಲವಾರು ರೀತಿಯಲ್ಲಿ ದಾನ ನೀಡಿದುದಲ್ಲದೆ, ಮನೆಯ ಸಮಸ್ಯೆ, ಆರ್ಥಿಕ ಸಮಸ್ಯೆ, ವೈಯಕ್ತಿಕ ಸಮಸ್ಯೆ

ಮುಂತಾದವುಗಳನ್ನು ಪತ್ರ ಮುಖೇನ ಶ್ರೀಗಳವರಲ್ಲಿ ತೋಡಿಕೊಂಡಿರುವುದನ್ನು ಇಲ್ಲಿಯ ಪತ್ರಗಳಲ್ಲಿ ಗಮನಿಸಬಹುದಾಗಿದೆ.

ಕಡಗತಗಳಲ್ಲಿ ಲಭಿಸುವ ದಾಖಲೆಗಳಲ್ಲಿ ಬರುವ ವಿಷಯಗಳು ಕೇವಲ ಧಾರ್ಮಿಕ ಸ್ಥಿತಿಗತಿಗಳ ಮೇಲೆ ಬೆಳಕು ಬೀರುವವೆಂದು ಊಹಿಸುವುದು ಸಹಜ. ಆದರೆ ವಸ್ತುಸ್ಥಿತಿಯೇ ಬೇರೆ. ಇಲ್ಲಿ ಸಂಗ್ರಹಗೊಂಡಿರುವ ದಾಖಲೆಗಳ ವಿಷಯ ವೈವಿಧ್ಯಪೂರ್ಣವಾಗಿದೆ ಎಂಬುದು ಇವುಗಳ ಕೂಲಂಕಷ ಅಧ್ಯಯನದಿಂದ ತಿಳಿಯುತ್ತದೆ.

ಒಟ್ಟಿನಲ್ಲಿ, ಶ್ರೀ ತೋಂಟದಾರ್ಯ ಸಂಸ್ಥಾನ ಮಠದ ಕಡತಗಳಲ್ಲಿಯ ಕೆಲವು ದಾಖಲೆಗಳು ಮುಖ್ಯವಾಗಿ ಶ್ರೀ ಮಠದ ಸುಮಾರು ಮೂರು ಶತಮಾನಗಳ ಅಂದರೆ ಹದಿನಾರನೆಯ ಶತಮಾನದಿಂದ ಹತ್ತೊಂಬತ್ತನೆಯ ಶತಮಾನದ ವರೆಗಿನ ಚರಿತ್ರೆಯ ಮೇಲೆ ಹೊಸ ಬೆಳಕು ಬೀರುವದರ ಜೊತೆಗೆ, ಇನ್ನೂ ಸರಿಯಾಗಿ ಬೆಳಕಿಗೆ ಬಾರದ ಶ್ರೀಮಠದ ಚರಿತ್ರೆಯ ಅನೇಕ ವಿಚಾರಗಳನ್ನು ಖಚಿತವಾಗಿ ಹೇಳುತ್ತವೆ. ಅಂದಿನ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಸ್ಥಿತಿಗತಿಗಳನ್ನು ಅರಿಯಲೂ ಈ ದಾಖಲೆಗಳು ಉಪಯುಕ್ತವಾಗಿವೆ. ಶ್ರೀ ತೋಂಟದಾರ್ಯ ಮಠದ ಕಡತಗಳ ಅಧ್ಯಯನದಿಂದ ಮೂಡಿಬಂದ ಕರ್ನಾಟಕ ಚರಿತ್ರೆ ಇನ್ನೂ ಸ್ಪಷ್ಟವಾಗಿ ಮೂಡಬೇಕಾದರೆ ಶ್ರೀ ಮಠದ ಶಾಖಾ ಮಠಗಳಲ್ಲಿಯ ಕಾಗದಪತ್ರ, ಶಾಸನಪತ್ರ ಮುಂತಾದ ಆಕರ ಸಾಮಗ್ರಿಗಳ ಹುಡುಕಾಟ, ಅದರ ಸಂರಕ್ಷಣೆ ಅಗತ್ಯ; ಆಳವಾದ ಅಧ್ಯಯನವೂ ಅಷ್ಟೇ ಅಗತ್ಯ. ಈ ದಿಶೆಯಲ್ಲಿ 'ಶ್ರೀ ತೋಂಟದಾರ್ಯಮಠದ ದಾಖಲೆಗಳು' ಎಂಬ ಈ ಪುಸ್ತಕ ಇತಿಹಾಸ ಅಧ್ಯಯನಕಾರರಿಗೆ ಅತ್ಯಂತ ಉಪಯುಕ್ತವಾಗಬಲ್ಲದು.

ಇಲ್ಲಿ ಸಂಗ್ರಹಿಸಲಾದ ದಾಖಲೆಗಳು ಕಾಗದ ಪ್ರತಿಗಳಾಗಿವೆ. ಅವುಗಳನ್ನು ಯಥಾವತ್ತಾಗಿ ಇಲ್ಲಿ ಎತ್ತಿಕೊಂಡಿದ್ದೇವೆ. ಅಭ್ಯಾಸಿಗಳ ಅನುಕೂಲಕ್ಕಾಗಿ ಪ್ರತಿಯೊಂದು ದಾಖಲೆಯ ಮೇಲೆ ಹೊಸಗನ್ನಡದಲ್ಲಿ ಸಂಕ್ಷಿಪ್ತ ವಿವರಣೆ ನೀಡಿದ್ದೇವೆ. ದಾಖಲೆಗಳ ನೈಜತೆಯನ್ನು ಖಚಿತಪಡಿಸುವುದಕ್ಕಾಗಿ ಅವುಗಳ ಫೋಟೋ ಮುದ್ರಿಸಿದ್ದೇವೆ.

ಕೃತಜ್ಞತೆ : ಈ ವರೆಗೆ ನೂರಾರು ಸಾಹಿತ್ಯಿಕ, ಪೌರಾಣಿಕ, ಚಾರಿತ್ರಿಕ ಕೃತಿಗಳನ್ನು ಪ್ರಕಟಿಸಿದ ಶ್ರೀ ಜಗದ್ಗುರು ತೋಂಟದಾರ್ಯಮಠದ ''ಲಿಂಗಾಯತ ಅಧ್ಯಯನ ಸಂಸ್ಥೆ'' ತನ್ನ ಒಡಲೊಳಗೆ ನಿಕ್ಷಿಪ್ತವಾಗಿದ್ದ ದಾಖಲೆಗಳನ್ನು ಬೆಳಕಿಗೆ ತಂದಿರಲಿಲ್ಲ. ಈ ದಿಸೆಯಲ್ಲಿ ಆರಂಭಿಸಿದ ಪ್ರಯತ್ನದ ಫಲವಾಗಿ ಸಾವಿರಾರು ದಾಖಲೆಗಳು ಶ್ರೀಮಠದ ಭಾಂಡಾರದಲ್ಲಿ ಲಭ್ಯವಾದವು. ಅವುಗಳಲ್ಲಿ ಮಹತ್ವವಾದವುಗಳನ್ನು ಮಾತ್ರ ಇಲ್ಲಿ ಒಂದನೆಯ ಸಂಪುಟವಾಗಿ ಪ್ರಕಟಿಸಿದ್ದೇವೆ. ಈ ಐತಿಹಾಸಿಕ ಕಾರ್ಯಕ್ಕೆ ಬೆಂಬಲದ ಆಶೀರ್ವಾದ ನೀಡಿದ ಪೂಜ್ಯ ಜಗದ್ಗುರು ಶ್ರೀ ತೋಂಟದ ಸಿದ್ಧಲಿಂಗಮಹಾಸ್ವಾಮಿಗಳವರಿಗೆ ಭಕ್ತಿಪೂರ್ವಕ ನಮನಗಳು. ಶ್ರೀ ಶಿವಾನಂದ ಪಟ್ಟಣಶೆಟ್ಟಿ ಅವರು ತೋರಿದ ಆಸಕ್ತಿ, ವಹಿಸಿದ ಶ್ರಮಗಳಿಗಾಗಿ ಅಭಿನಂದನೆಗಳು. ಸಂಪಾದನ ಕಾರ್ಯದಲ್ಲಿ ಮಾರ್ಗದರ್ಶನ ನೀಡಿದ ಎಸ್.ಎಸ್.ಪಟ್ಟಣಶೆಟ್ಟಿ ಅವರಿಗೂ ಶ್ರೀಮಠದ ಮ್ಯಾನೇಜರ್ ಶ್ರೀ ಎಂ.ಎಸ್. ಅಂಗಡಿ ಅವರಿಗೂ ಕೃತಜ್ಞತೆಗಳು.

ಈ ಸಂಪುಟ ಪ್ರಕಟವಾಗಲು ಮುಖ್ಯ ಪ್ರೇರಣೆ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ. ಈ ಇಲಾಖೆಯ ನಿರ್ದೇಶಕರಾದ ಶ್ರೀಮತಿ ಉಷಾ ಸುರೇಶ ಅವರು ಸಂಪುಟದ ಪ್ರಕಟನೆಗಾಗಿ ನೀಡಿದ ಆರ್ಥಿಕ ನೆರವನ್ನು ತುಂಬು ಹೃದಯದಿಂದ ನೆನೆಯುತ್ತೇವೆ. ಇದೇ ಇಲಾಖೆಯ ಉದಯಶಂಕರ ಮತ್ತು ಶ್ರೀ ಆರ್.ಕೆ. ಗುಪ್ತ ಅವರು ಈ ದಾಖಲೆಗಳ ಮೈಕ್ರೋಫಿಲ್ಮ್ ಮಾಡಿಸುವ ವಿಷಯದಲ್ಲಿ ವಹಿಸಿದ ಶ್ರಮವನ್ನು ಪ್ರೀತಿಯಿಂದ ಸ್ಮರಿಸುತ್ತೇವೆ. ಅಂದವಾಗಿ ಬೆರಳಚ್ಚು ಕಾರ್ಯ ಪೂರೈಸಿದ ಸುನೀಲ ಡಿ.ಟಿ.ಪಿ. ಸೆಂಟರ್‌ದ ಮಾಲಿಕರಿಗೂ, ಮುದ್ರಿಸಿದ ತ್ವರಿತ ಮುದ್ರಣದ ಮಾಲಿಕರಿಗೂ ವಂದನೆಗಳು.

- ಸಂಪಾದಕರು

❖❖

*

ಪರಿವಿಡಿ

೧.	ಕೆಳದಿ ಅರಸರ ಶಾಸನ ಪತ್ರಗಳು	೨೦೧
೨.	ಬಿಳಗಿ-ಬಾಗಳಿ ಅರಸರ ಪತ್ರಗಳು	೨೫೩
೩.	ದೇಸಾಯಿಗಳವರ ಪತ್ರಗಳು	೨೬೩
೪.	ಗೌಡ-ಶಾನಭೋಗರ ಪತ್ರಗಳು	೨೭೭
೫.	ವಿಶೇಷ ಪತ್ರಗಳು	೨೯೩
	ಅನುಬಂಧಗಳು	೩೨೭

❖❖

೧. ಕೆಳದಿ ಅರಸರ ಶಾಸನ ಪತ್ರಗಳು

*

೧. ಕೆಳದಿ ಅರಸರ ಶಾಸನ ಪತ್ರಗಳು

೧

ಕಾಲ : ಕ್ರಿ.ಶ. ೧೭೪೨ (ದುರ್ಮತಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಕೆಳದಿ (ಬೂದಿ) ಬಸವಪ್ಪನಾಯಕರು ತಮ್ಮ ತಂದೆ ವೀರಭದ್ರ ನಾಯಕರ ಹೆಸರಿನಲ್ಲಿ ಬಿದರೂರು ಗ್ರಾಮದ ಬಾಳೆಕೊಪ್ಪ ಸ್ಥಳಕ್ಕೆ ಭದ್ರರಾಜಪುರವೆಂದು ನಾಮಕರಣ ಮಾಡಿ, ಅಲ್ಲಿ ವಿರಕ್ತಮಠ ಸ್ಥಾಪಿಸಿ, ತೋಂಟದಾರ್ಯ ಪೀಠಕ್ಕೆ ಅರ್ಪಿಸಿದ ವಿಷಯವಿಲ್ಲಿದೆ.

* * *

೧. ೦॥ ದುರ್ಮತಿ ಸಂವತ್ಸರದ ಮಾಘ ಬ೧೧೦ಲ್ಲೂ ಶ್ರೀಮತ್ಕೆಳದಿ ಬಸವಪ್ಪನಾಯಕರೂ ।

೨. ನಾಗಗೆ ಬರಸಿ ಕಳುಹಿದ ಕಾರ್ಯ: ಬಿದರೂರು ಪೆಠೆ ವಳಗಣ ಬಾಳೆಕೊಪ್ಪವೆಂಬ ಸ್ಥಳಕ್ಕೆ ನಂ

೩. ಮ ಪಿತೃಗಳು ವೀರಭದ್ರಪ್ಪನಾಯಕರೈಯನವರ ಹೆಸರಲ್ಲು ಭದ್ರರಾಜಪುರವೆಂದು ಮಾಡಿ

೪. ಯಿ ಸ್ಥಳದಲ್ಲೂ ನಂಮ ಮಾತೃಗಳು ಮಲ್ಲಂಮಾಜಿ ಅಂಮನವರ ಭಕ್ತಿಯಲು ತೋಟಸ್ವಾಮಿಯ

೫. ವರ ಹೆಸರಲ್ಲಿ ಕಟ್ಟಿಸಿದ ವಿರಕ್ತಮಠ ಪ್ರತಿಷ್ಠೆಮಾಡಿದ ತೋಟದ ಸಿದ್ಧೇಶ್ವರ ದೇವರ ಕಟ್ಟಲೆ ಕಂ

೬. ದಾಚಾರ ನಡೆಸುವ ಗಣಾರಾಧನೆ ಮುಂತಾದ ಬಗ್ಗೆ ಉತ್ತಾರವ ಕೊಟ್ಟಿದ್ದು, ಬಿದರೂರ

೭. ತಳವಾರ ಗಟ್ಟಿ ಸೇನಬವ ಬರಕೊಟ್ಟ ಚಪ್ಪೂಪ್ರಮಾಣು: ಯಿ ತಳವಾರ ಗಟ್ಟಿ ಸಿಸ್ತಿನಲ್ಲು ಯಿ

೮. ಮಠದ ಸ್ಥಳಕ್ಕೆ ಕೂಡಿದ ಸಿಸ್ತು ತ್ರಿಯಂಬಕ ಪಂಡಿತನ ಪೆಠೆ ಸಿಸ್ತಿನಿಂದ ಗ೭ ಹ॥೦ ಬಾಳೆಕೊ

೯. ಪ್ಪದ ಪೆಠೆ ಸಿಸ್ತಿನಿಂದ ಗ೫॥೧॥೦ಕ ಬಾಡಿಗಲಿಂದ ಗ ॥೩॥೦ ಅಸಲಿಂದ ಗ ॥೩॥೦ ಅಂತ್ತು

೧೦. ಗ ೧೪॥೦ ಹದಿನಾಲ್ಕು ವರೆ ವರಹನ ಸಿಸ್ತಿನ ಸ್ಥಳವನು ಶಿವಾರ್ಪಿತವಾಗಿ ಕೊಟ್ಟು ಯಿ ಸ್ಥ

೧೧. ಳಕ್ಕೆ ಲಿಂಗಮುದ್ರಾಶೀಲಾ ಸ್ಥಾಪಕವ ಮಾಡಿಸುವಲ್ಲಿಗೆ ಹುಜುರಿಂದ ಊಳಿಗದ ತಿಪ್ಪನ ಕಳು

೧೨. ಹಿಸಿದ್ದೆವೆ. ಯಡಬಲದ ಮನೆಯವರ ಕರಸಿಕೊಂಡು ಗಡಿ ತತ್ವಾರ ಬಾರದ ರೀತಿ ಯಿವನ

೧೩. ಮುಂದಿಟ್ಟು ಯಿೂ ಸ್ಥಳಕ್ಕೆ ಶಿಲಾ ಸ್ಥಾಪಕವ ಮಾಡಿಸಿಕೊಟ್ಟು ಯಿೂ ಕಾಗದವ ಸೇನಭವ ಕಡಿತ

೧೪. ಕ್ಕೆ ಬರಸಿ ತಿರಿಗೆ ಯಿೂ ಮಠದವರ ವಶಕ್ಕೆ ಕೊಡುವದಾಗಿದೆ. (ಸೀಲ್)

❖❖

೨

ಕಾಲ : ಕ್ರಿ.ಶ. ೧೭೪೨ (ದುರ್ಮತಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : (ಬೂದಿ) ಬಸವಪ್ಪನಾಯಕರು ಭದ್ರರಾಜಪುರದಲ್ಲಿ ಕಟ್ಟಿಸಿಕೊಟ್ಟ ತೋಂಟದಾರ್ಯ ವಿರಕ್ತಮಠದ ಗಣಾರಾಧನೆಗೆ ನೀಡಿದ ದಾನದ ವಿವರ.

* * *

೧. ೦॥ ದುರ್ಮತಿ ಸಂವತ್ಸರದ ಮಾಘ ಬ೧೧ಲ್ಲೂ ಶ್ರೀಮತ್ಕೆಳದಿ ಬಸವಪ್ಪನಾಯಕರೂ ।

೨. ದಾನಿವಾಸದ ಲಿಂಗಣಗೆ ಬರಸಿ ಕಳುಹಿದ ಕಾರ್ಯಃ ಬಿದುರೂರ ಪೇಠೆ ವಳಗಣ ಬಾಳೆಕೊಪ್ಪವೆಂ

೩. ಬ ಸ್ಥಳಕ್ಕೆ ನಂಮ ಪಿತೃಗಳು ವೀರಭದ್ರನಾಯಕರ್ರೈಯ್ಯನವರ ಹೆಸರಲ್ಲು ಭದ್ರರಾಜ ಪುರವೆಂ

೪. ದು ಮಾಡಿ ಯಿೂ ಸ್ಥಳದಲ್ಲು ನಂಮ ಮಾತೃಗಳು ಮಲ್ಲಂಮಾಜಿ ಅಂಮನವರ ಭಕ್ತಿಯಲ್ಲು ತೋಟಸ್ವಾಮಿ

೫. ಯವರ ಹೆಸರಲ್ಲಿ ಕಟ್ಟಿಸಿದ ವಿರಕ್ತಮಠ ಪ್ರತಿಷ್ಠೆಮಾಡಿದ ತೋಟಸಿದ್ಧೇಶ್ವರ ದೇವರ ಕಟ್ಟಲೆ ಕಂ

೬. ದಾಚಾರ ನಡಸುವ ಗಣಾರಾಧನೆ ಮುಂತಾದ ಬಗ್ಗೆ ಉತಾರವ ಕೊಟ್ಟು ಸ್ವಾಸ್ಥಿಮುಂನಿನಾಡ ಸಿ

೭. ಮೆ ಸ್ಥಳದ ಸೇನಬವ ಬರಕೊಟ್ಟ ಚಪ್ಪೂ ಪ್ರಮಾಣಃ ಯಿೂ ಸಿಮೆಯಲ್ಲು ಈ ಮಠವ ಕಟ್ಟಿದ ಸ್ಥ

೮. ಳಕ್ಕೆ ಕೂಡಿದ ಸಿಸ್ತು ನಿಲ್ಲಿಸಿದ ನಷ್ಟದಿಂದ ಮೂಡಗೊಪ್ಪದ ಗ್ರಾಮದಿಂದ ಗ೨॥ಹ॥=ಹೊಸ ಬಿ

೯. ದ ಭದ್ರನ ಸಸ್ತಿನಿಂದ ಗ೧ ಹ॥= ಹಂದಿಗದ್ದೆ ಗಿರಿಯನ ಸಿಸ್ತಿನಿಂದ ಗ ೧॥೧ ॥=ಉಭಯಂ

೧೦. ಗ೧೨॥೦ಗ್ರಾಮ ನಷ್ಟದಿಂದ ಹ೪॥= ಅಂತೂ ಗ೧೩೨ಹ೨॥ ಬೈಸೆ ಕುಪ್ಪಂದೂರ ಗ್ರಾಮದಿಂದ

೧೧. ಚಿಕಳಿ ಕೊಲ್ಲೂರನ ಬರಮನ ಭೂಮಿಯಿಂದ ಗ೩ ಉಭಯಂ ನಷ್ಟದಿಂದ ಗ೩೫ ಹ೨ ||೦ ಸ್ಥಳ ವೆಚ್ಚ ಕೊಪೆ

೧೨. ಬಿರಾಡದ ಸಿಸ್ತಿನಿಂದ ಯಿೂ ಭೂಮಿ ವಂತಿಕೆಗೆ ಗ|| ೨= ಉಭಯಂಗ ೩೫ ||೪||= ಯಿೂಗ ಹೆ

೧೩. ಚ್ಚಿದ್ದು ದಾಸೋಹ ಸಿಸ್ತಿನ ಬಗ್ಗೆ ಪ್ರಾಕು ಕೂಡಿದ್ದು ಹೊರತಾಗಿ ಯಿೂಗ ಕೂಡಿದ್ದು ಹ ।೦ ಉಭಯಂ

೧೪. ಗ೩೬ ಹ|= ಮೂವತ್ತಾರು ವರಹೊನ್ನು ಬೆಳೆ ಸ್ವಾಸ್ಥಿಯಂನು । ಶಿವಾರ್ಪಿತವಾಗಿ ಕೊಟ್ಟು ಯಿೂ

೧೫. ಭೂಮಿಗೆ ಲಿಂಗಮುದ್ರಾ ಶಿಲಾಸ್ಥಾಪಿತವ ಮಾಡಿಸುವಲ್ಲಿಗೆ ಹುಜುರಿಂದ ಊಳಿಗದ ತಿಪನ

೧೬. ಕಳುಹಿಸಿದ್ದೆ ವೆಚ್ಚ ಗ್ರಾಮದವರ ಕರಸಿಕೊಂಡು ಗಡಿ ತತ್ವಾರ ಬಾರದ ರೀತಿ ಯಿವನ ಮುಂದಿ

೧೭. ಟ್ಟು ರೇಖೆ ಪ್ರಮಾಣ ಭೂಮಿಗೆ ಶಿಲಾ ಸ್ಥಾಪಕವ ಮಾಡಿಸಿ ಕೊಟ್ಟು ಯಿೂ ಕಾಗದ ಸೇನ ಭವರ ಕಡಿತ

೧೮. ಕ್ಕೆ ಬರಸಿ ತಿರಿಗಿ ಯಿೂ ಮಠದವರ ವಶಕ್ಕೆ ಕೊಡುವದಾಗಿದೆ.

❖❖

೩

ಕಾಲ : ಕ್ರಿ.ಶ. ೧೭೪೯ (ವಿಭವ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಭದ್ರರಾಜಪುರದ ತೋಂಟದಾರ್ಯವಿರಕ್ತಮಠಕ್ಕೆ ಕೆಳದಿ (ಬೂದಿ) ಬಸಪ್ಪನಾಯಕರು ಗಣಾರಾಧನೆಗೆ ದಾನ ನೀಡಿದ ವಿವರ.

* * *

೧. ೦|| ವಿಭವ ಸಂವತ್ಸರದ ಮಾರ್ಗಶಿರ ಶು ೧೦ಲ್ಲು ಶ್ರೀಮತ್ಕೆಳದಿ ಬಸಪ್ಪನಾಯಕರೂ।

೨. ತಿಂಮಣಗೆ ಬರಸಿ ಕಳುಹಿದ ಕಾರ್ಯ: ಬಿದರೂರು ಪೇಠೆವಳಗಣ ಬಾಳೆಕೊಪ್ಪವೆಂಬ ಸ್ಥಳಕ್ಕೆ ನಂ।

೩. ಮ ಪಿತೃಗಳು ವೀರಭದ್ರಪ್ಪನಾಯಕರೈಯ್ಯನವರ ಹೆಸರಲು ಭದ್ರರಾಜಪುರವೆಂದು ಮಾಡಿ

೪. ಯಿೂ ಸ್ಥಳದಲ್ಲು ನಂಮ್ಮ ಮಾತೃಗಳು ಮಲ್ಲಂಮಾಜಿ ಅಂಮನವರ ಭಕ್ತಿಯಲು ತೋಟಸ್ವಾಮಿಯ ।

೫. ವರ ಹೆಸರಲ್ಲು ಕಟ್ಟಿಸಿದ ವಿರಕ್ತಮಠ ಪ್ರತಿಷ್ಠೆ ಮಾಡಿದ ತೋಟದ ಸಿಧೇಶ್ವರ ದೇವರ ಕಟ್ಟಲೆ ಕಂದಾಚಾ

೬. ರ ನಡಸುವ ಗಣಾರಾಧನೆ ಮುಂತಾದ ಬಗ್ಗೆ ಮುಳುವಳ್ಳಿ ಸೀಮೆಯಿಂದ ಉತ್ತಾರವಾದ ಗ್ರಾಮ

೭. ಗಳಿಂದ ಚಿಳ್ಳರೆ ಸುಂಕಕ್ಕೆ ಸಲುವ ಯಲೆಗಾರ ಕಡಿಂದ ಉತ್ತಾರವಾದ ಗ೧ನ್ನು ಅರಮನೆ ಹವಾಲೆ

೮. ಮಾಡಿಕೊಂಡು ಯಡತೊರೆ ಸಿಮೆ ಕುಂಚನ ಹಾಳಿಕದ ಸಕಲಾಪುರದ ಗ್ರಾಮದಿಂದ ಸಲುವ

೯. ಸುಂಕದ ಯಿಂನು ಹೊಸ್ತಾಗಿ ಕರಸುವ ಮಗ್ಗ ಗಾಣದ ಬಗ್ಗೆ ಸಹ ಸಸ್ತು ಮಾಡಿಸಿಯಿೂ

೧೦. ಶಿಸ್ತು ಸತೂ ಉತ್ತಾರವ ಕೊಡಬೇಕೆಂದು ಯಿೂ ಮಠದ ರಾಚವಟ್ಟಿ ಸ್ವಾಮಿಯವರು ಹೇಳಿದ್ದ

೧೧. ರಿಂದ ಚಿಳ್ಳರೆ ಸುಂಕದಿಂದ ಯಲೆಗಾರಕದ ಬಗೆಉ ಉತ್ತರವಾಗಿದ್ದ ಗ ೧ ನ್ನು ಸಲಿವಿಟ್ಟು।

೧೨. ಆ ಸುಂಕದ ಸಸ್ತಿಗೆ ಕೂಡಿಸಿ ಉತ್ತಾರ ಕೊಟ್ಟಿದು ದುರ್ಗದ ಹೋಬಳಿ ಸುಂಕದ ವಳಗಣ

೧೩. ಸೀಮೊಗೆ ಸುಂಕದ ಸ್ಥಳದ ಸೇನಬೋವ ಬರಕೊಟ್ಟ ಚಪ್ಪೂ ಪ್ರಮಾಣುಃ ಯಿೂ ಸುಂಕಕ್ಕೆ ಕುಂಚನ ಹಾ

೧೪. ಳಿಕದ ಸಕಲ್ಲಾಪುರದ ಗ್ರಾಮದಿಂದ ಬಂದ ಸುಂಕಸ್ಥಳ ಲೆಕ್ಕದಿಂದ ಗ೨।೦ ಯಲೆಗಾರಕ

೧೫. ದಿಂದ ೨೦ ಬಸವನ ಬಾವಿ ಹೊಂಡದ ವಕ್ಕಲಿಂದ ಗ ೪ಸಗರ ಉಚ್ಚೆಗಾತ ಗ೨ ಅಂಗಡಿಗಾ

೧೬. ರಕ ಜಿ ೨ಕ್ಕೆ ಗ ।।೦ದನ ಮಾಡಿನಿಂದ ಗ೧ ಅಂತು ಗ೩೦ ಯಿೂಗ ಹೆಚ್ಚಿದ್ದು ಹೊಸ್ತಾಗಿ ಕರಸುವ ಮ

೧೭. ಗ–೧೨ ಗಾಣ ೧ಕ್ಕೆ ಸಹ ಮಾಡಿದ ಸಿಸ್ತುಗ ೬ ಉಭಯಂ।ಗ೩೬ ಮೂವತ್ತು ಆರು ವರ ಹೊ

೧೮. ನ್ನು ಬಿದರೂರು ಪೇಠೆ ವಳಗಣ ಬಾಳೆಕೊಪ್ಪವೆಂಬಿ ಸ್ಥಳಕ್ಕೆ ನಂಮ ಪಿತೃಗಳು ವಿರ।

೧೯. ಭದ್ರಪ್ಪ ನಾಯಕರ್ಯೆಯ್ಯನವರ ಹೆಸರಲ್ಲು ಭದ್ರರಾಜಪುರವೆಂದು ಮಾಡಿ, ಯಿೂ ಸ್ಥಳದಲ್ಲು

೨೦. ನಂಮ ಮಾತೃಗಳು ಮಲ್ಲಂಮಾಜಿ ಅಂಮನವರ ಭಕ್ತಿಯಲ್ಲು ತೋಟಸ್ವಾಮಿಯವರ ಹೆಸ

೨೧. ರಲು ಕಟ್ಟಿಸಿದ ವಿರಕ್ತಮಠ ಪ್ರತಿಷ್ಠೆ ಮಾಡಿದ ತೋಟಸಿಧೇಶ್ವರ ದೇವರ ಕಟ್ಟಲೆ ಕಂದಾಚಾ

೨೨. ರ ನಡಸುವ ಗಣಾರಾಧನೆ ಮುಂತಾದ ಬಗ್ಗೆ ಶಿವಾರ್ಪಿತವಾಗಿ ಉತಾರವ ಕೊಟ್ಟಿಧೆವೆ।

೨೩. ಯಿೂ ಬಗೆ ಹಣವ ಕೇಳದ ಹಾಗೆ ಸಿಮೊಗ್ಗೆ ಸುಂಕದ ಮಣಿಹ್ಯಗಾರಗೆ ತಾಕಿತಿ ಮಾಡಿಸಿ ಯಿೂ

೨೪. ಕಾಗದವ ಸೇನಬವನ ಕಡಿಕಕ್ಕೆ ಬರಸಿ ತಿರಿಗಿ ಯಿೂ ಮಠದವರ ವಶಕ್ಕೆ ಕೊಡುವದಾಗಿದೆ.

(ಸೀಲ್)

❖❖

ಕಾಲ : ಕ್ರಿ.ಶ. ೧೭೪೯ (ವಿಭವ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಕೆಳದಿ ಬಸವಪ್ಪನಾಯಕರು ಭದ್ರರಾಜಪುರದಲ್ಲಿ ಕಟ್ಟಿಸಿದ ತೋಂಟದಾರ್ಯಮಠಕ್ಕೆ ಕಟ್ಟಲೆ ಕಂದಾಚಾರ ನಡಸುವ ಗಣಾರಾಧನೆಗಾಗಿ ನೀಡಿದ ದಾನದ ವಿವರ.

* * *

೧. ೦॥ ವಿಭವ ಸಂವತ್ಸರದ ಮಾರ್ಗಿಶಿರ ಶು ೧೦ಲ್ಲೂ ಶ್ರೀಮತ್ಕೆಳದಿ ಬಸವಪ್ಪನಾಯಕರೂ।

೨. ಕಳಸಂಣ್ಣೊಗೆ ಬರಸಿ ಕಳುಹಿದ ಕಾರ್ಯ: ಬಿದರೂರ ಪೆಠೆವಳಗಣ ಬಾಳೆ ಕೊಪ್ಪವೆಂಬ ಸ್ಥಳಕ್ಕೆ ನಂಮ

೩. ಪಿತೃಗಳು ವೀರಭದ್ರಪ್ಪ ನಾಯಕರೈಯ್ಯನವರ ಹೆಸರಲ್ಲು ಭದ್ರರಾಜಪುರವೆಂದು ಮಾಡಿ ಯೊಸ್ಥಳದ

೪. ಲ್ಲು ನಂಮ ಮಾತೃಗಳು ಮಲ್ಲಂಮಾಜಿ ಅಂಮನವರ ಭಕ್ತಿಯಲ್ಲು ತೋಟಸ್ವಾಮಿಯವರ ಹೆಸರಲ್ಲುಕಟ್ಟಿ

೫. ಸಿದ ವಿರಕ್ತಮಠ ಪ್ರತಿಷ್ಠೆ ಮಾಡಿದ ತೋಟಸಿಧೇಶ್ವರ ದೇವರ ಕಟ್ಟಲೆ ಕಂದಾಚಾರ ನಡಸುವ ಗಣಾರಾಧನೆ।

೬. ಮುಂತಾದ ಬಗ್ಗೆ ಮುಳುವಳ್ಳಿ ಸೀಮೆಯಿಂದ ದುರ್ಮತಿ ಸಂವತ್ಸರದಲು ಗ್ರಾಮ ೧೭ಕ್ಕೆ ಹುಟ್ಟಿದ ವಳಿಯಿಂದಲ್ಲು।

೭. ಗ ೪೦೦ ಹ೧ = ಸಿಸ್ತಿನ ನಷ್ಟದಿಂದ । ಗ ೧ ಹ ೨೦ ಉಭಯ ೦ಗ ೪೦ಹಾ ೩। = ನಿಲಿಸಿದ ನಷ್ಟದಿಂದ । ಗ ೧೩೧್ಹ ೩।೦ ಉ೦೦

೮. ಭಯಂ ಗ ೫೪೦॥೧ ॥ = ದಾಸೊಹದ ಸಿಸ್ತಿನಿಂದ ಗ ॥೩॥೦ ಪಗುಡಿ ಚತ್ರವಂತಿಕೆಯಿಂದ ಹುಟ್ಟುವಳಿ ಮೆ

೯. ಲೆ ಗ ೭೫ ಹ।೦ ಅಂತು।ಗ ೬೧೬ ॥೦॥=ಯು ಉತಾರವಾಗಿ ನಡದು ಬರುತ್ತದೆ ಶಿಲಾಸ್ಥಾಪಕವಾದಿಲ್ಲಯೊ

೧೦. ಭೂಮಿಯನು ಅರಮನೆ ಹವಾಲೆ ಮಾಡಿಕೊಂಡು ಯೊ ಬಗ್ಗೆ ಬದಲು ಸ್ವಾಸ್ಥೆ ಉತಾರವ ಕೊಡಬೇಕೆಂದು ।

೧೧. ಯೊ ಮಠದ ರಾಚವಟ್ಟೆಸ್ವಾಮಿಯವರು ಹೇಳಿದ್ದರಿಂದ ಮುಳುವಳ್ಳಿ ಸೀಮೆಯಲ್ಲು ಉತಾರಕೊಟ್ಟ ಗ ೬೧೬ ॥೦॥ =

೧೨. ಯನು ಸಲವಿಟ್ಟು ಆ ಸೀಮೆ ಸಿಸ್ತಿಗೆ ಕೂಡಿಸಿ ಆ ಬದಲಿಗೆ ಉತಾರ ಕೊಟ್ಟಿದು ಯಡತೊರೆ ಸೀಮೆ ಸ್ಥಳದ ಸೇನಬವ

೧೩. ಬರಕೊಟ್ಟ ಚಪ್ಪೂ ಪ್ರಮಾಣು ಯಿೊ ಸೀಮೆ ಕುಂಚನಹಾಳಿಕದ ಸಕಲ್ಲಾ ಪುರದ ಗ್ರಾಮದಿಂದ ರೇಖೆ ಗ ೪೯ ಹ. ೩॥ =

೧೪. ಗೆ ಉತಾರ ಸಿತಿಗಿಲಪುರದ ಗ್ರಾಮದ ಕರೆ ಹನುಮಗೆ ಹೊಳ ಹೊಂನೂರ ಕೊಡೆ ಮುತ್ತಿಗೆಯಲ್ಲು ಹೊಕ್ಕು ಅರವು

೧೫. ನೆ ಕಾರ್ಯದಲ್ಲು ಕಷ್ಟಬಿಟ್ಟ ಬಗ್ಗೆ ಕೊಟ್ಟ ಉಂಬುಳಿ ಗ ೬ ನುಳಿದು ಶುಧ ಗ ೪೮೫ ಹ ೩॥ = ಗೆ ವಿವರ ಹುಟ್ಟುವ

೧೬. ಳಿಯಿಂದ ಗ ೩೭೬ ॥೧ । = ಸಿಸ್ತಿನ ನಷ್ಟದಿಂದ ಗ ೮೧ ಉಭಯಂ । ಸಿಸ್ತಿನಿಂದ । ಗ ೪೫೭ ॥೧॥= ಯಿೊಗ ಉ

೧೭. ತಾರ ಸಹವಿಟ್ಟು ಕೂಡಿದ್ದು ಗೌಡುಂಬಳಿಯಿಂದ ಗ ೧೯॥೦ ಉಭಯಂ ।ಗ ೪೭೭ ಹ೧ ।= ನಿಲಿಸಿದ ನಷ್ಟ

೧೮. ದಿಂದ ಗ೮ ಹ೨॥೦ ಉಭಯಂ। ಗ೪೮೫ ಹ೩॥।= ಯಿೊಗ ಹೆಚ್ಚಿದ್ದು ಸಿಸ್ತಿನಷ್ಟ ನಿಲಿಸಿದ ನಷ್ಟ ಉತಾರ ಸಲ್ಲವಾದ

೧೯. ಬಗ್ಗೆ ಸಹ ಕೂಡಿದ ದಾಸೋಹದ ಸಿಸ್ತು ಗ ॥೧॥ ಪಗುಡಿ ಚತ್ರವಂತಿಗೆಯಿಂದ ಹುಟ್ಟುವಳಿ ಉತಾರ ಸಲವಿ

೨೦. ಟ್ಟ ಬಗ್ಗೆ ಸಹ ೭೪॥ ಹ೨॥।೦ ಉಭಯಂ ಹೆಚ್ಚಿದ್ದು ಗ೭೪॥೪॥= ಉಭಯಂ। ಗ ೫೬೦ ಹ೩।= ಐನೂ

೨೧. ರ ಅರವತ್ತು ವರಹೊನ್ನು ಮೂರು ಪಣ ಹಾಗ ಮೂರು ವಿಸದ ಸ್ವಾಸ್ಥೆಯನು ಬಿದರೂರು ಪೆರೆವಳಗಣ ಬಾ

೨೨. ಳೆಕೊಪ್ಪವೆಂಬ ಸ್ಥಳಕ್ಕೆ ನಂಮ ಪಿತೃಗಳು ವೀರಭದ್ರಪ್ಪನಾಯಕರ್ಯೆಯನವರ ಹೆಸರಲ್ಲು ಭದ್ರರಾಜಿಪುರವೆ

೨೩. ಂದು ಮಾಡಿ ಯಿೊ ಸ್ಥಳದಲ್ಲು ನಂಮ ಮಾತೃಗಳು ಮಲ್ಲಂಮಾಜಿ ಅಂಮನವರ ಭಕ್ತಿಯಲ್ಲೂ ತೋಟಸ್ವಾಮಿಯ।

೨೪. ವರ ಹೆಸರಲ್ಲು ಕಟ್ಟಿಸಿದ ವಿರಕ್ತಮಠದ ಪ್ರತಿಷ್ಠೆ ಮಾಡಿದ ತೋಟ ಸಿಧೇಶ್ವರದೇವರ ಕಟ್ಟಲೆ ಕಂದಾಚಾರ ನಡಸುವ ಗಣಾರಾಧನೆ

೨೫. ಮುಂತಾದ ಬಗ್ಗೆ ಶಿವಾರ್ಪಿತವಾಗಿ ಕೊಟ್ಟು ಯಿೊ ಗ್ರಾಮದಲ್ಲು ಬರದ ಉಂಬಳಿಯನು

೨೬. ಪೂರ್ವ ಪ್ರಮಾಣು ನಡೆಸಿ ಬಾತು ರೀತಿ ಮಾಡಿಸಿ ಯಿೊ ಭೂಮಿಗೆ ಲಿಂಗ ಮುದ್ರಾಶಿಲಾ ಸ್ಥಾಪಕವ ಮಾಡಿಸುವಲ್ಲಿ

೨೭. ಗೆ ಹುಜುರಿಂದ ಊಳಿಗದ ನಿಜಲಿಂಗನ ಕಳುಹಿಸಿಧೇವೆ ಚಲು ಗ್ರಾಮದವರ ಕರಸಿಕೊಂಡು ಗಡಿತತ್ವಾರ ಬಾರ

೨೮. ದ ರೀತಿ ಯಿವನ ಮುಂದಿಟ್ಟು ರೇಖೆ ಪ್ರಮಾಣು ಯಿ ಗ್ರಾಮಕ್ಕೆ ಶಿಲಾಸ್ಥಾಪಿತ ಮಾಡಿಸಿಕೊಟ್ಟು ಯಿ ಕಾಗದವ ಸೆನ

೨೯. ಬವರ ಕಡಿತಕ್ಕೆ ಬರಸಿ ತಿರಿಗಿ ಯಿ ಮಠದವರ ವಶಕ್ಕೆ ಕೊಡುವದಾಗಿದೆ. (ಸೀಲ್)

❖❖

೫

ಕಾಲ : ಕ್ರಿ.ಶ. ೧೭೪೦–೧೭೫೫ ಭಾಷೆ : ಕನ್ನಡ

ಸಾರಾಂಶ : ಕೆಳದಿ (ಬೂದಿ) ಬಸವಪ್ಪನಾಯಕರು ಡಂಬಳದ ತೋಂಟದಾರ್ಯಮಠಕ್ಕೆ ಮಾಡಿಸಿಕೊಟ್ಟ ಕಳಸದ ಮೇಲಿನ ಬರೆಹ.

* * *

೧. ಡಂಬಳದ ತೋಂಟಸ್ವಾಮಿಯವರ ಗದ್ದಿಗ್ಗೆ ಮಾಡಿಸಿಕೊಟ್ಟ ತೆರಿನ ಕಳಸವು

೨. ಕೆಳದಿ ಬಸವಪ್ಪ ನಾಯಕರ ಭಕ್ತಿ

❖❖

೬

ಕಾಲ : ಕ್ರಿ.ಶ. ೧೭೪೦–೧೭೫೫ ಭಾಷೆ : ಕನ್ನಡ

ಸಾರಾಂಶ : ಕೆಳದಿ (ಬೂದಿ) ಬಸಪ್ಪನಾಯಕರು ಡಂಬಳ ತೋಂಟದಾರ್ಯಮಠಕ್ಕೆ ನಿತ್ಯ ತುಪ್ಪದ ನಂದಾದೀಪ, ಸಾಯಂಕಾಲದಲ್ಲಿ ಕ್ಷಿರಾನ್ನ, ಹಣ್ಣು, ವಿಳ್ಯೆ ಮುಂತಾದ ನೈವೇದ್ಯಕ್ಕಾಗಿ ದಾನ ನೀಡಿದ ವಿಷಯ ಇಲ್ಲಿದೆ.

* * *

೧. ಸ್ವಸ್ತಿ॥ ಶ್ರೀಮದರವಿಂದಾ ಸಹಾ ಮುಕುಂದ ಸಂಕ್ರಂದ ನಾಡಿ ವೃಂ

೨. ದಾರಕ ಸಂದೋಹ ಮಕುಟ ಕಟಿಘಟಿತ ದೆದಿಪ್ಯಮಾನ ಮಣಿ

೩. ಗಣೂ ಮರಿಚಿ ಮಂಜುಳ ವಿವೇಕ××ಳಿಕಾ ವಾಜಿಗಿ ರಾಜಿರಚರಣ

೪. ಸರಜಿರುಹ ನಿಖಿಲ ಭುವನ ನಿರ್ಮಾಣ ಭರಣ ಹರಣ ಶಿರೋ

೫. ಮೂರ್ತಿ ಗರ್ಭಸಚ್ಚಿದಾನಂದ ×× ಗುರುಲಿಂಗ ಜಂಗಮಾ ತಾನಾಗಿ

೬. ಭಕ್ತಸ್ವರೂಪ ಪರಶಿವ ಪರಾವಕೊ ರೆಣುಕಗಣಾಧೀಶ್ವರ ಸಂಪ್ರದಾ

೭. ಯ ಪರಂಪರಾ ××× ಯೊಗಾಂಗ ಭೊಗಾಂಗ ಸಮುಪ್ಪಿಕೃತ

೮. ಷಟ್ಸ್ಥಳ ಬೇದ ಬಿಂನದಿಂದಾಡಿ ××× ಶೂನ್ಯಾಂತಪಾಲಿಪದೆಕೊತ್ತರ ಶ

೯. ತಸ್ಥಳಕ ವಿಶಷೆಂದು ಮಥನ ಸಮುಧಿಕ ಲಿಂಗಾಂಗ ಸಾಮರಸ್ಯ ಸುಧಾರ

೧೦. ಸಸ್ತರಾದ ಸಮುದ್ರಿಕ ಮಾನಸೆ ವಿರಶೈವಾಚಾರ ಸಂಪನ ಪರಿವ್ರಾಜಿಕಾಚಾರ್ಯವ

೧೧. ರ್ಯ ಶ್ರೀ ತೋಂಟದಾರ್ಯಸ್ವಾಮಿಯವರ ದಿವ್ಯ ಶ್ರೀಚರಣಾರವಿಂ।

೧೨. ದಗಳಿಗೆ –

೧೩. ಶ್ರೀಮತ್ಕೆಳದಿ ಬಸವಪ್ಪನಾಯಕರೂ ಸಾಷ್ಟಾಂಗವೆರಗಿ

೧೪. ಪೊಡಮೊಟ್ಟು ಮಾಡುವ ಸಹಸ್ರಕೊಟಿ ಬಿಂನಹ ನಾಲು ಸ್ವಾ

೧೫. ಮಿಯವರ ಲಿಂಗಾಂಗ ಸಾಮರಸ್ಯತಿಶಯಗ

೧೬. ಳಿಗೆ ಅನರತಉ ನಿರೂಪಣೆ ಕಳುಹ ಚಿತ್ತೈಸುವ ಹಾ

೧೭. ಗೆ ಮಾಡಸಬೇಕು । ಡಂಬಳದಲ್ಲೂ ನಾಉ ನಿತ್ಯದಲ್ಲೂ ನಂದಸು

೧೮. ವ ತುಪ್ಪದ ನಂದಾದೀಪ ಪ್ರಾತಃ ಕಾಲದಲ್ಲೂ ಧ್ಯಾಂನ

೧೯. ಸಾಯಂಕಾಲದಲ್ಲು ಕ್ಷಿರಾಂನ ಹಣ್ಣು ವಿಳ್ಳೆ ಮು

೨೦. ೦ತಾದ ನೈವೆದ್ಯ ಸಹ ನಡಸುವ ಬಗ್ಗೆ ಮುತ್ತೂರ ಸೀ

೨೧. ಮೆಯಲ್ಲೂ ಉತ್ತಾರವಕೊಟ್ಟು ಆ ಬಗ್ಗೆ ನಿರೂಪವಂನು

೨೨. ಬರಸಿ ಕಳುಹಿಸಿದೆವೆ ಆ ಪ್ರಕಾರ ನೈವೆದ್ಯ ಮುಂ

೨೩. ತಾಗಿ ಸಾಂಗವಾಗಿ ನಡವ ರೀತಿ ಪಟ್ಟಿಮಾಡಿಸಿದರೆ

೨೪. ಭಕ್ತಿಯುಕ್ತಿ ಮುಕ್ತಿನು ಯಿತ್ತಲಾಗತಕ್ಕೆ ಶೆವಾ

೨೫. ವಿವರಗಳಿಗೂ ಸ್ವಾಮಿಯವರ ×××××× ವಿ

೨೬. ಭವಗಳಿಗೆ ಸಹ ಬರಸ ಕಳಹ ಚಿತ್ತೈಸಬೇಕ ಅರಿ

೨೭. ಕೊರ್ದರ್ತವರ್ತಮಾನಗಳ ××× ಸರ್ವಜ್ಞ ಚಿತ್ತಕ್ಕೆ ವಿಶೆಷ ಬಿನ್ನ

೨೮. ಹ ಮಾಡಿ ಕಳುಹುವಂಥಾದೆ ××× ನಿ ಯಿಂತಿ ಬಿಂನಹ ॥

❖❖

ಕಾಲ : ಕ್ರಿ.ಶ. ೧೭೪೩ (ದುಂದುಭಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಕೆಳದಿ (ಬೂದಿ) ಬಸವಪ್ಪ ನಾಯಕರು ಭದ್ರರಾಜಪುರದಲ್ಲಿ ಕಟ್ಟಿಸಿದ ತೋಂಟದಾರ್ಯ ಮಠದ ಗಣಾರಾಧನೆಗೆ ದಾನ ನೀಡಿದ ವಿವರ.

* * *

೧. ೦॥ ದುಂದುಭಿ ಸಂವತ್ಸರದ ಶ್ರಾವಣ ಶು॥ ೫ ಲ್ಲು ಶ್ರೀಮತ್ಕೆಳದಿ ಬಸಪ್ಪ ನಾಯಕರೂ ।

೨. ದುಗ್ಗಗೆ ಬರಸಿ ಕಳುಹಿದ ಕಾರ್ಯ ಬಿದರೂರ ಪೆಠೆವಳಗಣ ಬಾಳೆಕೊಪ್ಪವೆಂಬ ಸ್ಥಳಕ್ಕೆ ನಂ

೩. ಮ ಪಿತೃಗಳು ವೀರಭದ್ರಪ್ಪನಾಯಕರೈಯ್ಯನವರ ಹೆಸರಲ್ಲು ಭದ್ರರಾಜ ಪುರವೆಂದು ಮಾಡಿ

೪. ಯಿ ಸ್ಥಳದಲ್ಲು ನಂಮ ಮಾತೃಗಳು ಮಲಂಮಾಜಿ ಅಂಮನವರ ಭಕ್ತಿಯಲ್ಲು ತೋಟಸ್ವಾಮಿಯ

೫. ವರ ಹೆಸರಲ್ಲಿ ಕಟ್ಟಿಸಿದ ವಿರಕ್ತಮಠ ಪ್ರತಿಷ್ಠೆ ಮಾಡಿದ ತೋಟಸಿದ್ಧೇಶ್ವರ ದೇವರ ಕಟ್ಟಲೆ ಕಂದಾ

೬. ಚಾರ ನಡಸುವ ಗಣಾರಾಧನೆ ಮುಂತಾದ ಬಗ್ಗೆ ಪ್ರಾಕು ಉತ್ತಾರವ ಕೊಟ್ಟು ಮಹದೇವ ಪು

೭. ರದ ಸೀಮೆ ಯಿಸೂರ ಗ್ರಾಮದಿಂದ ಬರಹ ಕಾರಕ ಯಿಕ್ಕೇರಿ ಹೊಬಳಿ ಸುಂಕದ ವಳಗಣ ಮ

೮. ಹದೇವಪುರದ ಸುಂಕದ ಸ್ಥಳದ ಸೇನಬ ಭೂವ ಬರಕೊಟ್ಟ ಚಪ್ಪೊ ಪ್ರಮಾಣುಃ ಯಿ ಸುಂಕಕ್ಕೆ ಯಿ

೯. ಗ್ರಾಮದಿಂದ ಬಾಹ ಕಾರಕದ ಗುತ್ತಿಗೆಯಿಂದ ಜಾಡರ ××× ದ ಗಲ ಗಾಣದಿಂದ ಗ॥೦

೧೦. ಅಂಗಡಿಯಿಂದ ಹ೨॥೦ ಅಂತು ಗಲ॥೨॥೦ ಎಂಟು ವರಹೊನ್ನು ಅಳುಹಣ ವದ್ಯ ಬೆರೆಯಿ

೧೧. ತ್ತುಗಾರಕ ದನಮಾಲಿನ ಸುಂಕ ಸದಾಶಿವಾರ್ಪಿತವಾಗಿ ಉತ್ತಾರವ ಕೊಟ್ಟಿದ್ದೆವೆ ಯಿ ಗ್ರಾ

೧೨. ಮದಿಂದ ಬಾಹ ಕಾರಕ ಮತ್ತುಗಾರಕ ದನಮಾಲಿನ ಸುಂಕ ಸಹಾ ಕೇಳದ ಹಾಗೆ ಮಹ

೧೩. ದೇವಪುರದ ಸುಂಕದ ಠಾಣ್ಯದ ಮಣಿಹಗಾರಗೆ ತಾಕಿತಿ ಮಾಡಿಸಿ ಯಿ ಕಾಗದವ ಸೇನಬ

೧೪. ವರ ಕಡಿತಕ್ಕೆ ಭರಸಿ ತಿರಿಗಿ ಯಿ ಮಠದವರ ವಶಕ್ಕೆ ಕೊಡುವುದಾಗಿದೆ. (ಸೀಲ್)

❖❖

ಕಾಲ : ಕ್ರಿ.ಶ. ೧೭೪೯ (ವಿಭವ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಕೆಳದಿ (ಬೂದಿ) ಬಸವಪ್ಪನಾಯಕರು ಭದ್ರರಾಜಪುರದಲ್ಲಿ ಕಟ್ಟಿಸಿದ ತೋಂಟದಾರ್ಯಸ್ವಾಮಿ ಗದ್ದಿಗಿಗೆ ನಿತ್ಯ ತುಪ್ಪದ ನಂದಾದೀಪ ಎರಡು ಪ್ರಾತಃಕಾಲದಲ್ಲಿ ಕ್ಷಿರಾನ್ನ ನೈವೆದ್ಯ ನಡೆಸಲು ನೀಡಿದ ದಾನದ ವಿವರ.

* * *

೧. ೦॥ ವಿಭವ ಸಂವತ್ಸರದ ಮಾಘ ಶು೫ ಲ್ಲೂ ಶ್ರೀಮತ್ಕೆಳದಿ ಬಸವಪ್ಪ ನಾಯಕರೂ।

೨. ವೆಂಕ ಹೆಗಡೆಗೆ ಬರಸಿ ಕಳುಹಿದ ಕಾರ್ಯ: ಡಂಬಳದಲ್ಲು ತೋಟ ಸ್ವಾಮಿಯವರ ಗದ್ದಿಗೆ ಸಮಿ

೩. ಪದಲ್ಲು ನಾವು ನಿತ್ಯದಲ್ಲು ನಡಸುವ ತುಪ್ಪದ ನಂದಾದೀಪ ಯರಡು । ಪ್ರಾತಃಕಾಲದಲ್ಲುಧ್ಯಾ

೪. ನ ಸಾಯಂಕಾಲದಲ್ಲು ಕ್ಷಿರಾಂನ ಹಣ್ಣು ವಿಳ್ಯ ಮುಂತಾದ ನೈವೆದ್ಯ ಕಟ್ಟಲೆ ಬಗ್ಗೆ ಸಹ ಉತ್ತಾರ

೫. ವ ಕೊಟ್ಟದ್ದು ಮತ್ತೂರ್ತ ಸೀಮೆ ಸ್ಥಳದ ಸೇನಬೋವ ಬರಕೊಟ ಚಪ್ಪೊ ಪ್ರಮಾಣು: ಯಿ ಸೀಮೆ ಮುತ್ತೂರ್ತ

೬. ಪಾಲ ವಳಗಣು ಉಂಟೂರ ಗ್ರಾಮದಿಂದ ಸಿಸ್ತಿನಿಂದ ಗ೩ ಹ೪।೦ ನಿಲ್ಲಿಸಿದ ನಷ್ಟದಿಂದ ಗ೨೧ ॥೨॥೦ ಉ

೭. ಭಯ[೦] ಗ೭ ಹ೧।।।೦ ಯಿಗ ಹೆಚ್ಚಿದ್ದು ನ್ಲಿಸಿದ ನಷ್ಟದ ಬಗ್ಗೆ ಕೂಡಿದ ದಾಸೋಹದ ಸಸ್ತು ಹ೧॥ ಪಗು

೮. ಡಿ ಚತ್ರವಂತಿಕೆಯಿಂದ ಸಸ್ತಿನ ಮೇಲೆ ಗ೬ ಹ।।।೦ ಉಭಯಂ ಗ೬ ಹ೭॥ = ಉಭಯಂಗ ಗ೬೮ ಹ॥೪।= ಅರವತ್ತು ಯಂಟು ವರ

೯. ಹೊನ್ನು ನಾಲ್ಕು ಹಣ ಹಾಗೂ ಬೆಳೆ ಸ್ವಾಸ್ಥಿಯನ್ನು ಶಿವಾರ್ಪಿತವಾಗಿ ಕೊಟ್ಟು ಯಿ ಭೂ

೧೦. ಮಿಗೆ ಲಿಂಗಾಮುದ್ರಾ ಶಿಲಾಸ್ತಾಪಿತವ ಮಾಡಿಸುವಲ್ಲಿಗೆ ಹುಜುರಿಂದ ಊಳಿಗದ ಚಂನಬಸವನ ಕಳು

೧೧. ಹಿಸಿದೆ ವೆಚ್ಚಗ್ರಾಮದವರ ಕರಸಿಕೊಂಡು ಗಡಿತತ್ವಾರ ಬಾರದ ರೀತಿ ಯಿವನ ಮುಂದಿ

೧೨. ಟ್ಟು ರೇಖೆ ಪ್ರಮಾಣು ಭೂಮಿಗೆ ಶಿಲಾಸ್ಥಾಪಿತವ ಮಾಡಿಸಿ ಕೊಟ್ಟು ಯಿ ಕಾಗದವ ಸೇನಬವರ ಕಡಿತಕ್ಕೆ ಬರಸಿ ತಿರಿಗಿಕೊಡುವದಾಗಿದೆ. (ಸೀಲ್)

❖❖

ಕಾಲ : ಕ್ರಿ.ಶ. ೧೭೪೯ (ವಿಭವ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಕೆಳದಿ (ಬೂದಿ) ಬಸವಪ್ಪನಾಯಕರು ಡಂಬಳ ತೋಂಟದಾರ್ಯಮಠಕ್ಕೆ ನಿತ್ಯ ಎರಡು ಹೊತ್ತು ತುಪ್ಪದ ನಂದಾದೀಪಕ್ಕಾಗಿ ದಾನ ನೀಡಿದ ವಿವರ.

* * *

೧. ೦॥ ವಿಭವ ಸಂವತ್ಸರದ ಮಾಘ ಶು ೫ಲ್ಲೂ ಶ್ರೀಮತ್ಕೆಳದಿ ಬಸವಪ್ಪನಾಯಕರೂ।

೨. ವೆಂಕಹೆಗಡೆಗೆ ಬರಸಿ ಕಳುಹಿಸಿದ ಕಾರ್ಯ್ಯ: ಡಂಬಳದಲ್ಲು ತೋಟಸ್ವಾಮಿಯವರ ಗದ್ದಿಗೆ ಸಮಿೂ

೩. ಪದಲ್ಲು ನಾವು ನಿತ್ಯದಲ್ಲು ನಡೆಸುವ ತುಪ್ಪದ ನಂದಾದೀಪ ೨ ಯರಡೂ ಪ್ರಾತಃಕಾಲದಲ್ಲು ಧ್ಯಾಂ

೪. ನ ಸಾಯಂಕಾಲದಲ್ಲು ಕ್ಷೀರಾಂನ, ಹಂಣು ವೀಳ್ಯ ಮುಂತಾದ ನೈವೇದ್ಯ ಕಟ್ಟಲೆ ಬಗ್ಯೆ ಸಹ ಉತ್ತರ

೫. ವ ಕೊಟ್ಟಿದು ಮುತ್ತೂರ ಸೀಮೆ ಸ್ಥಳದ ಸೆನಬವ ಬರಕೊಟ್ಟ ಚಪ್ಪೂ ಪ್ರಮಾಣು ಯಿೂ ಸೀಮೆ ಮುತ್ತೂರ

೬. ಪಾಲ ವಳಗಣ ಉಂಟೂರ ಗ್ರಾಮದಿಂದ ಸಿಸ್ತಿನಿಂದ ಗ ೩೨ಹಳ।೦ ನಿಲ್ಲಿಸಿದ ನಷ್ಟದಿಂದ ಗ೯ ॥೨॥ ಉ

೭. ಭಯಂ ಗ೬೨ಹ೧ ।।।೦ ಯಿೂಗ ಹೆಚ್ಚಿದ್ದು ಸಲ್ಲಿಸಿದ ನಷ್ಟದ ಬಗ್ಯೆ ಕೂಡಿದ ದಾಸೋಹದ ಶಿಸ್ತು ಹ೧॥= ಪಗು

೮. ಡಿ ಚತ್ರವಂತಿಕೆಯಿಂದ ಸಿಸ್ತಿನ ಮೇಲೆ ಗ೬ಹ।।।೦ ಉಭಯಂ ಗ೬ ಹ೨॥= ಉಭಯಂ ಗ೬ಲ ಹ೪।= ಅರ

೯. ವತ್ತು ಯೆಂಟು ವರಹನ್ನು ನಾಲ್ಕು ಹಣ ಹಾಗೂ ಬೇಳೆ ಸ್ವಾಸ್ಥಿಯನ್ನು ಶಿವಾರ್ಪಕವಾಗಿ ಕೊಟ್ಟು, ಯಿೂ ಭೂ

೧೦. ಮಿಗೆ ಲಿಂಗ ಮುದ್ರಾ ಶಿಲಾಸ್ಥಾಪಿತವ ಮಾಡಿಸುವಲ್ಲಿಗೆ ಹುಜುರಿಂದ ಊಳಿಗದ ಚಂನಬಸವನ ಕಳು

೧೧. ಹಿಸಿದೆವೆ. ಚೌಗ್ರಾಮದವರ ಕರಸಿಕೊಂಡು ಗಡಿತ್ವಾರುಊರದಲಿತಿ ಯಿವನ ಮುಂದಿ

೧೨. ಟ್ಟು ರೇಖೆ ಪ್ರಮಾಣು ಭೂಮಿಗೆ ಶಿಲಾಸ್ಥಾಪಿತವ ಮಾಡಿಸಿ ಕೊಟ್ಟು ಯಿೂ ಕಾಗದವ ಸೆನಬೊವರ ಕಡಿ

೧೩. ತಕ್ಕೆ ಬರಸಿ ಕಳಿಸಿ ಕೊಡುವುದಾಗಿ . (ಸೀಲ್)

❖❖

ಕಾಲ : ಕ್ರಿ.ಶ. ೧೭೫೨ (ಪ್ರಜೋತ್ಪತ್ತಿಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಕೆಳದಿ (ಬೂದಿ) ಬಸವಪ್ಪನಾಯಕರು ಭದ್ರರಾಜಪುರದಲ್ಲಿ ಕಟ್ಟಿಸಿದ ತೋಂಟದಾರ್ಯಮಠದ ಗಣಾರಾಧನೆಗಾಗಿ ರಾಚವಟ್ಟಿಸ್ವಾಮಿಗಳಿಗೆ ನೀಡಿದ ದಾನದ ವಿವರ.

* * *

೧. ೦॥ ಪ್ರಜೋತ್ಪತ್ತಿಸಂವತ್ಸರದ ವೈಶಾಖ ಬ೧೫ರಲ್ಲು ಶ್ರೀಮತ್ಕೆಳದಿ ಬಸವಪ್ಪನಾಯಕರೂ।

೨. ಚಿರಂಜೀವಿ ನಂಮ ಷಡಕ್ಷರಪ್ಪಗೆ ಹರಸಿ ಕಳುಹಿದ ಅನೇಕ ಆಶೀರ್ವಾದಃ ಬಿದರೂರ ಪೆಠೆ ವಳಗಣ ಬಾಳೆಕೊಪ್ಪ

೩. ವೆಂಬ ಸ್ಥಳಕ್ಕೆ ನಂಮ ಪಿತೃಗಳು ವೀರಭದ್ರಪ್ಪನಾಯಕರ್ಯ್ಯನವ ಹೆಸರಲ್ಲು ಭದ್ರರಾಜಪುರವೆಂದು ಮಾಡಿ ಈ ಸ್ಥ

೪. ಳದಲ್ಲು ನಂಮ ಮಾತೃಗಳು ಮಲ್ಲಂಮಾಜಿ ಅಂಮನವರ ಭಕ್ತಿಯಲ್ಲು ತೋಟಸ್ವಾಮಿಯವರ ಹೆಸರಲ್ಲು ಕಟ್ಟಿಸಿದ ವಿರಕ್ತಮಠ ಪ್ರ

೫. ತಿಷ್ಠೆ ಮಾಡಿದ ತೋಟ ಸಿದ್ಧೇಶ್ವರ ದೇವರ ಕಟ್ಟಲೆ ಕಂದಾಚಾರ ನಡೆಸುವ ಗಣಾರಾಧನೆ ಮುಂತಾದ ಬಗ್ಗೆ ಪ್ರಾಕು ಉತ್ತಾರವ ಕೊಟ್ಟ ಸ್ವಾಸ್ಥಿ

೬. ಯಲ್ಲು ಮಂಗಳೂರ ಸಿಮೆ ಹಿರೆಬಯಲ ಗ್ರಾಮದಿಂದ ಬರದ ಉತ್ತಾರ ಮುಗುತಿನ ಸೀಮೆಯಲ್ಲು ಬರದ ಉತ್ತಾರದಿಂದ ಸಹ ಅರಮ

೭. ನೆ ಹವಾಲೆ ಮಾಡಿಕೊಂಡು ಬದಲು ಮಂಗಳೂರು ಹೋಬಳಿ ಮೂಲಕ ಸಿಮೆ ಅರಳುಕೊಯಿಲ ಗ್ರಾಮದಿಂದ ಉತ್ತಾರವ ಕೊಡಬೇಕೆಂದು

೮. ಯಿೊ ಮಠದ ರಾಚವಟ್ಟಿಸ್ವಾಮಿಯವರು ಹೇಳಿದ್ದರಿಂದ ಉತ್ತಾರವ ಕೊಟ್ಟಿದ್ದು ಮಂಗಲೂರ ಹೋಬಳಿ ಮೂಲಿರ ಬಗೆ ಸೆನಬವ ಬರಕೊಟ್ಟ

೯. ಚಪ್ಪು ಪ್ರಮಾಣು ಯಿೊ ಸೀಮೆ ಬಂಟವಳಲಿ ಮಂಗಣಿ ವಳಗಣ ಅರಳು ಕೊಯಿಲಿ ಗ್ರಾಮದಿಂದ ರೇಖೆ ಗ೨೦೧ ॥೨॥೦ ಮನೆವಣದಿಂ

೧೦. ದ ಗ೦ ಹ೩ = ಕಾಸಿನ ಛಡಿ ಕಡಿಂದ ಗ೩ ಮೆಣಸಿನ ಛಡಿ ಕಡಿಂದ ಗ೫ ಅಂತು ಗ೨೧೧ ಹ॥= ಉತಾರದ ರೇಖೆ ಗ೨೩ಹ೪॥೦ ದೇವ

೧೧. ಸ್ಥಾನದ ಮಿಗಕೆ ಗ೧೦ ॥೪॥।೦ ಉತ್ತಾರದ ಬಗ್ಗೆ ಕೊಟ್ಟು ಬಾಹ ವರಾಡದಿಂದ ಗ೫ ॥೦॥= ಅಂತು ರೇಖೆ ಗ೨೫೧ ಹ॥೦ಕ್ಕೆ ಉತ್ತಾರ ದೇ

೧೨. ವತಾ ಉತಾರ ಕಳೆ ಸಿಂಹಾಲಿಯದ ನರಸಿಂಹದೇವರಿಗೆ ಗ೧ ಹ ।॥= ಪಟ್ಟಣದ ಬಸ್ತಿಗೆ ಗ೧೩ ಹ೪ = ಯಿೊ ಗ್ರಾಮದ ಮಹಂಕಾಳಿ

೧೩. ಭೂತಕ್ಕೆ ಗ೨ ||೧||= ದೂಮಾವತಿಗೆ ಹ೩= ಪಟ್ಟಣದ ಪಳ್ಳಿಗೆ ಹ೩ = ಅಂತು ಗ೧೭ ||೩|| = ಬ್ರಂಹಾದಾಯ ಉತ್ತಾರ್ರದ ಪಲಿಪಾಡಿ

೧೪. ಭೂತನಾಥವ ದೇವರಿಗೆ ಗ೪ ಹ೩ = ಕೊಳಕಾಯ ಯಿಶ್ವರ ಭಟ್ಟಗೆ ಗ ೧ ಹ೨||೦ ಉಭಯಂ ಗ೫ ||೦||= ಉಭಯಂ ಗ೨೩ ಹ೪||೦ ಪ್ರಜೆಗ

೧೫. ಳು ವರಾಡಿಸಿ ಕೊಂಡಿಸಿದ್ದ ಬಗೆಯಲು ಹೆಚ್ಚಿಗೆ ಕೂಡಿ ಉತ್ತಾರ ನಡೆಸಿ ಬಾಹ ಬಗೆಯಲು ಕಾವಳದ ಕಾರಂಜಿನಾಥದೇವರಿಗೆ ಗ೪ ||೧||=

೧೬. ಉಭಯಂ ಗ೨೮ ಹ೧=ನುಳಿದು ಶುಧ ಗ೨೩೦ ||೪||=ಗೆ ವಿವರ ಸಸ್ತಿನಿಂದ ಗ೧೭೭ ಹ೧=ನಿಲಿಸಿದ ನಷ್ಟದಿಂದ ಗ೫೩|| ೩೦ ಉಭ

೧೭. ಯಂ ಗ೨೩೦ ||೪|| =ಯಿಗ ಹೆಚ್ಚಿದ್ದು ನಷ್ಟದ ಬಗ್ಗೆ ಕೂಡಿದ ಬಗ್ಗೆ ಕೂಡಿದ ದಾಸೋಹದ ಸಿಸ್ತು ಹ೩= ಪಗುಡಿ ಚತ್ರವಂತಿಕೆಯಿಂದ ಸಿಸ್ತಿನ ವಳಗೆ ಪೆರೆ ಸಿಸ್ತು

೧೮. ಮನೆವಣ ಕಾಸಿನ ವಡಿಕ ಮೆಣಸಿನ ಛಡಿ ಕಸ ಹಾಗ೧ ಹ೩= ಹೊರತಾಗಿ ಉಳಿದ ಸಿಸ್ತಿನ ಮೇಲೆ ಗ೩೧ ಹ೪ ||= ಉಭಯಂ ಹೆಚ್ಚಿದ್ದು

೧೯. ಗ೧||೩|| ಉಭಯಂ ಗ೨೬ ||೨=ಗೆ ವಿವರ ಪ್ರಾಕು ಉತ್ತಾರ್ರವ ಕೊಟ್ಟ ಸ್ವಾಸ್ಥೆಯಿಂದ ಯಿ ಸಿದ್ದೇಶ್ವರದೇವರ ಸಂನಿಧಿಯಲ್ಲು ನಂಮ

೨೦. ಪಿತೃಗಳು ವೀರಭದ್ರಪ್ಪನ ನಾಯಕರ್‍ಯ್ಯನವರು ಶಿವಾಧೀನವಾದ ದಿನ ಮಾತೃಗಳು ಮಲಂಮಾಜಿ ಅಂಮನವರು ಶಿವಾಧಿನವಾದ ದಿನ

೨೧. ಸಹ ಮಾಡಿ ಸುಪಂಚಾಮೃತ ಯಲೆಪೂಜೆ ಮ|ಹಾ ನೈವೇದ್ಯ ವಿಶೇಷ ಗಟ್ಟಲೆ ದೀಪಾರಾಧನೆ ಗಣಾರಾಧನೆ ಬಗ್ಗೆ ಸಹ ಉತ್ತಾರ್ರವ ಕೊ

೨೨. ಟ್ಟಿದ್ದ ಬಗೆಯಲ್ಲು ಮಾಳೂರ ಸಿಮೆ ಹಿರೆಬಯಲಗ್ರಾಮದಿಂದ ಸಿಸ್ತು ಹುಟ್ಟುವಳಿಯಿಂದ ಗ೩೬ ಪಗುಡಿ ಚತ್ರವಂತಿಕೆಯಿಂದ

೨೩. ಗ೬ ||೨|| ಉಭಯಂ ಗ೪೨||೨||೦ ಮುಗುವಿನ ಸೀಮೆಯಿಂದ ಕೊಟ್ಟ ಉತ್ತಾರ್ರದಿಂದ ಸಿಸ್ತಿನಿಂದ ಗ೧೪೧ಹ೧= ಪಗುಡಿ ಚತ್ರವಂ

೨೪. ತಿಕೆಯಿಂದ ಗ೨೬ ಹ ೪||= ಉಭಯಂ ಗ೧೬೭ ||೦|| ನಿಲಿಸಿದ ನಷ್ಟದಿಂದ ಗ೧೮ ||೩||= ದಾಸೋಹದ ಸಿಸ್ತಿನಿಂ

೨೫. ದ ಹ೧ = ಉಭಯಂ ಗ೯ಹ = ಉಭಯಂ ಗ೧೮೬ ||೦|| = ಉಭಯಂ| ಗ೨೨೧ ಹ೩ = ನು ಸಲಿವಿಟ್ಟು ಆ ಸಿಮೆಗಳಿಗೆ ಕೊ

೨೬. ಡಿಸಿ ಆ ಬದಲಿಗೆ ಉತ್ತಾರ್ರವ ಕೊಟ್ಟದು ಗ೨೨೧ ಹ೩= ಯಿಗ ನಿಲಿಸಿದ ನಷ್ಟ ಯಿ ಬಗ್ಗೆ ಕೂಡಿದ ದಾಸೋಹದ ಸಿಸ್ತಿನಿ

೨೭. ರವ ಸಹ ಹೆಚ್ಚು ಬರದು ಗ೩೫ ಹಣ॥ಕ್ಕೆ ಪಗುಡಿ ಚತ್ರವಂತಿಕೆಯಿಂದ ಹೆಚ್ಚುತಗಿದ್ದು ಗ೧ ॥೨॥ ನುಳಿದ ಶುಧ ಗ೩೩ಹಳ ಉಭಯ

೨೮. ೦ ಗ೨೬೨ ॥೨॥ ಯಿಂನೂರ ಅರವತ್ತುಯರಡು ವರ ಹೊನು ಯೆಳು ಹಣ ಹಾಗು ಬೆಳೆ ಸ್ವಾಸ್ಥಿಯನ್ನು ಬಿದುರೂರ

೨೯. ಪೆಠೆ ವಳಗಣ ಬಾಳೆಕೊಪ್ಪವೆಂಬ ಸ್ಥಳಕ್ಕೆ ನಂಮ ಪಿತೃಗಳು ವೀರಭದ್ರಪ್ಪ ನಾಯಕರ್ಯೆಯ್ಯನವರ ಹೆಸರಲ್ಲು ಭದ್ರರಾಜ

೩೦. ಪುರವೆಂದು ಮಾಡಿ ಯಿ ಸ್ಥಳದಲ್ಲು ನಂಮ ಮಾತೃಗಳು ಮಲಂಮಾಜಿ ಅಂಮನವರ ಭಕ್ತಿಯಲ್ಲು ತೋಟಸ್ವಾಮಿಯ

೩೧. ವರ ಹೆಸರಲ್ಲು ಕಟ್ಟಿಸಿದ ವಿರಕ್ತ ಮಠ ಪ್ರತಿಷ್ಠೆ ಮಾಡಿದ ತೋಟಸಿದ್ಧೇಶ್ವರ ದೇವರ ಕಟ್ಟಲೆ ಕಂದಾಚಾರ ವಿಶೇಷ ಗಟ್ಟಲೆ

೩೨. ಪೂಜೆ ಗಣಾರಾಧನೆ ಮುಂತಾದ ಬಗ್ಗೆ ಸಹ ಶಿವಾರ್ಪಿತವಾಗಿ ಕೊಟ್ಟು ಯಿ ಗ್ರಾಮದಲ್ಲು ಬರದ ಪ್ರಾಕು ಉತ್ತಾರ ನ

೩೩. ಡದು ಬಾಹ ಉತ್ತಾರ ಸಹ ಮೂಲ ಕೃಪಾ ಕಾರಣ ನಡಸಿ ಬಾಹ ರೀತಿ ಮಾಡಿಸಿ ಯಿ ಭೂಮಿಗೆ ಲಿಂಗಾಮುದ್ರಾ ಶಿಲಾಸ್ಥಾ

೩೪. ಪಕವ ಮಾಡಿಸುವಲ್ಲಿಗೆ ಹುಜುರಿನಿಂದ ಊಳಿಗದ ನಂಜಿನ ಕಳುಹಿಸಿದ್ದೇವೆ ಚೌ ಗ್ರಾಮದವರ ಕರಸಿ ಕೊಂ

೩೫. ಡು ಗಡಿ ತತ್ವಾರ ಬಾರದ ರೀತಿ ಯಿವನ ಮುಂದಿಟ್ಟು ರೇಖೆ ಪ್ರಮಾಣು ಯಿ ಗ್ರಾಮಕ್ಕೆ ಶಿಲಾಸ್ಥಾಪಕವ ಮಾ

೩೬. ಡಿಸಿ ಕೊಟ್ಟು ಯಿ ಕಾಗದದ ಸೇನಬೋವರ ಕಡಿತಕ್ಕೆ ಬರಸಿ ತಿರಿಗಿ ಯಿ ಮಠದವರ ವಶ

೩೭. ಕ್ಕೆ ಕೊಡುವ ಹಾಗೆ ಕಟ್ಟು ಮಾಡಿಸುವದಾಗಿದೆ. (ಸೀಲ್)

❖❖

೧೧

ಕಾಲ : ಕ್ರಿ.ಶ. ೧೭೫೭ (ಧಾತು ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಕೆಳದಿ ಚೆನ್ನಮ್ಮಾಜಿಯವರು ಭದ್ರರಾಜಪುರದಲ್ಲಿ ಬಸವಲಿಂಗ ದೇವರಿಗೆ ದಾನ ನೀಡಿದ ವಿವರ.

* * *

೧. ॥ ಧಾತು ಸಂವತ್ಸರದ ಪುಷ್ಯ ಶು ೧೨ ಲ್ಲು ಶ್ರೀಮತ್ಕೆಳದಿ ಚಂನ್ನಮ್ಮಾಜಿ ಯ

೨. ವರೂ ಕೃಷ್ಣಪ್ಪಗೆ ಬರಸಿ ಕಳುಹಿದ ಕಾರ್ಯಃ ಭದ್ರರಾಜಪುರದ ಅಗ್ರ

೩. ಹಾರದ ವಳಗಣ ವಿರುಪಾಪುರದ ಆಗ್ರಹಾರದಲ್ಲಿ ಆಲಿಕೊಂಡೆ
೪. ರಾಮಭದ್ರಾಭಟ್ಟನ ಮಗ ವೆಂಕಟಪತಿಭಟ್ಟಗೆ ಯಿದ್ದ ಉತ್ತಿ೧॥ ಗೆ
೫. ಗ೧ಲ ಹದಿನೆಂಟು ವರಹೊಂನ್ನು ಸ್ವಾಸ್ತಿನೂ ಯಿತ ತಂನ ಅನುಪತ್ಯ ಕು
೬. ತು ಕ್ರಯಕ್ಕೆ ಮಾರುತಿದ್ದಲ್ಲಿ ಆ ಸ್ವಾಸ್ಥಿನೂ ಚೆಂನಬಸವಪ್ಪದೇವರು
೭. ಕ್ರಮಕ್ಕೆ ತೆಗೆದುಕೊಂಡು ಪಟ್ಟಿ ಬರಸಕೊಂಡು ಪ್ರಾಕು ಆ ಬ್ರಾಹ್ಮಣ
೮. ಗೆ ಬರಸಿಕೊಟ್ಟ ನಿರೂಪ ಸಹಾ ತೆಗೆದು ಕೊಂಡಿಧರೆ ಯಿವರ ಮಗ ಬಸವಲಿಂ
೯. ಗದೇವರ ಹೆಸರಲ್ಲಿ ನಿರೂಪಕ್ಕೆ ಅಪ್ಪಣೆಯಾಗಬೇಕೆಂದು ಕೆಂಚಾಪ್ಪನೂ ಹೇ
೧೦. ಳಿ ಕೊಂಡ ಸಂಮಂಧ ಯಿವರ ಕೈಯ ಕಾಣಿಕೆ ಗ೨೪ ಯಿಪ್ಪತ್ತನಾಲ್ಕು ವರ
೧೧. ಹೊಂನ್ನು ಅರಮನೆಗೆ ತೆಗೆದುಕೊಂಡು ಯಿ ಅಗ್ರಹಾರದಲ್ಲಿ ವೆಂಕಟಪತಿ
೧೨. ಭಟ್ಟನ ಸ್ವಾಸ್ತಿ ಉತ್ತಿ೧॥ ಗೆ ಗ೧ಲ ಹದಿನೆಂಟು ಯಿವರ ಹೋದ ಸ್ವಾಸ್ತಿಯನ್ನು ಯಿ
೧೩. ಬಸವಲಿಂಗದೇವರಿಗೆ ಶಿವಾರ್ಪಿತವಾಗಿ ಬಿಟ್ಟಿದ್ದೇವೆ । ಆತನ ಕೈಯ ಬರಸಿ
೧೪. ಕೊಂಡ ಪಟ್ಟಿಪ್ರಮಾಣು ಸ್ವಾಸ್ಥಿ ಭೂಮಿ ವಕ್ಕಲು ಸಹಾ ಯಿವರ ಹವಾಲೆ ಮಾ
೧೫. ಡಿ ಕೊಟ್ಟು ಯಿ ಕಾಗದವ ಸೇನಬವರ ಕಡಿತಕ್ಕೆ ಬರಿಸಿ ತಿರಿಗಿ ಯಿವರ ವಶ ಕೊಡುವುದಾಗಿದೆ. (ಸೀಲ್)

❖❖

೧೨

ಕಾಲ : ಕ್ರಿ.ಶ. ೧೭೫೬ (ಯುವ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಕೆಳದಿ ಚನ್ನಬಸಪ್ಪನಾಯಕರು ಡಂಬಳದ ತೋಂಟದಾರ್ಯಮಠದ ಗದ್ದಿಗೆಗೆ ತಮ್ಮ ತಂದೆ ಹೊಸದಾಗಿ ನಿರ್ಮಿಸಿದ ರಥದ–ಉತ್ಸವ, ಗಣಾರಾಧನೆಗಾಗಿ ಮತ್ತು ದಾಸೋಹಕ್ಕಾಗಿ ದಾನ ನೀಡಿದ ವಿವರ.

* * *

೧. ೦।ಯುವ ಸಂವತ್ಸರದ ಮಾಘ ಶು ೧೦ ಲ್ಲೂ ಶ್ರೀಮತ್ಕೆಳದಿ ಚಂನಬಸವಪ್ಪ ನಾಯಕರೂ ।
೨. ಕೊಲ್ಲೂರಗೆ ಬರಸಿ ಕಳುಹಿದ ಕಾರ್ಯ: ಡಂಬಳದಲ್ಲು ತೋಟ ಸ್ವಾಮಿಯವರ ಗದ್ದಿಗೆಯಲ್ಲು ಯಿಹ
೩. ಸಿದ್ಧೇಶ್ವರದೇವರಿಗೆ ನಂಮ ಪಿತೃಗಳು ಬಸವಪ್ಪ ನಾಯಕರೈಯ್ಯನವರು ಹೊಸ್ತಾಗಿ ರಥವ ಕಟ್ಟಿಸಿ ಕಾ

೪. ಲಂಪ್ರತಿಯಲ್ಲು ರಥ ಉತ್ಸವ ಗಣಾರಾಧನೆ ಸಹ ನಡಸುತ್ತಿದ್ದಲ್ಲಿ ಯಿೂ ಬಗ್ಗೆ ಮುತ್ತೂರ ಸೀಮೆಯಿಂದ ಗ್ರಾಮ ೫

೫. ಕ್ಕೆ ಸಿಸ್ತಿನಿಂದ ಗ ೧೮೨ ||೪|| = ನಷ್ಟದಿಂದ ಗ ೧೧ ಹ ೨|| = ಉಭಯಂ ಗ ೨೮೨ ಹ ೨ ಹೆಚ್ಚಿಗೆಯಿಂದ ಜೇನತು

೬. ಪ್ಪದ ಸಿಸ್ತಿನಿಂದ ಗ ೧||೧||೦ ನಷ್ಟದ ಬಗ್ಗೆ ಕೂಡಿದ ದಾಸೊಹದ ಸಿಸ್ತಿನಿಂದ ಗ||೧|೦ ಪಗುಡಿಯಿಂದ ಗ ೨೨||೩||೦ ಅಂ

೭. ತೂ ಗ ೩೦೭ಹ ೩|| ×ನು ಯಿೂ ಸಂವತ್ಸರದ ಬಾದ್ರಪದ ಶು ೫ಲ್ಲೂ ಉತ್ತಾರವ ಕೊಟ್ಟು ಶಿಲಾಸ್ಥಾಪಿತವ ಮಾ

೮. ಡಿಸಿಕೊಂಡು ಹಾಗೆ ನಿರೂಪವಾಗಿದ್ದಲ್ಲಿ ಯಿೂ ಗ್ರಾಮಗಳ ಮಧ್ಯದಲ್ಲೂ ಪ್ರಾಕು ನಷ್ಟಕ್ಕೆ ನಿಲ್ಲಿಸಿದ ತೋಟದ ಕೊ

೯. ಪ್ಪದ ಗ್ರಾಮವಿದ್ದದ್ದರಿಂದ ಯಿೂ ಬಗ್ಗೆ ಮುತ್ತೂರ ಸಿಮೆ ಸ್ಥಳದ ಸೇನಬವ ಬರಕೊಟ್ಟ ಚಪ್ಪೊ ಪ್ರಮಾಣು ಯಿೂ ಸಿ

೧೦. ಮೆ ನಿಲ್ಲಿಸಿದ ನಷ್ಟದಲ್ಲು ಯಿದ್ಧ ತೊಟದ ಕೊಪ್ಪದ ಗ್ರಾಮಂಗಕ್ಕೆ ರೇಖೆ ಕೊಟ ಮರ ೨೦೦೦ಕ್ಕೆ ಅಡಿಕೆ ಲಕ್ಷ್ಯ ೨ಕ್ಕೆ ಗ ೨೦ ಮೆ

೧೧. ಲುವಣದಿಂದ ಗ೪ ||೦|| ಮೆಣಸಿನ ಚಡಿತ ಗ೧ ಯಲೆಗೂಡಿನಿಂದ ಹ೪ ಅಂತೂ ಗ ೨೫||೪||೦ ಯಿೂಗ ಹೆಚ್ಚಿ

೧೨. ದ್ದು ಯಿೂ ಬಗ್ಗೆ ಕೂಡಿದ ದಾಸೋಹದ ಸಿಸ್ತು ಹ೧ || = ಉಭಯಂ ಗ ೨೬ ಹ೧ = ಇಪ್ಪತ್ತಾರು ವರಹ ೧ನ್ನು ವಂದು

೧೩. ಹಣಉೂ ಬೆಳೆಯನು ಡಂಬಳದಲ್ಲೂ ತೋಟಸ್ವಾಮಿಯವರ ಗದ್ದಿಗೆಯಲ್ಲು ಯಿೂಹ ಸಿದ್ಧೇಶ್ವರದೇವರಿಗೆ ನಂ

೧೪. ಮ ಪಿತೃಗಳು ಬಸವಪ್ಪ ನಾಯಕರ‍್ಯೆಯ್ಯನವರು ಕಟ್ಟಿಸಿದ ರಥದಲ್ಲು ಕಾಲಂಪ್ರತಿಯಲ್ಲು ನಡಸುವ ರಥ

೧೫. ಉತ್ಸವ ಗಣಾರಾಧನೆ ಬಗ್ಗೆ ಸಹ ಶಿವಾರ್ಪಿತವಾಗಿ ಉತ್ತಾರವ ಕೊಟ್ಟು ಯಿೂ ಭೂಮಿಗೆ ಲಿಂಗ

೧೬. ಮುದ್ರೆ ಶಿಲಾ ಸ್ಥಾಪಕವ ಮಾಡಸುವಲ್ಲಿಗೆ ಹುಜುರಿಂದ ಊಳಿಗದ ಕಳುಹಿಸಿದ್ದೇವೆ ಚೌ

೧೭. ಗ್ರಾಮದವರ ಕರಸಿಕೊಂಡು ಗಡಿ ತತ್ಪಾರ ಬಾರದ ರೀತಿ ಯಿವನ ಮುಂದಿಟ್ಟು ರೇಖೆ ಪ್ರಮಾಣು ಭೂ

೧೮. ಮಿ ಪ್ರಾಕು ಉತ್ತಾರವ ಕೊಟ್ಟು ಭೂಮಿಗೆ ಸಹಾ ಶಿಲಾಸ್ಥಾಪಕವ ಮಾಡಿಸಿ ಕೊಟ್ಟು ಯಿೂ ಕಾಗದವ ಸೇನಬವರ ಕಡಿತ

೧೯. ಕ್ಕೆ ಬರಸಿ ದೇವರ ಭಂಡಾರದಲ್ಲು ಕಟ್ಟುವ ಬಗ್ಗೆ ತಿರಿಗಿ ಕೊಡುವದಾಗಿದೆ. (ಸೀಲ್)

❖❖

ಕಾಲ : ಕ್ರಿ.ಶ. ೧೭೪೩ (ದುಂದುಬಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಕೆಳದಿ ಮಲ್ಲಮಾಜಿ ಅಮ್ಮನವರು ಭದ್ರರಾಜಪುರದಲ್ಲಿರುವ ವಿರಕ್ತಮಠದ ಸ್ವಾಮಿಗಳಾದ ತೋಟದ ರಾಚವಟ್ಟಿ ಸ್ವಾಮಿಯವರಿಗೆ ಭಕ್ತಿಯಿಂದ ನೀಡಿದ ದಾನದ ವಿವರ.

* * *

೧. ॥ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೆ ತ್ರೈಲೋಕ್ಯನಗರಾರಂಭ ಮೂಲ ಸ್ಥಂಬಾಯ

೨. ಶಂಭವೆ । ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಶ ೧೬೬೪ನೆಯ ವರ್ತ

೩. ಮಾನಕ್ಕೆ ಸಲುವ ದುಂದುಬಿನಾಮ ಸಂವತ್ಸರದ ಮಾರ್ಗಶಿರ ಬಿ ೨ ಯಲ್ಲು ಶ್ರೀ ಮತ್ಕೆ

೪. ಳದಿ ಮಲಂಮಾಜಿ ಅಂಮನವರ ಭಕ್ತಿ ಭದ್ರರಾಜಪುರದ ವಿರಕ್ತಮಠದ ತೋಟದ

೫. ಸ್ವಾಮಿಯವರ ಕರಕಮಲ ಸಂಜಾತರಾದ ರಾಚವಟ್ಟಿಸ್ವಾಮಿಯವರ ಪಾದಕ್ಕೆ ॥

೬. ಅಜಂಪುರದ ಸೀಮೆ ಗಲುಡರು । ಅಜಂಪುರದ ಕರಿಯಂಣ ಬಗೆವಳಿ ಪಟ್ಟಂಣ

೭. ತಿಂಮಗೊಂಡ ಸೋಮಲಿಂಗಣ ಗಿರಿಯಣ್ಣ ಹಂಣೆ ಕಂತೆಯಪ್ಪ ಕರಿಯಂ

೮. ಣ ಜಾಯಿರ ಬಿಷ್ಟಯ ಮುದ್ದುಮಲ್ಲೆಯ ಬುಕಾಂಬುಧಿ ಸಂಕಣ ಶಿವನೆ ಗಂಗಂಣ ಮುದ್ದು

೯. ವಿರಂಣ ಹುಚಂಣ ಗಧಿಹಳಿ ಹೆಂಜುಂಣ ನಂದಿಪುರದ ಮಹಂತ್ಯಯ ಮುಗುಳಿ ಗ್ರಾಮದ

೧೦. ಮಲಂಣ ಆಸಂದಿ ಕರಿಬಸವಂಣ ಚಿಗದಲ್ಲೂರ ಪಾಲಿಮಾಳಿನ ಹಳಿ ಹುಚ್ಚ ತ್ತಿಂಮ

೧೧. ಣ ವಡೆರು ಬೆಗೂರ ಶಂಕರಂಣ ಹಿರೆನಲ್ಲೂರ ಮಲ್ಲಂಣ ಲಿಂಗಂಣ ವಿರಂಣ ಬಾಸೂರ ನಿ

೧೨. ದಿಯಂಣ ಸುಂಕದ ಮಣಿಹಗಾರ ಗಂಗಧರ್ರೈಯ ನಂದಿಕೇಶವರಾಯ

೧೩. ಬುಕಾಂಬುಧಿ ಕಪ್ಪೆ ಗೋವಿಂದ್ಯೆಯಾ । ಹಿರಿನಲ್ಲೂರ ಕಪ್ಪೆ ಚೆಂದದರಿಯಪ್ಪ ಕುರಿಮಣು ಹೈ

೧೪. ದ ದಿಂಬೆ ಉಪ್ಪಿನಮೊಳೆ ಗಲುಡ ಮಲಂಣ ಮುಂತಾದ ಸಮಸ್ತರು ಭಕ್ತಿಯಿಂದ ಬ

೧೫. ರಸಿ ಕೊಟ್ಟ ಕಾಗದ ಕ್ರಮವೆಂತೆಂದರೆ । ರಾಜೇಶ್ರೀ ॥ ತೋಟದಸ್ವಾಮಿಯವ

೧೬. ರ ಪಾದಕ್ಕೆ ಗದ್ದಿಗೆ ಶಿವಾರ್ಪಿತವಾಗಿ ಮಾಡಿಕೊಟ್ಟಿದು । ವಿಮೆಯಿಂದ ಗ೪ ಸುಂಕ

೧೭. ದಿಂದ ಗ೬ ಉಭಯಂ ಗ೫೦ ಐವತ್ತುವರಹೊನ್ನು ವಿವರಾ ಮಾಡಿಕೊಂಡು ನಂಮ ಸುಂಕದ ಪಾರಂಪರ್ಯವಾಗಿಕೊಟ್ಟು ಬಂದೆಲು ಯೆಂದು ಬರಸಿಕೊಟ್ಟ ಕಾ

೧೮. ಗದ । ಸಮಸ್ತಗೌಲುಡರ । ಸುಂಕದ ಮಣಿಹ್ಯಗಾರ ಸಹಾ ವಪ್ಪಿತ್ತಾದ ಬಿಂನ್ನಹಾ ॥

❖❖

ಕಾಲ : ಕ್ರಿ.ಶ. ೧೭೪೩ (ದುಂದುಬಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಕೆಳದಿ (ಬೂದಿ) ಬಸವಪ್ಪನಾಯಕರು ಭದ್ರರಾಜಪುರ ಶ್ರೀತೋಂಟದಾರ್ಯಮಠದ ಸಿದ್ಧೇಶ್ವರ ದೇವರ ಭಂಡಾರಕ್ಕೆ ಸ್ಥಳ–ಪರಸ್ಥಳ ಮಹಾನಾಡಿನ ಜನರು ದಾನ ನೀಡಿದ ವಿವರ.

* * *

ನಿರ್ವಿಘ್ನಮಸ್ತು

೧. ೦॥ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೆ । ತ್ರೈಲೋಕ್ಯನಗರಾರಂಬ ಮೂಲ

೨. ಸ್ತಂಭಾಯ ಶಂಭವೆ । ಸ್ವಸ್ತಿ। ಶ್ರೀ ಜಯಾಭ್ಯುದಯ । ಶಾಲಿವಾಹನ ಶಕ ವರ್ಷ ೧೬೬೪ನೆ

೩. ಯ ವರ್ತಮಾನಕ್ಕೆ ಸಲುವ ದುಂದುಬಿ ಸಂವತ್ಸರದ। ಪಾಲ್ಗುಣ ಬ೧೩ ಲ್ಲು। ಶ್ರೀಮತ್ಕೆಳದಿ।

೪. ಬಸವಪ್ಪನಾಯಕ ಅಯ್ಯನವರೂ । ಬಿದರೂರ ಪೇಠೆ ವಳಗಣ ಬಾಳೆಕೊಪ್ಪದ ಸ್ಥಳದಲ್ಲೂ।

೫. ತಂಮ್ಮ ಪಿತೃಗಳು । ವೀರಭದ್ರಪ್ಪನಾಯಕ ಅಯ್ಯನವರ ಹೆಸರಲ್ಲೂ ಭದ್ರರಾಜಪುರ

೬. ವೆಂದು ಮಾಡಿ ಯಿ ಸ್ಥಳದಲ್ಲು। ತಮ್ಮ ಮಾತೃಗಳು ಮಲ್ಲಂಮಾಜಿ ಅಮ್ಮನವರ ಭಕ್ತಿಯಲ್ಲೂ

೭. ತೋಂಟದಸ್ವಾಮಿಯವರ ಹೆಸರಲ್ಲಿ । ಕಟ್ಟಿಸಿದ । ವಿರಕ್ತಮಠ । ಪ್ರತಿಷ್ಠೆ ಮಾಡಿದ ತೋಟಸಿಧೇಶ್ವರದೇವರ ।

೮. ಭಂಡಾರಕ್ಕೆ ಸ್ಥಳ ಪರಸ್ಥಳ ದೇಶಾಭಾಗದ ಮಹಾನಾಡವರು ಹಲ್ಲರು। ಹಂಜಿಮಾನರು ಬಾಳೆ

೯. ಚಿನಿವರದರು। ಗುಜ್ಜಾರು ಮುಂತಾದವರೂ ಬರಸಿಕೊಟ್ಟ ಮೂಲ ವಿಸದ ಧರ್ಮಶಾಸನದ ಪಟ್ಟೆ ।

೧೦. ಕ್ರಮವೆಂತೆಂದರೆ । ದೇವರ ಸಂನ್ನಿಧಿಯಲ್ಲೂ। ನಡೆವ ಕಟ್ಟಲೆ । ಕಂದಾಚಾರ । ವಿಶೇಷ ಕಟ್ಟಲೆ । ಕಾ

೧೧. ರ್ತಿಕ ಮಾಸದ ದೀಪಾರಾಧನೆ। ನಡಸುವ ಗಣಾರಾಧನೆ ಮುಂತಾದ ಬಗ್ಗೆ ಸಹ। ಘಟ್ಟದ ಕೆಳ

೧೨. ಗಣ ಹೋಬಳಿ। ಚಂದಾವರ। ಮಿಡಿಜೆ। ಹರಿಜ। ಉಪ್ಪಿನಪಟ್ಟಣ। ವಿಂಗಡವಾದ ಬಲ್ಲಾಳಿಕೆ।

೧೩. ಸೀಮೆ । ಸುಂಕದ । ಠಾಂಣ್ಯಗಳಲ್ಲಿ ಸಹಾ । ನಾಲೂ ಮಾಡುವ ವ್ಯವಹಾರಕ್ಕೆ। ಅರಮನೆಗೆ ಕೊಟ್ಟು ಬಾಹ ।

೧೪. ಸುಂಕ । ಪ್ರಾಕು ಕೊಟ್ಟು ಬಾಹ ಕೊಡವಿಸ ಹೊರತಾಗಿ । ಯಿ ಮಠಕ್ಕೆ ಕೊಟ್ಟು ಬಾಹ ಮೂಲಿ ವಿಸದ ವಿವರ ।

೧೫. ಯಿ ಹೋಬಳಿ ಸುಂಕದ ಠಾಂಣ್ಯಗಳಲ್ಲಿ ಕರ್ಕಿ ಮಾರ್ಗ ಕೊರೆ ಮಾರ್ಗಕ್ಕೆ ಹೋಗಿ ಬಾಹ ಸರಕು । ಅಕ್ಕಿ ಭತ್ತ।

೧೬. ಅಡಕೆ ಗಂಧ । ಕವಾಡದ ಜಿನಿಸು । ಪಟ್ಟೆ ಸರಕು ಮುಂತಾದ ಜವಳಿಗೆ ಸಹಾ । ಹುಟ್ಟುವಳಿ ಆಹ ಸು

೧೭. ೦ಕ । ತುಲಶಿ ಶಾಬಿಂದ್ರ । ಲಾಭದಾಯ ಮುಂತಾದ್ದಕ್ಕೆ ಸಹ । ಗ೧ ಕ್ಕೆ ಹಾ । ಹೋಗದಪ್ಪಂದಾ । ನಂಮನಂ

೧೮. ಮ । ಲಾವಣಿಗೆ ಸ್ರೀ ಲೆಖದ ಸಂಗಡ । ಕೂಡಿಕೊಂಡು । ಯಿೂ ಮಠದ ಧರ್ಮಕ್ಕೆ । ಕೊಟ್ಟ ಶಿವಾರ್ಪಿತವಾಗಿ ಕಾಲ

೧೯. ಕಾಲಂಪ್ರತಿಯಲು । ಕೊಟ್ಟು ಬಂಧೆಲೂ ಯಂದು ಬರಸಿಕೊಟ್ಟ । ಮೂಲ ವಿಸದ ಪಟ್ಟಿ

೨೦. ಕುಂದಾಪುರ । ವಿಂಗರ । ಕಾಣಿಕೆ ಬೊಕ್ಕಸದ ಬಂಡಸಾಲೆ । ಗುತ್ತಿ ಮರಿಯಣ್ಣನ ಬಿನ್ನಹ ।

೨೧. ಹೊನ್ನಾವರದ ವೆಂಕಟೇಶ ಮಲ್ಲಯ್ಯನ ಬಿನ್ನಹ ।

೨೨. ಸಮಗೊಂಡ ರಾಮಯ್ಯನ ಬಿಂನ್ನಹ । ಯಿಡುಗುಂಜಿ ಕೃಷ್ಣಯ್ಯನ ಬಿಂನ್ನಹ । ತಿಂಮ್ಮಪ್ಪ ಸೇನ ಭೂವನ ಬಿನ್ನಹ

೨೩. ಜಯನದಿ ಬಿಂನ್ನಹಾ ಉಳ್ಳಾಲ ಕೃಷ್ಣಯ್ಯನ ಬಿಂನ್ನಹ ಮಿಡಿಜೆ ಸೀಮೆ ಕೃಷ್ಣಸಬಾಯಿತ ರಾಮ ಬಿಂನ್ನಹ ।

೨೪. ಬಾರಕುರ । ಕಲ್ಯಾಣಪುರ ಬಲಿನಾಯಕನ ಬಿನ್ನಹ । ಸೋಮ್ಮೆನಾಯಕನ ಬಿನ್ನಹ ।

೨೫. ನಂಮ್ಮವ ತಿಂಮ್ಮಪನ ಬಿನ್ನಹ । ಯಿಂಕ್ಕಿಬಾಳು ಸೆನಭೋವರ ಬಿನ್ನಹ ।

೨೬. ಕುಬಸೆ ಸಾಕೀನ ಬಿನ್ನಹ । ಹೊನ್ನವರದ ಪಾಠ್ಯಟೆ ಗೋವಿಂದ ಹೆಗಡೆ ಬಿಂನ್ನಹ । ಉಪ್ಪುಂದ ತಿಂಮ್ಮಣ್ಣನ ಬಿಂನ್ನಹ ।

೨೭. ದಾರೇಶ್ವರ ಕೃಷ್ಣನ ಬಿಂನ್ನಹ । ಹೊನ್ನಾವರದ ಬಾಬತಿ ಸೇನೆಬೋವನ ಬಿಂನ್ನಹ । ಹೆಜ್ಮಾಡಿ ಬಸವಯ್ಯನ ಬಿಂನ್ನಹ ।

೨೮. ಸಾಂತಯ್ಯನ ಬಿಂನ್ನಹ । ನರಸಪಡಿಯಾರನ ಬಿಂನ್ನಹ । ಮಾರುತಿ ಬಿಂನ್ನಹ । ರಾಮಯ್ಯ ನಾಯಕನ ಬಿಂನ್ನಹ ನಾರಾಯಣನ ಬಿಂನ್ನಹ ।

೨೯. ಕುಡಿಸಾತನೊಪ್ಪನ ಬಿಂನ್ನಹ । ಶಂಕರನಾರಾಯಣನ ಬಿಂನ್ನಹ ಸವಡದ ವೆಂಕಟೇಶನ ಬಿಂನ್ನಹ ।

೩೦. ಲಚ್ಚರಾಜನ ಬಿಂನ್ನಹ । ಕಲ್ಯಾಣಪುರ ಜೋಗಯ್ಯನ ಬಿಂನ್ನಹ । ನರಸನ ಬಿಂನ್ನಹ । ವೆಂಕಟೇಶನ ಬಿಂನ್ನಹ ।

೩೧. ಕಲಾವಾದ್ಯ ಹರದರ ಬಿಂನ್ನಹ । ಸೇವೆನಾಯಕರ ಬಿಂನ್ನಹ । ಕಾರ್ಕಳದ ಪೇಂಡೆ ಹಲ್ಲರು ಚಿನಿವರದರಾ ಬಿಂನ್ನಹ ।

೩೨. ಮಾನಪ್ಪನ ಬಿಂನ್ನಹ ಅಪ್ಪಯ್ಯನ ಬಿನ್ನಹ ಸೋಮಪಯ್ಯನ ಬಿನ್ನಹ ರಂಗಯ್ಯನ ಬಿನ್ನಹ।

೩೩. ಕೊಡೆಯಾಲ ಬಿರೆಯವರು ಬದುಪ ಸೆಟ್ಟಿ ಬರಹ। ಶಂತುಳಿ ಬಿಂನ್ನಹ।

೩೪. ಸಂಕಯ್ಯನ ಬಿನ್ನಹ। ಕೊಡಿಯಲ್ಲದ। ಪೇಠೆ॥ ನಾಡಿನ ಬಿನ್ನೆಹ। ನರಣಾವನ ಬಿನ್ನಹ

೩೫. ಉಳ್ಳಾಲದ ಪೇಠೆಯರು ಹನಪ್ಪನ ಬಿನ್ನಂಹ ಕುಂದಾಪುರ ಕೃಷ್ಣಯ್ಯ ನಾಯಕನ ಬಿನ್ನಹ।

೩೬. ಕುಂಬಳೆ ಮಂಜೇಶ್ವರ ಹರದರು । ಯಿರಮಣ್ಣು । ಕೊಡಲಾರೆಉ ಯಂದು ಹೇಳಿಕೊಂಡದರಿಂದ ಗೋವಿಂದ ಪ್ರಭುಗಳು ಯಿದ್ದು।

೩೭. ಮಾಡಿದ ಚಹಾ। ಅಕ್ಕಿ ಕೊಬರಿ ೧ ರದಾ। ಹಾಗ। ಅಡಕೆ ಬರಾಡಿ। ೧ ರದಾ ೦ ಹಾಗದಲ್ಲು ಕೊಟ್ಟು ಬಂದೆಉ।

೩೮. ರಂಬೆಸೂರದ ಬಾರಬಹರಿ ಬಿನ್ನಹ। ನರಸಯ್ಯನ ಬಿನ್ನಹ। ಅಂಶಯ್ಯನಯ್ಯನ ಕೃಷ್ಣಾಯ್ಯನ ಬಿನ್ನಹ।

೩೯. ವಾಸ್ತವಲಿ ಬಳರಿನ ಬಿನ್ನಹ। ರಾಮಂಣ್ಣನ ಬಿನ್ನಹ। ನರಸಯ್ಯನ ಬಿನ್ನಹ। ಚರವಿರ ಬಿನ್ನಹ

೪೦. ಬಾಸುರ ಕೃಷ್ಣಯ ಹೆಗಡೆ ಬಿಂನ್ನಹ ಮೊರುಹ ಭಕ್ತನ ಬಿಂನ್ನಹ। ಬಸುರಾಮಾ ವೆಂಕಟೇಶ ಪ್ರಭು ಬಿಂನ್ನಹ। ಕುಂದಾಪುರ ಪೇಟೆ ಕಡಿಂದ

೪೧. ಗೌಡತಿಮ್ಮಪ್ಪನ ಬಿಂನ್ನಹ। ಗಂಗವಾಳಿ ಸೀಮೆ ನರಸನುಮಹಾ ಬಂದ ತಿಮ್ಮಂರಸನೆ ಬಿಂನ್ನಹ।

೪೨. ಲಖ್ಮಯ್ಯನ ಬಿಂನ್ನಹ। ರೈಲ ಸಾತಪ್ಪನ ಬಿಂನ್ನಹ।

❖❖

೧೫

ಕಾಲ : ಕ್ರಿ.ಶ. ೧೭೪೪ (ರುಧಿರೊದ್ಗಾರಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಕೆಳದಿ (ಬೂದಿ) ಬಸವಪ್ಪನಾಯಕರು ಭದ್ರರಾಜಪುರದಲ್ಲಿ ಕಟ್ಟಿಸಿದ ತೋಟದ ಸಿದ್ಧೇಶ್ವರಮಠಕ್ಕೆ ಗಣಾರಾಧನೆಗಾಗಿ ಸೆಟ್ಟಿ ಸಮಸ್ತರು ನೀಡಿದ ದಾನದ ವಿವರ.

* * *

೧. ಃ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೆ ತ್ರೈಲೊಕ್ಯನಗರಾರಂಭಾ ಮೂಲ ಸ್ತಂಬಾ

೨. ಯ ಶಂಭವೆ ಸ್ವಸ್ತಿಶ್ರೀ ಜಯಾಬ್ಯುದಯ ಶಾಲಿವಾಹನ ಶಕವರುಷ ೧೬೬೪ನೆಯ ವರ್ತಮಾ

೩. ನಕೆ ಸಲುವ ರುಧಿರೊದ್ಗಾರಿ ಸಂವತ್ಸರದಾ ಮಾಘ ಬ೭ ಲ್ಲೂ। ಶ್ರೀಮದನೇಕ ಬ್ರಂಹ್ಮಾಂಡ ಖಾಂ

೪. ಡ ಗರ್ಭಾಗರ್ಭೀಕೃತ ವಿಧಿ ಮಧುಸುಧನ ತ್ರಿದಶಾದಿಶ್ವರಾಧ್ಯನೆಕ ದೇವತಾ ಮಕುಟ

೫. ಮಣಿಗಣು ಕಿರಣ ದಿಪ್ತಾ। ದೀಪ್ತಿ। ಪಾದ ಪಯೋಜ ಪರಶಿವ ವಿಲಾಶ್ವಿಕೃತ ಕಳಿವ। ರು

೬. ಮಪ್ಪ। ಸಚ್ಚಿದಾನಂದ । ಪರಿಪೂರ್ಣ ಅವಿರಳ ಪರಂಜ್ಯೋತಿ ಸ್ವರೂಪರಾದ ತೋ
೭. ಟ ಸಿದ್ದೇಶ್ವರದೇವರ ಸಂಪ್ರದಾಯಕರಾದಂಥಾ। ರಾಜೇಶ್ರಿ ತೋಟದ ಸ್ವಾಮಿಯ
೮. ವರಿಗೆ ಶ್ರಿಮದ್ದೆಡಮುರಾರಿ ಕೊಟೆ ಕೊಲಾಹಲ ವಿಶುಧ ವಯಿದಿಕಾದ್ವೈತ
೯. ಶಿದ್ಧಾಂತ ಪ್ರತಿಷ್ಠಾಪಕ ಶಿವಗುರುಭಕ್ತಿ ಪಾರಾಯಣರಾದ ಶ್ರೀಮತ್ಕೆಳದಿ ।
೧೦. ಬಸವಪ್ಪನಾಯಕರೈಯ್ಯನವರು ನಾಲು ಆಳುವ ಕಾಲದಲ್ಲು। ಬಿದರೂರು ಪೆ
೧೧. ಠೆ ಒಳಗಣ ಬಾಳೆಕೊಪ್ಪವೆಂಬ ಸ್ಥಳದಲ್ಲೂ ತಂಮ ಪಿತೃಗಳು ವೀರಭದ್ರಪ್ಪನಾಯಕ।
೧೨. ರಯ್ಯನವರ ಹೆಸರಲ್ಲೂ ಭದ್ರರಾಜಪುರವೆಂದು ಮಾಡಿ ಆ ಸ್ಥಳದಲ್ಲೂ।
೧೩. ತಂಮ ಮಾತೃಗಳು ಮಲ್ಲಂಮಾಜಿ ಅವರ ಭಕ್ತಿಯಲ್ಲೂ ತೋಟಸ್ವಾಮಿಯ
೧೪. ವರ ಹೆಸರಲ್ಲು ಪ್ರತಿಷ್ಠೆ ಮಾಡಿದ ಶ್ರೀಸಿದ್ಧೇಶ್ವರದೇ
೧೫. ವರ ಕಟ್ಟಲೆ ಕಂದಾಚಾರ ನಡೆಸುವ ಗಣಾರಾಧನೆ ಮುಂತಾದ ಬಗ್ಗೆ ಜಂಬುದ್ವೀಪ ಭರತ
೧೬. ಖಂಡ ಪ್ರಥುವಿ ಮೆಲಣ ಪೂರ್ವ ಪಶ್ಚಿಮ ದಕ್ಷಿಣೋತ್ತರ ಚಪ್ಪಂನ ಐವತ್ತಾರು ದೇಶ ಸ್ಥಳ
೧೭. ವಳನಾಡು ಮುಂತಾದ ಅಡ ಪಟ್ಟಣಿ ಹಾಕಿ ಹೆರುವ ಮಹಾನಾಡು ಸೆಟ್ಟಿ ಸಮಸ್ತರು ನಮಗೆಲ್ಲಾ।
೧೮. ಸಧಂರ್ಮವಾಗಬೇಕೆಂದು। ನಾಲು ನೀಡಿದ ಮೂಲಿವಿಸದ ಧಂರ್ಮ ಸಾಧನದ ಪಟ್ಟಿಕ್ರಮವೆಂತ್ತೆಂ
೧೯. ದರೆ ಘಟ್ಟದ ಮೇಲಣ ರಾಜ್ಯ । ಘಟ್ಟದ ಕೆಳಗಣ ರಾಜ್ಯ ಮುಂದೆ ಸಾಧಿಸುವ ರಾಜ್ಯದ ವಳಗಾ
೨೦. ಗಿ ಬಡಗಲಿ ಮಹಾನಾಡು ಮೂಡಲ ಮಹಾನಾಡು ವಳನಾಡು ಮಹಾನಾಡ ಸೆಟ್ಟಿಗಳು । ತೆ
೨೧. ಲುಗರು ಕುರುಬರು ಉಪ್ಪಾರ ಸ್ಥಳದ ಗೌಉಡಗಳು ಘಟ್ಟ ಕೆಳಗಣ ಮಹಾನಾಡು ಸೆಟ್ಟಿ
೨೨. ಗಳು ಹಲ್ಲರು ಹಂಜಿಮಾನರು ಸಹಾ ಸಕಲಸ್ಥಳ ಮಾರ್ಗದ ವೊಳಗೆಲ್ಲಾ ವ್ಯವಹಾರ ಮಾಡುವ
೨೩. ಸಮಸ್ತ ಜಿನಿಸಿಗು ಕೊಡುವ ಮೂಲವಿಸದ ವಿವರ। ಘಟ್ಟದ ಮೇಲಣ ಸೀಮೆಗಳಲ್ಲಿ। ಯಿಕ್ಕೆರಿ
೨೪. ಹೋಬಳಿ ದುರ್ಗದ ಹೋಬಳಿ ವಸುಧಾರೆ ಹೋಬಳಿ ಹೊಂನಾಳಿ ಮಲ್ಲೂರು ಅಜಂಪುರ ಶಿವನೆ ।
೨೫. ಸಂತೆಬೆನ್ನೂರು ಹೊಳಲು ಮೂಡಿಗೆರೆ ನಂದಿಗಾವಿ ಮುಂತ್ತಾದ ಸುಂಕದ ಠಾಂಣ್ಯಾ ವಳಠಾ
೨೬. ಂಣ್ಯಾ ಯಿ ಸ್ಥಳ ಹಾಳಿಕವಾದ ಅಡಿಕೆ ಮೆಣಸು ಯಾಲಕ್ಕಿ ಮೆಣಸು ಮುಂತಾಗಿ ಶ್ರೀಂಗೇರಿ ಮಾರ್ಗ

೨೭. ಬಿಳಿಗೆ×× ಕಳಸದ ಮಾರ್ಗ ಘಟ್ಟದ ಮಾರ್ಗ ಅಡಿಕೆ ಮೆಣಸಿಗೆ ಸಹಾ ನಡೆ ೧ರ ಹ = ಬೆಳೆಯಲು

೨೮. ಮಾರ್ಗ × ದಾಯಕ್ಕೆ ಕವಾಡ ಯಂಣೆ ತುಪ್ಪ ಜವಳಿ ಕಬ್ಬುನ ಕಾಚು ಕೊಬ್ಬರಿ ಕತ್ತ ಹೊಗೆಸೊಪ್ಪು ।

೨೯. ಕಂಬುಳ ಹತ್ತಿಹಂಜಿನೂಲು। ದಿದಳ ಬೂಸ ಬೆಳೆ ಬೆಲ್ಲ। ಅಕ್ಕಿ ಭತ್ತರಾಗಿ ಉಪ್ಪು ಹುಳಿ ಅಮನಿ

೩೦ ಮದ್ಯ ಯಿಂಗು। ಪಟ್ಟೆ ಪಿತಾಂಬ್ರ। ಯಂಮೆ ಯತ್ತುಮುಂತಾದ ನಾನಾ ಜಿನಿಸಿಗೆ ಬಡ್ಡಿಸ್ತನಡೆ ೧ ಕ್ಕೆ

೩೧. ××– ಕಾರಕ ಅಕ್ಕಿ ತಂಗು ಮೊಸರೂರು ಶಿವೇಶ್ವರ ಕುಂಬುಸೆ ಆಯನೂರು ಹಾರನಹಳ್ಳಿ

೩೨. ×××× ಯಡತೊರೆ ಹೊಳೆಹೊಂನುರು ಬಿಂಕಿಪುರ ಹುಲಿಕೆರೆ। ಮೆಗುಂದ।

೩೩. ಮಂ ××××× ದಾನಿವಾಸ ಲಕ್ಕುವಳ್ಳಿ ಹೊಮುಚ ಆಗುಂಬೆ। ಆಲೂಮಾನಿ ಮುತ್ತೂರು ಮಾಳೂ

೩೪. ರು ××× ××× ಬಗುಂಜ ಮೇಲು ಬಂಗಾಡಿ ಅಡುವಳ್ಳಿ ಹೊಂನ್ನುರು

೩೫. ಕಿಗ್ಗೆಸರು ××× ಕಳಸ ಬೈಂದೂರಿಗೆ ಮುಂತಾದ ಠಾಂಣ್ಯಗಳು ವಳಠಾಂಣ್ಯಗಳು

೩೬. ×××× ×× ಬಳಿ ಠಾಂಣ್ಯ ವಳಠಾಂಣ್ಯಗಳು। ಹೊಂನಾಳಿ ಮಲ್ಲೂರು ××× ಬೆನ್ನೂರ। ಅಜಿಂ

೩೭. ಪುರ ×× ಹೊಳಲು ಹೊದಿಗೆರೆ ನಂದಿಗಾವಿ ಮುಂತಾದ ರಾಜ ×××××× ರಾಜ್ಯ।

೩೮. ಘಟ್ಟ ××× ಗೆರೆಸಪ್ಪೆ ಚಂದಾವರ ಮಿಡಿಜೆ ಹೊಂನ್ನಾವರ ಪಾರಿಪ ×××× ಘಟ್ಟ ×××

೩೯. ಬಯ ×××××ಳಿಗೇರಿ ಶಿರಾಲಿ ಬಗ್ಗಾಡಿ ಹೊಬಳಿ ಹೊರನಾಡು ಪೇಠಾ ಹೊಂಗಡಿ ಬಾರಕೂರ

೪೦. ×××। ಮಂಗಳೂರ ಹೊಬಳಿ ಮುಂತಾದ ಠಾಂಣ್ಯಗಳು ವಳಠಾಂಣ್ಯಗಳು

೪೧. ವಿಂಗಡ××××ಳಿಕೆ ಸಿಮೆ ಸುಂಕದ ಠಾಂಣ್ಯಗಳಲ್ಲಿ ಸಹ ॥ ಆ ×××ಗೆ ××× ದಾ

೪೨. ಸುಂಕ ×। ಕು ಕೊಟ್ಟುಬಹಾ ಕೂಡ ವಿಸ ಹೊರತಾಗಿ ಹುಟ್ಟುವಳಿ ಆಹ ಸುಂಕ ಕುರಶಿ ಶಾಬಂದ್ರಲಾಭದಾಯ ।

೪೩. ಮುಂತಾದಕ್ಕೆ ಸಹಾ ಗ೧ಕ್ಕೆ ಹಾ।೦ ಉಭಯ ಯಿ ರೀತಿ ಹೊಬಳಿ ಹೊಬಳಿ ವಳಗಣ ಠಾಂಣ್ಯ ಠಾಂಣ್ಯದ

೪೪. ವಳಗೆಲ್ಲಾ ಪ್ರತೇಕ ಪ್ರತೇಕದಲ್ಲಿ ನಿಮ ಮಠದ ಧಂರ್ಮಕ್ಕೆ ನಂಮ ಸಂತಾನ ಪಾರಂ ಪರ್ಯವಾಗಿ।

೪೫. ಆ ಚಂದ್ರರ್ಕಸ್ತಾಯವಾಗಿ ನಡೆಸ ಬಹೆಉ ಯಂದು ಕೊಟ್ಟ ಧಂರ್ಮ ಸಾಧನದ ಪಟ್ಟಿ ಯಿದಕ್ಕೆ ದೇವಸಾಕ್ಷಿಗಳು.

ಸಾಕ್ಷಿಗಳು :

೪೬. ಶ್ರೀ ಕೊಟ್ಟೂರು ಕಟ್ಟಿಮನಿ ಶೆಟ್ರೂ ತೋಟಪ್ಪ ಸಮಸ್ತ ದೈವದವರು

೪೭. ಹಿರೆಹಡಗಲಿ ಹತ್ತಿ ಚಿಂನಪ್ಪ ಸೆಖಣ್ಣ ಮಹಂತಪ್ಪನ ವೊಪ್ಪಿತ ಬಿಂನಹ । ಆಯನಪುರದ ತೋಟಪ್ಪ । ಸಂಗಪ್ಪನ ಬಿಂನಹ ।

೪೮. ಚರಲಿಂಗಪ್ಪ ಬಿಂನಹ । ಯಳಮಲೆ ರಾಚಪ್ಪನ ಬಿಂನಹ । ಆಳುಂಗಿ ಮುರಿಗೈ

೪೯. ಯನಬಿಂನಹ । ರಾಣೆದಬೆಂನುರ ಗುರುಪಾದ ರುದ್ರಯ್ಯನ ಬಿಂನಹ ।

೫೦. ಹುರಕಡಲಿ ಗುರುಸಿಧಯ್ಯನ ಬಿಂನಹ । ಕುರುವತ್ತಿಯ ಗೊವಿರಹಳ್ಳಿಯ ಚೆಂನಿವಿರಪ್ಪನ ಬಿಂನಹ । ಜಕಪ್ಪನ ಬಿಂನಹ ।

❖❖

೧೬

ಕಾಲ : ಕ್ರಿ.ಶ. ೧೭೫೮ (ಈಶ್ವರ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಭದ್ರರಾಜಪುರದ ವಿರಕ್ತಮಠಕ್ಕೆ ಚನ್ನಬಸವಪ್ಪನಾಯಕರು ದಾನ ನೀಡಿದ ವಿವರ.

* * *

೧. ೦॥ ಯಿಶ್ವರ ಸಂವತ್ಸರದ ಚೈತ್ರ ಬಿ ೫ಲ್ಲು ಶ್ರೀಮತ್ಕೆಳದಿ ಚಂನಬಸವಪ್ಪ ನಾಯಕರೂ ।

೨. ಚಿರಂಜಿವಿ ನಂಮ ಬಸವಲಿಂಗಪ್ಪವನರಿಗೆ ಹರಸಿ ಕಳುಹಿಸಿದ ಅನೇಕ ಆಶೀರ್ವಾದಃ ಮೂಲಿರು

೩. ಹುಜುರು ಬಂದು ಮಂಗಲೂರ ಹೊಬಳಿ ಬಳಿ ಬಂಟುವಳಲಿ ಮಂಗಣೆಯಲ್ಲು ತಂಮ ಗುತ್ತಿಗ್ಗೆ ಕೂಡಿ

೪. ದ ಅರಳಕ್ಕೊಲಿ ಗ್ರಾಮವು ಭದ್ರರಾಜಪುರದ ವಿರಕ್ತಮಠಕ್ಕೆ ಉತ್ತಾರವಾಗಿ ಅದೆ ಯಿ ಗ್ರಾಮದ ವ

೫. ತ್ತಿನಲ್ಲು ಯಿಹ ಪಟ್ಟಣದ ಸುಂಕಲು ಹೆರಳ ನಷ್ಟ ತಂಮ್ಮ ಕೈಯ್ಯ ಸಾಗದು ವಪ್ಪಿಸಿಕೊಂಡು ತಂಮ

೬. ಗುತ್ತಿಗೆ ಸಸ್ತಿಗೆ ತಗಿಸಿಕೊಡಬೇಕೆಂದು ಹೇಳಿಕೊಳ್ಳುತ್ತಿದ್ಧಾರೆ ಆ ರೀತಿ ಅಪ್ಪಣೆಯಾಗಬೇಕೆಂದು

೭. ನೀವು ಹೇಳಿಕೊಂಡ ಸಂಬಂಧ ಯಿ ಪಟ್ಟಣದ ಸುಂಕದಿಂದ ಸಸ್ತು ಗ೧೫೦ ಹೊಗೆಸೊಪ್ಪಿನ ಗುತ್ತಿಗೆ

೮. ಯಿಂದ ಗ೬೬ ಉಭಯಯಂ ಗ೨೧೬ನು ಮೂಲಿರ ಗುತ್ತಿಗೆ ಸಸ್ತಿಗೆ ತಗ್ಗಿಸೆ ಭದ್ರರಾಜಪುರದ ವಿರಕ್ತ ಮ

೯. ಠದ ಹವಾಲೆ ಮಾಡಿಸಿ ಯಿ ಭಗ್ಗೆ ಕೈರೊಕ್ಕ ಗ೧೦ಲ ಸುಂಕದ ನಿಲದ ಚಿಟಿಬರವದು ಗ೧೦ಲ ಉಭ

೧೦. ಯಂ ಗ೨೧೬ ಯಿಂನ್ನೂರ ಮಾಡಿ ನೂರು ವರಹೊನ್ನು ಯಿ ರೀತಿ ಹುಜಿರು ವಿಂಗಡದಲ್ಲು ಕೊಟ್ಟುಬಾ

೧೧. ಹಾಗೆ ಕಟ್ಟುಮಾಡಿಸಿದ್ದೇವೆ ಯಿ ಸುಂಕವನ್ನು ಮಠದವರ ಹವಾಲೆ ಮಾಡಿಕೊಡುವ ಹಾಗೂ ಯಿ

೧೨. ಕಾಗದ ವ ಸೇನಬವರ ಕಡಿತಕ್ಕೆ ಬರಸಿ ತಿರಿಗಿ ಯಿ ಮಠದವರ ವಶಕ್ಕೆ ಕೊಡುವ ಹಾಗೆ ಸಹಾ

೧೩. ಕಟ್ಟು ಮಾಡಿಸುವುದಾಗಿ. (ಸೀಲ್)

❖ ❖

೧೭

ಕಾಲ : ಕ್ರಿ.ಶ. ೧೭೪೪ (ರುಧಿರೊದ್ಗಾರಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಕೆಳದಿ (ಬೂದಿ) ಬಸಪ್ಪನಾಯಕರು ಭದ್ರರಾಜಪುರದಲ್ಲಿ ತಮ್ಮ ತಂದೆ ಹೆಸರಿನಲ್ಲಿ ಕಟ್ಟಿಸಿದ ವಿರಕ್ತಮಠಕ್ಕೆ ತೋಂಟದ ಸಿದ್ಧೇಶ್ವರದೇವರ ಕಟ್ಟಲೆ ಕಂದಾಚಾರ ಮತ್ತು ಗಣಾರಾಧನೆಗೆ ಸೆಟ್ಟಿ ಸಮಸ್ತರು ನೀಡಿದ ದಾನದ ವಿಷಯ ಇಲ್ಲಿದೆ.

* * *

೧. ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ । ತ್ರೈಲೋಕ್ಯ ನಗರಾರಂಭ ಮೂಲಸ್ಥಂಬಾಯ ಶಂಭವೇ । ಸ್ವಸ್ತಿಶ್ರೀ

೨. ಜಯಾಬ್ಯುದಯ ಶಾಲಿವಾಹನ ಶಖ ವರುಶಾ ೧೬೬೬ನೆಯ ವರ್ತಮಾನಕ್ಕೆ ಸಲುವ ರುಧಿರೊದ್ಗಾರಿ ಸಂವತ್ಸರದ ಕಾರ್ತಿಕ

೩. ಶು ೧೫ಯಲು ಶ್ರೀಮದ್ದೇವಮುರಾರಿ । ಕೋಟಿಕೋಲಾಹಲ ವಿಶುಧ ವಯ್ಯಾದಿಕಾದ್ವೈತ ॥ ಸಿದ್ಧಾಂತ ಪ್ರತಿಷ್ಠಾಪಕ ಶಿವಗು

೪. ರು ಭಕ್ತಿಪರಾಯಣರಾದ ಶ್ರೀಮತ್ಕೆಳದಿ ಸದಾಶಿವರಾಯನಾಯಕರ ವಂಶೋದ್ಭವರಾದ ಶೋಮಶೇಖರ ನಾಯ

೫. ಕರ್‍ಯೆಯ್ಯನವರ ಪೌತ್ರರೂ ಬಸವಪ್ಪ ನಾಯಕರ್‍ಯೆಯ್ಯನವರ ಪೌತ್ರರೂ ಸೋಮಶೇಖರ ನಾಯಕರ್‍ಯೆಯ್ಯನವರ ಅ

೬. ನುಜರು ।ವೀರಭದ್ರಪ್ಪ ನಾಯಕರ್‍ಯೆಯ್ಯನವರ [ಪು]ತ್ರರೂ ಬಸವಪ್ಪ ನಾಯಕರ್‍ಯೆಯ್ಯನವರೂ । ಸ್ಥಿರಸಾಂಮ್ರಾಜ್ಯ

೭. ಪಟ್ಟವನಾಳುವ ಕಾಲದಲ್ಲು ಶ್ರೀಮದ್ಭನೇಕ । ಬ್ರಂಹ್ಮಾಂಡ ಖಾಂಡ ಗಭಾಗರ್ಭಿಕೃತ ವಿಧಿಮಧು । ಸೂಧನ ತ್ರಿದಶಾಧಿ

೮. ಶ್ವರಾಧ್ಯನೇಕ ದೇವತಾ ಮಕುಟ ಮಣಿ ಗಣಕಿರಣ ದೀಪ್ತಾದೀಪ್ತಾ ಪಾದ ಪಯೋಜ ಪರಶಿವ ವಿಲಾಶ್ವಿಕೃತ । ಕಳೇವರರು

೯. ಮಪ್ಪ ಶ್ರೀ ಮತ್ಸಚ್ಚಿತಾನಂದ ನಿತ್ಯಪರಿಪೂರ್ಣ ಅವಿರಳ ಪರಂಜ್ಯೋತಿಶ್ವ ರೂಪರಾದ ಷಡುಸ್ಥ ಜ್ಞಾನ ಚಕ್ರವ

೧೦. ರ್ತಿಗಳಾದ ವಿರಮಹೇಶ್ವರರಾದ ತೋಂಟದ ಸಿಧೇಶ್ವರಸ್ವಾಮಿಯವರ ಕೃಪಾಪ್ರಸಂನರಾದ । ತೋಂಟದಾಚಾರ್ಯ್ಯ ಸ್ವಾಮಿ

೧೧. ಯವರಿಗೆ ಶ್ರೀಮತ್ಕೆಳದಿ ಮಲ್ಲಂಮಾಜಿ ಅಂಮನವರು ಭಕ್ತಿಯಲ್ಲು ಬಸವಪ್ಪ ನಾಯಕರೈಯ್ಯನವರೂ ಕಟ್ಟಿಸಿ

೧೨. ದ ಭದ್ರರಾಜಪುರ ವಿರಕ್ತಮಠ ಪ್ರತಿಷ್ಠೆ ಮಾಡಿದ ತೋಂಟದ ಸಿಧೇಶ್ವರ ದೇವರ । ಕಟ್ಟಲೆ ಕಂದಾಚಾರ ನಡಸುವ ಗಣಾ

೧೩. ರಾಧನೆ ಮುಂತ್ತಾದ ಬಗ್ಗೆ । ಶ್ರೀ ಮಜ್ಜಂಬುದ್ವೀಪ ಭರತಖಾಂಡ ಪೃಥ್ವೀಮೇಲಣ ಪೂರ್ವ ಪಶ್ಚಿಮ ದಕ್ಷಿಣೋತ್ತರ

೧೪. ಛಪ್ಪಂನ ಐವತ್ತಾರು ದೇಶದಲ್ಲು ಶ್ರೀಮತ್ಸಂಗನ ಬಸವೇಶ್ವರದೇವರ ಸಿದ್ಧ ಕಮಲ ಮಂಟಪದಲ್ಲು ವ್ಯವಹರಿ

೧೫. ಸುವಂಥಾ ಶ್ರೀಮತ್ಸಜ್ಜನ ಶುಧ ಶಿವಾಚಾರ ಸಂಪಂನ್ನರಾದ ಗುರುಲಿಂಗ ಜಂಗಮ ಪಾದೋದಕಾಮೃತ ಸೇವಿತ

೧೬. ರಾದ ತ್ರಿಕಾಲ ಅಭವ ಪೂಜಿತ ಪ್ರಣಮ ಪಂಚಾಕ್ಷರಿ ಪಟಿತ ಪರಾಯಣರಾದ ಭಸಿತ ರುದ್ರಾಕ್ಷಮಾಲಾ ಅ

೧೭. ಲಂಕೃತರಾದ ನಯ ವಿನಯ ದಯ ದಾಕ್ಷಿಂಣ್ಯ ಪರಉಪಕಾರ ಪುಂಣ್ಯ ಶರೀರಗಳಾದ ಶ್ರೀಸಂಗನ ಬ

೧೮. ಸವೇಶ್ವರ ದೇವರ ಸಾಂಪ್ರದಾಯಕರಾದಂಥಾ ಸ್ಥಳ ಪರಸ್ಥಳ ಸಾಲಿ ಮೂಲೆ ಶೆಟ್ಟಿ ಸಮಸ್ತ ಮಹಾನಾಡಿನವರೂ

೧೯. ದೇಶಮುದ್ರೆಗಳೂ ಸಹಾ ತಮಗೆ ಸಧರ್ಮವಾಗಬೇಕೆಂದು ಸ್ವರುಚ್ಛಾ ವಡಂಬಟ್ಟು ಬರಸಿಕೊಟ್ಟ

೨೦. ಮೂಲವಿಸದ ಧರ್ಮಸಾಧನದ ಪಟ್ಟೆ ಕ್ರಮುವಂತ್ತೆಂದರೆ: । ಬಸವಪ್ಪ ನಾಯಕರೈಯ್ಯನವರು ಆಳುವ ಘಟ್ಟದ

೨೧. ಮೇಲಣ ರಾಜ್ಯ ಘಟ್ಟ ಕೆಳಗಣ ರಾಜ್ಯ ಮುಂದೆ ಸಾಧಿಸುವ ರಾಜ್ಯದ ವಳಗಾಗಿ ಬಡಗಲಿ ಮಹಾನಾಡು ಮೂಡಲ ರಾಜ್ಯದ ಮ

೨೨. ಹಾಸಾಡು ವಳನಾಡು । ಸೆಟ್ಟಿಗಳು ತೆಲಗು ಬಣಜಿಗರು ಕುರುಬರು ವ್ಯಾಪಾರರು ಸ್ಥಳದ ಗೌಡಗಳು ಘಟ ಕೆಳಗ

೨೩. ಣ ಶೆಟ್ಟಿಗಳು ಹಲ್ಲರು ಹಂಜಿಮಾನರು ಸಕಲ ಸ್ಥಳಮಾರ್ಗದಲ್ಲಿ ವ್ಯವಹಾರ ಮಾಡುವ ಸಮಸ್ತ ಜಿನಿಸಿ

೨೪. ಗು ಕೊಡುವ ಕೊಡವಿಸದ ವಿವರ ಯಿಕ್ಕೇರಿ ಹೋಬಳಿ ದುರ್ಗದ ಹೋಬಳಿಯಲ್ಲು ಸ್ಥಳ ಸ್ಥಳಗಳಲ್ಲು ಹಾಳಿಕ

೨೫. ಸಹ ಅಡಿಕೆ ಮೆಣಸು ಯಾಲಕ್ಕಿ ಮುಂತಾಗಿ ನಡೆ ೧ಕ್ಕೆ ಜಮುಸಿರ ಹಾ = ಗುತ್ತಿ ಬಾಡದ ಬಯಲು । ಬಿಳಿಗಿ ಸಿ

೨೬. ದಾಪುರದ ಸ್ಥಳದ ಅಡಿಕೆ ಮೆಣಸು ಯಾಲಕ್ಕಿ ನ೧ಕ್ಕೆ ಜಮುಸಿರ ಹಾ=ಶೃಂಗೇರಿ ಮಾರ್ಗ ಕೆಳಸ್ತ ಮಾರ್ಗ ಘ

೨೭. ಟ್ಟದ ಮಾರ್ಗದ ಅಡಿಕೆ ಮೆಣಸು ಯಾಲಕ್ಕಿ ಸಹಾ । ನ೧ ಕ್ಕೆ ಜಮುಸಿರ ಹಾ=ಚರಾದಾಯಕ್ಕೆ ಕೊಬರಿಕವಾ

೨೮. ಡ ವಿದಳ ಬೂಸು ಯಂಣೆ ತುಪ್ಪ ಬೆಳೆ ಬೆಲ್ಲ ಜವಳಿ ಕಬ್ಬಿಣ । ಕತ್ತ ಕಾಚು ಅಕ್ಕಿ ಭತ್ತ। ರಾಗಿ ಉಪ್ಪು ಹುಳಿ ಹಂ

೨೯. ಜಿ ನೂಲು ಕಂಬಳಿ ಮುಂತಾದ ನಾನಾ ಜಿನಿಸು ವಿಳ್ಳೆದೆಲೆ ಸಹಾ ನ೧ಕ್ಕೆ ಹಾಂ ೨॥ ಕಾರಕ। ಅಕ್ಕಿ ಭತ್ತ ಹಳಿಗಾ

೩೦. ರಕ ನ೧ಕ್ಕೆ ವರುಷ ೧ಕ್ಕೆ ಹಾ ೧ ಅಂಗಡಿವ ನ೧ಕ್ಕೆ ವರುಷಕ್ಕೆ ಹಾ೧ಕೆ ಹ=ಹುರಿಕೆ ವ೧ಕೆ ವರುಷ ವ೧ ಕ್ಕೆ ಹಾ

೩೧. ಮಗ್ಗಕಾರಕ ಪಟ್ಟೆಗಾರಕ ಜಾಡರಮಗ್ಗ ವ೧ಕ್ಕೆ ವರುಶ ೧ ಕೆ ಹಾ=। ಕಂಬಳಿ ಕುರುಬರು ಮಗ್ಗವ ೧ಕ್ಕೆ ವರುಷ ೧ಕ್ಕೆ

೩೨. ಹಾ ಕೊಳಲಿಕಲ್ಲು ವ ೧ ಕ್ಕೆ ವರುಷ ೧ ಕ್ಕೆ ಹಾಂ॥ ಕೊಟ್ಟಣದವರಿಂದ ವರುಶ ೧ಕ್ಕೆ ಹಾ=ಹತ್ತಿಮಾರಿದವರಿಂದ ಗ೧ಕ್ಕೆ

೩೩. ಹಾ—ಘಟ್ಟಕೆಳಗಣ ಮಿಡಚೆ ಸುಂಕದಲು ಸಹಾ ಠಾಂಣ್ಯಗಳಲ್ಲಿ ಅರಮನೆಗೆ ತ್ತಗೆದುಕೊಂಬ ಸುಂಕದ ಮೇ

೩೪. ಲೆ ಗ೧ಕ್ಕೆ ಹಾ । ಘಟ್ಟದ ಮಾರ್ಗ ನ೧ಕ್ಕೆ ಹಾ—ಅವೊಡೆ ಯಂಣೆದ ಬಡೆ । ಕಾಯಿ ಮುಂತ್ತಾಗಿ ಹೊರೆವ ೧ ಕ್ಕೆ ಹಾಂ೨ ॥ ಅಂತ್ತು

೩೫. ಘಟ್ಟದ ಕೆಳಗೆ ಯಿೂ ರೀತಿಯಲ್ಲು ಯೆತ್ತುವ ಠಾಂಣ್ಯಗಳ ವಿವರ । ಯಿಕ್ಕೇರಿ ಯಿಲೆಗಳಲೆ ಆತವಾಡಿ ಕಲ್ಲು ಸೀಮಂತಸಾಲೆ

೩೬. ಸದಾಶಿವಸಾಗರ ಆಚಾರದಾಯ ಕರವೂರು ಆವಿನಹಳ್ಳಿ ಮಳಲಿ ಬಾರಂಸಿ ತಡಕೊಡಿ ಹಂನ್ನರಗೆಣಸಿನ ಕುಣಿ

೩೭. ಸಿರವಂತೆ ಕೆಳದಿ ಕೆಸನೂರು ಯಿಡುವಣಿ ತಾಳಗುಪ್ಪೆ । ಗುತ್ತಿ ಬಾಡದ ಬಯಲು ಬಿಳಿಗಿ ಸಿದ್ಧಾಪುರ ಜಡೆಯ ಕುಪ್ಪ

೩೮. ಟೂರು । ಸೊರಬ ಉಡುಗಣೆ ಬೆಟ್ಟೂರು ಬೆಳವಂದೂರು ಮಹದೇವರ ಠಾಂಣ್ಯ ವಳ ಠಾಂಣ್ಯಗಳು ದುರ್ಗದ ಹೋಬಳಿ

೩೯. ಹುಂಮುಸ ಆನಂದಪುರ ಹೊಸಗುಂದ ಕೊಡೂರು ಪಟ್ಟಗುಪ್ಪೆ ಕಾಳಿಕಾಪುರ । ರಾಮಚಂದ್ರಾಪುರ ಆಚರಾ

೪೦. ದಾಯ ಆ ಹಾಳಿಕದ ಕಟ್ಟೆ । ಬಿದರೂರ ವಳ ಕಟ್ಟೆ ಹಾಗಲಮಾನಿ ಹುಲಿಕಲ್ಲು। ಜಾಲಿ ಸಸಿ ಹೊಳಿ ಸಾವಂತನಕಟ್ಟೆ ।

೪೧. ಚೊರಡಿ ಮೊಸರುರು। ಕುಂಬುಸೆ । ಶಿವಮೊಗ್ಗೆ ಯಡತೊರೆ । ಬಿಂಕಿಪುರ ಹೊಲಿಕೆರೆ ಮಂದಗದ್ದೆ। ದಾನವಾಸ ಲಕ್ಕುವಳ್ಳಿ ಆಗು

೪೨. ಂಬೆ ಆಲುಮಾನಿ ಮತ್ತೂರು ಮುಳ್ಳೂರು ಮುಂಡೆಕಾರು ಕೊಪ್ಪ ಬೆಳ್ಪೆರೆ । ಬಗ್ಗುಂಜೀ । ಮೆಗುಂದ ಕಿಗ್ಗನೆಂಮಾರು । ಮೇಲು ಬಂ

೪೩. ಗಾಡಿ ಆಡುವಳ್ಳಿ ಬಾಳೆಹೊಂನ್ನುರು ಶೃಂಗೇರಿ ಮಾರ್ಗ ಕಳಸ ಖಾಂಡ್ಯ ಮುಂತಾದ ಠಾಂಣ್ಯಗಳು ವಳಠಾಂಣ್ಯಗಳು ವ

೪೪. ಸ್ತಾರೆ ಹೋಬಳಿ ಸುಂಕ । ಹೊಂನ್ನಾಳಿ । ಮಲ್ಲೂರು ಹೊಳೆಹೊಂನ್ನೂರು ಅಜ್ಜಂಪುರ ಸಂತೆಬೆಂನ್ನೂರು ಶಿವನೆ ಹೊಳಲು ಹೊದ್ದಿಗೆರೆ

೪೫. ನಂದಿಗಾವೆ ಮುಂತಾದ ಠಾಂಣ್ಯ ವಳ ಠಾಂಣ್ಯಗಳು । ಘಟ್ಟ ಕೆಳಗಣ ಸುಂಕ ಮಿರಜೆ ಸುಂಕ ಮುಂತಾಗಿ ಮುಂದೆ ಸಾಧಿಸುವ ರಾ

೪೬. ಜ್ಯದಲ್ಲಿಸಹ ಯೀ ಪ್ರಮಾಣು ಮೂಲವಿಸವಂನು ತೋಂಟ್ಟದ ಸಿದ್ಧೇಶ್ವರ ದೇವರ ಕಟ್ಟಲೆ ಕಂದಾಚಾರ ನಡಸುವ ಗಣಾರಾಧ

೪೭. ನೆ ಮುಂತಾದ ಬಗ್ಗೆನಮ್ಮ ಸಂತಾನ ಪಾರಂಪರ್ಯ್ಯವಾಗಿ ಆಚಂದ್ರಾರ್ಕಸ್ತಾಯವಾಗಿ ನಡೆಸಿ ಬಾಹೆವು ಯಂದು ಬ

೪೮. ರಸಿಕೊಟ್ಟ ಮೂಲಿವಿಸದ ಧರ್ಮಸಾಧನದ ಪಟ್ಟೆ ಯಿದಕೆ ಸಾಕ್ಷಿಗಳು ಸ್ವದತ್ತಾಂ ದ್ವಿಗುಣಂ ಪುಂಣ್ಯಾಂ ಪರದತಾನು ।

೪೯. ಪಾಲನಂ ಪರದತ್ತಾಪಹಾರೇಣ ಸ್ವದತ್ತಾಂ ನಿಷ್ಫಲಂ ಭವೇತ್ । ದಾನ ಪಾಲನಯೋರ್ಮಧ್ಯೇ । ದಾನಾಶ್ಪ್ರೇಯೋನುಪಾಲನಂ ದಾನಾತ್ಸ್ವರ್ಗ ಮವಾಪ್ನೋತಿ ಪಾಲನಾದಡ್ಯು ತ ಪದಕ*

❖❖

೧೮

ಕಾಲ : ಕ್ರಿ.ಶ. ೧೭೪೩ (ರುಧಿರೊದ್ಗಾರಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಭದ್ರರಾಜಪುರ ವಿರಕ್ತಮಠದ ತೋಂಟದ ಸಿದ್ಧೇಶ್ವರದೇವರ ಗಣಾರಾಧನೆಗೆ ಸೆಟ್ಟಿ ಸಮಸ್ತರು ನೀಡಿದ ದಾನದ ವಿವರ.

* * *

೧. ನಮುಸ್ತುಂಗ ಶಿರಶ್ಚುಂಬಿ ಚಂದ್ರ । ಚಾಮರ ಚಾರವೇ । ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭವೇ ಸ್ವಸ್ತಿ

೨. ಶ್ರೀ ಜಯಾಭ್ಯುದಯ । ಶಾಲಿವಾಹನ ಶಕವರುಷ ೧೬೬೬ನೆಯ ವರ್ತಮಾನಕ್ಕೆ ಸಲುವ ರುಧಿರೋದ್ಗಾರಿ ಸಂವತ್ಸರದ ಕಾ

೩. ರ್ತಿಕ ಶುದ್ಧ ೧೫ ಯಲ್ಲು ಶ್ರೀಮದ್ದೆಡವಮುರಾರಿ ಕೊಟ್ಟೆಕೋಲಾಹಲ । ವಿಶುದ್ಧ । ವಯ್ಯದಿಕಾದ್ವೈತ ಸಿದ್ಧಾಂತ । ಪ್ರತಿಷ್ಠಾಪಕ

೪. ಶಿವಗುರು ಭಕ್ತಿಪರಾಯಣರಾದ । ಶ್ರೀಮತ್ಕೆಳದಿ ಸದಾಶಿವರಾಯ ನಾಯಕರ ವಂಶೋದ್ಭವರಾದ । ಸೋಮಶೇಖ

೫. ರ ನಾಯಕರೈಯನವರ ಪೌತ್ರರರೂ ಬಸವಪ್ಪ ನಾಯಕರೈಯನವರ ಪೌತ್ರರೂ । ಸೋಮಶೇಖರ ನಾಯಕರೈಯ್ಯನವರ

೬. ಅನುಜರೂ । ವೀರಭದ್ರಪ್ಪ ನಾಯಕರೈಯನವರ । ಪುತ್ರರೂ । ಬಸವಪ್ಪನಾಯಕರೈಯ್ಯನವರು । ಸ್ಥಿರ ಸಾಂಮ್ರಾ

೭. ಜ್ಯ ಪಟ್ಟವನಾಳುವ ಕಾಲದಲ್ಲು । ಶ್ರೀಮದ್ಬನೇಕ । ಬ್ರಂಹ್ಮಾಂಡ ಖಾಂಡ । ಗರ್ಭಾಗರ್ಭಿಕೃತ ತ್ರಿವಿಧಿ ಮಧು । ಸೂ

೮. ಧನ । ತ್ರಿದಶಾಧೀಶರಾದ್ಬನೇಕ ದೇವತಾ ಮಣಿ ಮಕುಟ ಮಣಿಗಣೂ ಕಿರಣ । ದೀಪ್ತಾದೀಪ್ತಾ ಪಾದಪಯೋಜ ಪರಶಿವ

೯. ವಿಲಾಶ್ವೀಕೃತ । ಕಳೇವರುಮಪ್ಪ ಶ್ರೀಮತ್ಸಚಿತಾನಂದ । ನಿತ್ಯಪರಿಪೂರ್ಣ ಅವಿರಳ ಪರಂಜ್ಯೋತಿ ಶ್ವರೂಪರಾದ ।

೧೦. ಷಡುಸ್ಥಳಜ್ಞಾನ ಚಕ್ರವರ್ತಿಗಳಾದ । ವೀರಮಹೇಶ್ವರರಾದ । ತೋಂಟದ ಸಿಧೇಶ್ವರಸ್ವಾಮಿಗಳವರ । ಕೃಪಾಪ್ರಸನ್ನರಾದ ।

೧೧. ತೋಂಟದಾರ್ಯ ಸ್ವಾಮಿಯವರಿಗೆ । ಶ್ರೀಮತ್ಕೆಳದಿ ಮಲ್ಲಂಮ್ಮಾಜಿ ಅಂಮ್ಮನವರ । ಭಕ್ತಿಯಲು । ಬಸಪ್ಪನಾಯಕರ್‍ಯೆ

೧೨. ಯನವರು । ಕಟ್ಟಿಸಿದ । ಭದ್ರರಾಜಪುರದ । ವಿರಕ್ತಮಠದ ಪ್ರತಿಷ್ಟೆ ಮಾಡಿದ ತೋಂಟದ ಸಿದ್ಧೇಶ್ವರದೇವರ । ಕಟ್ಟಲೆ

೧೩. ಕಂದಾಚಾರ । ನಡಸುವ ಗಣಾರಾಧನೆ ಮುಂತಾದ ಬಗ್ಗೆ । ಶ್ರೀಮಜ್ಜಂಬೂದ್ವೀಪ । ಭರತಖಂಡ ಪೃಥ್ವಿ ಮೇಲಣ ಪೂ

೧೪. ರ್ವ ಪಶ್ಚಿಮ ದಕ್ಷಿಣೋತ್ತರ । ಚಪ್ಪನ್ನ ಐವತ್ತಾರು ದೇಶದಲ್ಲೂ । ಶ್ರೀಮತ್ಸಂಗನ ಬಸವೇಶ್ವರ ದೇವರ ಸಿದ್ಧಕಮಲ ಮಂ

೧೫. ಟಪದಲ್ಲು । ವ್ಯವಹರಿಸುವಂಥಾ ಶ್ರೀಮತ್ಸಜನಶುದ್ಧ । ಶಿವಾಚಾರ ಸಂಪಂನ್ನರಾದ । ಗುರುಲಿಂಗ ಜಂಗಮ ಪಾದೋದಕಾ

೧೬. ಮೃತ । ಸೇವಿತರಾದ । ತ್ರಿಕಾಲ ಅಭವಪೂಜಿತ ಪ್ರಣಮ ಪಂಚಾಕ್ಷರಿ । ಪಟಿತ ಪರಾಯಣರಾದ । ಭಸಿತ ರುದ್ರಾಕ್ಷ ।

೧೭. ಮಾಲಾ ಅಲಂಕೃತರಾದ । ನಯ ವಿನಯ ದಯ ದ್ರಾಕ್ಷಂಣ್ಯ ಪರಉಪಕಾರ ಪುಣ್ಯ ಶರೀರಗಳಾದ । ಶ್ರೀ ಸಂಗನ ಬ

೧೮. ಸವೇಶ್ವರ ದೇವರ ಸಂಪ್ರದಾಯಕರಾದಂಥ । ಸ್ಥಳ ಪರಸ್ಥಳ ಸಾಲಿ ಮೂಲೆ ಸೆಟ್ಟಿ ಸಮಸ್ತ ಮಹನಾಡಿನವರೂ ।

೧೯. ದೇಶಮುದ್ರೆಗಳೂ । ಸಹ । ತಮಗೆ ಸದ್ಧರ್ಮವಾಗಬೇಕೆಂದು । ಸ್ವಯಿಚ್ಚ್ಯಾವಡಂಬಟ್ಟು । ಬರಸಿಕೊಟ್ಟ ಮೂಲವಿಸ

೨೦ ದ । ಧರ್ಮಸಾಧನ । ಪತ್ರ್ಯಕ್ರಮವೆಂತೆಂದರೆ । ಬಸವಪ್ಪನಾಯಕರೈಯ್ಯನವರು । ಆಳುವ ಘಟ್ಟದ ಮೇಲಣ ರಾಜ್ಯ ।

೨೧. ಘಟ್ಟದ ಕೆಳಗಣ ರಾಜ್ಯ । ಮುಂದೆ ಸಾಧಿಸುವ ರಾಜ್ಯದ ವಳಗಾಗಿ । ಬಡಗಲಿ ಮಹಾನಾಡು । ಮೂಡಲಿ ಮಹಾನಾಡು

೨೨. ವಳನಾಡು ಸೆಟ್ಟಿಗಳು ತೆಲುಗ ಬಣಗರು ಕುರುಬರು ಉಪ್ಪಾರರು ಸ್ಥಳದ ಗವುಡಗಳೂ । ಗಟ್ಟದ ಕೆಳಗಣ ಸೆಟ್ಟಿಗಳೂ ।

೨೩. ಹಲ್ಲರೂ । ಹಂಜಿಮಾನರೂ । ಸಕಲ ಸ್ಥಳಮಾರ್ಗದಲು । ವ್ಯವಹಾರವ ಮಾಡುವ । ಸಮಸ್ತ । ಜಿನಿಸುಗಳ ಕೊಡುಕೊಟ್ಟ ವೀಸದ

೨೪. ವಿವರ। ಯಿಕ್ಕೇರಿ ಹೋಬಳಿ। ದುರ್ಗದ ಹೋಬಳಿಯಲು। ಸ್ಥಳಸ್ಥಳಗಳಲ್ಲು। ಹಾಳಿಕ ವಾಹ । ಅಡಿಕೆ ಮೆಣಸು । ಯಾಲಕ್ಕಿ ಮುಂ

೨೫. ತಾಗಿ। ನ೧ಕ್ಕೆ ಜಮುಸಿರಹ=ಗುತ್ತಿಬಾಡದ ಬಯಲು। ಬಿಳಿಗೆ ಸಿದ್ಧಾಪುರದ ಸ್ಥಳದ। ಅಡಿಕೆ ಮೆಣಸು। ಯಾಲಕ್ಕಿ ನ೧ಕ್ಕೆ ಜಿಮು

೨೬. ಸಿರಹಾ ಶೃಂಗೇರಿಮಾರ್ಗ। ಕಳಸ್ತಮಾರ್ಗ ಪಟ್ಟದ ಮಾರ್ಗದ ಅಡಿಕೆ, ಮೆಣಸು ಯಾಲಕ್ಕಿ । ನ೧ಕ್ಕೆ ಜಿಮುಸಿರಹಾ= ಚರದಾ

೨೭. ಯಕ್ಕೆ। ಕೊಬರಿ ಕವಾಡ ವಿದಳ ಬೂಸ। ಯಂಣೆ ತುಪ್ಪ। ಬೆಳೆ ಬೆಲ್ಲ। ಜವಳಿ ಕಬ್ಬುನ। ಕತ್ತ ಕಾಚು। ಅಕ್ಕಿ ಭತ್ತ। ರಾಗಿ। ಉಪ್ಪು ಹಳೆ

೨೮. ಹಂಜಿ। ನೂಲು। ಕಂಬಳಿ ಮುಂತಾದ। ನಾನಾ ಜಿನಿಸು। ವಿಳ್ಳೆದೆಲೆ ಸಹಾ। ನ೧ಕ್ಕೆ ಹಾ೦೨ ॥ ಕಾರಕ। ಅಕ್ಕಿ ಭತ್ತ। ಹಳಿಗಾರಕ

೨೯. ನ ೧ಕ್ಕೆ ವರುಷ ೧ಕ್ಕೆ ಹಾ೧ ಅಂಗಡಿ ೧ಕ್ಕೆ ವರುಷದ ೧ಕ್ಕೆ ಹ =ಹಲಕೆರಿ ವ೧ಕ್ಕೆ ವರುಷ ವ೧ಕ್ಕೆ ಹ ಮಗ್ಗಕಾರಕ ಪಟ್ಟೇಗಾರ

೩೦. ಜಾಡರ ಮಗ್ಗವ ೧ಕ್ಕೆ ವರುಷ ೧ಕ್ಕೆ ಹಾ=ಕಂಬಳಿ ಕುರುಬರೂ। ಮಗ್ಗವ। ೧ಕ್ಕೆ ವರುಷ ವ ೧ಕ್ಕೆ। ಹಾ ಕೊಳಲಿಕಲ್ಲು ನ ೧ಕ್ಕೆ

೩೧. ವರುಷ ವ ೧ಕ್ಕೆ ಹಾ॥ ಕೊಟ್ಟಣದವರಿಂದ ವರುಶ ನ ೧ಕ್ಕೆ ಹಾ ಹತ್ತಿಮಾರಿದವರಿಂದ। ವರಮಾನ ೧ಕ್ಕೆ ಹಾ=೨ಗಟ್ಟದ ಕೆ

೩೨. ಳಗಣ ಮಿರಜೆ ಸುಂಕದಲು। ಸಹ। ಠಾಂಣ್ಯಗಳಲ್ಲಿ। ಅರಮನೆಗೆ ತ್ತೆಗದುಕೊಂಬ। ಸುಂಕದ ಮೇಲೆ ಗ೧ಕ್ಕೆ ಹಾ। ೨

೩೩. ಘಟ್ಟದ ಮಾರ್ಗ ನ ೧ಕ್ಕೆ ಹಾ। ಆ ಮೊಟ್ಟೆಯಂಣೆದ ಮಿಡೆ। ಕಾಯಿ ಮುಂತಾಗಿ। ಹೊರೆ ವ ೧ಕ್ಕೆ ಹಾ೦೨ ॥ ಅಂತು ಘ

೩೪. ಟ್ಟದ ಕೆಳಗೆ। ಯೀ ರೀತಿಯಲು। ಯೆತ್ತುವ ಠಾಂಣ್ಯಗಳ। ವಿವರಾ। ಯಿಕ್ಕೇರಿ। ಯಲೆಗಳಲೆ । ಆತವಾಡಿ। ಕ

೩೫. ಲುಸೆ ಮಂಕಸಾಲೆ। ಸದಾಶಿವಸಾಗರ। ಆ ಚರದಾಯ। ಕರಊರು। ಆವಿನಹಳ್ಳಿ ಮಳಲಿ । ಬಾರಂಸಿ। ಕ

೩೬. ಡಕೋಡಿ । ಹಂನ್ನಾರ । ಗೇಣಸಿನಕುಣಿ ಸರವಂತ್ತೆ। ಕೆಳದಿ ಕೆಸನೂರು ಯಿಡುವಣಿ । ಕಾಳಗಲಿಪ್ಪಿ। ಗುತ್ತಿಬಾ

೩೭. ಡದ ಬಯಲು । ಬಿಳಿಗೆ। ಸಿದ್ಧಾಪುರ ಜಡೆಯ। ಕುಪ್ಪಟ್ಟೂರು। ಸೊರಬ। ಉಡಗಣೆ। ಬೆಟ್ಟೂರ ಬೆಳವಂ

೩೮. ದೂರು। ಮಹದೇವಪುರ ಠಾಂಣ್ಯ ವಳಠಾಂಣ್ಯಗಳೂ ದುರ್ಗದ ಹೋಬಳಿ। ಮಾಲಿಮ್ಮಾಸ। ಆನಂದಪುರ

೩೯. ಹೊಸಗುಂದ। ಕೊಡೂರು ಪಟ್ಟಿಗುಪ್ಪೆ। ಕಾಳಿಕಪುರ। ರಾಮಚಂದ್ರಪುರ। ಆ ಚಾರದಾಯ। ಆ ಹಾ

೪೦. ಳಿಕದ ಕಟ್ಟೆ । ಬಿದರೂರು ವಳಕಟ್ಟೆ । ಹಾಗಲ ಮನಿ ಹುಸಿಕಲ್ಲು। ಜಾಲಿ ಸಸಿಗೊಳಿ। ಸಾವಂತನ ಕಟ್ಟೆ ಚೊರ

೪೧. ವಾಡಿ ಮೊಸರೂರು। ಕುಂಬಸೆ। ಸೀಮೊಗೆ ಯಡತೊರೆ ಬಿಂಕ್ಕಿಪುರ। ಹೊಲಿಕೆರೆ ಮಂಡಗದೆ। ದಾನಿವಾಸ ಲಕ್ಕುವಳಿ।

೪೨. ಆಗುಂಬೆ ಆಲುಮಾನಿ ಮತ್ತೂರ ಮಾಳೂರು ಮುಂಡೆ ಕಾರುಕೊಪ್ಪ ಬೆಳ್ಳಾರೆ, ಬಗ್ಗುಂಜಿ। ಮೆಗುಂದ

೪೩. ಕಿಗ್ಗನೆಮ್ಮೂರು। ಮೇಕಲು ಬಿಂಗಾಡಿ। ಆಡುವಳಿ। ಬಾಳೆಹೊಂನ್ನೂರು ಶೃಂಗೇರಿ ಮಾರ್ಗ ಕಳಸ ಖಾಂಡ್ಯ । ಮುಂತಾದ

೪೪. ಠಾಂಣ್ಯಗಳು। ವಳ ಠಾಣ್ಯಗಳೂ। ವಸ್ತಾರೆ ಹೋಬಳಿ। ಸುಂಕ। ಹೊಂನ್ನಾಳಿ। ಮಲ್ಲೂರು। ಹೊಳೆಹೊಂನ್ನೂರು। ಅಜ್ಜಂ

೪೫. ಪುರ । ಸಂತೆಬೆನ್ನೂರು ಶಿವನೆ ಹೊಳಲು ಮೊಢಿಗೆರೆ । ನಂದಿಗಾವಿ ಮುಂತಾದ । ಠಾಂಣ್ಯ ವಳಠಾಂಣ್ಯಗಳೂ । ಘಟ್ಟದ

೪೬. ಕೆಳಗಣ ಸುಂಕ ಮಿರಜೆ ಸುಂಕ ಮುಂತಾಗಿ। ಮುಂದೆ ಸಾಧಿಸುವ ರಾಜ್ಯದಲ್ಲಿ ಸಹ। ಯೀ ಪ್ರಮಾಣು। ಮೂಲಿ

೪೭. ವೀಸವನ್ನು ತೋಟದ ಸಿದ್ಧೇಶ್ವರ ದೇವರ । ಕಟ್ಟಳೆ ಕಂದಾಚಾರ ನಡಸುವ ಗಣಾರಾಧನೆ ಮುಂತಾದ ಬಗ್ಗೆ। ನಮ್ಮ ಸಂ

೪೮. ತಾನ ಪರಂಪರವಾಗಿ । ಅಚಂದ್ರಾರ್ಕಸ್ಥಾಯಿಗವಾಗಿ ನಡಸಿ ಬಾಹೆಉ । ಯೆಂದು ಬರಸಿಕೊಟ್ಟ ಮೂಲವಿಸದ।

೪೯. ಧರ್ಮ ಸಾಧನದ ಪಟ್ಟೆ। ಯಿದಕ್ಕೆ ಸಾಕ್ಷಿಗಳೂ। ದೇವಸಾಕ್ಷಿಗಳೂ। ಸ್ವದತ್ತಾದ್ವಿಗುಣಂ ಪುಣ್ಯಂ। ಪರದತ್ತಾನೂ। (ಪಾಲನಂ ದತ್ತಾಪಹಾರೇಣ ಸ್ವದತ್ತಾಂ ನಿಷ್ಫಲಂ ಭವೇತ್)

❖❖

ಕಾಲ : ಕ್ರಿ.ಶ. ೧೭೪೬? ೧೮೨೪? (ಕ್ರೋಧನ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಭದ್ರರಾಜಪುರ ವಿರಕ್ತಮಠದ ತೋಂಟದ ಸಿದ್ಧೇಶ್ವರದೇವರ ಭಂಡಾರಕ್ಕೆ ದಾನಿವಾಸದ ಬಾರಾಮಾರ್ಗದ ದೇಶ ದೇಶಮುದ್ರೆಯವರು ದಾನ ನೀಡಿದ ವಿವರ.

* * *

೧. ೦॥ ಕ್ರೋಧನ ಸಂವತ್ಸರದ । ಜ್ಯೆಷ್ಟ ಶು ೩ಯೂ ಸೊಮ್ಯವಾರದಲ್ಲು ಶ್ರೀಮತ್ಕೆಳದಿ ಮಲ್ಲಂಮಾಜಿ ಅಂಮ್ಮ।

೨. ನವರು ಭಕ್ತಿಭದ್ರರಾಜಪುರದ ವಿರಕ್ತಮಠದ। ಪ್ರತಿಷ್ಟೆಮಾಡಿದ ತೋಟಸಿದ್ಧೇಶ್ವರದೇವರ ಭಂಡಾರಕ್ಕೆ

೩. ದಾನಿವಾಸದ ಬಾರಾಮಾರ್ಗದ ದೇಶ ದೇಶಮುದ್ರೆಗಳೂ ಮಾಡಿಕೊಟ್ಟ ಮೂಲಿವಿಸದ ಕ್ರಮವೆಂ

೪. ತ್ತೆಂದರೆ। ನಾಲು ಸ್ಥಳ ಸ್ಥಳಗಳಲ್ಲು ತುಂಬಿದ ಅಡಿಕೆ ಮೆಣಸು ಯಾಲಕ್ಕಿ ಮುಂತಾಗಿ ನಡೋ ೧ವ

೫. ವಂದಕ್ಕೆ ಜಿಮುಸಿರಹ=ಬೆಳೆಯಲ್ಲಿ ಕೊಟ್ಟೂಬಾಹೆವೆಂದು ಬರಸಿ ಕೊಟ್ಟ ದಾನ ಪಟ್ಟಿಗೆ। ವಪ್ಪಿತವ ಹಾಕ್ಕಿದವರು।

೬. ಕೊಟ್ಟೂರಸೆಟ್ಟಿ ಮಲ್ಲಸೆಟ್ಟರು। ಚರಲಿಂಗಪ್ಪನ ಬಿಂನಹ। ಕಣುವೆ ಹಲಗಪ್ಪ ಯಳಮಲೆ ರಾಚಪ್ಪ। ಬಳಗಾನೂ

೭. ರು ಚಂನವಿರಶೆಟ್ಟಿ। ಆಳಂಗಿ ಮುರುಗ್ಯೆಯಾ। ಹರುಪನಹಳ್ಳಿ। ರಾಣಿ ಬೆಂನೂರ ಗುರುಪಾದ । ರುದ್ರಯ್ಯ।

೮. ಹುರಿಕಡಲೆ ಗುರುಸಿದ್ಧಯ। ಕುರುವತ್ತಿ ಗೊಲರಹಳ್ಳಿ। ಚೆಂನವಿರಪ್ಪ। ಗಾಣಿಗ। ಚಿಕ್ಕಪ್ಪ। ಸೆಡಬಾಳ ಬಸವ।

೯. ಲಿಂಗಪ್ಪ। ಮಲೆಯಪ್ಪನ। ಗುರುವಪ್ಪ ಪಟ್ಟಣಶೆಟ್ಟಿ। ಮುರಿಗಪ್ಪ। ಹಾಂಬರಿ ಹೆರೂರ। ಶಿವಲಿಂಗಪ್ಪ।

೧೦. ರಾಣಿಬೆಂನೂರ। ಕರಿಂಪುರದ ಪೆಠೆ। ರಿತ್ತೀ ವಿರಪ್ಪ। ಆ ಕೊಟವೀರಪ್ಪ। ಆ ರಾಚಪ್ಪ। ಜೆಂಬಿಗೆಲೆ ಲೆಖಧ

೧೧. ಯ। ಆರ ಸಂಗಬಸಪ್ಪ। ಆ ಗುರುಪಾದಯ್ಯ। ಅದಟಿ ಕರಿಬಸಪ್ಪ। ಆ ಬರಮಸೆಟ್ಟಿ

೧೨. । ಬಸವಪ್ಪ। ಬಸವಾ ಪಟ್ಟಣದ। ಸಾಗರ ಪೆಠೆ। ರ ಬಿಳಿಗೆ ಸಿದ್ಧಲಿಂಗ। ಮುಂತಾದವರು। ಜಿರಿಗೆ ಬಸ।

೧೩. ವಪ್ಪ । ಸಖರೆ ಬಸವಪ್ಪ । ಮದಗ ಮಾಸೂರ ಪೆಠೆ ಮೊಗಲಿ ಸಂಣಪಾದ್ಯೆಯ । ರಾಮಣ್ಣನ ಕೊಟ್ಟೂರಯ್ಯ ।

೧೪. ಹಂಜಿ ರೇವಣ್ಣ । ಯೊಸೂರ । ಗುರುವಪ್ಪ ಶಿಲಿವಂತ ಚನವಿರಪ್ಪ । ಗುಡೆ ಕೊಟ್ಟಿ ಬಿಳೆ ಬಸವಪ್ಪ । ಕುಂ

೧೫. ಬಳದ ದೈವದವರು । ಕಡ್ರಬೂರ ಪರುವಂಣ್ಣ । ಕಪಟರಾಳ ಕೊಳೂರ । ಸಿದ್ಧಬಸವಪ್ಪ । ದೇವದ ಕೊಂಡ್ಯೆ ।

೧೬. ತ್ರಿಗ ಲಕ್ಕಪ್ಪ । ಬಿನಗಾದ ಹಳ್ಳಿ ಲದುಗುಂದಲಿ ಚಂನಪ್ಪಶೆಟ್ಟಿ । ಪಾಣೆ ಅಲ್ಲಮ ರಾಚಯ್ಯ । ಜಾಯಾದ ರಾ

೧೭. ಗಂಣ । ಬಿರಮಶೆಟ್ಟಿ ಬಸವಂಣ್ಣ । ರೇವಣಸೆಟ್ಟಿದೆವಪೂರ ದಾನಿಸೆಟ್ಟಿ ತಿಂಮ್ಮ ನಾಯಕದ ಪೆಠೆ ಹಸುಬೆ ಬಾ

೧೮. ಲ ನಾಗಪ್ಪ ಆಲ್ಗಿಂದಿ ಸೆಟ್ಟಿ ಮೇಕೆ ದಾನಪ್ಪ । ಪೆರುವೆ ನರಸಂಣ್ಣ । ಗೌರಶೆಟ್ಟಿ ಮಲ್ಲಪ್ಪ ಲಕ್ಕರಥಿ ಮಲ್ಲ ।

೧೯. ಪ್ಪ । ಆ ಸಿದ್ಧಪ್ಪ । ಸೆಡುದುರ್ಗದ ಬದಲಿಸೆಟ್ಟಿ ಚಂನಪ್ಪ । ಕರ್ಪುರ ಸಿದಂಣ । ಕಂಚಸೆಟ್ಟಿ ಮಲ್ಲಂಣ । ಕರ್ಪು

೨೦. ರದ ಹೊನ್ನಿಸೆಟ್ಟಿ । ಕೆಮುಸೆಟ್ಟಿ ಅಂಣುಪೊರಿ । ಕೂಡ್ರೂಮುರಿ ।ರಿ ಪವಾಡ ಸೆಟ್ಟಿ ಕೊರಳೂರ । ಶರಣಯ । ಕತ್ತಿ ಅ ।

೨೧. ಯಂಣ । ಸದಾಶಿವ ಸಾಗರದ ಪೇಠೆ । ಬಡದಾಳ ರುದ್ರಪ್ಪ । ಹುಂಡೆಕಾರ ಚಂನಪ್ಪ । ನ ಮಗ ರಾಮ

೨೨. ಹೊಂನಾಳಿ ಪೆರ್ಮೆಯಾರಾನಿರಿ ಪರುವಪ್ಪನ ಮಗ ದಾನಪ್ಪ ವಸ್ತ್ರದ ಪವಾಡಪ್ಪ । ಸಾರಾದೂರರದ ರುದ್ರಪ್ಪ ।

೨೩. ಚಂನರಾಯ ಪಟ್ಟಣದ ಪೇಠೆ ದೈವರಾ×××××× । ನರಸಂಣ ×××××

೨೪. ಳೆವಿರಂಣ××× ಚಿಂನಂಣ । ಸಿದ್ಧಂಸೆಟ್ಟಿದರ ಸಿಂಹಮಾ । ಶಿವಭಕ್ತ ಕೊಟ್ಟೂರ‍್ಯೆಯ । ಮಳೆ ಮುದ ।

೨೫. ಂಣ್ಣ । ಗೂಳೂರ ಮರಿಸಿಧಂಣ । ಪುಟಪಲ್ಗಿ ಬಿಲ್ಲೆ ಬಸೆಟ್ಟಿ ಪಟ್ಟಣಶೆಟ್ಟಿ ರಾಚಂಣ್ಣ ಮುಂತಾದವರು । ಬಿ

೨೬. ಧಾರೆ ಸಂಗಪ್ಪ । ಮರಿಯಂಣ । ಚಿಗಚಿಂನಪ್ಪ ಬೋಗಿ ಚಂದಪ್ಪ । ಕೆಣಿದ ಮುಳಯ್ಯ । ಚಿತ್ರಿಕೆ । ಅ

೨೭. ಯ್ಯಪ್ಪ । ಮುಂತಾದವರು ಧರ್ಮಾವರದ ಶಿಲವಂತ ಚಂನಬಸವಪ್ಪ । ವಿರುಪಾಪುರದ ದಾನಪ್ಪ । ಶಿ ।

೨೮. ಬಿಗೆ ದಾನಂಣ । ಹುಲ್ಗೆಬಿಡ ಅಜಗಂಣ । ಧರ್ಮಾವರದ ಗಿರಿಮಲ್ಲಪ್ಪ । ಆ ಜೊಟ್ಟೂರ ದಾನಪ್ಪ । ವಿರುಪಾಪುರ ।

೨೯. ದ ಚಿಗಮಲ್ಲಪ್ಪ । ಕರಜಿಗೆ ರಾಮಂಣ । ಧರ್ಮಾವರದ ಪಟ್ಟಣಶೆಟ್ಟಿ । ಲಕ್ಕಂಣನ

೩೦. ಮಗ ಮಂಗಲದ ಜಿರಿಗೆ ತಿಪ್ಪಣ । ಅಡುದುರ್ಗದ ಬಳ್ಳೊಳ್ಳಿ ಗದ್ದೆ । ಚಿಕ್ಕಕರಿ ಬಸವಪ್ಪ । ಮರಾಳು

೩೧. ಪೇಠೆ । ಚಳಕೆರಿ ತಿಪ್ಪಣ । ಉರುವಕೊಂಡೆ । ಕಂಬಾಳ ಬಸವಪ್ಪ । ನಂದಿಕೊಲ ಅಚರಾಮಪ್ಪ । ಕೊಟ್ಟೂರ

೩೨. ವಿರಪ್ಪ ಗಡಾದ ಗುರುಶಾಂತಯ್ಯ । ಸಂಖಣನ ವಿರುಪಾಕ್ಷಯ । ಬದಲಿಹಾಳ ರಾಜಪ್ಪ । ಗಂಧ

೩೩. ವಿರದಪ್ಪ । ಬಳಾರಿ ಧರೆಪ್ಪ । ಕೂಡಲಿಗೆ ಕಟ್ಟೆ । ಅಲ್ಲಪ್ಪಯ್ಯ । ಪಲುಕೂರು ಅಲ್ಲಮ್ಮಯ್ಯ । [ಅಪೂರ್ಣವಿದೆ]

❖❖

೨೦

ಕಾಲ : ಕ್ರಿ.ಶ. ೧೭೪೮? ೧೮೨೭? (ಪ್ರಭವ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಭದ್ರರಾಜಪುರದ ವಿರಕ್ತಮಠ ತೋಂಟದ ಸಿದ್ಧೇಶ್ವರದೇವರ ಭಂಡಾರಕ್ಕೆ ಸೇನಬೋವರು ದಾನ ನೀಡಿದ ವಿವರ.

* * *

೧. ಪ್ರಭವಸಂವತ್ಸರದ ಅಧಿಕ ಚಯಿತ್ರ ಬ೧೦ಲ್ಲು ಶ್ರೀಮತ್ಕೆಳದಿ ಮಲ್ಲಂಮಾಜಿ ಅಂಮ್ಮನವರ ಭಕ್ತಿ

೨. ಭದ್ರರಾಜಪುರದ ವಿರಕ್ತಮಠದ ತೋಂಟದ ಸಿಧೇಶ್ವರದೇವರ ಭಂಡಾರಕ್ಕೆ ಘಟ್ಟ ಕೆಳಗಣ ಹೋಬಳಿ ಸುಂಕದ ಠಾಂಣ್ಯ ।

೩. ಗಳ ಸ್ಥಳದ ಸೇನಭೂವರು ಉಭಯದ ಸೆನಭೂವರು ವಂದು ಪತ್ತಿ ಸೇನ ಭೊವರು ಶ್ಯಾಬಂಧ್ರಿ ಸೇನಭೊವರು ಸಹ । ಬರಸಿಕೊ

೪. ಟ್ಟ ಕೊಡವಿಸ ಗುತ್ತಿಗೆ ಬಿಂನ್ನಹ ವತ್ತಳೆ ಕ್ರಮವೆಂತೆಂದರೆ । ಸ್ಥಳಪರಸ್ಥಳದ ದಿಶಾಭಾಗದ ಮಹಾನಾಡವರು ಮುಂತಾಗಿ ತಾ

೫. ವು ಕರೆ ಕೊರೆಮಾರ್ಗಕ್ಕೆ ವ್ಯವಹರಿಸುವ ವ್ಯವಹಾರದ ಮೇಲೆ ಮೂಲವಿಕೊಟ್ಟ ಯಿೊ ರೀತಿ ಬರಸಿಕೊಟ್ಟ ಪ್ರಕಾ

೬. ರ। ಕೊಡ ವಿಸವಂನ್ನು ಪಾಕ್ಯವಿತ್ತಿ ಬಾಹ ಸುಂಕ ಕೂಡ ವಿಸದ ಸಂಗಡಲೆ ಯಿೂ ಕೊಡ ವಿಸಲು ವಿತ್ತಿಸಿಕೊಡುವ ಬಗ್ಗೆ।

೭. ವಿವರ। ಕರೆಮಾರ್ಗಕ್ಕೆ ಬಿಟ್ಟ ಸಹೊಹನಡೆ ೧ಕ್ಕೆ ಹಾಲ್ಸಿ ॥೦ಲು॥ ಹೊಸಂಗಡಿಯಿಂದ ಗ೨೦ ಸವಡದಿಂದ ಗ೧೦ ಗುಳುವಾಡಿ।

೮. ಯಿಂದ ಸಾಲಿನಲು ಹೊಹಸರಕ್ಕಿಗೆ ಸಹ ಗ೨ ಕಲಿಊರಿಂದ। ಸಾಲಿನಲು ಹೊಹ ಸರಕ್ಕಿಗೆ ಸಹ । ಗ೩ ಹೆಮಾಡಿಯಿಂದ ಸಾಲಿ

೯. ನಲ್ಲು ಹೋಹ ಸರಕ್ಕಿಗೆ ಸಹ। ಗ೫ ಬಿಸುರೂರಿಂದ ಕುಂದಾಪುರ ಸಹ ಗ ೨೦ ಬಾರಕೂರಿಂದ । ಗ೨೦ ಕಲ್ಯಾಣಪುರದಿಂದ ಗ೩೦ ಕವಾಡಿ

೧೦. ಯಿಂದ । ಗ೮ ಕಾಟ್ಟೆಯಿಂದ ಗ೫೦ರಮಾಳ ಪಡೂಬಿದಿರೆ ಹೆಜೆಮಾಡಿಯಿಂದ । ಗ೨೫ ಕಾರಕಳದಿಂದ । ನ೧ಕ್ಕೆ ಹಲ್ಸಿ ॥೦

೧೧. ಲು॥ ಬಾಹ ಬಗ್ಗೆ ೮ ಸೋಮೇಶ್ವರದಿಂದ ನ ೧ಕ್ಕೆ ಹಲ್ಸಿ ॥೦ಲು ಬಾಹ ಬಿಗ್ಯೆಗ ೩ ಬಯಿಂದೂರಿಂದ ನ೧ಕ್ಕೆ ಹಲ್ಸಿ ॥೦ಲು॥

೧೨. ಬಾಹ ಬಿಗ್ಯೆಯು ಕೋರೆ ಮಾರ್ಗಕ್ಕೆ ಸಾಗುವ ಜಿನಿಸಿಗೆ ಸಹ। ಗ೩ ಯಿದೇ ಪ್ರಕಾರ ನಾಯಕನ ಕಟ್ಟೆಯಿಂದ ಗ೨ ಕೊಲ್ಲೂರು ಮು

೧೩. ದೂರಿಂದ ನ೧ಕ್ಕೆ ಹಲ್ಸಿ ॥೦ಲು ಬಾಹಬಿಗ್ಯೆ ಗ೨ ಕೊಡೆಯಾಲದಿಂದ । ಗ ೧೧೦೦ ಉಳ್ಳಾಲದಿಂದ ಗ೨೫ ಮಂಜೇಶ್ವರ।

೧೪. ದಿಂದ ಗ೨೫ ಕುಂಬಳೆಯಿಂದ ಗ೧೦ ಮೂಲ್ಕಿಯಿಂದ ಗ೨೫ ಅಂತೂ । ಗ೨೬೦ ಮುನ್ನೂರು ಅರವತ್ತು ವರಹೊನ್ನು

೧೫. ಕಾಲಕಾಲಾಂ ಪ್ರತಿಯಲ್ಲು ಲೇಖ್ಖಕ್ಕೆ ಕೂಡಿಸಿ ಯಿತ್ತಿಸಿ। ದಲ್ಲಿರೆಂನ್ನದೆ। ವಂದು ವರುಷಕ್ಕೆ ನಷ್ಟ ಬಿದ್ದರು ವಂದು ವರುಷಕ್ಕೆ ಕ

೧೬. ಷ್ಟವಾದರೆ ನಷ್ಟ ಕಷ್ಟ ಸಮಾನ ಮಾಡಿಕೊಂಡ ಊಯಿಲು ಬರದೆಲು।

೧೭. ಗುಳುವಾಡಿಸ್ಥಳದ। ತಿಂಮ್ಮಾಜಿ ಬಿನ್ನಹ। ಉಭಯದ ನೀಲಕಂಠ ಬಿನ್ನಹ। ಮಾಸುರೂರು ಸ್ಥಳದವ ರಾಮಯನ ಬಿನ್ನಹಾ। ಉಭಯದ ವಿಶ್ವೇಶ್ವರನ ಬಿನ್ನಹ। ವಂಪಕ್ರಾತಿವಳ

೧೮. ಹೆಮ್ಮಾಡಿ ಸ್ಥಳದ ವಿಟ್ಟಪ್ಪನ ಬಿನ್ನಹ । ಬಂಯಿದೂರ ಬಾನಪ್ಪನ ಬಿನ್ನಹ । ಉಭಯದ ಮಂಗಲಿ ಬಿನ್ನಹ।

೧೯. ವಂದುಪ್ಪತ್ತಿ ಸಾಂತಾಯ್ಯನ ಬಿನ್ನಹ। ನಾಯಕನ ಕಟ್ಟೆತ್ತಿಂಮ್ಮಪ್ಪನ ಬಿನ್ನಹ। ವೆಂಕಣ್ಣನ ಬಿನ್ನಹ।

೨೦. ವಂದುಪ್ಪತ್ತಿ ಸಾಂತಾಯ್ಯನ ಬಿನ್ನಹ। ಸಂತಾಯ್ಯನ ಬಿನ್ನಹ। ಕಲೂರ ಸ್ಥಳದ ಪರಮಯ್ಯನ ಬಿನ್ನಹ। ಉಭಯದ ನಿಲಕಂಠನ ಬಿನ್ನಹ।

೨೧. ಬಾರಕೂರ ಸ್ಥಳದ ಸುಬ್ಬಣ್ಣ ಉಭಯದ ಸಾಂತಯನ ಬಿನ್ನಹ । ಕಲ್ಯಾಣ ಪರಸ್ಥಳದ ತಿಂಮ್ಮಣ್ಣನ ಬರ

೨೨. ಹ । ಉಭಯದ ದೇವಯ್ಯನ ಬರಹ । ಕೌಪನ ಸ್ಥಳದ ಪರಮಯ್ಯನ ಬಿನ್ನಹ । ಉಭಯದ ಸೆನಯ್ಯ

೨೩. ಬರಹಾ । ಶಾಬಂದ್ರಿ ಗಂಗಣ್ಣನ ಬಿನ್ನಹ । ಮೂಲಿಕೆ ಸ್ಥಳದ ನಾರಾಯಣನ ಬಿನ್ನಹ । ಕೊಡೆಯಾಲದ ಸ್ಥಳದ

೨೪. ತಿಂಮ್ಮಪ್ಪ ಕರನಿಕನ ಬಗ್ಗೆ ಮಂಗಜಿ ಬಿನ್ನಹ । ಉಭಯದ । ತಿಂಮ್ಮಯ್ಯ ಬಿನ್ನಹ । ವಂದು ಪತ್ತಿ

೨೫. ವಿನಾಯಕನ ತಿಮ್ಮಂಜೇಶ್ವರ । ಸ್ಥಳದ ಲಕ್ಷ್ಮಮ್ಮಯ್ಯನ ಬಿನ್ನಹ । ಉಭಯದ ಲಿಂಗಯ್ಯನ ಬಿನ್ನಹ ।

೨೬. ಶಾಬಂದ್ರಿ ಮಂಗಜಿ ಬಿನ್ನಹ । ಕುಂಬಳೆಸ್ಥಳದ ನರಸಯ್ಯನ ಬಿನ್ನಹ ।

೨೭. ವಂದಪ್ಪತ್ತಿ ಬಸಯ್ಯನ ಬಿನ್ನಹ । ಉಳ್ಳಾಲ ಸುಂಕುದ ×××× ಸ್ಥಳದ । ಬಿನ್ನಹ । ಉಭಯ ವೆಂಕಟೇಶ್ವರನ ಬಿನ್ನಹ .....

❖❖

೨೧

ಕಾಲ : ಕ್ರಿ.ಶ. ೧೭೫೦? ೧೮೨೮? (ಶುಕ್ಲ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಭದ್ರರಾಜಪುರದ ತೋಂಟದಾರ್ಯಮಠದ ರಾಚವಟ್ಟಿಸ್ವಾಮಿಯವರ ಭಂಡಾರಕ್ಕೆ ಗುತ್ತಿಗೆ ಹಣ ನೀಡಿದ ವಿವರ.

* * *

೧. ॥ ಶುಕ್ಲ ಸಂವತ್ಸರದ । ವಯಿಶಾಖ ಶು ೭ಲ್ಲು । ಶ್ರೀಮತ್ಕೆಳದಿ ।

೨. ಮಲ್ಲಂಮ್ಮಾಜಿ ಅಂಮ್ಮನವರ ಭಕ್ತಿ । ಭದ್ರರಾಜಪುರದ ವಿರಕ್ತ ।

೩. ಮಠದ । ರಾಚವಟ್ಟಿಸ್ವಾಮಿಯವರ ಭಂಡಾರಕ್ಕೆ । ಮೆಗುಂದದ ।

೪. ಸುಂಕದ ಸ್ತಳದ ಸೆನಭೊವ ಪೆದ್ದ ಸಿದ್ಲಿಂಗಣನು ಬರಕೊಟ್ಟಕೊ

೫. ಡವಿಸ ಗುತ್ತಿಗೆ ಬಿಂನ್ನವತ್ತಳೆ ಕ್ರಮವೆಂತ್ತೆಂದರೆ । ದೇವರ ಮಠಕ್ಕೆ ।

೬. ಮಹಾನಾಡವರೂ ಮಾಡಿಕೊಟ್ಟ ಕೊಡವಿಸದಲ್ಲು ನಾನು ಗುತ್ತಿ

೭. ಗ್ಗೆ ಮಾಡಿಕೊಂಡದು । ಮಗುಂದದ ಸುಂಕದಲ್ಲು ಯತ್ತುವ ಕೊಡ

೮. ವಿಸದ ಬಗ್ಗೆ । ಕಾಲಿ ೧ರ ಗ೧೩ ಬಾಳೆಹೊಂನ್ನೂರು ಸುಂಕಕ್ಕೆ ಕಳಸ್ತ ।

೯. ಮಾರ್ಗದಲ್ಲಿ ಯತ್ತುವ ಕೊಡವಿಸದ ಬಗ್ಗೆ। ಗ೬ ಉಬಯಂ।

೧೦. ಕಾಲಿ ೧ರ ಗರ್ಗ ಹತ್ತಂಬತ್ತು ವರಹಾದಲ್ಲೂ। ಯಿೂ ಸಂನದ।

೧೧. ಆಷಾಡ ಶು ॥ ೧ ಹುಟ್ಟಿದ ಹುಟ್ಟಾವಳಿ ಹಣವಂನ್ನು ಯತ್ತಿ ಕೊಂ

೧೨. ಡು ಬರವ ಪ್ರಕಾರ ಗುತ್ತಿಗೆ ಹಣವಂನ್ನು ಕಾಲಿ ಪ್ರತ್ತಿಯಲ್ಲೂ।

೧೩. ನಷ್ಟವೆಂನದೆ ತಂದು ಕೊಡುವೆನು ಯಂದು ಬರಕೊಟ್ಟಕೊ

೧೪. ಡ ವಿಸ ಗುತ್ತಿಗೆ ಬಿಂನಹವತ್ತಳೆ ನಿಂಗಂಣನ ಬಿಂನಹ।

❖❖

೨೨

ಕಾಲ : ಕ್ರಿ.ಶ. ೧೮೧೨ (ಪ್ರಜೋತ್ಪತ್ತಿಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಭದ್ರರಾಜಪುರ ವಿರಕ್ತಮಠದ ರಾಚವಟ್ಟಿಸ್ವಾಮಿಯವರ ಭಂಡಾರಕ್ಕೆ ಮಹಾನಾಡವರು ನೀಡಿದ ದಾನದ ವಿವರ.

* * *

೧. ಪ್ರಜೋತ್ಪತ್ತಿಸಂ॥ ದ। ಮಾರ್ಗಶಿರ ಶು ೫ಲ್ಲೂ ಶ್ರೀಮತ್ಕೆಳದಿ ಮಲ್ಲಂಮಾಜಿ ಅಂಮ್ಮನವರ ಭಕ್ತಿ

೨. ಭದ್ರರಾಜಪುರದ ವಿರಕ್ತಮಠದ ರಾಚವಟ್ಟಿಸ್ವಾಮಿಯವರ ಬಂಡಾರಕ್ಕೆ ಮಹದೇವಪುರದ ಸುಂ

೩. ಕದ ಮಣೆಹ್ಯಗಾರ ವೆಂಕಣ ಸೇನಭೋವ ತ್ತಿಂಮಂಣ ಬೀಮಂಣ್ಣ ರಾಮಂಣ ಸಹಾ ಬರಸಿ ಕೊ

೪. ಟ್ಟ ಕೊಡವೀಸದ ಗುತ್ತಿಗೆ ಬಿಂನವತ್ತಳೆ ಕ್ರಮವೆಂತೆಂದರೆ: ಮಹಾನಾಡವರು ನಿಂಮ ಮಠಕ್ಕೆ ಮಾಡಿಕೊಟ್ಟ

೫. ಕೊಡವೀಸದ ಪ್ರಮಾಣು । ಮಹದೆವ ಬರದು ಸುಂಕದಲು ಮತ್ತೂರಕೊದರಿ ಸ್ತಿಬ ××××××

೬. ಗುತ್ತಿಗೆ । ವಳಿತು । ಗ೧೫ ಹದಿನೈದು ವರಹಾ ಹೊಂನ್ನು ಕಾಲಂ ಪ್ರತಿಯಲ್ಲು ಕೊಟ್ಟೆಉ ಯಂದು ಬರಶಿ

೭. ಕೊಟ್ಟ ಬಿಂನವತ್ತಳೆ। ವೆಂಕಂಣನ ಬಿಂನಹ – ಬಿಮಂಣನ ಬಿಂನಹ।

❖❖

ಕಾಲ : ಕ್ರಿ.ಶ. ೧೭೫೨? ೧೮೩೦? (ಪ್ರಜೋತ್ಪತ್ತಿಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಭದ್ರರಾಜಪುರ ವಿರಕ್ತಮಠದ ರಾಚವಟ್ಟಿಸ್ವಾಮಿಯವರ ಭಂಡಾರಕ್ಕೆ ಬರೆದುಕೊಟ್ಟ ಗುತ್ತಿಗೆ ಬಿನ್ನವತ್ತಳೆ.

* * *

೧. ಪಜೋತ್ಪತ್ಯ ಸಂ॥ರದ ಮಾರ್ಗಶಿರ ಶು ೫ಯಲ್ಲು [ಶ್ರೀ]ಮತ್ಕೆಳದಿ ಮಲಂಮಾಜಿ ಅಂಮನವರ ಭಕ್ತಿ

೨. ಭದ್ರರಾಜಪುರದ ವಿರಕ್ತಮಠದ । ರಾಚವಟ್ಟಿಸ್ವಾಮಿಯವರ ಭಂಡಾರಕ್ಕೆ। ಬೆಳವಂದೂರ ಸುಂ

೩. ಕದ ಮಣೆಹ್ಯಗಾರ ವೆಂಕಂಣ್ಣ ಸೆನಭೋವ ಬಸವಂಣ್ಣಾ । ಭೀಮಂಣ್ಣ ಸುಬಂಣ್ಣ ಸಹಾ ಬರಸಿಕೊಟ್ಟ ।

೪. ಕೊಡವೀಸ ಗುತ್ತಿಗೆ ಬಿಂನವತ್ತಳೆ ಕ್ರಮವೆಂತೆಂದರೆ । ಮಹಾನಾಡವರು। ನಿಂಮ ಮಠಕ್ಕೆ ಮಾಡಿ

೫. ಕೊಟ್ಟ ಕೊಡವೀಸ ಪಟ್ಟಿ ಪ್ರಮಾಣು । ಬಳವಂದೂರ ಸುಂಕದಲು ಯೆತ್ತುವ ಕೊಡವೀಸ ಬಗ್ಗೆ। ಕಾಲಿ ।೧

೬. ಕಾಲಿ ವಂದಕ್ಕೆ । ಗುತ್ತಿಗೆ । ವಟ್ಟಿತ್ತು। ಗ೧ ವಂದು ವರ ಹೊಂನ್ನು। ಕಾಲಂಪ್ರತಿಯಲ್ಲು ಕೊಟ್ಟೆಉ ಯಂದು ।

೭. ಬರಸಿಕೊಟ್ಟ ಬಿಂನವತ್ತಳೆ । ವೆಂಕಂಣನ ಬಿಂನಹ । ಬಸವಂಣನ ಬಿಂನಹ। ಸುಬಂಣಾನ ಬಿಂನಹ।

❖❖

೨೪

ಕಾಲ : ಕ್ರಿ.ಶ. ೧೭೫೫? ೧೮೩೩? (ಭಾವ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಭದ್ರರಾಜಪುರ ವಿರಕ್ತಮಠದ ತೋಂಟದ ರಾಚವಟ್ಟಿಸ್ವಾಮಿಯವರ ಭಂಡಾರಕ್ಕೆ ದಾನ ನೀಡಿದ ವಿವರ.

* * *

೧. ॥ ಭಾವ ಸಂವತ್ಸರದ। ಮಾಘ ಬಿ೧೩ಲ್ಲು। ಶ್ರೀಮತ್ಕೆಳದಿ ಮಲ್ಲಂಮಾಜಿ ಅಂಮ್ಮನವರು।

೨. ॥ ಭಕ್ತಿ ಭದ್ರರಾಜಪುರದ ವಿರಕ್ತಮಠದ ರಾಚವಟ್ಟಿಸ್ವಾಮಿಯವರ ಭಂಡಾರಕ್ಕೆ।

೩. ॥ ಅಕ್ಕಿ ಚಿಂನ್ನಪ್ಪನು ಬರಸಿಕೊಟ್ಟ ಪತ್ರದ ಕ್ರಮವೆಂತ್ತೆಂದರೆ । ಅರಮನೆ ಉಗ್ರಾಣಕ್ಕೆ ಕೊಡುವ ।

೪. ಬಗ್ಗೆ ದೇವರ ಭಂಡಾರದಲ್ಲು । ತೆಗೆದುಕೊಂಡು । ಹುರುಳಿ ಕ್ರಯದ ಬಗೆಯಲು ಸಲುವದು ।

೫. ।ಗ। ೧೧೩ ॥೦ ಗೆ ಸಂದದು ಗ೬೧ । ಶುಧ ಸಲುವದು ಗ೫೨ ॥೦ ಅಯಿವತ್ತು ಯರ ।

೬. ಡುವರೇ ವರಹಕ್ಕೆ ನಿ ಬಡ್ಡಿಯಲ್ಲು ಕೊಡುವದು ಗ೧೦ ಬಡ್ಡಿ ಗ೧೦ ರತ್ತಿ ೦೧ ರಹ೧ ॥೦

೭. । ಲು ಸಲುವದು । ಗ೪೨॥೦ ಉಭಯಂ ಗ೫೨॥೦ ಅಯಿವತ್ತಯರಡುವರೆ ವರ ಹೊನ್ನು ।

೮. । ನಡ ದಿನದ ಬಡ್ಡಿ । ಸಹಾ । ತ್ತಿದಿ ಕೊಡುವೆನು । ವಾತದ ಬಗ್ಗೆ ತ್ತಿಂಗಳು ೧ರ ಬಿ೧ರ ವಾ೧ ವಂದ

೯. । ರಲ್ಲು । ಪ್ರಾಕು ಮಾರ್ಗಶಿರ ಬ೧೩ಲು। ತೆಗೆದುಕೊಂಡದು ಹುರಳಿಪೇಠೆ ಬ೧೦. ಹತ್ತು

೧೦. । ಖಂಡುಗ ವಂತ್ತ ಸಹ ।ಸಂ। ಪಾಲ್ಗುಣ ಬ೩೦ಗೆ । ಕೊಡುವೆನು ಯಂದು ಬರಸಿ

೧೧. । ಕೊಟ್ಟ ಪತ್ರ । ಸಾಕ್ಷಿಗಳು ಸಿದಿಕೃಷ್ಣಯ । ×××××××××× ಬಿಂನಹ ಬರಸಿ ಸಾಕ್ಷಿಗಳು. ಯಿೊ ಪತ್ರ ಬರದಂತ ಪುಸ್ತಕ ನಾರಣಪ್ಪ

❖❖

೨೫

ಕಾಲ : ಕ್ರಿ.ಶ. ೧೭೫೮? ೧೮೩೬? (ಈಶ್ವರ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಭಧ್ರರಾಜಪುರ ವಿರಕ್ತಮಠದ ತೋಂಟದ ಸಿದ್ಧೇಶ್ವರ ದೇವರ ಭಂಡಾರಕ್ಕೆ ದಾನ ನೀಡಿದ ವಿವರ.

* * *

೧. ॥ಃ ಯಿೊಶ್ವರ ಸಂವತ್ಸರದ ಮಾಘ ಶು ೧೫ ಲ್ಲು ಶ್ರೀಮತ್ಕೆಳದಿ ಮಲ್ಲಂಮ್ಮಾಜಿ ಅಂಮ್ಮ

೨. ನವರ ಭಕ್ತಿ । ಭದ್ರರಾಜಪುರದ ವಿರಕ್ತಮಠದ । ತೋಟಸಿದ್ಧೇಶ್ವರ ದೇವರ ಭಂಡಾರಕ್ಕೆ

೩. ಘಟ್ಟ ಕೆಳಗಣ ಹೋಬಳಿ ಸುಂಕದ ಠಾಂಣ್ಯಗಳ । ಸ್ಥಳದ ಸೇನೆಭೋವರು ಉಭಯದ ।

೪. ಸೆನೆಭೊವರು । ವಂದು ಪತ್ತಿಸೇನ ಭೊವರು । ಶ್ಯಾಬಂದ್ರಿಸೇನ ಭೊವರು ಸಹ । ಬರಸಿಕೊ

೫. ಟ್ಟ ಕೊಡವಿಸ ಗುತ್ತಿಗೆ ಬಿನ್ನವತ್ತಳೆ ಕ್ರಮವೆತ್ತೆಂದರೆ । ಸ್ಥಳ ಪರಸ್ಥಳ ದೇಶಾ ಭಾಗದ ಮ

೬. ಹಾನಾಡವರು ಮುಂತಾಗಿ ತಾವು ಕರೆ ಕೊರೆ ಮಾರ್ಗಕ್ಕೆ ವ್ಯವಹರಿಸುವ ವ್ಯವಹಾರದ ಮೆ

೭. ಲೆ ಮೂಲವಿಸವ । ಕೊಟ್ಟವೆಂಬ ರೀತಿ ಬರಸಿಕೊಟ್ಟ ಪಟ್ಟಿ ಪ್ರಕಾರ । ಕೊಡವಿಸವನ್ನು। ಪ್ರಾ

೮. ಕು ಮತ್ತಿ ಬಾಹ ಸುಂಕ ಕೊಡವಿಸದ ಸಂಗಡಲೆ ಯಿೂ ಕೊಡವಿಸಲು ಯತ್ತಿಸಿ ಕೊಡುವ।

೯. ಬಗ್ಗೆ ವಿವರ। ಕೆರೆ ಮಾರ್ಗಕ್ಕೆ ಬಿಡಿಸಿ ಹೋಹನದೆ ೧ರ ಹಲ್ಸಿ॥ ೦ಉ। ಹೊಸಂಗಡಿಯಿಂದ

೧೦. ಲು ಗ೨೦ ಪವಡದಿಂದ ಗ೧೦ ಗುಳುವಾಡಿಯಿಂದ ಸಾಲಿನಲು ಹೊಹಸರಕಿಗೆ ಸಹ।ಗ ೨॥೦ ಕಲಿ

೧೧. ಊರಿಂದ। ಗ೪ ॥೦ ಹೆಂಮ್ಮಾಡಿಯಿಂದ ಗ೮ ಬಿಸರೂರು ಕುಂದಾಪುರದಿಂದ ೨೪ ಬಾರ

೧೨. ಕೂರಿಂದ ಗ ೨೭ ಕಲ್ಯಾಣಪುರದಿಂದ ಗ ೩೩ ಕಟ್ಟುಪಾಡಿ ಗ ೧೦ ಕಾಡಿನಿಂದ ಗ೪ ಯರಮಾ

೧೩. ಳು ಪಡೂಬಿದಿರೆ ಹೆಜ್ಯಮೂಡಿಯಿಂದ ಗ೩೦ ಕಾರಕಳದಿಂದಲು। ಸಾರಾವಿಯಿಂದ ೧೮ ಸ್ಲೋಮೇ

೧೪. ಶ್ವರದಿಂದ ಗ೫ ಬಂಯಿದೂರು ಗ೨೪ ನಾಯಕನ ಕಟ್ಟೆ ಗ೩, ಕೊಲ್ಲುರು ಮದ್ದೂರಿಂದ ಗ೩ ಕೊ

೧೫. ಡೆಯಾಲದಿಂದ ಗ೧೫೦ ಉಳ್ಳಾಲದಿಂದಕ ಗ೩೦ ಮಂಜೇಶ್ವರ ಗ೩೫ ಕುಂಬಳೆಯಿಂದ ಗ೧೫

೧೬. ಮೂಲಿಕೆಯಿಂದ ೨೭ ಮೂಡಬಿದಿರಿ ಗ ೨ ಅಂತು। ಗ ೪೫೦ ನಾನೂರ ಐವತ್ತು

೧೭. ವರ ಹೊನ್ನುವ ಭಿಲತ್ತಿಬಂಡ ಸಾಲೆ ಹರದರಲಾವಣೆಗೆಯಿಂದ ಸಹ ಗುತ್ತಿಗೆ ಪ್ರ

೧೮. ಕಾರ ಕಾಲ ಕಾಲಾಂಪ್ರತಿಯಲ್ಲೂ ಲೆಖ್ಖಕ್ಕೆ ಕೂಡಿಸಿ ಯತ್ತಿಸಿ ನಷ್ಟವೆನ್ನದೆ। ವಂದು ವರುಷ

೧೯. ದ ನಷ್ಟವಂದು ವರುಷದ ಕಷ್ಟದಿಂದ ಸಹ ಸಮಾನ ಮಾಡಿಕೊಂಡು ಕೊಟ್ಟು ಬಂದೇ

೨೦. ಊ। ಯೆಂದು ಬರಸಿಕೊಟ್ಟ ಬಿನ್ನ ವತ್ತಳೆ। ಉಲಿಕೆ ಸ್ಥಳದ ದಾಸಣ್ಣನವರ ಬಿನ್ನಹ

೨೧. ವಂದು ಪತ್ತಿನ ಸ್ಥಳವ ಶೇಷಣನ ಬಿಂನ್ನಹ। ಹೆಜಮಾಡಿ ಸ್ಥಳದ। ಪರಮಯ್ಯನ ಬಿಂನ್ನಹ।

೨೨. ಬಿಸುರೂರ ಸ್ಥಳದ ವೆಂಕಟಪ್ಪತ್ತಿ ಬಿಂನ್ನಹ। ಬಾಬಯೆದಾ ಸೋಮಯ್ಯನ ಬಗ್ಗೆ ಸಾತಯ್ಯನ ಬಿಂನ್ನಹ।

೨೩. ಹೆಂಮ್ಮಾಡಿ ಸ್ಥಳದ ವೀರಯ್ಯನ ಬಿನ್ನಹ। ಉಭಯದ ಸುಬ್ಬಯ್ಯನ ಬಗ್ಗೆ ಮಂಜೇಶನ ಬಿನ್ನಹ। ಕಲಿಯೂರು ಸ್ಥಳದ ವೆಂಕಟೇಶಯ್ಯ

೨೪. ನ ಬಿನ್ನಹ। ಉಭಯದ ಸುಬ್ಬಯ್ಯನ ಬಗ್ಗೆ ಮಂಗೇಶನ ಬಿನ್ನಹ। ಬಂಯಿದೂರ ಸುಂಕದ ಸ್ಥಲದ ಸೇನಭೂ

೨೫. ವ ಮಂಗಜೆ ಬಿನ್ನಹಾ। ನಾಯಕನಕಟ್ಟೆ ಸುಂಕಸ್ಥಳದ ಸೇನ ಭೂವ ತ್ತಿಂಮ್ಮಣನ ಬಿನ್ನಹ।

೨೬. ಉಳ್ಳಾಲದ ಸ್ಥಳದ ಕಲ್ಯಾಣಯ್ಯನ ಬಿನ್ನಹ। ಉಭಯದ ಮಂಗಜಿ ಬಿನ್ನಹ। ಮಂಜೇಶ್ವರದ ಸ್ಥಳದ। ಲಕ್ಷ್ಮಯ್ಯ

೨೭. ಬಗ್ಗೆ ಮಾಳಪ್ಪ ಬಿನ್ನಹ । ಉಭಯದ ಲಿಂಗಮ್ಮನ ಬಿನ್ನಹಾ । ಕುಂಬಳಿ ಸ್ಥಳದ ನರಸಯ್ಯನ ಬಿನ್ನಹ ।

೨೮. ಕೊಡೆಯಾಲದ ಸ್ಥಳದ ಮಂಗಜಿ ಬಿನ್ನಹಾ । ಉಭಯದ ವೆಂಕಟನ ಬಿನ್ನಹ ।

೨೯. ಸಂಖ್ಯಾವಂದುಪ್ಪತ್ತಿನ ಪರಮೇಶ್ವರನ ಬಿನ್ನಹ । ಉಭಯದ ಸೋಮಯ್ಯನ ಬಿನ್ನಹ ಸ್ಥಳದ ಸುಬ್ಬಣ್ಣನ ಬಿನ್ನಹ ।

❖❖

೨೬

ಕಾಲ : ಕ್ರಿ.ಶ. ೧೭೫೭? ೧೮೩೬? (ಧಾತು ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಭದ್ರರಾಜಪುರ ವಿರಕ್ತಮಠದ ರಾಚವಟ್ಟಿಸ್ವಾಮಿಯವರ ಭಂಡಾರಕ್ಕೆ ಬೆಂಡಗೆರೆ ವೆಂಕಪ್ಪ ಬಂಗಾರ ಒತ್ತೆಯಿಟ್ಟು ಬರೆದುಕೊಟ್ಟ ಪತ್ರ.

* * *

೧. ೦॥ ಧಾತು ಸಂ। ಮಾರ್ಗಶಿರ ಶು ೧೦ಲ್ಲು ಶ್ರೀಮತ್ಕೆಳದಿ ಮಲ್ಲಂಮಾಜಿಯವರ ಭಕ್ತಿ

೨. ೦॥ ಭದ್ರರಾಜಪುರದ ವಿರಕ್ತಮಠದ ರಾಚೋಟಿಸ್ವಾಮಿಯವರ ಭಂಡಾರಕ್ಕೆ।

೩. ೦॥ ಬೆಂಡೆಗೆರಿ ವೆಂಕಪ್ಪನ್ನೂ । ಬರಕೊಟ್ಟ ಪತ್ರದ ಕ್ರಮವೆಂತೆಂದರೆ । ನಾನು ನಂನ

೪. ಮಸರ ನಿಮಿತ್ಯವಾಗಿ । ದೇವರ ಭಂಡಾರದಲ್ಲು। ಅಡಹುಯಿಟ್ಟ ಚೊಕ್ಕ ಚಿಂನದ ।

೫. ಹಿಂಬಳಿ ೧೧ರಕ್ಕು ಗ೩೬ ॥೨॥೦ ಹೊಂನ್ನು ಬಿಂನ್ನ ಚಿಂನದ । ದೊರೆವ ಜೊ ॥೧ರ ಗ೧೫

೬. ಳಯಂನ್ನ ೨ರಕ್ಕೂ ಗ೬೧ ॥೨॥ ಕ್ಕೂದ ನಗವಂನ್ನು । ಅಡಹುಯಿಟ್ಟು ತ್ತೆಗದುಕೊಂಡು

೭. ದ್ದು ಯಿಕ್ಕೇರಿ ಗ೫೦ ಅಕ್ಷರದಲ್ಲುಯಿದೆ. ಐವತ್ತು ವರಹಾಕ್ಕೆ ಬಡ್ಡಿ ಗ೧೦ರ ××

೮. ಗಳು ೧ ರ ××××××× ನಡದ ಧಿನ ಹಣ ಬಡ್ಡಿಯಂನ್ನು ××

೯. ಟ್ಟು ನಂನ ನಗವವ್ಯೆದನ್ನುಯ್ಯಂದು ಬರಕೊಟ್ಟ ಕಾಗದ ಪತ್ರ ಆದ್ಯಕ ವೆಂಕಪ್ಪ ಸಹಸ್ರ ಬಿಂನಹ.

❖❖

೨೭

ಕಾಲ : ಕ್ರಿ.ಶ. ೧೭೫೮? ೧೮೩೬? (ಈಶ್ವರ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಭದ್ರರಾಜಪುರ ವಿರಕ್ತಮಠದ ಶ್ರೀಸಿದ್ಧೇಶ್ವರದೇವರ ಭಂಡಾರಕ್ಕೆ ಇಡಗುಂಜಿ ವಿಷ್ಣುಸಭಾಯಿತನು ನೀಡಿದ ದಾನದ ವಿವರ.

* * *

೧. ಯಿಶ್ವರ ಸಂವತ್ಸರದ ವಯಿಶಾಖ ೧೧ಲು । ಶ್ರೀಮತ್ಕೆಳದಿ ಮಲ್ಲಂಮಾಜಿಯವರ ಭಕ್ತಿ।
೨. ಭದ್ರರಾಜಪುರದ ವಿರಕ್ತಮಠದ ಶ್ರೀ ಸಿದ್ಧೇಶ್ವರದೇವರ। ಭಂಡಾರಕ್ಕೆ ಯಿಡಗುಂಜಿ। ವಿಷ್ಣು
೩. ಸಭಾಯಿತನು ಬರಸಿಕೊಟ್ಟ ಬಿಂನವತ್ತಳೆ ಕ್ರಮವೆಂತೆಂದರೆ। ದೇವರ ಸಂನ್ನಿಧಿಯಲ್ಲು। ನಿತ್ಯ
೪. ನಯಮಿತ್ಯ ಮುಂತಾಗಿ ನಡವ ಕಟ್ಟಲೆ ಧರ್ಮಕ್ಕೆ। ನಡಸಿ ಬಾಹ ಬಗ್ಗೆ। ನಂನ ಬಲ್ಲಾಳಿಕೆ। ಮಿಡಿಜೆ
೫. ಸುಂಕದಲ್ಲೂ । ಸ್ಥಳ ಪರಸ್ಥಳದ ದೇಶಾಭಾಗದ ಹರದರಿಂದ । ಯತ್ತಿಸಿ ಕೊಡುವ ಮೂಲವಿಸದಿಂದ।
೬. ಯಿ ಧರ್ಮದ ಬಗ್ಗೆ ಪ್ರಾಕಾರರ್ಭಸಂದು ಬಾಹದು ಸಂವತ್ಸರ ೧ಕ್ಕೆ ಗ೫ ಐಯಿದು ವರಹಾ ಸಲ್ಲು
೭. ಕಾಲಂ ಪ್ರತಿಯಲ್ಲು ಯೆತ್ತಿಸಿ ಕೊಡುವೆನೆಂದು । ಬರಸಿಕೊಟ್ಟ ಬಿಂನವತ್ತಳೆ। ವಿಷ್ಣು ಸಭಾಯಿತನ ಬಿಂನಹ.

❖❖

೨೮

ಕಾಲ : ಕ್ರಿ.ಶ. ೧೭೫೮? ೧೮೩೬? (ಈಶ್ವರ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಭದ್ರರಾಜಪುರ ವಿರಕ್ತಮಠದ ರಾಚವಟ್ಟಿಸ್ವಾಮಿಯವರ ಭಂಡಾರಕ್ಕೆ ಕೆಲವರು ನೀಡಿದ ದಾನ ಸುಂಕದ ವಿವರ.

* * *

೧. ३॥ ಯಿಸ್ವರ ಸಂವತ್ಸರದ। ನಿಜ ಆಶ್ವಿಜ ಬ ೨ಲ್ಲೂ ಶ್ರೀಮತ್ಕೆ
೨. ಳದಿ ಮಲ್ಲಂಮಾಜಿ ಅಂಮನವರ। ಭಕ್ತಿ। ಭದ್ರರಾಜಪುರದ।
೩. ವಿರಕ್ತಮಠದ। ರಾಚವಟ್ಟಿಸ್ವಾಮಿಯವರ। ಭಂಡಾರಕ್ಕೆ। ಗು
೪. ತ್ತಿ ಬಾಡದ ಬಲಸುಂಕದ ಮಣಿಯಹ್ಯಗಾರ। ಸಿಧಾಪುರ
೫. । ರಾಮಚಂದ್ರಯಾ। ಸೇನಭೋವ। ದುಗಂಣ। ನಿಂಗಂಣ। ವೆಂಕ।
೬. ಂಣನ ನಾಗಂಣ। ಗಾಜನೂರ। ರಂಗಂಣ ಸಹ। ಬರಸಿಕೊಟ್ಟ।
೭. ಬಿನ್ನವತ್ತಳೆ। ಕ್ರಮವೆಂತೆಂದರೆ। ಗುತ್ತಿ ಬಾಡದ ಬಯಲ ಸುಂ
೮. ಕದಲು। ಯಿ ಮಠಕ್ಕೆ। ಯೆತ್ತುವ। ಕೊಡವಿಸದ ಬಗೆ। ಮಾ
೯. ಡಿದೂ। ಗ೭೦ ವರ ಹೊನ್ನು। ಕಾಲಕಾಲಕ್ಕೂ।
೧೦. ಕೊಟ್ಟು ಬಂದೆಲು ಯಂದು ಬರಕೊಟ್ಟ ಬಿಂನ ವತ್ತಳೆ। ದು

೧೧. ಗಂಣಾನ ಬಿಂನಹಾ । ನಾಗಂಣನ ಬಿನ್ನಹಾ । ನಾಗಾಂಣನ ಬಿಂನ ।
೧೨. ಹಾ ॥ ರಾಮಚಂದ್ರಯನ । ಬಿಂನಹಾ

❖❖

೨೯

ಕಾಲ : ಕ್ರಿ.ಶ. ೧೭೪೦–೧೭೫೫ ಭಾಷೆ : ಕನ್ನಡ

ಸಾರಾಂಶ : ತೋಂಟದ ಮಹಾಸ್ವಾಮಿಗಳವರಿಗೆ ಕೆಳದಿ ಬೂದಿ ಬಸಪ್ಪನಾಯಕನು ? ತಾಯಿ ಮಲ್ಲಮ್ಮಾಜಿ ತಂದೆ ವೀರಭದ್ರನಾಯಕರ ಹೆಸರಿನಲ್ಲಿ ಅರ್ಪಿಸಿದ ಬಂಗಾರದ ಪಾದುಕೆಗಳ ಮೇಲಿನ ಬರೆಹ.

ಎಡ :

೧. ಶ್ರೀಮಜ್ಜಗದ್ಗುರು ತೋಂಟದ ಮಹಸ್ವಾಮಿಗಳವರ ಪಾದಕ್ಕೆ ಕೆಳದಿ ವೀರಭದ್ರನಾಯಕರ
೨. ಧರ್ಮಪತ್ನಿಯಾದ ಮಲ್ಲಂಮಾಜಿಯವರ ಭಕ್ತಿ

ಬಲ :

೧. ಶ್ರೀಮಜ್ಜಗದ್ಗುರು ತೋಂಟದ ಮಹಸ್ವಾಮಿಗಳವರ ಪಾದಕ್ಕೆ ಕೆಳದಿ ಬಸವಪ್ಪನಾಯಕರ ಪು
೨. ತ್ರರಾದ ವೀರಭದ್ರನಾಯಕರ ಭಕ್ತಿ

❖❖

೩೦

ಕಾಲ : ಕ್ರಿ.ಶ. ೧೭೬೦? ೧೮೩೮? (ಪ್ರಮಾತಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಭದ್ರರಾಜಪುರದ ತೋಂಟದಾರ್ಯ ವಿರಕ್ತಮಠಕ್ಕೆ ದಾನ ನೀಡಿದ ವಿವರ.

* * *

೧. ಪ್ರಮಾತಿ ಸಂ । ಚಯಿತ್ರ ಶು ೧೦ಲ್ಲು। ಮುಲರ ಶಿವಭಷಿತವಳಿ ।
೨. ಗೆ । ವೆಂಕಣಗೆ ಸಹ ಬೆಲುರ ಕೃಷ್ಣಾಪ್ಪನು ಬರಸಿಕೊಟ್ಟ ಸಿಲಿಪಟ್ಟಿ ।
೩. ಸಕ್ರಮವೆತ್ತೆಂದ್ರೆ: ನಂಮ ನೆರೆದಾರ ವಿಭ್ರಾಮ ಬಾವ ಲಾಹಣಿ ।
೪. ಯವರಿಗೆ । ಕೊರ ಸಾಲಿಂದ । ಮುಲಿರ ಬುಧಿಗಾಣಿಕೆ ಬಗೆ ಉ ।
೫. ಆದ ಕಟಿಭಟ್ಟಿನ ಹಣವಿನ ಬಗ್ಯೆಯಿತ್ತಿಧಿಯಲ್ಲು ಭದ್ರರಾ ।
೬. ಜಪುರದ ವಿರಕ್ತಮಠದ ಆದಾಯ ವೆಚ್ಚದಿಂದಾ । ಗ೨೫
೭. ಯಿಪತ್ತೈದು ವರಹೊಂನ್ನು । ನಂಮ್ಮನಸಕ್ಕೆ ಬಂತು ಯಂದು ।
೮. ಬರಸಿಕೊಟ್ಟ ಸಲಿಚಿಟ್ಟಿ ॥ [ದೇವನಾಗರಿಯಲ್ಲಿ ಸಹಿಯಿದೆ]

❖❖

೩೧

ಕಾಲ : ಕ್ರಿ.ಶ. ೧೭೬೧? ೧೮೪೯? (ವಿಕ್ರಮ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಭದ್ರರಾಜಪುರದ ತೋಂಟದಾರ್ಯ ವಿರಕ್ತಮಠಕ್ಕೆ ಹಣ ದಾನ ನೀಡಿದ ವಿವರ.

* * *

೧. ॥ ವಿಕ್ರಮ ಸಂ। ಆಷಾಡ ಶು ೧೦ ಯಲ್ಲು ಶ್ರೀಮತ್ಕೆಳದಿ ಮಲ್ಲಂ
೨. ಮಾಜಿ ಅಂಮ್ಮನವರ ಭಕ್ತಿ ಭದ್ರರಾಜಪುರದ ವಿರಕ್ತಮಠದ ।
೩. ರಾಚವಟ್ಟಿಸ್ವಾಮಿಯವರ ಭಂಡಾರಕ್ಕೆ । ಚಿಕಲಾಯದ ಕಲಿಯಾ
೪. ಮತ್ತಿಯು ಬರಕೊಟ್ಟ ಸಲಿಬಿಟ್ಟ ಸಕ್ರಮವೆಂತೆಂದರೆಃ ದೇವರ ಮ ।
೫. ಠ ದಿಂದ ಚಿಕಲಾಯಕೆ ಸಲು ಹಣವಿನಿಂದ । ಹಾವಾಲುದಾರ। ಬರಸಿ ।
೬. ಕೊಟ್ಟ ಚಪ್ಪು ಪ್ರಮಾಣ ನನಗೆ ಸಲುದ । ಗ೧೦ ಹತ್ತು ವರಹಾಲು
೭. ಗಂತ್ತೆಂದು ಬರಸಿಕೊಟ್ಟ ಸಲಿ ಚಿಪ್ಪು ಯಿದಕ್ಕೆ ಸಾಕ್ಷಿಗಳು । ಬಡಗಿ
೮. ಸಂತ್ತಾಬೆ । ಹಿರೊಚಿಸೆಟ್ಟಿ । ಕರುಲಿನ ಪಪ್ಪಿ ೨೫
೯. ಕರಿಯಂಣನ ಗುರ್ತ್ತು ಸಾಕ್ಷಿಗಳ ವಪ್ಪಿತ

●●

೩೨

ಕಾಲ : ಕ್ರಿ.ಶ. ೧೭೪೮? ೧೮೨೭? (ಪ್ರಭವ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಭದ್ರರಾಜಪುರದ ತೋಂಟದಾರ್ಯ ವಿರಕ್ತಮಠಕ್ಕೆ ವ್ಯಾಪಾರಿಗಳು ದಾನ ನೀಡಿದ ವಿವರ.

* * *

೧. ರಾಜೆಶ್ರೀ ಮಲಂಮಾಜಿ ಅಂಮನವರ ಭಕ್ತಿ। ಭದ್ರರಾಜ ಪುರದ ವಿರಕ್ತ ಮಠಕ್ಕೆ।
೨. ಃ ಪ್ರಭವ ಸಂವತ್ಸರ ನಿರದ ಜೆಷ್ಮ ಶು ೫ಲ್ಲು
೩. ಅಯವತ್ತು ಆರು ದೇಶದ ಮಹಾನಾಡು ಸಮಸ್ತ
೪. ದೈವದವರು ಪ್ರಾಕು ಸಂನತನಿರದಲ್ಲೂ। ಮಾರಿ
೫. ಕೊಟ್ಟು ಮೂಲಿವಿಸದ ಬಗ್ಗೆ ಪರಾಶಿವಸಾಗರದ
೬. ಪೇಠೆ ಸ್ತಳದ ಪರಸ್ತಳದ ಮಹಾನಾಡವರೂ ಯಿೂ ಬಗ್ಗೆ ಸಂ
೭. ನ್ಮತ ಬಿಟ್ಟರು । ಪ್ರಾಕುಲಾರಬ್ಯ ಮಠ ಮಠಗಳಿಗೆ ತ್ತೆತ್ತುಬಾಹಾ

೮. ಪ್ರಾಕಾರ ನಿಲ೧ ರ ಸಹಾ ಹಾ೧ ಗರ

೯. ಯಿಬಿಟ್ಟ ಪಟ್ಟಿನ ಮೇಲೆತೆತ್ತು ಬಾಹೆವು ರುದ್ರಮ

೧೦. ಖದಳದ ರುದ್ರಪ್ಪನ ವಪ್ಪಿತ ಬರಹ ಕೆಂಬಾವಿ ಮಲ್ಲೆಶಪ್ಪನ ವಪ್ಪಿತ ಬರಹ ಚೆಂನಪ್ಪನ ಒಪ್ಪಿತ

೧೧. ಸುಗುರ ವಡಕಪ್ಪನ ಬರಹ ಬೆಲ್ಲದ ಹೊಳೆಯಪ್ಪ ವಪ್ಪಿತ ಬರಹ ಬೆನೂರ ಯಿರಪ್ಪ ವಪ್ಪಿತ ಬರಹ.

❖❖

೩೩

ಕಾಲ : ಕ್ರಿ.ಶ. ? ಭಾಷೆ : ಕನ್ನಡ

ಸಾರಾಂಶ : ಗುರುವಪ್ಪನು ನವಿಲಗುಂದದ ಗುರುಬಸವಮ್ಮ ಎಂಬ ಹೆಣ್ಣುಮಗಳಿಗೆ ಬುದ್ಧಿ ಹೇಳಿ ಭದ್ರರಾಜಪುರದ ತೋಂಟದಾರ್ಯಮಠಕ್ಕೆ ಬರೆದ ಪತ್ರ.

* * *

ರಾಚವಟ್ಟಿಸ್ವಾಮಿಯವರ ಪಾದಕ್ಕೆ ।

೧. ಶ್ರೀಮತ್ಸಚ್ಚಿದಾನಂದ ನಿತ್ಯಾಪರಿಪೂರ್ಣ ಅವಿರಳ ಪರಂಜ್ಯೋತಿ ಸ್ವರೂಪರಾದ। ಶ್ರೀಮತ್ಕೆಳದಿ

೨. ಮಲಂಮಾಜಿ ಅಂಮನವರ ಭಕ್ತಿ ಭದ್ರರಾಜಪುರದ ವಿರಕ್ತಮಠದ ।

೩. ಉಡುಣಿಕೊಪ್ಪ ಠಾಣಾದಾರ ಗುರುವಪ್ಪನು ಮಾಡುವ ಬಿಂನಹ । ನವಿಲುಗುಂದದ

೪. ಗುರುಬಸವಂಮ ಯಂಬಿ ಹೆಂಣ್ಣು ಮಗಳ ವಿಶಯವಾಗಿ ಬುಧಿಗಲಿಸಿ ಕಳುಹಿದ ವಾಲೆ ಯಿ

೫. ಂದೆ ತಾ ನೋಡಿಕೊಂಡೆನು । ಆ ಬಗ್ಗೆ ಉಡುಗಣೆ ಸೀಮೆ ಪಾರು ಪತ್ಯಗಾರ ರಂಗಪ್ಪಯ

೬. ಗು ವಾಲೆಗೆ ಅಪ್ಪಣೆಕೊಟ್ಟು ಕಳುಹಿಸಿದಲಿ ಆತನು ಆ ಬಸವನಂದಿಹಳಿ ಹುಲು ನಿಲಿಕೊಪ

೭. ದ ಗೌವುಡಗಳು ತಳವಾರು ಠಾಣೆದವರು ವಕ್ಕಲಿ ಮಕ್ಕಳು ಮುಂತಾಗಿ ಕರಿಸಿ ವಿಚಾರಿಸಿ

೮. ಆ ಬಗ್ಗೆ ಬಿಂನವತ್ತಳೆ ತಗೆದುಕೊಂಡು ಆ ವಿವರಕ್ಕೆ ಯಿಳುವರಿ ಭರಿಸಿ। ಕಾಗದ ವಂ

೯. ನು ಬರದು ಕಳುಹಿಸಿಲಿ ಯಿಧಾನೆ. ಅದರಿಂದೆಲಾ ಚಿತ್ತಕೆ ಪರಾಂಬರಿಕೆ ಯಾಧಿತ್ತು.

೧೦. ಮೇಲಾದ ಅಭಿಪ್ರಾಯವನೆಲ್ಲಾ ಬಂದ ಐಯ್ಯನವರು ಅರಿಕೆ ಮಾಡಿದಲಿ ಚಿತ್ತಕ್ಕೆ ಪರಾಂ

೧೧. ಬರಿಕೆ ಯಂಧಿತ್ತಾಗಿ ಅಸ್ತಿತಿಯನು ಬಿನಮಾಡಿಕೊಂಡೆನು. ಯಿಂತ್ತಿ ಬಿಂನ್ನಹ.

❖❖

೩೪

ಕಾಲ : ಕ್ರಿ.ಶ. ?

ಭಾಷೆ : ಕನ್ನಡ

ಸಾರಾಂಶ : ಉಭಯ ಗುರುಸ್ಥಲದವರನ್ನು ಕೂಡಿಸಿದ ಬಗ್ಗೆ ಭದ್ರರಾಜಪುರದ ವಿರಕ್ತಮಠದ ರಾಚವಟ್ಟಿಸ್ವಾಮಿಯವರಿಗೆ ತಿಳಿಸಿದ ಪತ್ರ.

* * *

‖ ಶ್ರೀಮತ್ಸಚ್ಚಿತಾನಂದ । ನಿತ್ಯಪರಿಪೂರ್ಣ ।
ಅವಿರಳ ಪರಂಜ್ಯೋತಿ । ಸ್ವರೂಪರಾದಂತ ಶ್ರಿಮತ್ತಕೆ
ಳದಿ । ಮಲ್ಲಂಮಜಿ ಯಂಮನವರ ಭಕ್ತಿ। ಭದ್ರರಾಜ
ಪುರದ। ವಿರಕ್ತಮಠದ ರಾಚವಟ್ಟಿಸ್ವಾಮಿಯವರ ಪಾದಕ್ಕೆ ‖

೧. ‖ ನಾಥ ಶಿವಾಸಗರದ । ಪಟ್ಟಿಯ । ಕೊಟ್ಟಿಕೊಪದ । ಮರೀಯ
೨. ‖ ಪ್ಪ। ಹುಂಡೆಕಾರ । ರುದ್ರಪ್ಪ ಸಹ । ಮಾಡುವ ಬಿಂನಹ । ದೇವಾರವರ
೩. ‖ ದಾಯದಿಂಧ । ನಾಲು ಪರುಣಮಧಲು ಯಿದ್ದೇವೆ । ದೇವಾರ ಉಪ
೪. ಕ್ಷೆಮ ಸುಭವಾರ್ತೆಗಳಿಗೆ । ನಾಂಮಹ್ಯೆಲಣಪ್ಪರಿಯಿಂದ
೫. ವೆಳೆ ವೆಳೆಕ್ಕೆ ಬುದ್ಧಿಗಲಿಶಿ । ಬರಸಿ ಕಳಹ ಬೆಕೈಸಬೇಕು । ತರು
೬. ವಾಯ । ನಿಂಮ । ರೆವಣಸಿದ್ಧದೇವರ ಸಂಗಡ । ಬರಸಿ ಕಳಸಿದ ಕಾ
೭. ‖ ಗದ । ವಿಭುತಿ ಆಶೀರ್ವಾದ । ವೊಸ್ತ್ರ । ದುಪದಗಟ್ಟಿ ಸಹ । ಮುಟ್ಟಿ
೮. ದಲು ನಿಂಮ ಮಠದ । ಮೂಲವಿಸವಿಗೆ । ಮೂಡಲ ಮಹಂ
೯. ತ್ತಿನ ಗುರಸ್ತರಿಗು । ಸ್ಥಳದ ಗುರುಸ್ತರಿಗು । ಎಡಗೊಡೀ ವಿಳೈ ।
೧೦. ಸಹ ಕೂಡಿಸಿದ್ದಿವಿ । ಆ ದೇವರವರ ಪಾದಕ್ಕೆ ಅರಿಕಿ ಯಿರಬೇಕು
೧೧. ರೇವಣಸಿದ್ದಪ್ಪನವರು । ಪಾದಕ್ಕೆ ಅರಿಕಿ ಮಾಡಿದಲಿ । ಸಕಲಲು
೧೨. ಪಾದಕ್ಕೆ ಅರಿಕಿ ಯಿಧಿತ್ತು। ಯಂತಿ ಬಿಂನಹ ।

❖❖

೩೫

ಕಾಲ : ಕ್ರಿ.ಶ. ?

ಭಾಷೆ : ಕನ್ನಡ

ಸಾರಾಂಶ : ಕೆಳದಿ ಮಲ್ಲಮ್ಮಾಜಿಯವರು ಭದ್ರರಾಜಪುರದ ವಿರಕ್ತಮಠದ ರಾಚವಟ್ಟಿ ಸ್ವಾಮಿಯವರಿಗೆ ದಾನನೀಡಿದ ವಿವರ.

* * *

॥ ರಾಚವಟ್ಟಿಸ್ವಾಮಿಯವರ ಪಾದಕ್ಕೆ ।
। ಮಲ್ಲಂಮ್ಮಾಜಿ ಅಂಮ್ಮನವರ ।

೧. ॥ ಶ್ರೀಮತ್ಸಚ್ಚಿದಾನಂದ ನಿತ್ಯಪರಿಪೂರ್ಣ ಅವಿರಳ ಪರಂಜ್ಯೋತಿ
೨. ಸ್ವರೂಪರಾದ ಶ್ರೀಮತ್ಕೆಳದಿ । । ಭಕ್ತಿಭದ್ರರಾಜಪುರದ
೩. ವಿರಕ್ತಮಟದ । ಹೊಲಿಕೆರೆ ಸುಂಕದ ಮಣೆಹ್ಯಗಾರ । ರಾಮಂಣ । ಸ್ಥ
೪. ಳದ ಸೇನಬೊವ ಸಿದ್ಧಲಿಂಗಂಣ । ಪತ್ತಿಭಿಮಂಣನ್ನು ಮಾಡುವ ಬಿಂನ್ನಹ । ದೇವರ
೫. ಕೃಪಾಕಟಾಕ್ಷದಿಂದ । ಪರಿಣಾಮದಲ್ಲಿಧೆವೆ । ದೇವರ ಶಿವಯೋಗಾ ನಂದಗಳಿಗೆ
೬. ಅಪ್ಪಣೆ ಕೊಟ್ಟು ಬುಧಿಗಲಿಸ ಬರಸಿ ಕಳಹಿ ಚಿತ್ತೈಸಬೇಕು । ಸಾಂಪ್ರತ ದಾನಪಟ್ಟಿ ।
೭. ಆಶೀರ್ವಾದ ಪತ್ರಿಕೆ । ಯಂನ್ನು । ರೇವಣಸಿದ್ಧಯ್ಯನವರೂ ತ್ತಂದು ಯಿದ್ದ
೮. ಲ್ಲಿ ಕಡಿತ್ತಕ್ಕೆ ಬರಕೊಂಡು । ದಾನಪಟ್ಟಿಯಂನ್ನು ಯಿವರ ವಶಕ್ಕೆ ಕೊಟ್ಟು ಯಿಧಿತೆ ।
೯. ಆ ಪ್ರಕಾರ ಬಾಹ ಮೂಲವಿಸವ ಎತ್ತಿಸಿ ಆ ವಿವರಕ್ಕೆ ಬರಸಿ
೧೦. ಪಾದದ। ಸಮಿಪಕ್ಕೆ ಕಳುಹಿಸುತ್ತಾ ಯಿಧೆವೆ. ಯಿಂತಿ ಬಿಂನ್ನಹ ।

❖❖

೩೬

ಕಾಲ : ಕ್ರಿ.ಶ. ? ಭಾಷೆ : ಕನ್ನಡ

ಸಾರಾಂಶ : ಭದ್ರರಾಜಪುರದ ತೋಂಟದಾರ್ಯಮಠದ ರಾಚವಟ್ಟಿಸ್ವಾಮಿಯವರಿಗೆ ಬಿಳಗಿ ಸಿದ್ಧಲಿಂಗಪ್ಪ ಹಣ ಕಳಿಸಿ, ಬರೆದ ಪತ್ರ.

* * *

ಶ್ರೀ
ಶ್ರೀಮತ್ಸಚ್ಚಿತಾನಂದ ನಿತ್ಯಪರಿಪೂರ್ಣ ಅವಿರಳ । ಪರಂ
ಜ್ಯೋತಿ ಸ್ವರೂಪರಾದ । ಶ್ರೀ ವೀರಮಹೇಶ್ವರ । ಆಚಾರ ಸಾರೋದ್ದಾರಕರಾದ
ಚರಮೂರ್ತಿ ಮಹೇಶ್ವರರಾದ ಕೆಳದಿ ಮಲ್ಲಂಮಾಜಿಯವರ ಭಕ್ತಿ
ಭದ್ರರಾಜಪುರದ । ವಿರಕ್ತಮಠದ ರಾಚವಟ್ಟಿಸ್ವಾಮಿಯವರ ಪಾದಕ್ಕೆ ।

೧. ೦೦ ಬಿಳಿಗೆ । ಸಿದಲಿಂಗಪ್ಪನು ಮಾಡುವ ಬಿಂನಹ । ನಾನು ದೈವ ಪಾದದ ಕಪಾಕಟಾಕ್ಷ
೨. ದಿಂದ ಪರಿಣಾಮದಲ್ಲಿದ್ದೇವೆ । ದೇವರ ಶಿವಲಿಂಗಾನಂದ ವೈಭವಗಳಿಗೆ । ಬುಧಿಗಲಿ
೩. ಶಿ ಬರಸಿ ಕಳಹಿ ಚಿತ್ತಯಿಸಬೇಕು । ಸಾಂಪ್ರತು । ನಂನ್ನಿಂದ । ಸಲುವ ಹಣ ವಿನ ಬಗ್ಗೆ। ಮದ

೪. ನ ಶಿಂಗನ ಕಳುಹಿಸಿಯಿದ್ರಿ। ಆ ಬಗ್ಗೆಯಿಂಗಲು। ಯಿವನ ಸಂಗಡ ಅಪ್ಪಣೆ ಪ್ರಕಾ

೫. ರ ನಂಮ್ನ ಬಗ್ಗೆದು ಗ ೨೦ ಮನಿಹಳ್ಳಿ ವಿರಪ್ಪನ ಬಗ್ಗೆದು ಗ೫ ಉಭಯಂ ಗ। ಗ ೨೫

೬. ಯಿಪ್ಪತ್ತು ಐದು। ಕಳುಹಿ ಯಿಧೇನೆ। ನಂನ ಮೇಲೆ ದಯಮಾಡಿ ಲೇಖಿಗೆ। ಬರ

೭. ಸಿ। ಹಣ ಮುಟ್ಟಿದಕ್ಕ। ಬರಸಿ ಕಳಹುಸಬೇಕು। ಸುನಿಹಳ್ಳಿ ವಿರಪ್ಪನಾ ಪತ್ರದ ಬಗ್ಗೆ

೮. ॥ ಅಪ್ಪಣೆ ಕೊಟ್ಟು ಕಳುಹುಸಬೇಕು। ಬುಧಿಗಲಿಶಿ ಕಳುಹಿಸಬೇಕು। ಯಿತ್ತಲಾಗಿ ನಂನಿಂದ ಅಹಂತ್ರದಕ್ಕು ದೇವರಾ ಶಿವಲ್ಲಿಂ

೯. ಗನಂದ ವೈಭವಕ್ಕು ಬುದ್ಧಿಗಲಿಸಿ ಕಳಹುಸಬೇಕು ನಾನು। ಜೆಷ್ಮ ಬ೩೦ ಆ

೧೦. ಗತ್ತಲೆ। ಅಲ್ಲಿಗೆ ಬರುತ್ತೇನೆ। ಕಂಡು ಅರಿಕೆ ಮಾಡಲಾಗಿ। ಸಕಲವು ಪರಾಂಬರಿಕೆ ಆಧಿತು। ॥· ಯಿಂತಿ ಸಹಸ್ರ ಬಿಂನ್ನಹ.

❖❖

೩೭

ಕಾಲ : ಕ್ರಿ.ಶ. ? (ಕ್ರೋಧನ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ವಸುಧಾರೆ ಸ್ಥಳದ ಸಮಸ್ತರು ದಾನ ನೀಡಿದ ವಿವರ.

* * *

೧. ಕ್ರೋಧನ ಸಂವತ್ಸರದ। ವೈಶಾಖ ಬ ೫ ಲ್ಲೂ। ವಸುಧಾರೆ ಸ್ಥಳದ। ಕೂಡುವಳಿ ಮಾರ್ಗದ। ಸ್ಥಳ

೨. ಪರಸ್ಥಳದ ಸಮಸ್ತದೇಶದವರು। ತಂಮ್ಮ ಭಕ್ತಿಯಿಂದ ಮಾಡಿಕೊಟ್ಟ ಮೂಲವೀಸ। ಹಾಳು ಮೆಣ

೩. ಸು ಯಾಲಕ್ಕಿ ಮುಂತಾದಕ್ಕೆ ನಿಂತನ ೧ಕ್ಕೆ ಜಂಮ್ಮಸಿರ ಗಂ ಹಂ ೮ ವಿಸದಲ್ಲೂ ಕೊಡಲುಳ್ಳವರು।

೪. ಯೆಂದು। ವಪ್ಪಿಬರಸಿಕೊಟ್ಟ ಬಿಂನ್ನಹ ಯಿದಕೆ ವಪ್ಪಿತಾ। ಕಂಪಲಿ ನಾಗಪ್ಪನ ವಪ್ಪಿತ। ಮಾಳಲೂರ।

೫. ಹಚವಳಿ ಪುರುವಂಣ್ಣನ ವಪ್ಪಿತ। ವರದ ಗುರುಸಿದ್ಯೆಯನ ವಪ್ಪಿತ।

೬. ಸಿಂಗಾರಪುರದ ಪೆಂತಿಯ। ಯಲೆ ಸಿದ್ದಂಣ ಲೆಖ್ಖಣಿಕೆ ಮುಟ್ಟಿಕೊಟ್ಟ ವಪ್ಪಿತ ಪತ್ರ ಬ್ರಂಹ್ಮ ಸಮುದ್ರದ ಗುರು

೭. ವಂಣನ ಲೆಖ್ಖಣಿಕೆ ಮುಟ್ಟಿಕೊಪ್ಪಿತ ಉಪುವಂಳಿಯ ಪ್ಪರುವಪ್ಪ ಸೆಟ್ಟರ ವಪ್ಪಿತ್ತಾ। ಗುರುಬಸವೈಯ್ಯನ ವಪ್ಪಿತ ॥ ---

❖❖

೩೮

ಕಾಲ : ಕ್ರಿ.ಶ. ? (ಪ್ರಮಾಥಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಭದ್ರರಾಜಪುರದ ತೋಂಟದಾರ್ಯಮಠದ ರಾಚವಟ್ಟಿಸ್ವಾಮಿಯವರ ಭಂಡಾರಕ್ಕೆ ಅಜ್ಜಂಪುರದ ಸೀಮೆಯ ಗೌಡರು ನೀಡಿದ ದಾನದ ವಿವರ.

* * *

೧. ॥ ಪ್ರಮಾಥಿ ಸಂ। ಆಶ್ವಿಜ ಶು ೧೩ಲ್ಲು ಶ್ರೀರಾಚವಟ್ಟಿಸ್ವಾಮಿಯವರ ಭಂಡಾರಕ್ಕೆ।

೨. ಅಜಂಪುರದ ಸಿಮೆ। ಶಿವನೆ ಗ್ರಾಮದ ಗಉಡ ಅರೆಯಂಣನ ತಂಮ ಗಉರಂಣ

೩. ನು ಬರಸಿಕೊಟ್ಟ ಕಾಗದ ಕ್ರಮವೆಂತೆಂದರೆ। ನಾಡ ಪಟ್ಟಣಶೆಟ್ಟಿ ಬಸವೈಗೆ। ಗಿರೆಪ್ಪ

೪. ನೂರೊಂದಂಣ ಗುನಾಮರಿ ವಿರಂಣಂದ ಸಹ। ಸಲುವ ಲೆಖಾಚಾರವ ಬಗ್ಗೆ।

೫. ಪ್ರಭವ ಸಂ। ಆಶಾಡ ಶು ೭ಲು। ಸೀಮೆ ನಾಡಿಗರು। ಉಡರ ಮುಂತಿಟ್ಟು। ನಂಮ।

೬. ಅಂಣ ಅರೆಯಂಣನು ಹೊಣೆಯಾಗಿ ಬರಕೊಟ್ಟ ಕೃಪಾಲೆ ಪ್ರಮಾನತಿ ಸಲುವದು।

೭. ಗ ೪೧॥೨॥ಕ್ಕೆ ನಂನ ಕೆಳಿಸದಲ್ಲಿ। ನಾನು ಹೇಳಿಕೊಂಡದು। ಯಿೂ ಸಂ। ದ। ಕಾರ್ತಿಕ ಶು ೧೫॥

೮. ನಂಮ ಅಂಣನ ಬಳಿಗು ಬರಸಿ ಕಳುಹಿ ಸಲುವ ಲೆಖಾಚಾರಕ್ಕೆ ಉದಾಹರಣೆ ಮಾಡಿ।

೯. ಕೊಡುವೆನು। ಯಂದು ಬರಸಿಕೊಟ್ಟ ಕಾಗದ। ಯಿದಕ್ಕೆ ಸಾಕ್ಷಿಗಳು। ಅಚಂದಿರ।

೧೦. ಶೀಮೆ ಗದ್ದಿಹಳಿ ಗವುಡ ಸಿದ್ಧಲಿಂಗಂಣ। ಮುಗುಲಿನ ಸೀಮೆ ಗೋಪಾಲಮಯ್ಯ।

೧೧. ಕರ್ತು— ಸಾಕ್ಷಿಗಳ ವಪ್ಪಿತ। ಸಿದ್ಧಲಿಂಗಂಣ್ಣ ಸಾಕ್ಷಿ ಗೋಪಾಲಪ್ಪನೂ ಸಾಕ್ಷಿ

೧೨. ಯಿೂ ಕಾಗದ ಬರದ ಸೇನಬವರ ಕೆರಿ ಶಾಮೈಯ್ಯ

೩೯

ಕಾಲ : ಕ್ರಿ.ಶ. ? ಭಾಷೆ : ಕನ್ನಡ

ಸಾರಾಂಶ : ಭದ್ರರಾಜಪುರ ತೋಂಟದಾರ್ಯ ವಿರಕ್ತಮಠದ ರಾಚವಟ್ಟಿಸ್ವಾಮಿಯವರ ಭಂಡಾರಕ್ಕೆ ನೀಡಿದ ದಾನದ ವಿಷಯ ಇಲ್ಲಿದೆ.

* * *

೧. ಶ್ರೀ ಮತ್ಸದಾಶಿವ ಸ್ವರೂಪರಾ

೨. ದ ಶ್ರಮತ್ಕಳದಿ ಮಲ್ಲಂಮಾ

೩. ಜಿ ಅಂಮನವರ ಭಕ್ತಿಭದ್ರರಾಜ

೪. ಪುರದ ವಿರಕ್ತಮಟದ ರಾಚೋಟಿ

೫. ಸ್ವಾಮಿಯವರ ಪಾದಕ್ಕೆ

೬. ಗೂಳೂರ ಪರಮೇಶ್ವರೈಯ ಮಾಡು

೭. ವ ಬಿಂನಹಾ ದೇವರು ಬುದ್ದಿಗಲಿಸಿ

೮. ಕಳುವಿದ ನಿರೂಪದ ಪ್ರಕಾರ ಮಟ

೯. ದ ಕೊಡವಿಸದ ಪಟ್ಟಿಗೆ ವವಿಕಹಾರೆ

೧೦. ಉಡುಗೆರೆ ಬಗೆ ಹಾಗ ೧೫ಹ॥ ಅ

೧೧. ಕ್ಷರದಲ್ಲು। ಹದಿನೈದು ವರಹನು

೧೨. ಶಾನುಭೋಗ ಯೆಲ್ಲಪ್ಪ ನಿಂದಾ ನಮಿ

೧೩. ಗೆ ಮುಟ್ಟಿತು ಚಿತ್ತಕ್ಕೆ ಶ್ರುತವಿರಬೇ

೧೪. ಕಾಗಿ ಯಿಂತಿ ಬಿಂನ್ನಹ

❖❖

೨. ಬಿಳಗಿ-ಬಾಗಳಿ ಅರಸರ ಪತ್ರಗಳು

*

೨. ಬಿಳಗಿ-ಬಾಗಳಿ ಅರಸರ ಪತ್ರಗಳು

೪೦

ಕಾಲ : ಕ್ರಿ.ಶ. ೧೭೫೯ ? (ಬಹುಧಾನ್ಯ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ತೋಂಟದ ಸಿದ್ಧೇಶ್ವರಸ್ವಾಮಿಗಳ ಕೃಪಾಪ್ರಸನ್ನರಾದ ಶ್ರೀರಾಚವಟ್ಟಿ ಸ್ವಾಮಿಯವರಿಗೆ ಮಹಾಪ್ರಭು ಬಿಳಿಗಿ ಬಸವಪ್ಪನಾಯಕರು ಡಂಬಳ ತೋಂಟದಾರ್ಯಮಠದ ರಥೋತ್ಸವ ಮತ್ತು ಗಣಾರಾಧನೆಗೆ ನೀಡಿದ ದಾನದ ವಿವರ.

* * *

। ಶ್ರೀ ಸಿದ್ಧೇಶ್ವರದೇವರ ।

೧. ೦॥ ಬಹುಧಾನ್ಯ ಸಂವತ್ಸರದ ಆಷಾಢ ಬ ೫ಲ್ಲು ಶ್ರೀಮದರವಿಂದಭವ ।

೨. ಪುರಂಧರ ಪರೊಗಮ ನಾನಾ ಸಕಲ ಸುರನಿಕರ ಮಣಿ ಮಕು

೩. ಟ । ಘುಟಿತ ಕೋಟಿ ಕೋಟೀರ ಪ್ರಭಾಪುಂಜರಂಜಿತ ತರುಣಾ

೪. । ರುಣಾತಪ ವಿಲಸಿತ ಪಾದಾರವಿಂದ ಸ್ಮರಶುಲಭ ಶಿಖಿ ಶಿಖಾಯಮಾನ ।

೫. ಅನಾದಿ ನಿರಂಜನ ಅಲ್ಲಮಾಪ್ರಭುಸ್ವಾಮಿ ಸಾಂಪ್ರದಾಯಕರಾದ ।

೬. ಶಿವತತ್ವ ಶಿವಾನುಭಾವಿಗಳಾದ ಶ್ರೀ ತೋಂಟದ ಸಿದ್ಧೇಶ್ವರಸ್ವಾಮಿ ।

೭. ಕೃಪಾ ಪ್ರಸಂನರಾದ ಶ್ರೀ ರಾಚವಟ್ಟಿಸ್ವಾಮಿಯವರಿಗೆ ಶ್ರೀಮನ್ಮಹಾ ।

೮. ಪ್ರಭು ಬಿಳಿಗಿ ಬಸವಪ್ಪನಾಯಕರು । ಬರಶಿ ಕೊಟ್ಟ ದಾನ ಪಟ್ಟಿಕ್ರಮ

೯. ಣವೆಂತೆಂದರೆ ಡಂಬಳದ ತೋಂಟದ ॥ ॥ ಗದ್ದಿಗೆಯಲ್ಲು ನಡವ ।

೧೦. ರಥೋತ್ಸವ ಗಣಾರಾಧನೆ ಬಗ್ಯೆ ನಂಮಲ್ಲಿ ಸಿದ್ಧಾಪುರದ ಸುಂಕದ ।

೧೧. ಹಣವಿನಿಂದ ಕಾಲ ೧ಕ್ಕೆ ಗ೧೦೦ ನ್ನೂರು ವರ ಹೊಂನ್ನು ಕೊಟ್ಟುದಾ ಹಾ

೧೨. ।ಗೆ ಆ ಬದುಕು ಮಾಡುವರಿಗೆ ಕಟ್ಟು ಮಾಡಿಶಿಧೀತೆ ಆ ಪ್ರಮಾಣ ಕಾಲಕಾಲಂ।

೧೩. ಪ್ರತಿಯಲ್ಲು ತರಿಶಿಕೊಂಡು ರಥೋತ್ಸವ ಗಣಾರಾಧನೆ ಸಹಾ ನಡಶಿ ಬಾ ।

೧೪. ಹಾಗೆ ಮಾಡಸಬೇಕಾಗಿ ಯಂದು ಬರಶಿಕೊಟ್ಟ ದಾನಪಟ್ಟಿ (ಸೀಲ್)

❖❖

೪೧

ಕಾಲ : ಕ್ರಿ.ಶ. ೧೭೧೬ (ದುರ್ಮತಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಬಾಗಳಿ ಬಸಪ್ಪನಾಯಕರು ಅಂಕಲಿ ಎಂಬ ಗ್ರಾಮವನ್ನು ತೋಂಟದಾರ್ಯಮಠಕ್ಕೆ ಪಲ್ಲಕ್ಕಿ ಉತ್ಸವ, ಅರ್ಚನೆ ನಡೆಸಲು ನೀಡಿದ ದಾನದ ವಿವರ.

* * *

ಶ್ರೀ ಮತ್ಸಚಿತಾನಂದ ನಿತ್ಯಪರಿಪೂರ್ಣ

ಅವಿರಳ ಪರಂಜ್ಯೋತಿ ಸ್ವರೂಪಗಳಾದ ರಾಜಾಧಿ

ರಾಜೇಶ್ರೀ ತೋಟದ ಸ್ವಾಮಿಗಳಿಗೆ ———

೧. ಶುಭಮಸ್ತು। ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರುವೆ ।

೨. ತ್ರೈಯಿಲೋಕ್ಯ ನಗರಾರಂಭ ಮೂಲಸ್ತಂಬಾಯ ಶಂಭವೆ ।

೩. ಸ್ವಸ್ತಿ ಶ್ರೀಜಯಾಭ್ಯುದಯ ಶಾಲಿವಾಹನ ಶಕ ವರುಷಂ

೪. ಗಳು ೧೬೩೮ ಸಾವಿರದ ಆರನೂರು ಮೂವತ್ತೆಂಟನೆಯ

೫. ದುರ್ಮತಿ ಸಂವತ್ಸರದ ವೈಶಾಖ ೧೨೦೨ ಶ್ರೀ

೬. ಮನ್ಮಾಹಾನಾಯಕಾಚಾರ್ಯ ಬಾಸೆಗೆ ತಪ್ಪುವ ನಾಯಕರ

೭. ಗಂಡು ಮರೆ ಹೊಕ್ಕರೆ ಕಾವ ಮಾರಾಂತರ ಗೆಲ್ವ ಬಾಗುಳಿ

೮. ಬಸಪ್ಪನಾಯಕರವರು ಬರಸಿಕೊಟ್ಟು ಎಲ್ಲರ ಮಾಂನ್ಯದ

೯. ಗ್ರಾಮದ ದಾನ ಪಟ್ಟದ ಕ್ರಮವೆಂತೆಂದರೆ ದೇವರವರಿಗೆ ಪಲ್ಲಕ್ಕಿ

೧೦. ಮಾನ್ಯವಾಗಿ ಅಂಕಲಿಯಂಬ ಗ್ರಾಮವಂನು ಸಿಲಾಸ್ತಾಪಿ

೧೧. ತವಂನು ಮಾಡಿಸಿ ದಾನಪಟ್ಟವನು ಬರಸಿಕೊಟ್ಟು ಯಿಥೆವೆ.

೧೨. ಅಲ್ಲಿಯೇನು ವುಂಟಾದ್ರು ಆರ್ಜನೆಯಂನ್ನು ಆಗು ಮಾಡಿಸಿಕೊಂಡು

೧೩. ನಮಗೆ ಆಶೀರ್ವಾದವಂನು ಮಾಡಿಕೊಂಡು ಸ್ತಿರಯುಗಳಾಗಿ

೧೪. ಯಿರಲಿ ಯಂದು ಬರಸಿಕೊಟ್ಟು ಪಲ್ಲಕ್ಕಿ ಮಾಂನ್ಯದ ಅಂಕಲಿ ಯಂಬ
೧೫. ಗ್ರಾಮದ ದಾನಪಟ್ಟೆ ಕ್ರಸ್ಥಾನ ಮಾಂನ್ಯ ಪೂರ್ವ ಪ್ರಮಾಣು । ಸ್ವದತ್ತಂ
೧೬. ದ್ವಿಗುಣಂ ಪುಣ್ಯಂ । ಪರದತ್ತಾನುಪಾಲನಂ । ಪರದತ್ತಾಪಹಾರೇಣ ।
ಸ್ವದತ್ತಾಂ ನಿಷ್ಪಲಂ ಬವೇತ್ (ಸೀಲ್)

❖❖

೪೨

ಕಾಲ : ಕ್ರಿ.ಶ. ೧೮೪೮ (ವಿಭವ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಬಾಗುಳಿ ಬಸವಪ್ಪನಾಯಕರು ತಮ್ಮ ಶ್ರೇಯೋಭಿವೃದ್ಧಿಗಾಗಿ ಡಂಬಳದ ಸಿದ್ಧಲಿಂಗಸ್ವಾಮಿಗಳವರಿಗೆ ಹೆಸರೂರ ಗ್ರಾಮದಲ್ಲಿ ಭೂದಾನ ನೀಡಿದ ವಿವರ.

* * *

ಶ್ರೀಮತ್ಪರಮ ಪಾವನ ಪವಿತ್ರಚಾರುಚರಿತ್ರ ಸಂನ್ಮೊ
ಹನಾಂಗ ಸಕಲದೇವತಾ ಶಿರಸ ಪ್ರದಾನ ಸಾರಸಜ್ಜನ ಸದುಹೃದಯ
ಕರ್ನಿಕನಿವಾಸ ಆಶಾಪಾಶ ವಿದೂರ ಕರುಣರಸಭರಿತ
ಕಾಮನಾಶನ ಅನಾದಿ ನಿರಂಜನ ಅಲ್ಲಮಾಪ್ರಭುದೇವರ
ಸಾಂಪ್ರದಾಯಕರಾದ ರಾಜಮಾಂನ್ಯ ರಾಜೆಶ್ರೀ ಡಂಬಳದ
ಸಿದ್ಧಲಿಂಗಸ್ವಾಮಿಗಳವರಿಗೆ–

ನಮುಸ್ತುಂಗ ಶಿರಶ್ಚುಂಬಿ । ಚಂದ್ರಚಾಮರ ಚಾರವೆ । ತ್ರೈಲೋಕ್ಯನಗರಾರಂಭ ಮೂಲ ಸ್ತಂಬಾಯ ಸ್ವಂಭವೆ ಶ್ವಸ್ತಿ ಶ್ರೀವಿಜಯಾಭ್ಯುದಯ ಶಾಲಿವಾಹನ ಶಕ ವರುಷಂಗಳು ೧೭೭೦ನೆಯ ವಿಭವನಾಮ ಸಂವತ್ಸರದ ಪುಷ್ಯ ಶು ೫ಲ್ಲು ಶ್ರೀ ಮಂನ್ ಮಹಾನಾಯಕಾಚಾರ್ಯ ಭಾಸೆಗೆ ತಪ್ಪುವ ನಾಯಕರ ಗಂಡ ಮರೆ ಹೊಕ್ಕರೆ ಕಾಯ್ವ ಮಾರಾಂತ್ತರಗೆಲ್ವ ಬಾಗುಳಿ ಆ ಬಸವಪ್ಪನಾಯಕ ಸೋಮಶೇಖರನಾಯಕ ಬಹದರವರೂ —— ಬರಸಿಕೊಟ್ಟ ಭೂ ಸ್ವಾಸ್ತಿ ಸರ್ವಮಾಂನ್ಯದ ದಾನಪಟ್ಟೆದ ಕ್ರಮವೆಂತೆಂದರೆ ಅದಾಗಿ ನಂಮ್ಮಗೆ ಶ್ರಯೊಭಿವೃದ್ಧಿಗಳಾಗಬೇಕೆಂದು ಕೊಗಳಿ ಕೇಂದ್ರಕೆ ಸಲುವ ಕೊಟ್ಟೂರ ಸೀಮೆ ವಳಗಣ ಹೆಸರೂರ ಗ್ರಾಮದಲ್ಲಿ ಗದ್ದೆ ಬೀಜ ವರಿ ಲಾ ೧ಕ್ಕೆ ಯಕರೆ ೧ವಂದು ಭೂಮಿಯಂನ್ನು ಶಿವಾರ್ಪಿತವಾಗಿ ಕೊಟ್ಟು ಯಿಧೆವೆ. ಯಿದರಲ್ಲಿಯೇನುಂಟಾದ ನಿಧಿ ನಿಕ್ಷೆಪ ಜಲ ಪಾಷಾಣ ಅಕ್ಷಿ ಆಗಮಿ ಸಿದ ಸಾದ್ಯಂಗಳೆಂಬ ಅಷ್ಟಭೋಗ ತೇಜೋಪಾರ್ಜನೆಯಂನ್ನು ಆಗುಮಾಡಿಕೊಂಡು ಚಿರಕಾಲ ಕಲ್ಯಾಣ ಬೆರಸಿಕೊಂಡು ಅಚಂದ್ರಾರ್ಕ್ಕ ಸ್ಥಾಯಿಗಳಾಗಿ ಸುಖದಲ್ಲಿ ಅನುಬವಿಸಿಕೊಂಡು ಬರಬೇಕೆಂದು ಬರಸಿಕೊಟ್ಟ ಭೂ ಸ್ವಾಸ್ತಿ ಸರ್ವ ಮಾಂನ್ಯದ ದಾನಪಟ್ಟೆವೂ

❖❖

೪೩

ಕಾಲ : ಕ್ರಿ.ಶ. ? (ವಿರೋಧಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ತೋಂಟದಾರ್ಯಸ್ವಾಮಿಗಳು ಹರಪನಹಳ್ಳಿ ಸಂಸ್ಥಾನದ ಬಹಾದ್ದೂರ ಶ್ರೀಸೋಮಶೇಖರ ನಾಯಕರಿಗೆ ದ್ರಾಕ್ಷಾಫಲ ಕಳಿಸಿದ ಬಗ್ಗೆ ಅರಸನು ಬರೆದ ಉತ್ತರ.

* * *

ಶ್ರೀ ಕೊಟ್ಟೂರೇಶ್ವರ

ಶ್ರೀ ಮತ್ಸಚ್ಚಿದಾನಂದ ನಿತ್ಯಪರಿಪೂರ್ಣ

ಅವಿರಳ ಪರಂಜ್ಯೋತಿ ಸ್ವರೂಪರಾದ ರಾಜಾಧಿರಾಜ ಪೂಜಿತ ರಾಜಾ

ಮಾಂನ್ಯರಾಜೆ ಶ್ರೀ ತೋಂಟದ ಸ್ವಾಮಿಗಳವರ ದಿವ್ಯ ಶ್ರೀ ಚರಣಾರವಿಂದಗಳಿಗೆ–

ತಂಮ್ಮ ಕಾರುಣ್ಯ ಪ್ರಿಯಭಕ್ತರಾದ ಶ್ರೀಮಂನ್ ಮಹಾನಾಯಕಾಚಾರ್ಯ ನಾಯಕ ಶಿರೋಮಣಿ ಸೋಮಶೇಖರ ರಾಜಾಬಹದರಸಂಸ್ಥಾನ ಹರಪನ ಹಳ್ಳಿಯವರು ಮಾಡಿ ಮಾಡುವ ಅನೇಕ ಸಹಸ್ರಬಿಂನಹ ವಿರೋಧಿ ಸಂ। ದ ಪಾಲ್ಗುಣ ಶು॥ ೮ ವರಿಗೆ ॥ ನಾವು ಆರಾಮುದಲ್ಲಿ ಯಿಧೆವೆ. ತಂಮ ಪರಣಾಮಾತಿಶಯಗಳಿಗೆ ಸದಾ ಆಶೀರ್ವಾದ ಪತ್ರಿಕೆಗೆ ಅಪ್ಪಣೆ ಪಾಲಿಸಬೇಕು. ಸಾಂಪ್ರತ ದೇಶಸಂಚಾರಾರ್ಥವಾಗಿ ದಿಗ್ವಿಜಯ ಮಾಡಬೇಕೆಂಬ ಹಾಗೆ ಗಿದೊತ್ತೆರಿಗಿಯಿರುವದರಿಂದ ನ[ಮ]ರಿಗೆ ವಂದುವಂತಿ ಕಳಿಹಿಸಿ ಕೊಟ್ಟಿಲ್ಲಾ. ಸಂಚಾರ ಮಾಡಿಕೊಂಡು ಸ್ಥಳ ಪ್ರವೇಶವಾಗುತ್ತಲೆ ತ್ರಿರಿಗಿ ಕಳಿಹಿಸುತ್ತಾ ಯಿಧೆ ವೆಂಬ ಹೀಗೆ ಅಪ್ಪಣೆ ಪಾಲಿಸಿದಲು ಶಿವಾನಂದಂತ್ತದಿಂದಲೂ ರಾ॥ ಯವರು ವಿಸ್ತರಿಸಿದರಿಂದಲು ಸಂತೋಷಕರಾದೆವು ಅನುಗ್ರಹ ಮಾಡಿ ಕಳಿಹಿಸಿದಂಥಾ ದ್ರಾಕ್ಷಾಫಲವು ಬಂದು ಮುಟ್ಟಿದಂತಾಯಿತು । ಆದಿಯರಬ್ಯ ಪೂರ್ಣರಿನುಗ್ರಹ ಮಾಡಿ ಬರುತ್ತಾ ಯಿರುವಲ್ಲಿ ಯಿತ್ತಲಿಂದಾಗ ತಕ್ಕ ಪ್ರಸುತ್ತಗಳಿಗೆ। ಲೇಖಿಸುವುದು ಅವಸ್ಯಕವೆ ಸರಿಕದಾನುಸಾರ ರಾ॥ –ಯವರ ಬೆಂಬಳಿಯಲ್ಲಿ ಪುಷ್ಪವನ್ನು ಕೊಟ್ಟು ಸಂನ್ನಿದಾನಕ್ಕೆ ಕಳಿಹಿಸಿಧಿರಾಗಿ ಅವಶ್ಯಕವಾಗಿ ದೇಶಸಂಚಾರವನ್ನು ಮಾಡಿಕೊಂಡು ಸ್ವಸ್ಥಳ ಪ್ರವೇಶಾಂತರ ಹಿಂದಕ್ಕೆ ಕೊಟ್ಟು ಕಳಿಸುವಂತೆ ಮಾಡಿಸುವಲ್ಲಿ ವಿಶೇಷ ಪೂಜಾ ×× ಲೆಖ್ಯಾಂಶಗಳೆ ನಿಧಾವಾಗಿ ಯಿಂತಿ ಅನೇಕ ಸಹಸ್ರಬಿಂನಹ ॥

❖❖

೪೪

ಕಾಲ : ಕ್ರಿ.ಶ. ? (ದುರ್ಮತಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಶ್ರೀ ತೋಂಟದಾರ್ಯಮಠದ ಅರ್ಚನೆಗೆ ಮತ್ತು ಪಾಲಕಿ ಉತ್ಸವಕ್ಕಾಗಿ ಬಾಗುಳಿ ವೀರಭದ್ರನಾಯಕರು ಅಂಕಲಿ ಗ್ರಾಮ ಉಂಬಳಿಯಾಗಿ ನೀಡಿದ ವಿವರ.

* * *

ಶ್ರೀ ಮತ್ಪರಮ ಪಾವನ ಚಾರುಚರಿತ್ರ ಸನ್ಮೊಹ

××ಂಗ ಸನ್ಮಾರ್ಗಿ ಸಕಲ ದೇವತಾ ಶಿರೆ : ಪ್ರಧಾನ ಸಾರ

ಸಜ್ಜನ ಸಮಸ್ತದಯ ಕರ್ಣಿಕಾನಿವಾಸಯ

ಪಾಶವಿದೂರ ಕರುಣಾರಸಭರಿತ ಕಾಮನಾಶನ

ಅಲ್ಲಮಾಪ್ರಭುದೇವರ ಸಾಂಪ್ರದಾಯಕರಾದ ಮರಿತೋಟದ

ಸ್ವಾಮಿಗಳವರ ದಿವ್ಯ ಶ್ರೀ ಪಾದಪದ್ಮಂಗಳಿಗೆ ।

ತಂಮ್ಮ ಕಾರುಣ್ಯಾ ಭಕ್ತರಾದ ಶ್ರೀ ಮನ್ ಮಹಾನಾಯಕಾಚಾರ್ಯರಾದ ಬಾಗುಳಿ ವೀರಭದ್ರಯ್ಯನಾಯಕರವರೂ ಬರಸಿ ಕೊಟ್ಟ ಗ್ರಾಮ ವುಂಮಳಿ ವೆಚ್ಚದ ಕ್ರಮವೆಂತೆಂದರೆ ಆದಾಗಿ ×× ಪಾಲಕಿ ಬಗ್ಗೆ ಅಂಕಲಿ ಗ್ರಾಮವಂನು ದುರ್ಮತಿ ಸಂವತ್ಸರದ ಜೇಷ್ಠ ೧೦ ಆರಭ್ಯ ××ಂಮಳಿ ಯಾಗಿಕೊಟ್ಟು ಯಿಧೆವೆ। ಅಲ್ಲಿಯೆನು ಆದ ಅರ್ಚನೆಯಂನು ಆ×× ಮಾಡಿಕೊಂಡು ಅನುಭವಿಸಿಕೊಂಡು ಬಾಹಂತ್ತೆ ಮಾಡಸಬೇಕು । ಸ್ತಾನ ಮಾನ್ಯ ××× ಪ್ರಮಾಣ ದೇಸಾಯಿಕೆ ನಾಡದಳವಾರಿಕೆ ಆಯಮಾನ್ಯ ವರ್ತನೆ ಅರೆ ×× ಪಟ್ಟಿ ಮೊಗಲರ ಪಟ್ಟಿ ಆಯಿಪ್ಪಣ ಪಟ್ಟಿ ಪರಣದ ಪಟ್ಟಿ ಶಾಹೂನ ಪಟ್ಟಿ ಕನಾಜಬೆ ×× ಕೆದವಸ ಮುಂತಾದ ಸಕಲ ಬಾಬನು ನಿಂಮ ಉಮ್ಮಾಳಿ ವಳೆಗೆ ಹೇಳಿಕೊಟ್ಟು ××× ಯಂದು ಬರಸಿಕೊಟ್ಟ ಗ್ರಾಮ ಉಂಬಳಿ ಪಕ್ಷವು । ರಾಯನತ್ತವರ್ತನೆ ×××× ಬರಬೇಕು. (ಸೀಲ್)

❖ ❖

೪೫

ಕಾಲ : ಕ್ರಿ.ಶ. ?

ಭಾಷೆ : ಕನ್ನಡ

ಸಾರಾಂಶ : ಬಾಗಳಿ ಸೋಮಶೇಖರನಾಯಕರಿಗೆ ಶ್ರೀಮಠದ ರಥೋತ್ಸವಕ್ಕೆ ಬರಬೇಕೆಂದು ತೋಂಟದಾರ್ಯಸ್ವಾಮಿಗಳು ಆಹ್ವಾನಿಸಿದ ಪತ್ರಕ್ಕೆ ಬಾಗಳಿ ನಾಯಕರು ಪ್ರತಿಯಾಗಿ ಬರೆದ ಪತ್ರ.

* * *

ಶ್ರೀಮತ್ಪರಮ ಪಾವನ ಪವಿತ್ರ ಚಾರುಚರಿತ್ರಂ

ಸಂನ್ಮೋಹನಾಂಗ ಸಂನ್ಮಾರ್ಗಿ ಸಕಲ ದೇವತಾ ಸಿ

ರಃ ಪ್ರದಾನ ಸಾರ ಸಜ್ಜನ ಸದುಹೃದಯ ಕರ್ನಿಕಾ

ನಿವಾಸ ಆಶಾಪಾಶವಿದೂರ ಕರುಣಾರಸ ಭೂ

ತ ಕಾಮನಾಶನ ಅನಾಧಿ ನಿರಂಜನ ಅಲ್ಲಮಾಪ್ರಭೂ

ಸ್ವಾಮಿಯ್ಯನವರು ಸಾಂಪ್ರದಾಯಕರಾದಂಥಾ

ರಾಜಮಾಂನ್ಯ ರಾಜೆಶ್ರೀ ತೋಂಟದ ಸಿದ್ಧಲಿಂಗೇಶ್ವ

ರನ ಪಾದಕಮಲ ಸಂಜಾತರಾದಂಥಾ ತೋಂಟದ

ಸ್ವಾಮಿಗಳೈಯ್ಯನವರ ದಿವ್ಯಪಾದಪದ್ಮಂಗಳಿಗೆ–

ತಂಮ್ಮ ಕಾರುಂಣ್ಯ ಭಕ್ತರಾದ ಶ್ರೀ ಮನ್‌ಮಹಾನಾಯಕಾಚಾರ್ಯರಾದ ಬಾಗಳೆ ಸೋಮಶೇಖರ ನಾಯಕರ ಬಸಪ್ಪನಾಯಕರವರು ಸದ್ವಿನಯ ಭಯಭಕ್ತಿಯಿಂದ ಸಿರಸಾಷ್ಟಾಂಗವೆರಿಸಿ ಪೊಡಮಟು ಪಾದದ ಮೇಲೆ ಬಿದ್ದು ಮಾಡಿ ಮಾಡುವ ಅನೇಕ ಸಹಸ್ರಬಿಂನ್ನಹ. ಅದಾಗಿ ನಾವು ಪರುಣಾಮದಲ್ಲಿ ಯಿಧೆವೆ. ತಂಮ್ಮ ಶಿವಯೋಗಾನಂದ ದಿವ್ಯ ಭವಾತ್ತಿಶಯಗಳಿಗೆ ಆಗಾಗ್ಯೆ ಬರಸಿ ಕಳುಹಿತ್ತಿರಿ ಮಾಡಸಬೇಕು. ಸಾಂಪ್ರತ ಶ್ರೀ ಸ್ವಾಮಿ ರತೋತ್ಸಕೆ ಸಹಪರಿವಾರ ಯುಕ್ತವಾಗಿ ಸಾಗಿ ಬಂದು ನೀವು ಸಹ ಯಿಾಗ ದಯಮಾಡಸಬೇಕೆಂಬ ಹಾಗೆ ಬರಸಿಕಳುವಿಸ್ತ ಆಶೀರ್ವಾದ ಪತ್ರಿಕೆಯಂನು ಶಿರಸಾವಹಿಸಿ ಸನಾತರಾದೆವು. ಯಿಾ ರತೋತ್ಸಾಹಕೆ ಸಾಗಿಸಬಹುದು ಅತ್ಯಾವಶ್ಯವಲ್ಲದೆ ಯಿರಲ್ಲಿಲ್ಲವೆಂದರೆ ರಾಜಿ ಮೂಲಕದಿಂದ ವ್ಯವಧಾನವೆಂಬಂಥಾದು ತಂಮ್ಮ ಚಿತ್ತಕು ಪರಾಂಮ್ಮರಿಕೆ ಯಿಧರೆ ಯಥಾಪ್ರಕಾರ ಬೊನದ ಮನೆ ಸಾಮಾನು ಕಳುವಿಸಿ ಯಿಧೆವೆ. ಇಂತಹವಂನು ಸಾಂಗವಾಗಿ ಆಗುಮಾಡಿಸಿ ಆದಿವಾರಕ್ಕೆ ಆಶೀರ್ವಾದ ಪತ್ರಿಕೆಗೆ ಅಪ್ಪಣೆ ಪಾಲುಸುವಲ್ಲಿ ವಿಶೇಷ ಬಿಂನಹ ಮಾಡಿ ಬರಸ ಕಾರಣವಿಲ್ಲ. ಯಿಂತಿ ಬಿನ್ನಹ.

❖❖

೪೬

ಕಾಲ : ಕ್ರಿ.ಶ. ? (ಪ್ರಜೋತ್ಪತ್ತಿಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಬಾಗಳಿ ಬಸವಪ್ಪನಾಯಕರು ಮುಂಡರಗಿ ತೋಂಟದಾರ್ಯಮಠದ ಅನ್ನದಾನಸ್ವಾಮಿಗಳಿಗೆ ಭೂದಾನ ನೀಡಿದ ವಿವರ.

* * *

ಶ್ರೀಮತ್ಸಚಿದಾನಂದಳೈಕ್ಯ ಪರಿಪೂರ್ಣ ಅವಿರಳ

ಪರಂಜ್ಯೋತಿ ಸ್ವರೂಪಿಗಳಾದಂಥಾ ರಾಜಾಧಿರಾಜ ಪೂಜಿತರಾಜ

ಮಾಂನ್ಯರಾಜೆಶ್ರೀ ಮುಂಡರಗಿ ಅಂನದಾನಸ್ವಾಮಿಗಳವರಿಗೆ —

ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಬಾಯ ಶಂಭವೆ ಸ್ವಸ್ತಿ ಶ್ರೀ ಜಯಾಬ್ಯುದಯ ಶಾಲಿವಾಹನ ಶಕವರುಷ ××××ನೇ ಪ್ರಜೋತ್ಪತ್ಸನಾಮ ಸಂವತ್ಸರದ ಚೈತ್ರಬ ೨ ಯಿಾ ಶ್ರೀಮಂನ್‌ಮಹಾ ನಾಯಕಾಚಾರ್ಯಜಾಹಿಗೆ ತಮುವ ನಾಯಕರ ಗಂಡ ಮರೆ ಹೊಕ್ಕರೆ ಕಾಯ ಮಾರಾಂತರ ಗೆಲ್ಲ ಬಾಗುಳಿ ಬಸಪ್ಪನಾಯಕ ಸೋಮಶೇಖರನಾಯಕ ಬಾಹದೂರರವರೂ ಬರಸಿಕೊಟ್ಟ ಭೂಸ್ವಾಸ್ತಿ ಸರ್ವಮಾಂನ್ಯರ ದಾನಪಟ್ಟೆದ ಕ್ರಮವೆಂತಂದಡೆ ಅದಾಗಿ

ನಮಗೆ ಸುಕೃತ ಬರಬೇಕೆಂದು ಚಿರಂಜೀವಿಗಳ ಲಗ್ನಮಹೋತ್ಸವ ಕಾಲದಲ್ಲಿ ಕೊಗಳೆ ಕೇಂದ್ರಕೆ ಸಲುವ ಕೊಟ್ಟೂರು ಶಿಮೆಯೊಳಗಣ ಹೊಸೂರ ಮಜಿರೆಯಿಪ್ಪ ಕೆವರಗ್ರಾಮದಲ್ಲಿ ಕಂದಾಚಾರದಲ್ಲಿಗದ್ದೆ ಬಿಜವರ ಗ೨ ಯಿಕ್ಕಳ ವರುಸ ವರುಸ ಹನ್ಯಮಾಂನ್ಯವಾಗಿ ಶಿವಾರ್ಪಿತ ವಾಗಿ ಕೊಟ್ಟು ಷಾಯಿ ದೇವೆಯಿದರಲ್ಲಯೆನುಂತರದನಿ ಪರೀಕ್ಷೈಲ ಜಲ ಪಾಷಾಣ ಅಕ್ಷಿಣಿ

ಅಗಮಿ ಶಿಧ ಸಾಧ್ಯಂಗಳೆಂಬ ಅಷ್ಟಭೋಗು ತೇಜೊಪಾರ್ಜಕೆಯೆಂನು ಆಗುಮಾಡಿಕೊಂಡು ಚಿರಕಾಲ ಕಲ್ಯಾಣ ಚಿಂತಿಸಿಕೊಂಡು ಆ ಚಂದ್ರಾರ್ಕ ಸ್ಥಾಯಿಗಲಾಗಿ ಅನುಭವಿಸಿಕೊಂಡು ಬರಬೇಕೆಂದು ಬರಸಿಕೊಟ್ಟ ಭೂಸ್ವಾಸ್ತಿ ದಾನ ಪಟ್ಟವು. ಸ್ವೈದತ್ತಾ ಗುಣಂ ಪುಂಣ್ಯಂ ಪರದತ್ತಾನು ಪಾಲನಂ ವರದತ್ತಾ ಹಾರೇಣಸ್ವರತ್ತಾಂಜಪ್ಪಲಂ ಭೆವೆತು ॥೧॥ ದಾನ ಪಾಲನ ಯೋರ್ಮದ್ಯೆ ದಾನಾತ್ಸ್ರಯೋನುಪಾಲನಂ ದಾನಾತ್ಸ್ವರ್ಗ ಮವಾಪ್ನೊತಿ :ಔ ಪಾಲನಾದ ಚ್ಯುತಂ ದಂ ॥೨॥

❖❖

೪೭

ಕಾಲ : ಕ್ರಿ.ಶ. ? ಭಾಷೆ : ಕನ್ನಡ

ಸಾರಾಂಶ : ಹರಪನಳ್ಳಿಯ ರಾಜಬಹಾದ್ದೂರ ಸೋಮಶೇಖರನಾಯಕರು ಮುಂಡರಗಿ ತೋಂಟದಾರ್ಯಮಠದ ಅನ್ನದಾನಸ್ವಾಮಿಗಳಿಗೆ ಒಂಟೆಯನ್ನು ಕಳಿಸಿದ ವಿವರ.

* * *

ಶ್ರೀ ಮತ್ಸಚ್ಚಿದಾನಂದ ನಿತ್ಯಪರಪೂರ್ಣ ಅವಿರಳ
ಪರಂಜ್ಯೋತಿ ಸ್ವರೂಪರಾದ ರಾಜಾಧಿರಾಜ ಪೂಜಿತ ರಾಜಮಾಂನ್ಯ
ರಾಜೇಶ್ರೀ ಅಂನ್ನದಾನಸ್ವಾಮಿಗಳವರ ಮಹಾಂತಸ್ವಾಮಿಯವರ
ಪಾದಪದ್ಮಂಗಳಿಗೆ–
ಶಿದ್ಧಲಿಂಗಪ್ಪನವರ ಸಂಗಾತ :
ಶ್ರೀಮನ್ ಮಹಾನಾಯಕಾಚಾರ್ಯ ನಾಯಕ ಶಿರೋಮಣಿ ಸೋಮಸೆ
ಖರ ರಾಜಾ ಬಹದರ ಸಂಸ್ಥಾನ ಹರಪನಳ್ಳಿಯವರು ಮಾಡುವ ಬಿಂನಹಾ. ಅದಾಗಿ
ಆಶೀರ್ವಾದ ಪತ್ರಿಕೆ ಕಳುಹಿಸಿದರಿಂದ ತಿಳಿಲಾಯ್ತು. ಅದೆ ಪ್ರಕಾರ
ವಂಟಿಯನ್ನು ಶ್ರೀ—ಸಂನ್ನಿದಾನಕ್ಕೆ ಕಳುಹಿಸಿ ಯಿಧತೆ ತಿಳಿದಿರಬೇಕು.
ವುಳಿಕಿ ವಿಷಯವಾಗಿ ರಾಜೇಶ್ರೀಗಳ ಮುಖದಿಂದ ವ್ಯೆದ್ಯವಾದಿತು. ಯಿಂತಿ ಅ
ನೇಕ ಸಹಸ್ರ ಬಿಂನ್ನಹ.

❖❖

೩. ದೇಸಾಯಿಗಳವರ ಪತ್ರಗಳು

*

೩. ದೇಸಾಯಿಗಳವರ ಪತ್ರಗಳು

೪೮

ಕಾಲ : ಕ್ರಿ.ಶ. ೧೭೧೮ (ವಿಳಂಬ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಗದಗ, ವುಡಕುಂದೆ, ಸಿಂಧನೂರು, ಬಾದಾಮಿ ಆಳುವ ಕಲಕೇರಿ ಸೀಮೆ ನಾಡಗೌಡರಾದ ವೆಂಕಪ್ಪಯ್ಯನು ತೊರೆನಿರಲಗಿ ಎಂಬ ಗ್ರಾಮವನ್ನು ಶ್ರೀ ತೋಂಟದಾರ್ಯಮಠ ಕೊಟ್ಟ ಭೂದಾನದ ವಿವರ.

* * *

೧॥ ಶ್ರೀಮತ್ಸಚ್ಚಿದಾನಂದ ನಿತ್ಯಪರಿಪೂರ್ಣ
ಅವಿರಳ ಪರಂಜ್ಯೋತಿ ಸ್ವರೂಪಗಳಾದ ರಾಜ
ಮಾನ್ಯರಾಜೇ ಶ್ರೀ ತೋಂಟದ ದೇವರವರಿಗೆ
ಶ್ರೀ ಮನೃಪ ಶಾಲಿವಾಹನ ಶಕವರುಷ ೧೬೪೦ನೆ ವಿಳಂಬ ನಾಮ
ಸಂವತ್ಸರದ ಕಾರ್ತಿಕ ಬ । ೫ಲ್ಲು ಸ್ಥಿರವಾರದಲ್ಲು ರಾಜೇಶ್ರೀ ಪ್ರ ॥
ಗದಗು ವುಡಕುಂದೆ ಶೀಮೆ ದೇಸಾಯಿ ಸಿಂಧನೂರ ಶೀಮೆ
ಸರದೇಶಾಯಿ ಕಿಲ್ಲೆ ಬಾದಾಮಿ ಸ॥ ಕಲಕೆರೆ ಶೀಮೆ ನಾಡಗೌಡರಾದ
ಬಹದರ ವೆಂಕಪ್ಪಯ್ಯನವರು ಬರಿಸಿಕೊಟ್ಟ
ದಾನ ಪತ್ರಕ್ರಮವೆಂತೆಂದರೇ ಬಾದಾವಿ ಶೀಮೆಯೊಳಗಣ
ತೊರೆ ನಿರಲಿಗಿ ಯಂಬ ಗ್ರಾಮವನು ರಾ ॥ ದೇಶಾಯಿ
ಅಚ್ಚಪ್ಪನಾಯಕರು ಲಿಂಗಮುದ್ರೆ ಸ್ಥಾಪ್ಯದಿಂದ
ದಾರಾದತ್ತವಾಗಿ ದಾನವ ಮಾಡಿಕೊಟ್ಟಿದ್ದಾರೆ. ಆ ಗ್ರಾಮದಲ್ಲಿ

ನಂಮ ನಾಡಗೌಡಿಕೆ ಸ್ವಾಸ್ತಿಯಿದ್ದ ಬಿ ॥ತ॥
ಗ೩೮ ವರ್ತನೆ ಮೂರು ವರಹ ಜ ॥ ೧ ವಂದು ಮಾರು ಭೂಮಿ
ಯಿೂ ಪ್ರಕಾರ ನಂಮ ವ್ರಿತ್ತಿಯಿದ್ದರದನು ದೇವರವರಲಿ
ಮಠದ ಸೇವಾರ್ಥವಾಗಿ । ನಾವು ಆತ್ಮ ಸಂತೋಷದಿಂದ
ದಾನವ ಮಾಡಿಕೊಟ್ಟು ಯಿಧೆವೆ. ಯಿೂ ಸ್ವಾಸ್ತಿ ಆ ಗ್ರಾಂಮ
ಸಹ ಅಚಂದ್ರಾರ್ಕ ಸ್ಥಾಯಿಗಳಾಗಿ ನೀವು ನಿಂಮ
ಶಿಷ್ಯ ಪರಂಪರಾ ಅನುಭವಿಸಿ ಕೇಳುತ್ತ ನಮಗೆ
ಆಶೀರ್ವಾದ ಮಾಡುತ ಯಿೂಹರೆಂದು ಬರಿಸಿಕೊಟ್ಟದಾನ
ಪತ್ರವು. ಸ್ವದತ್ತಾ ದ್ವಿಗುಣಂ ಪುಣ್ಯಂ ಪರದತ್ತಾನು
ಪಾಲನಂ । ಪರದತ್ತಾಪ ಹಾರೇಣ ಸ್ವದತ್ತಂ । ನಿಷ್ಪಲಂಬವೆತು
(ಸಹಿ ಇದೆ ಹಿಂದಿಯಲ್ಲಿ)

❖ ❖

೪೯

ಕಾಲ : ಶಾ.ಶ. ೧೬೩೮, ಕ್ರಿ.ಶ. ೧೭೧೬ (ವಿಳಂಬ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಕಿಲ್ಲೆ ಬಾದಾಮಿ ಸೀಮೆ ದೇಸಾಯಿ ಪವಾಡಿನಾಯ್ಕಿರ ಮಗ ಆಚಪ್ಪ ನಾಯ್ಕಿರು ತೊರೆನಿರಲಗಿ ಗ್ರಾಮವನ್ನು ತೋಂಟದಾರ್ಯಮಠಕ್ಕೆ ದಾನ ನೀಡಿದ ವಿವರ.

* * *

೦॥ ನಮಃಸ್ತುಂಗ ಶಿರಃಸ್ಚುಂಬಿ ಚಂದ್ರಚಾಮರ ಚಾರುವೆತ್ಯೆ
೦॥ ಯಲೋಕ್ಯ ನಗರಾರಂಭ ಮೂಲ ಸ್ಥಂಬಾಯ ಶಂಭವೆ ॥
೦॥ ಜಯತ್ಯಾದಿವರಾಹೋಯಂ । ಯೆನದಾತ್ರಿ ಸಮುದ್ರತಃ
೦॥ ಅಂಗ ಸಂಗದ ನಾದ್ಯಪಿ । ಸಪ್ರೆಂ ಪುಲಕದಂತುರಾ ॥

ಸ್ವಸ್ತಿ ಶ್ರೀಮಂನೃಪ ಶಾಲಿವಾಹನ ಶಕವರುಷ ೧೬೩೮ನೆಯಾ ಪ್ರವರ್ತಮಾನೆ ವಿಳಂಬ ನಾಮ ಸಂ॥ದ ಉತ್ತರಾಯಣೆ ವಸಂತರುತೌ ವೈಶಾಖ ಶುಧ ತ್ರಿತಿಯಾ ಬೊಮವಾಸರ ರೊಯಿಣಿ ನಕ್ಷತ್ರ ಆನಂದಯೋಗ ಗರ್ಜಾಕರ್ಣಾಯೋಗದಿ ಸ್ವಸ್ತಿಶ್ರೀ ತೋಟದಸ್ವಾಮಿ ಚೆರ್ಣಾರವಿಂದಕೆ.

ಬಾಲ್ಕಿ ಕಿಲ್ಲೆಬಾದಾವಿ ಸೀಮೆ ದೇಶಾಯಿ ಪವಾಡಿ ನಾಯ್ಕಿರ ಮಗಾ ಅಚೆಪ ನಾಯ್ಕಿರು ಬರಸಿ ಕೊಟ್ಟ ದಾನಪತ್ರಉ ಸೂ॥ ಸಮನ ಆಶಾರಮಯ ಅಲ್ಲು ಆದರೆ ನಂಮ್ಮ ಹಿರೇರಿಗೆ ಸುಕೃತವಾಗಬೇಕು ಯಂದು ನಂಮ್ಮ ತೊರೆ ನೀರಲ್ಲಿ ಗಿ ಧಾರ ದಾತ್ತವಾಗಿ ಚೆತುರ ಆಶ್ರಯಸಿ

ಮಂತ್ರಕುಲಬಾಬು ಕುಲಕಾನುಲ್ಲಿಂಗ ಶೆಸನ ಮುದ್ರಿಹಾಕಿಸಿ ಶೆಪುತ್ರ ಸಉತ್ರ ಪರಂಪರೆ ಅನಭವಿಸಿ ಕೊಂಡು ಸ್ನಾನಾ ಅನುಷ್ಠಾನಗಳಾ ಮಾಡಿಕೊಂಡು ತ್ರಿಕಾಲದಲ್ಲಿ ಆಶ್ರಿವಾದವನು ಕೊಟ್ಟುಕೊಂಡು ನಂಮಂಥ ನೇರ ಮಾಡುವದು

ಶ್ಲೋಕಾ

೦।। ಸ್ವದತ್ತಾಂ ದ್ವಿಗುಣಂ ಪುಣ್ಯಂ ।। ಆಹೊರಾಘಂ ರಾಜೇಂದ್ರಸಪ್ತ
೦।। ಪರದತ್ತಾನುಪಾಲನಂ । ೦।। ಕಲ್ಪನು ಜೀವನಾ ।। ನಶ್ರೋನೊ
೦।। ಪರದತ್ತಾ ಪಹಾರೇಣ । ೦।। ಮಿನ ಪಶ್ಚಾಮಿ ಸ್ವಯಂದತ್ತಾಪ
೦।। ಸ್ವದತ್ತಂ ನಿಸ್ಫಲಂ ಭವೆತ್ ೦।। ಹಾರೇಣಾ ।।೧।।

❖❖

೫೦

ಕಾಲ : ಕ್ರಿ.ಶ. ೧೭೪೧ (ಶಲೆವರ್ತಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಮುಂಡರಗಿ ತೋಂಟದ ಅನ್ನದಾನಸ್ವಾಮಿಗಳವರಿಗೆ ಬೆಣಕಲ್ಲಸ್ಥಳದಲ್ಲಿರುವ ಭೂಮಿಯನ್ನು ದಾನ ನೀಡಿದ ವಿವರ.

* * *

೦।। ನಮಸ್ತುಂಗ ಸಿರಶ್ಚುಂಬಿ ಚಂದ್ರಚಾಮರ
ಚಾರವೆ ತ್ರಯೊಲೊಕ್ಯ ನಗರಾಂಭ ಮೂಲ
ಸ್ತಂಬಾಯ ಶಂಭವೆ ಸ್ವಸ್ತಿಶ್ರೀ ಜಯಾ
ಭ್ಯುದಯಾ ನೃಪ ಶಾಲಿವಾಹನ ಶಖೆ ೧೬೬೩ನೆಯ
ಪ್ರವರ್ತಮಾನ್ಯ ಶ್ಯಲ್ಲೆವರ್ತಿನಾಮ
ಸಂ ।। ರದ ಕಾರ್ತಿಕ ಬಹುಳ ।। ೭ಲ್ಲು
ಶ್ರೀ ಸದಾಶಿವ ಸ್ವರೂಪರಾದ ರಾಜಪೂಜಿತರಾದ
ರಾಜಶ್ರೀ ತೋಂಟದ ಸ್ವಾಮಿಗಳವರ
ಸುಜ್ನಾನ ಸಂಜಾತರಾದ ಅಂನ್ನದಾನ ಸ್ವಾಮಿಗಳವರಿಗೆ–

ಕಿಲ್ಲೆ ಕೊಪ್ಪಳದ ಸೀಮೆ ದೇಶಾ಼ ದೇಶಕುಲಕರ್ಣಿ ವಿಟಪ್ಪಯ್ಯಾವಾ ತಿಮಪ್ಪ ಯ್ಯವಾ ವೆಂಕಟಪ್ಪನವರು ಬರಕೊಟ್ಟ ಭೂದಾನ ಪತ್ರದ ಕಾಗದಉ ಪ್ರಮಾಣೆನ ಉಮಳಿ ಗ್ರಾಮ ಬೆಣಿಕಲ್ಲ ಸ್ಥಳದಲ್ಲಿ ಮಠಕ್ಕೆ ಧರ್ಮಾರ್ಥವಾಗಿ ಭೂದಾನ ಕೊಟ್ಟದ್ದು. ಯರೀ ಹೊಲ ।। ಮೂರು ಮಾನಾ ಹೋಲಾ ಮಾನ್ಯ ಹಾಕಿ ನಾಲ್ಕು ಮೂಲಿಗೆ ಲಿಂಗಸ್ಥಾಪನಿ ಕಲ್ಲು ಹಾಕಿಸಿಕೊಟ್ಟು ಯಿಧೆವೆ. ಆ ಹೊಲವನು ತಾಉ ಸುಖದಲ್ಲಿ ಅನುಭವಿಸಿಕೊಂಡು ಯಿಹುದು ಎಂದು ಬರಕೊಟ್ಟ ಭೂದಾನ

ಪಟ್ಟಿದ ಕಾಗದವು. ನಾವು ಕೊಟ್ಟ ಭೂಮಿ ವಳಗೆ ನಿಧಿ ನಿಕ್ಷೇಪ ಜಲ ಪಾಷಾಣ ಯಿನು ಉಂಟಾದ್ದು ಚಂದ್ರ ಸೂರ್ಯ ಆಚಂದ್ರಾರ್ಕ ಪಾರಂಪರವಾಗಿ ಸುಖದಲ್ಲಿ ಅನುಭವಿಸಿಕೊಂಡು ಯಿರಬೇಕೆಂದು ಬರಕೊಟ್ಟ ಭೂದಾನ ಪಟ್ಟೆದ ಕಾಗದಲು.

ಸ್ವದತ್ತಂ ದ್ವಿಗುಣ ಪುಣ್ಯಂ ಪರದತ್ತಾನುಪಾಲನಂ। ಪರದತ್ತಾಪಹಾರೇಣ ಸ್ವದತ್ತಂ ನಿಃಫಲಂ ಭವೇತ್ ॥೧॥ ಸ್ವದತ್ತಾ ಪುತ್ರಿಕಾಬಾರ್ಯಾ ಪಿತ್ರುದತ್ತಾ ಸಹೋದರಿ । ರಾಜೊದತ್ತಾ ಸ್ವಯ ಮತಾನೇಕವಾ ಭೂಮಿಂ ತೆಜ್ಯೆತ್ ॥೧॥

ಕಿಲ್ಲೆ ಕೊಪ್ಪಳದ ಸೀಮೆ ದೇಶಾಯಿ ದೇಶಕುಲಕಣಿ ತಿಮ್ಮಪ್ಪಯನವರ ವಪ್ಪಿತಲು. ದೆ॥ ದೆ॥ ವೆಂಕಪ್ಪನವರ ವಪ್ಪಿತವು. ಕಿಲ್ಲೆ ಕೊಪ್ಪಳದ ಸೀಮೆ ದೇಶಾಇ ದೇಶ ಕುಲಕರ್ಣಿ ವಿಟ್ಟಪ್ಪಯ್ಯನವರ ವಪ್ಪಿತವು.

ಬಿಕ್ಕಲಮಜಿ । ದಿಕ್ಕಲ್ಲ ವಿರಾಪುರ ಮುದೂಪುರಗೌಡ

ಗೋವಿಂದಗೌಡನ ಬರಹವು.

❖❖

೫೧

ಕಾಲ : ಶಾ.ಶ. ೧೬೮೦, ಕ್ರಿ.ಶ. ೧೭೫೮ (ಬಹುಧಾನ್ಯ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಹುನಗುಂದ ಸೀಮೆ ದೇಸಾಯಿ, ಬಲಕುಂದಿ ನಾಡಗೌಡರು ಮಲಕಾಪುರದ ಚೌಕಿಮಠಕ್ಕೆ ಭೂದಾನ ನೀಡಿದ ವಿವರ.

* * *

ಶ್ರೀಮತ್ಸಚ್ಚಿತಾನಂದ ಅವಿರಳ ಪರಂಜ್ಯೋತಿ

ಸ್ವರೂಪಿಗಳಾದ ಶಿವಭಕ್ತಿ ಪರಾಯಣರಾದ ॥

ರಾ॥ ತೋಟದಸ್ವಾಮಿಗಳ ಪಾದಕ್ಕೆ —

೦॥ ಶಾಲಿವಾಹನ ಶಖ ೧೬೮೦ ಬಹುಧಾನ್ಯನಾಮ ಸಂವತ್ಸರದ ಜೇಷ್ಠ ಬ॥ ೧೩ ಸೋಮವಾರದಲ್ಲು ನಿಂಮ್ಮ ಕಾರುಂಣ್ಯ । ಭಕ್ತರಾದ ಪ॥ ಹುನಗುಂದ ಸೀಮೆ ॥ದೇ॥ ಸ॥ ದೇ। ಬಲಕುಂದಿ ೯॥ ನಾನಾಗೌಡರಾದ ರಾಮರಡ್ಡಿಗೌಡರು ಬರ್ಸಿಕೊಟ್ಟ ಭೂದಾನ ಪತ್ರ ಸು॥ ೧೧೬೮ ಪ್ರ॥ ಅದಾಗಿ ನಮಗೆ ಸುಕೃತವಾಗಬೇಕು ಯೆಂದು ತಮಗೆ ಮಲಕಾಪುರದ ಪಾಡಾ ವೀರಪ್ಪನ ಪ್ಯಾಟಿ ಚೌಕಿ ಮಟಕ್ಕೆ ಕ॥ ಕೇಲೂರ ಸೊಳೆಬಾವಿ ಸೀಮೆ ವಳಗೆ ಕಟ್ಟಿ ವಕ್ಕಲ ಮಗನ ನಾಡಾ ಪರದೇಸಿಗೆ ಹಾಕಿ ಕೊಟ್ಟ ಹೊಲಾಕ್ಕೆ ॥ ೯೨ ಯರಡು ಗಿಧನ ಮಸಾರಿದು ಸಾಬ್ಯಸ್ತು ಮಟಕ್ಕೆ ಹಾಕಿಕೊಟ್ಟು ಯಿಧೇವೆ. ಸೂರ್ಯ ಚಂದ್ರಾದಿಗಳು ಯಿಹೊಪರಿಯಂತ್ರಲು ಹೊಲಾ ಮಾಡಿಕೊಳಬೇಕು. ಯಿದಕ್ಕೆ ಅಂನ್ಯಥಾ ಆಗಲಿಕ್ಕೆ ಯಿಲ್ಲಲು. ನಂಮ ರಜಾವಂದಿವಿ ಬರಕೊಟ್ಟು ಯಿಧೇವೆ. ಅನುಮಾನವು ಯಿಲ್ಲವು. ಬರ್ಸಿಕೊಟ್ಟ ದಾನಪತ್ರ ಸಹಿ.

❖❖

೫೨

ಕಾಲ : ಕ್ರಿ.ಶ. ? ಭಾಷೆ : ಕನ್ನಡ

ಸಾರಾಂಶ : ಡಂಬಳ ಮಠದ ರಥೋತ್ಸವಕ್ಕೆ ಸೊಂಡೂರ ವೆಂಕಟರಾವು ಘೋರ್ಪಡೆಯವರಿಗೆ ಬರಬೇಕೆಂದು ತೋಂಟದಾರ್ಯಸ್ವಾಮಿಗಳು ಬರೆದ ಪತ್ರಕ್ಕೆ ನೀಡಿದ ಉತ್ತರ.

* * *

ಶ್ರೀಮನ್ನಿರಂಜನ ನಿರತಿಶಯ ನಿರಘ ನಿಃಶೂನ್ಯ

ನಿರ್ಲೇಪ ನಿರಾವರಣ ನಿಷ್ಕಳ ನಿರಾಲಂಬ ನಿರಾಧಾರ

ಸತ್ತಾದಿ ಲಕ್ಷಣ ಲಕ್ಷಿತ ಮಲಮಾಯಾನಂಗ ಭಂಗ

ಚಿದ್ಘನಲಿಂಗ ಸಂಗ ಮಂಗಲ ಪ್ರಭುವರಾಂನ್ವಯಾ

೦ಚಿದೇಶ ದಳಪದ್ಮ ನಿವಾಸ ಚರಪರಾವತಾರ ಷಟುಸ್ಥಲ

ಗುರುಕುಲ ಕೇತನಾಯ ಮಾನರಾದ ಶ್ರೀ ತೋಂಟದ

ಸ್ವಾಮಿಗಳವರ ಪಾದಕ್ಕೆ ——

ಕಿಲ್ಲಾ ಸೊಂಡೂರ ವೆಂಕಟರಾವು ಹಿಂದೂರಾವು ಘೋರ್ಪಡೆ ಮಾಲಕ ತಮ ದಾಟ ಸ ॥ ಪತ್ರಿ ಪಂಕಟರಾವು ಮಾಡುವ ಸಾ। ಬಿಂನಹವು ಯಿ ಸ॥ ದ ಮಾಘ ಶುದ್ಧ ೧೦॥ ×× ರುದ್ನಕ್ಕೆ ತಂಮ ಕೃಪಕಟಾಕ್ಷದಿಂದ ಕ್ಷೇಮದಲ್ಲಿ ಯಿದ್ದೇವೆ. ತಂಮ ವೈಭವಂಗಳಿಗೆ ××× ಪಾತ್ರಿಕ ನಿರೂಪ್ಪಿ ×× ಬಾ ಹೊವಲ್ಲಿ ಖಾವಂದರೆ ಯಿದ್ವಿರಿ. ಸಾ॥ ಡಂಬಳದಲ್ಲಿ ಶಿ —— ಸ್ವಾಮಿ ರಥೋತ್ಸವ ಯಿ ಶು ॥೧೫॥ ಗೆ ಸಾಗುತ್ತದೆ. ಪರಿವಾರಯುಕ್ತವಾಗಿ ॥ಹೊದೆಂಬುದಾಗಿ ಆ॥ ಪತ್ರಿಕೆ ಪಾಲ್ಸಿಯಿದ್ದಿರಿ ಸಂತೋಷವಾಯಿತು. ಆ ಮಹೋತ್ಸವ ಕಾಲಕ್ಕೆ ವ ೦×× ವರಕಳ್ಳತ್ತ ಯಿಧೆವೆ. ಪಾದಕ್ಕೆ ಅರಿಕಿ ಯಿರಬೇಕು. ಇಂತಿ ಸಾ॥ ಬಿಂನಹವೂ.

❖❖

೫೩

ಕಾಲ : ಕ್ರಿ.ಶ. ೧೮೦೪ (ರುಧಿರೊದ್ಗಾರಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಕಲಕೇರಿ ನಾಡಗೌಡರಾದ ಮಧುರಾಬಾಯಿ ಸೀನಪ್ಪಯ್ಯರ ಪುತ್ರ ವೆಂಕಪ್ಪಯ್ಯನವರ ಪುತ್ರ ಬಹಾದ್ದೂರ ಸೀನಪ್ಪಯ್ಯನವರು ಡಂಬಳ ತೋಂಟದಾರ್ಯಮಠದ ರಥೋತ್ಸವಕ್ಕೆ ನೀಡಿದ ದಾನದ ವಿವರ.

* * *

ಶ್ರೀಮತ್ಸಚ್ಚಿತಾನಂದ ಅವಿರಳ ಪರಂಜ್ಯೋತಿ ಸದಾ

ಶಿವಧ್ಯಾನ ನಿರತ ರಾಜಮಾಂನ್ಯೆ ರಾಜಶ್ರೀ

ದಂಮ್ಮಳದ ತೋಟದ ಸ್ವಾಮಿಗಳವರಿಗೆ ——

॥ ನಿಂಮ್ಮ ಅತ್ಯೆಂತ ಭಕ್ತರಾದ ಸಾ॥ ಗದಗು ಉಡಕುಂದೆ ಶೀಮೆ ದೇಶಾಯಿ ಪೊ॥ ಸಿಂಧನೂರ ಸೀಮೆ ಸರದೇಶಾಯಿ ಕಿಲ್ಲೆ ಬಾದಾವಿ ಸಾ॥ ಕಲಕೇರಿ ನಾಡಗೌಡರಾದ ಮಥುರಾಬಾಯಿ ಸಿನಪ್ಪಯ್ಯನವರ ಪುತ್ರ ವೆಂಕಪ್ಪಯ್ಯನವರ ಪುತ್ರರಾದ ಬಾದರ ಸಿನಪ್ಪಯ್ಯನವರು ಬರಸಿಕೊಟ್ಟ ಶಾಸನ ಪಟ್ಟಿಕ್ರಮವೆಂತೆಂದ್ರೆ ಶ್ರೀ – ಗದಗಿ ದಂಮ್ಮಳ ಮಠದ ರಥ ಉತ್ಸಹ ಸಾಲೆಸಾಲೆದಲ್ಲಿ ಅಂಮುಗತಾ ಬರಲಾಗಿ ಯಿತಲಾಗಿನಾತವಾನಗಿಂದಾನದ ಕಂಡು ಸಂಸ್ಥಾನದಿಂದಾ ಸಾಂಗವಾಗಿ ಆಗಬೇಕೆಂದು ತಿಳಿದು ಧರ್ಮಾದಾಯಿ ಮಾಡಿಕೊಟ್ಟ ವಿವರ ಕೂಟ ದಂಮ್ಮಳ ಪೈಕಿ.

೧೫ ಕಸಬೆ ದಂಮಳ ಪೈಕಿ ಹದಿನೈದು ವರಹ

೫ ಕೊಟ ಮಜಕೂರ ಜಕಾಯಿತಿ ಪೈಕಿ ಆಯಿದು ವರಹಾ

೫ ಸಿಂದಿ ವಗ್ಯೆರೆ ಪೈಕಿ ಆಯಿದು ವರಹಾ

೨೫ ಅಂತು ಯಿಪ್ಪತು ಆಯಿದು ವರಹ ಸಾಲಾ

ಬಾಡ ಮಾಡಿಕೊಟ್ಟು ಗ್ರಾಮದವರ್ತಿಗೆ ತಾಕ್ತಿದಿ ಬರಕೊಟ್ಟು

ಯಿಧೆವು. ಪುರಾತನ ಪ್ರಕಾರ ರಥ ಉತ್ಸವ ಯಥಾ

ಯುಕ್ತಸಾಂಗಮಾಡೊದೆಂದು ಬರಸಿಕೊಟ್ಟ ದಾನಪತ್ರ ಸಹಿ

ಶಕಾ. ೧೭೨೫ ಹದಿನೆಳನೂರು ಯಿಪ್ಪತ್ತೈದನೆಯ ರುಧಿರೋದ್ಗಾರಿ

ನಾಮ ಸಂ। ಪಾಲಗುಣ ಶುಧ ೧೫ ಪೂರ್ಣಮಿ ॥

❖❖

೫೪

ಕಾಲ : ಕ್ರಿ.ಶ. ೧೮೦೫ (ಕ್ರೋಧನ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಬೆಂಕಿಸ್ವಾಮಿಯವರಿಗೆ ಅರ್ಥಾತ್ ತೋಂಟದಾರ್ಯಸ್ವಾಮಿಯವರಿಗೆ ಭೂದಾನ ನೀಡಿದ ವಿವರ.

* * *

ತೋಂಟದ ಸಿದ್ಧಲಿಂಗಸ್ವಾಮಿ

೦॥ ನಮಸ್ತುಂಗ ಶಿರಸ್ಚುಂಬಿ ಚಂದ್ರ ಚಾಮರ ಚಾರವೆ

ತ್ರೈಯಲೋಕ್ಯ ನಗರರಾಂಭ ಮೂಲ ಸ್ತಂಬಾಯ ಶಂಭವೆತ್ ॥೧॥

ಸ್ವಸ್ತಿ ಶ್ರೀ ಜಯಾಭ್ಯುದಯ ನೃಪಶಾಲಿವಾಹನ ಶಕೆ ೧೭೭೭ ಹದಿನೆಳು ನೂರ ಯಿಪ್ಪತ್ತೇಳನೆ ಪ್ರವರ್ತಮಾನ ಕ್ರೋಧನ ನಾ ||ಸಂ|| ಆಶ್ವಿಜ ಬ|| ೪ ಯಲ್ಲು ರಾ|| ಕರಕಮಲಸಂಜಾತ ಬೆಂಕಿಸ್ವಾಮಿಗಳವರಿಗೆ ||

ರಾ|| ಕಿಲ್ಲೆ ಬಾದಾವಿಗೆ|| ದೇ|| ಬಾಲ್ಲ×ಯಿ ನಾಯ್ಕರು ಬರಸಿಕೊಟ್ಟ ಯಿನಾಮು ಪತ್ರ ಸೂಸಿತ್ತ ಮಯಿತ್ಯೆನ ××××××

ನೀವು ದೊಡಮಹಾಪುರುಷರು ನಿಮ್ಮಂಥವರಿಗೆ ಕೊಟ್ಟು ಉಚಿತವೆಂದು ತಿಳಿದು ಹೋಲ ಕೊಟ್ಟಿತು ||ತ||

೧೯|| ಮೊ|| ಅರಹುಣಸಿ ಬಾಲಸಾರಿ

ಪೈಕಿ ಹೂವಿನಗಿಡ ಹಾಕಲ್ಕಿ ಲಿಂಬ

ಶೆಟ್ಟಿ ಹೊಲದ ಪೈಕಿ.

||| ಮೊ| ಸಂದಿಗವಾಡದ ಪೈಕಿ ಬಾಲಸಾರಿ

ಹೊಲ ಪೈಕಿ ಮಾರಿಗೆ ಮುವತ್ತಾರು ೩೬ ಬಿಗೇದಲ್ಲಿ.

---

೧೯ ವಂದು ಮಾರು

ಯಿತ್ತ|| ತಂಮಗೆ ಕೊಟ್ಟುಯಿಧೇವೆ. ಸದರಹು

ಹೊಲಾ ಉಂಡುಕೊಂಡು ಸಂವಸ್ತಾನಕ್ಕೆ ಅನಿವಾರ್‍ಯದ

ಕೊಟ್ಟುಕೊಂಡು ನಮ್ಮ ವಂಶ ಪರಂಪರೆ ಸೂರ್‍ಯಚಂದ್ರನುಳ

ಪರಿಯಂತ್ರ ಅನಭವಿಸಿಕೊಂಡು ಯಿಹುದೆಂದು ಬರಸಿಕೊಟ್ಟ

ಭೂದಾನಪತ್ರ. (ಸೀಲ್)

ಸಹಿ.

❖❖

೫೫

ಕಾಲ : ಕ್ರಿ.ಶ. ? ಭಾಷೆ : ಕನ್ನಡ

ಸಾರಾಂಶ : ಗದಗ, ರವುಡಕುಂದೆ, ಸಿಂಧನೂರ ದೇಸಾಯರು ಮತ್ತು ಕಲಕೇರಿ ಸೀಮೆ ನಾಡಗೌಡರಾದ ಮಧುರಾಬಾಯಿ ಸೀನಪ್ಪಯ್ಯನವರ ಪುತ್ರ ವೆಂಕಪ್ಪಯ್ಯನವರ ಪುತ್ರರಾದ ಬಹಾದ್ದೂರ ಸೀನಪ್ಪಯ್ಯನವರು ಡಂಬಳ ತೋಂಟದಾರ್ಯಮಠದ ಗದ್ದಿಗೆ ಪೂಜೆ ಮತ್ತು ದೀಪಾರಾಧನೆಗೆ ಇನಾಮು ನೀಡಿದ ವಿವರ.

* * *

೧॥ ಶ್ರೀಮತ್ಸಚ್ಚಿತ್ತಾನಂದ ಅವಿರಳ ಪರಂಜ್ಯೋತಿ ಸದಾಶಿವದ್ಯಾನ ನಿರತರಾದ ರಾಜಮಾನ್ಯೆ ರಾಜಶ್ರಿ ಡಂಬಳದ ತೋಟದ ಸ್ವಾಮಿಗಳವರಿಗೆ–

೦॥ ತಂಮ್ಮ ಅತ್ಯಂತ ಭಕ್ತರಾದ ಪ॥ ಗದಗು ರಉಡೆಕುಂದೆ ಶೀಮೆ ದೇಶಾಯಿ ಪ॥ ಸಿಂಧನೂರ ಸೀಮೆ ಸರದೇಶಾಯಿ ಕಿಲ್ಲೆ ಬಾದಾವಿ ಸಾ। ಕಲಕೇರಿ ಸೀಮೆ ನಾಡಗೌಡರಾದ ಮಥುರಾಬಾಯಿ ಸಿನಪ್ಪಯ್ಯನವರ ಪುತ್ರ ವೆಂಕಪ್ಪಯ್ಯನವರಾ ಪುತ್ರರಾದ ಬಾಹದರ ಸಿನಪ್ಪಯ್ಯನವರು ಬರಸಿಕೊಟ್ಟ ಯಿನಾಮ ಪತ್ರವು. ಡಂಬಳದ ಮಠದ ಗದಗಿಪುಜಾ ದೀಪಾರಾಧನಿ ಧರ್ಮಕ್ರುತ್ಯೆ ನಡಿಸಬೇಕೆಂದು ರಾ॥ ಅಂದಾನೆಪ್ಪಾ ಮಾನವಿ ಹುಂಬಿ ವೀರಪ್ಪವ ಲಿಂಗಣ ಮುಂತಾದ ಸಮಸ್ತದೈವ ಗದಗಿನ ಯಿನಾಮತಿ ಅವರು ಹೇಳಿಕೊಂಡು ಮೂಲಾಧರ್ಮ ನಡಿಬೇಕೆಂದು ನಂಮು ಗದಗಿನ ಯಿನಾಮತಿ ಪೈಕಿ ಪುರಾಣ ಬಧ್ರಯ್ಯನ ಬಗಿ ಹೊಲಾ ಪೂರ್ವದಲಿ ಯಿದ್ಧದು ಮಾರು ೧ ವಂದು ಮುವತ ಆರು ಬಿಕ್ಷೆದಲಿ ಮಠಕ್ಕೆ ಕೊಟ್ಟು ಯಿನಾಮತ್ತಿ ಅವರಿಗೆ ತ್ತಾಕಿವಿ ಬರಕೊಟ್ಟೆಯಿದ್ದೇವೆ. ಅದಕ್ಕೆ ಸಿವುನ ನಿಧೆ ನಿಕ್ಷೆಪಾ ಜಲ ಪಾಷಾಣ ತರು ಅಂಗಮಸಿದ್ಧಿ ಸಾದ್ಯೆ ಎಂಬ ಅಷ್ಟತೇಜೋಪಾರ್ಜಿನೆ ಮಂನು ನೀವು ಶಿಷ್ಯಪಾರಂಪರ ಅನಭವಿಸಿ ದಂಬಳದ ಮಠದ ಧರ್ಮನಡಸಿ ಸಂಸ್ಥಾನ ಕಲ್ಯಾಣಕ್ಕೊ ಚಿಂತಿಸಿಕೊಂಡು ಯಿಹೊದೆಂದು ಬರಕೊಟ್ಟ ಯಿನಾಮ ಪತ್ರವು । ಸ್ವದಾತ್ತಾ ದ್ವಿಗುಣಂ ಪುಣ್ಯ ಪರದತ್ತಾನು ಪಾಲನಂ । ಪರದತ್ತಾ× ಹಾರೇಣ ಸ್ವದತಂ ನಿಷ್ಫಲಂ ಭವೆತ್ ॥೧॥

❖❖

೫೬

ಕಾಲ : ಕ್ರಿ.ಶ. ? ಭಾಷೆ : ಕನ್ನಡ

ಸಾರಾಂಶ : ಗದಗ, ರವುಡಕುಂದೆ, ಸಿಂಧನೂರು ದೇಸಾಯಿಗಳು ಮತ್ತು ಕಲಕೇರಿ ಸೀಮೆ ನಾಡಗೌಡರಾದ ಮಥುರಾಬಾಯಿ ಶಿವಪ್ಪಯ್ಯನವರ ಪುತ್ರ, ವೆಂಕಪ್ಪನವರ ಪುತ್ರ ಬಾಹದ್ದೂರ ಶಿವಪ್ಪಯ್ಯನವರು ಡಂಬಳ ಮಠದ ಧರ್ಮ ನಿತ್ಯಸಾಂಗವಾಗಿ ನಡೆಸಲು ಇನಾಮ ನೀಡಿದ ವಿವರ.

* * *

೧॥ ಶ್ರೀಮತ್ಸಚ್ಚಿದಾನಂದ ಅವಿರಳ ಪರಂಜ್ಯೋತಿ

ಸದಾಶಿವಧ್ಯಾನ ನಿರತರಾದ ರಾಜಮಾಂನ್ಯ

ರಾಜಶ್ರೀ ಡಂಬಳದ ತೋಟದ ಸ್ವಾಮಿಗಳವರಿಗೆ–

ನಿಂಮ್ಮ ಅತ್ಯಂತ ಭಕ್ತರಾದ ಸಾ॥ ಗದಗು ರವುಡಕುಂದ ಶೀಮೆ ದೇಶಾಯಿ ಪ ॥ ಸಿಂಧನೂರ ಸೀಮೆ ಸರದೇಶಾಯಿ ಕಿಲ್ಲೆ ಬಾದಾಮಿ ಸಮತ ಕಲಿಕೇರಿ ಸೀಮೆನಾಡ ರಾದ ಮಥುರಾಬಾಯಿ ಶಿವಪ್ಪಯ್ಯನವರ ಪುತ್ರ ವೆಂಕಪ್ಪನವರ ಪುತ್ರ ಬಹದರ ಶೀನಪ್ಪಯ್ಯನವರು ಬರಸಿಕೊಟ್ಟ ಯಿನಾಮ ಪತ್ರಕ್ರಮವೆಂತೆಂದರೆ ನಿಮಗೆ ಡಂಬಳದ ಮಠಧರ್ಮ ನಡೋ ನೀಮಿತ್ಯ ಮವುಜೆ ಮುದಗನೂರ ಯಿನಾಮು ಪೈಕಿ ಹೊಲ ಮಾರು ೨ ಯರಡ ನೂರು ಮೂವತ್ತಾರು ಭಿಕ್ಷೆದಲ್ಲಿ ಕೊಟ್ಟು

ಯಿದೀತೆ. ಸದರಹು ಯರಡು ಮೂರು ಹೊಲ ನೀವು ಶಿಷ್ಯ ಪಾರಂಪರ ಅನುಭವಿಸಿ ಮಠಧರ್ಮ ನಡಶಿಕೊಂಡು ಸಂಸ್ಥಾನಕ್ಕೆ ಕಲ್ಯಾಣ ಚಿಂತಿಶಿಕೊಂಡು ಸುಖರೂಪ ಯಿಹೂದೆಂದು ಬರಕೊಟ್ಟ ಯಿನಾಮು ಪತ್ರವು॥ ಸ್ವದತ್ತಾಂ ದ್ವಿಗುಣಂ ಪುಣ್ಯಂ ಪರದತ್ತಾನುಪಾಲನಂ। ಪರದತ್ತಾಪಹಾರೇಣ ಸ್ವದತ್ತಾಂ ನಿಷ್ಫಲಂ ಭವೇತ್ ॥

✣✣

೫೭

ಕಾಲ : ಕ್ರಿ.ಶ. ? (ರುಧಿರೊದ್ಗಾರಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಅಣ್ಣಿಗೇರಿ ಸೀಮೆ ದೇಸಾಯಿಗಳಾದಂತ ವೀರಬಸಪ್ಪ ಗೌಡರು ತಮಗೆ ಆಶೀರ್ವಾದ ಪತ್ರ ಬರೆಯಿರೆಂದು ಕೋರಿ ಶ್ರೀಗಳಿಗೆ ಬರೆದ ಪತ್ರದ ವಿವರ.

* * *

ಶ್ರೀಮತ್ ಪ್ರಶಸ್ಥ ನಿಥೂಲ ಮದ್ದ್ಯೆ ವಿಲಶಿತ । ವನ
ತ್ರಯ ರಚಿತ । ವಿಚಿತ್ರ ತುಂಗರಂಗದ್ವಿತ ಪ್ರಣವ
ಸಿಂಹಾಸನಸ್ಥಾನ ಮಹಾಲಿಂಗ ಪ್ರತಿಬಿಂಬಾಕಾರ
ತ್ರಿವಿದಾಂಗೆಂದ್ರಿಯ ಬಾಸ್ಪರಾ ಚಾರು ನವಲಿಂಗ
ಮುಖಸ್ವಾದಿತ ಸಕಲ ವಿಷಯ ಸುಖಾನುಭಾವ ಜ್ಞಾನ
ದಂಡ ದಯ ಕಮಂಡಲ ಸಮತಾಕಾಂಥ ಸದ್ಭಾವ ಕರ್ಪ್ಪುರ
ನಿಸ್ಸಂಶಯ ಭಸ್ಮದ್ದಾರ ವಿರಾಜಿತ ನಿಜಚರಣ
ಪವಿತ್ರಿತ ಚತುರ್ದಶ ಭುವನ ಮಂಡಲ ಷಟುಸ್ಥಲ
ಮಾರ್ಗ ಸಂಚಾರ ವೀರಮಹೇಶ್ವರಗ್ರಗಂಣ್ಯ ಪುಂಣ್ಯ
ಪುಂಣ್ಯಕೀರ್ತಿ ಪರಮ ಗುರುಮೂರ್ತಿಯಾದ ಅನಾದಿ
ನಿರಂಜನ ಅಲ್ಲಮಾಪ್ರಭುಸ್ವಾಮಿಯವರ ಸಾಂಪ್ರದಾಯಕ
ರಾದಂತ ಶ್ರೀ ತೋಂಟದ ಕರ್ತ್ಯ ಸ್ವಾಮಿಗಳವರ
ಚರಣಾರವಿಂದಗಳಿಗೆ ——

ತಂಮ್ಮ ಅತ್ಯಂತ ಕಾರುಂಣ್ಯ ಪ್ರೀತಿ ಬಾಲಕರಾದಂಥ ಕ॥ ಅಂಣ್ಣಿಗೇರಿ ಸೀಮೆ ದೇಸಾಯಿಗಳಾದಂಥ ವೀರಬಸಪ್ಪ ಗೌಡರು ತ್ರಿಕಾಲದಲಿ ಮಾಡುವ ದೀರ್ಘದಂಡ ಬಿನ್ನಹಲು. ಆದಾಗಿ ಯೀಗ ನಾಲು ರುಧಿರೋದ್ಗಾರಿ ನಾಮ ಸಂವತ್ಸರದ ಮಾರ್ಗಸಿರ ಸುಧ ೧೪ ಪರಿಯಂತ್ರ ತಂಮ್ಮ ಆಶೀರ್ವಾದದಿಂದ ಸಮಸ್ತರು ಕ್ಷೇಮದಿಂದ ಯಿಧೆವೆ. ತಂಮ್ಮ ಶಿವಲಿಂಗಾನಂದ ವೈಭವಗಳನ್ನು

ವೇಳೆ ವೇಳೆಕ್ಕೆ ಪತ್ರ ಮುಖದಿಂದ ತಿಳಿಸಿ ಯಿತ್ತಳ ಪರಂಬರಿಕೆ ತಗದು ಕೊಂಬುವಲ್ಲಿಗೆ ಕರ್ತ್ಯುಗಳೆ ಯಿಧಿರಿ. ಸಾಂಪ್ರತು ತಾವು ಆಶೀರ್ವಾದ ನಿರೊಪಿಸಿದಲ್ಲಿಗೆ ಕೃತಾರ್ಥರಾದೆಉ. ಯಿನ್ನು ನಮಗೆ ಬಂದಂಥ ವಿಗ್ನ ತಂಮ್ಮ ಆಶೀರ್ವಾದದ ಬಲದಿಂದ ಪರಿಹಾರವಾಯಿತು. ಅದಕ್ಕೆ ತಮ್ಮ ಪಾದ ದರಷಣವಾಗದೆ ಬಾಹಳ ದಿವಸವಾಯಿತು. ನಮ್ಮ ಮೇಲೆ ದಯಮಾಡಿ ಆಗಮನ ಮಾಡಿ ದರುಷಣ ಲಾಭ ಕೊಟ್ಟು, ಕೃತಾರ್ಥ ಮಾಡುವಲ್ಲಿಗೆ ಕರ್ತ್ಯುಗಳೆ ಯಿದಿರಿ ಗಹಿಮಾಡಲಾಗದು. ಯೀ ವಿಷಯಕ್ಕೆ ನೂತನ ಉಪಚಾರಾರ್ಥವಾಗಿ ತೋರಿ ಬರಕೊಳ್ಳಲಿಕ್ಕೆ ಶಕ್ತರಲ್ಲಉ. ಬಂದರೆ ಪಾದಕ್ಕೆ ಬಿಂನಹ ಮಾಡಲಾಗಿ ಸಕಲಉ ವೃದ್ಯವಾದಿತು.

❖❖

೫೮

ಕಾಲ : ಕ್ರಿ.ಶ. ?

ಭಾಷೆ : ಕನ್ನಡ

ಸಾರಾಂಶ : ಕಲಕೇರಿ ಸೀಮೆ ನಾಡಗೌಡ ದೇಶಕುಲಕರ್ಣಿ ರಂಗರಾಯನು ತಮ್ಮ ಕ್ಷೇಮ ಸಮಾಚಾರ ಬಗ್ಗೆ ತಿಳಿಸಿ, ಶ್ರೀಗಳವರ ಕ್ಷೇಮ ಸಮಾಚಾರ ಕೇಳಿ ಬರೆದ ಪತ್ರದ ವಿವರ.

* * *

೦॥ ಶ್ರೀ ಸ್ವಾಮಿಗಳವರ ಸಂನ್ನಿಧಿಗೆ

ನಂಮ ಕಲಿಕೇರಿ ಶೀಮೆ ನಾಡಗೌಡ ದೇಶಕುಲಕರ್ಣಿ ರಂಗರಾಯನು ಮಾಡುವಾ ಅನೇಕ ಸಹಸ್ರ ಬಿಂನ್ನಹ. ಅದಾಗಿ ತಂಮ್ಮ ಕರುಣದಿಂದಾ ಧಾರವಾಡದಲ್ಲಿ ಕ್ಷೇಮದಲ್ಲಿದ್ದೇನೆ. ತಂಮ್ಮ ಲಿಂಗಾನಂದವಂನ್ನು ಆಗಾಗ್ಗೆ ಅಂತಃಕರಣದಿಂದಾ ತಿಳಿಸಿ ಸಂತೋಷ ಮಾಡ್ಸಲಿಕ್ಕೆ ಬಾಧೆರಾಗಿ ಯಿರುವಲ್ಲಿ ಹೆಚ್ಚಾಗಿ ಬಿಂನ್ನಹ ಮಾಡತಕ್ಕದ್ದು. ಯಿಲ್ಲಿ ಸಾಂಪ್ರತು ಮುಂಡ್ರಗಿ ದೈವದವರು ಅಲ್ಲಿ ನಡದ ಮಜಕೂರ ತಿಳಿಸಲಾಗಿ ಮನಸಿಗೆ ತಕ್ಕುಳವಾಯಿತ್ತು. ಆದರೆ ತಾವು ಕೇವಲ ಸುಜ್ಞಾನಿಗಳಾದಾ ಕಾರಣ ತಂಮಗೆ ಸುಖದುಃಖ ಸಮವೆ ಸರಿ. ಸರ್ವವೊ ತೇಜಶಿದೆ ಸ್ವಾಭಿಮಾನ ಬಿಟ್ಟೊ ಕೇವಲ ಲಿಂಗಾನಂದದಲ್ಲಿ ತದೇಕ ಧ್ಯಾನ ಯಿದ್ದವರಿಗೆ ಸುಖದುಃಖ ರಾಗದ್ವೇಷ ಮೊಹ ಮದ ಲಾಭ ವಿಷಯಗಳು ಮನಸು ತಿರಗಸಲಿಕ್ಕೆ ಸಮರ್ಥವಲ್ಲಾದ ಕಾರಣ ನಾನು ಪತ್ರದಲ್ಲಿ ಬಿಂನ್ನಹ ಬರಿತಕ್ಕದ್ದು, ಅಲ್ಲಿಗೆ ಉಚ್ಛನ್ಯಾಯದಿಂದ ತಾವು ಕರುಣದಿಂದ ಮುಂಡ್ರಿಗೆಗೆ ದಯಮಾಡಿ ಸರ್ವರಂನ್ನು ಸಂತೋಷದಿಂದ ಸಂವರಕ್ಷಣೆ ಮಾಡುತ ಲಿಂಗಾನಂದದಲ್ಲಿದ್ದು ಮುಂದೆ ನಂಮಗೂ ನಂಮ ಸಂಸ್ಥಾನಕ್ಕೂ ನಂಮ್ಮ ದೇಶಿಯ ಪ್ರಜೆಗಳಿಗೆ ಕಲ್ಯಾಣ ಆಗೊ ಹಾಗೆ ಹರಕೆ ಕೊಡುತ ಯಿರಬೇಕು. ವುಳವರಿ ಮಜಕೂರು ಮುಂಡ್ರಗಿ ದೈವದವರು ಗೌಡ ಸಹ ಬಿಂನಹ ಮಾಡಿ ಕೇಳಲಾಗಿ ಸಕಲವು ಶ್ರುತವಾಧಿತು ಮುಂಡ್ರಗಿ ದೈವದವರೊಳಗೆ ಯಿ ಕಡೆ ಕೆಲವು ಮಂದ ಮೊದಲು ನಡತಿ ಬಿಟ್ಟು, ದಯವಂತರಾಗಿ ತಮ್ಮ ತಂದಿನ ನಡದ ನಡತಿ ವುಲ್ಲಂಘಿಸಿ ಯಿಲ್ಲದ ನಡತಿ ಮಾಡಲಿಕ್ಕೆ ಯೇಚನಿ ಮಾಡದ ಕಾರಣ ಪರಸ್ಪರವಾಗಿ ಹುಟ್ಟಿಸಬೇಕು.

❖❖

ಕಾಲ : ಕ್ರಿ.ಶ. ? (ಪ್ರಮಾಥಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ವ್ಯವಹಾರ ಪತ್ರ.

* * *

ಅವಿರಳ ಪರಂಜ್ಯೋತಿ ನಿತ್ಯ ಸಿವಾನಂದ ಭರಿತರಾದ ರಾಜಮಾಂನ್ಯ ರಾಜೆ ಶ್ರೀ ತೋಟದಚಾರ್ಯ ಸ್ವಾಮಿಗಳಿಗೆ –

ಶ್ರೀ ಮಂನ್ ಮಹಾನಾಯಕಾಚಾರ್ಯ್ಯ ನಾಯಕ ಸಿರೋಮಣಿ

ಚೌಡೆರ ಚೌಡಿ ಕದಂ ಬಾಗಡಿ ಮುಂಕ್ಕಾ ಭೀಮಾ ಕಿಲ್ಲೆ

ಬಾದಾವಿ ಸೀಮೆ ದೇಶಾಯಿ ಪ॥ ಯಲಬರಗಿ ಸೀಮೆ

ನಾಡ ಪಟ್ಟಣಸೆಟ್ಟಿ ಮಾ॥ ಬಾಗಡಿ ಕೋಟಿ ಸೀಮೆ

ಸರನಾಡ ಚೌದರಿಗಳಾದ ಪವಾಡಿ ನಾಯಕರು ಮಾಡುವ ಬಿಂನಹ. ಅದಾಗಿ ಗದಿಗಿ ನಾಮಾ ಹಮದಖಾನ ಮಾಹಾಮದನ ಪ್ರಸಂಗ ನಂಮ ಹಿರೇರು ರಾ॥ ——— ಗಳು ಆತನಲ್ಲಿ ಸಾಲಾ ತೆಕೊಂಡು ಯಿದ್ದಲ್ಲಿ ಆರೊಕಕೆ ಗವರವಾಡದಾ ಯಲಂಣನಾ ಹೆಂಡರ ಮಕ್ಕಳೆಲಾ ಕೊಟು ಯಿದ್ದರು. ಆ ಮಾತಿಗೆ ಹೊಲ ಬಿಡಿಸಿ ತರಬೇಕೆಂದು ರಾ। ಕೊಟ್ಟೂರಸೆಟ್ಟರು ಯಿ ರೊಕಕ್ಕೆ ತಾಂವು ಜಮಾನವಾಗಿ ತಂನ ಹೆಸರಿಲಿ ಮೂರು ಸಾವಿರ ರೂಪಾಯಕ್ಕೆ ಕತಿಬಿ ಬರಕೊಟ್ಟ ಯಲಂಣನಾ ಹೆಂಡ್ರು ಮಕ್ಕಳ ಹೊಲ ಬಿಡಿಸಿಕೊಂಡು ಬಂದರು. ಮುಂದೆ ರಾ॥ಗಳಿಗು ಆ ಪಠಾಣಗು ಭೆಟ್ಟಿ ಆಗಬೇಕಾದಲ್ಲಿ ಆ ಪಠಾಣನು ತಂನ್ನ ಜೀವಕೆ ಅಂಜಿ ಭಯಸ್ತನಾಗಿ ಶ್ರೀ –––––– ಸ್ವಾಮಿಗಳು ಕೊಟ್ಟೂರಸೆಟ್ಟರು ಬಂದು ನಂನ। ಕೈಯಿಡಿದು ಕರಕೊಂಡು ಹೋದರು. ಬಂದನೆಂದು ಅಂಜಿದ ಕಾರಣ ನೀಂವೂ ಸತ್ಪುರುಷರು ಯಂದು ನಿಂಮ್ಮ ಮೊಖಾಂತ್ರ ಆ ಪಠಾಣನು ಕರಕೊಂಡು ಬಂದು ನಂಮ್ಮ ರಾ॥ ಗಳಿಗು ಆತಗು ಬೆಟ್ಟಿಮಾಡಿಸಿ ವಸ್ತ್ರಗಳ ಕೂಡಿಸಿ ಯಿಂದಕ್ಕೆ ಕಳಿಯಿಸಿ ಕೊಟ್ಟಿದಲ್ಲದೆ ನಿಂವೂ ಯಿ ಮಾತಿಗೆ ಜಮಾನ ಬೇರೆ ಆಗಿಯಿಲ್ಲಾ. ಮಧ್ಯೆಸ್ತು ಬೇರೆ ಆಗಿಯಿಲ್ಲಾ. ನಿಂಮ್ಮ ಸ್ವದಸ್ತುರದ ಕತಿಬೆಯಂನ್ನು ಬರಕೊಟ್ಟು ಯಿಲ್ಲಾ. ನೀವು ಯಿ ಮಾತಿನ ತಾಲೂಕದೊಳಗೆ ಯೇನುಯಿಲ್ಲಾ. ಕೊಡಬೇಕು ಕೊಟ್ಟೂರಸೆಟ್ಟಿ ಕೇಳಬೇಕಾದರೆ ಆತನೆ ಕೇಳಬೇಕಲ್ಲದೆ ನಿಂಮ್ಮ ಕೇಳಲಿಕೆ ಸಮಂದಯಿಲ್ಲಾ. ಯಿಗ ಆ ಪಠಾಣನು ನಿಂಮ್ಮ ಹೆಸರಿಲಿ ನಾ ಕೊಟ್ಟೆಯಿಧಿತೆಂದು ಸುಳ ಕತಿಬೆ ಕಟ್ಟಿಕೊಂಡು ಹೋದ ಬಂದಲ್ಲಿ ನಿಂಮ್ಮನ್ನು ಕೇಳತಾನೆಂದು ತಿಳಿತ್ತು. ಕೊಡುಕೊಂಬಾ ಕೊಟ್ಟೂರಸೆಟರ ಕೇಳಬೇಕು. ಅಥವಾ ನಂಮ ಸಂಸ್ಥಾನದ ಕಜಾಯಾ ನಂಮ ಕೇಳಿದಲ್ಲಿ ಲೆಕ್ಕನೇಕಾಂತ ನಾವು ನಿರ್ವಹಾ ಮಾಡೆವು. ಯಿ ಬಿಟ್ಟೂ ನಿಂಮ್ಮ ಕೆಳಲಿಕ್ಕೆ ಸಂಮಂಧ ಯಿಲ್ಲಾ. ಮಾಲಿ ಕೇಳಿದರೆ ಆ ಸ್ಥಳದಲ್ಲಿ ಯಿ ಕಾಗದ। ತೋರಿಸಿ ಅಲ್ಲಗಾಣಿಸುವದು ನಂಮ್ಮ ಸಂಸ್ಥಾನದ

ಕಜ್ಜಯಾ ನಾವೆ ನೋಡಿಕೊಂಡೆವು. ನಿಂಮಗೆ ಕಾರಣಯಿಲ್ಲಾಯಂದು ಬರಕೊಟ್ಟು ಯಿಧೀತೆ. ಅರಿಕೆ ಯಿರಬೇಕು. ಯಿೂ ಮಾತಿಗೆ ನಂಮ್ಮಿಂದಾ ಯರಡನೆ ಅಂತ್ಯವಾಗಿರ್ಲಿಕ್ಕೆ ಯಿಲ್ಲ ಯಿಂತಿ.

ಪ್ರಮಾತಿನಾಮ ಸಂ। ಆಶಾಡ ಬ೧೧ ಬುಧವಾರ.

❖❖

೬೦

ಕಾಲ : ಕ್ರಿ.ಶ. ? ಭಾಷೆ : ಕನ್ನಡ

ಸಾರಾಂಶ : ಶ್ರೀಗಳು ತೋಂಟದಾರ್ಯಮಠದ ರಥೋತ್ಸವಕ್ಕೆ ಬರಬೇಕೆಂದು ಬರೆದ ಪತ್ರಕ್ಕೆ ಸಂತೋಷ ವ್ಯಕ್ತಪಡಿಸಿ, ಕಲಿಕೇರಿ ದೇಸಾಯಿ ಮಲ್ಲಪ್ಪನವರು ಬರೆದ ಉತ್ತರ.

* * *

೧॥ ಶ್ರೀಮತ್ಸಚ್ಚಿತಾನಂದ ನಿತ್ಯಪರಿಪೂರ್ಣ

ಅವಿರಳ ಪರಂಜ್ಯೋತಿ ಸ್ವರೂಪರಾದ ರಾಜೇಶ್ರೀ

ತೋಂಟದ ಸ್ವಾಮಿಗಳ ಚರಣಾರವಿಂದಗಳಿಗೆ–

ತಂಮ್ಮ ಭಕ್ತರುಗಳಾದ ಸ॥ ಕಲ್ಲಿಕೇರಿ ಶೀಮೆ ದೇಶಾಯಿ ಮಲ್ಲಪ್ಪನವರು ಮಾಡುವ ಶಿರಸಾಷ್ಟಾಂಗ ನಮಸ್ಕಾರ ಬಿಂನ್ನಹವು. ತಮ್ಮ ಆಶೀರ್ವಾದ ಬಲದಿಂದ ಸಮಸ್ತರು ಕ್ಷೇಮದಿಂದ ಯಿಧೆವೆ. ತಂಮ್ಮ ಕ್ಷೇಮ ವೈಭವಗಳನ್ನು ಆಶೀರ್ವಾದ ಮುಖದಿಂದ ಪರಾಮರಸುತ್ತ ಬಹುದು. ತರುವಾಯ ಯಿೂಗ ಸಾಂಪ್ರತು ರತೋತ್ಸವಕ್ಕೆ ಬರಬೇಕೆಂದಾಶೀರ್ವಾದ ಪತ್ರ ಕಳಿಸಿಧಲ್ಲಿ ಬಹಳ ಸಂತೋಷರಾಗಿದ್ದೀರಿ.

❖❖

೪. ಗೌಡ-ಶಾನಭೋಗರ ಪತ್ರಗಳು

*

೪. ಗೌಡ-ಶಾನಭೋಗರ ಪತ್ರಗಳು

೬೧

ಕಾಲ : ಕ್ರಿ.ಶ. ೧೭೧೬ (ಹೇವಿಳಂಬಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಅಣ್ಣಿಗೇರಿ ಸೀಮೆಯ ದೇಶಕುಲಕರ್ಣಿ ನಾಗಪ್ಪಯ್ಯ ಚಂದಪ್ಪಯ್ಯನವರು ತಮ್ಮ ವಂಶಾಭಿವೃದ್ಧಿಯ ಪುಣ್ಯ ಸಂಗ್ರಹಕ್ಕಾಗಿ ತೋಂಟದಾರ್ಯಮಠಕ್ಕೆ ಭೂದಾನ ನೀಡಿದ ವಿವರ.

* * *

ಶ್ರೀ ಗಣೇಶಾಯ ನಮಃ ಶುಭಮಸ್ತು । ನಮಃಸ್ತುಂಗ ಶಿರಃಶ್ಚುಂಬಿ ಚಂದ್ರಚಾಮರ ಚಾರವೆ । ತ್ರಯಲೋಕ್ಯ ನಗರಾರಂಭ ಮೂಲಸ್ತಂಬಾಯ ಶಂಭವೆ । ಜಯಲ್ಲಳಿಡಿವರಾಹೊಯಂ। ಯೆನ ಥಾತ್ರಿ ಸಮುಧ್ರುತ । ಅಂಗಸಂಗಾಧಿ ನಾದ್ಯಾಪಿ । ಸಪ್ರೇಮ ಪುಲಕದಂತ್ತು ಸ್ವಸ್ತಿ ಶ್ರೀಮಂನೃಪ ಶಾಲಿವಾಹನ ಶಕ ೧೬೩೮ನೆಯಾ ಪ್ರವರ್ತಮಾನೆ × ಮಳಿಂಬಿನಾ ಸಂ।। ದ ಜೆಷ್ಟ ಶುಧ ೫ ಪಂಚಮಿಯಲ್ಲು ಶ್ರೀ ಆನಂದಾನಿಮಠಕ್ಕೆ ತಮ್ಮ ರಾ।। ರಾಜೇಶ್ರಿ ತೋಂಟದ ಸ್ವಾಮಿಗಳಿಗೆ । ಕ।। ಅಂಣಿಗೇರಿಯ ಸೀಮೆಯಾ ದೇಶಕುಲ್ಲಕರಣಿ ಜಿನಕುಲವೃಧ್ಭವನಾದ ಹಿ ನಾಗಪ್ಪಯ್ಯ ×× ಚಂದಪ್ಪಯಾ ಸಪುತ್ರ ನಾಗಪ್ಪಯ್ಯನ ಪತ್ನಿ ಪುತ್ರ ಸಖರೆವಾರಾ ಮಾರಸಯ್ಯನು ಬರಕೊಟ್ಟ ಭೂದಾನ ಪಟ್ಟೆಕ್ರಮವೆಂತೆಂದರೆಃ ನಾಲು ನಂಮ್ಮ ವಂಶಾಭಿವೃದ್ಧಿಯಾಗಿ ಪುಂಣ್ಯ ಸಂಗ್ರಹ ನಿಮಿತ್ಯವಾಗಿ ನಂಮ್ಮ ಯಿನಾಮತಿ ಹಿರೆಮಾಂನ್ಯೆದೊಳಗೆ ಕೊಂಡಿಕೊಪ್ಪದ ಸೀಮೆಯಲ್ಲಿ ಕ್ಲರ್ಸ್ಟ ಭೂಮಿ ಮೂವತ್ತಾರು ಭಿಗೆದ ಹುಲ್ಲಮಾರು ೧। ಮಾರು ಕಾಲ್ಲು ಭೂಮಿಯನು ಧಾರಾಪೂರ್ವಕ ಕಡಿಂದಾ ಕೊಟ್ಟುಯಿದ್ಧೆ. ಆ ಚಂದ್ರಾರ್ಕ ಸ್ಥಾಯಿಗಳಾಗಿ ಆ ಭೂಮಿಯೊಳಗೆ ××ದ ನಿಧಿ ನಿಕ್ಷೆಪ ಜಲ ಪಾಷಣ ಆಕ್ಷಿಂಣ್ಯ ಆಗಮಿಸಿದ ಸಾಧ್ಯಗಳೆಂಬೊ ಅಸ್ಟಭೋಗ ಸ್ವಾಂಮ್ಯ ಸಮಸ್ತ ಕಳುಬಳ್ಳಿಗಳಿಂದಾ ಸಹಿತವಾಗಿ ಸರ್ವಮಾಂನ್ಯೆಕ್ಕೆ ಬೊಧ್ಯರಾಗಿ ಆನವಿಸಿ ಕೊಳ್ಳುತ್ತ ಬಾಹುದು ಯೆಂದು ಬರಕೊಟ್ಟ ಭೂದಾನ ಪಟ್ಟಿ ।।ಶ್ಲೋಕಾ।। ದಾನಾವ್ರಾಯೋನು ಪಾಲನಂ । ದಾನಾತ್ಸ್ವರ್ಗತ್ಸ್ವಮವಕಪ್ನೋತಿ । ಪರದತ್ತಾಂ ಕೊಸ್ಟದತ್ತಾ ನಿಷ್ಪಲಂ ಭವೇತು ।।೧।। ಸ್ವದತ್ತಾಂ ಪರದತ್ತಾಂ । ವಸುಂಧರಾ । ಶಷ್ಠಿರ್ವರುಷ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿ । ೧।। ಯೆಕೇವಾಯೋಹರೇ। ಸರ್ವಶಾಂಮೆಭೂಭೂಜಾಂ । ನಭೊಗ್ಯೆ ನಕರ ಗ್ರಾಹ್ಯಂ ।

ವಿಪ್ರದತ್ತವಸುಂಧರಾ ॥ ಆಹೋರಾಘವ ರಾಜೇಂದ್ರ ಸಪ್ತಕಲ್ಪಾನು ಜೀವನಾ । ನಶ್ರುಣೋಮಿನಪಸ್ವಯಂ ದತ್ತಾಪ ಹಾರೇಣಾ ॥೧॥

ರುಜು ದೊಡ್ಡ ಸಿದ್ಧಲಿಂಗಮರಿ । ಕ ॥

೧ ವಾದಿ ತೋಟದಸ್ವಾಮಿ ವಗೈರೆ– ——— ಅನ್ನದಾನಿ ಸ್ವಾಮಿ

❖❖

೬೨

ಕಾಲ : ಕ್ರಿ.ಶ. ೧೭೨೦ (ಸಾಧಾರಣ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಅಸೂಟಿಯ ಶೆಟ್ಟಪ್ಪಗೌಡನು ಶ್ರೀಗಳ ಆಶೀರ್ವಾದದಿಂದ ಪುಣ್ಯಪ್ರಾಪ್ತಿ ಆಗಲಿ ಎಂದು ಡಂಬಳ ತೋಂಟದಾರ್ಯಮಠದ ಸ್ವಾಮಿಗಳಿಗೆ ಭೂದಾನ ನೀಡಿದ ವಿವರ.

* * *

೦॥ ಸ್ವಸ್ತಿ ಶ್ರೀಜಯಾಭ್ಯುದಯ ಶಾಲಿವಾಹನ ಶಖ ೧೬೪೨ನೆಯ ವರುಷ ।

ಪ್ರವರ್ತಮಾನ ಸಾಧಾರಣ ನಾಮ ಸಂ॥ ರದ ಶ್ರಾವಣ ಸು॥ ೧೩ ಯಿಂದುವಾರ

ಸ್ಥಿರ ನಕ್ಷತ್ರದಲ್ಲೂ॥ ಶ್ರೀಮತ್ಸಚ್ಚಿತಾನಂದ ನಿತ್ಯಪರಿಪೂರ್ಣ ಅವಿರಳ

ಪರಂಜ್ಯೋತಿ ಸ್ವರೂಪಿಗಳಾದ ಷಟುಸ್ಥಲಕ್ಕೆ ಅಧಿಪತಿಗಳಾದ ರಾಜಾಧಿರಾಜ

ರಾಜ್ಯಮಾಂನ್ಯ ರಾಜಶ್ರೀ ಡಂಬಳದ ಶ್ರೀ ತೋಂಟದ ಸಿದ್ಧೇಶ್ವರಸ್ವಾಮಿಗಳವರ

ಪಾದಾರವಿಂದಕ್ಕೆ

ಭೂದಾನ ಚಿ॥ ಅಸೂಟಿ ಸಿದ್ಧಣ ಗೌಡನ ಮಗ ಶೆಟ್ಟಪ್ಪ ಗೌಡನು ಬರಕೊಟ್ಟ ಪೃಥ್ವಿದಾನಪತ್ರ ಕ್ರಮವೆಂತೆಂದರೆಃ ತಾವು ಸ್ವಗ್ರಾಮಕ್ಕೆ ಬಂದು ಯಿಧಾಗೆ ನಮಗೆ ಪುಂಣ್ಯ ಬೇಕೆಂದು ತಂಮಗೆ ನಂಮ್ಮ ಸ್ವಥಾ ಮಾಂನ್ಯೆದ ಪೈಕಿ ಹೊಲಮಾರು ಅರ್ಧಾ॥೦ ಆರಮಾರು ಹೊಲ ತೊಟ್ಟಲ ಮಾರದ ಹೊಲನು ಶೆರಣುಮಾಡಿ ಅರ್ಪಿತಕ್ಕೆ ಕೊಟ್ಟು ಯಿಧೇವೆ. ಮುಂದೆ ಸೂರ್ಯಚಂದ್ರರು ಪರಿಯಂತ್ರವು ತಾವು ಅನುಭವಿಸಿಕೊಂಡು ಆನಂದಭರಿತರಾಗಿ ನಂಮ ವಂಶ ಪಾರಂಪರದಲ್ಲಿ ಬಾಳಿದವರಿಗೆ ಆಶೀರ್ವಾದ ಕಲ್ಯಾಣವನ್ನು ದಯಮಾಡಿ ಕೊಟ್ಟುಕೊಳ್ಳು ಹೋಗುವುದು. ನಾವು ನಂಮ ಸಂತೋಷ ಭಾವಗೂಡಿ ಭೂಮಿದಾನ ಕೊಟ್ಟು ಯಿಧೆವು. ಯಿದಕ್ಕೆ ಅಂತಹ ಕಾಡಾಟ ಬರಲಿಕ್ಕಿಲ್ಲವೂ. ನಾಲ್ಕು ಮೂಲಿಗೆ ಲಿಂಗ ಸ್ಥಾಪ್ಯ ಮಾಡಿಕೊಟ್ಟು ಯಿಧೇವು. ಸರಕಾರದ ಖಾಲಸಾತ ಪೈಕಿ ನಿಂಮ್ಮ ಮಾಂನ್ಯೆ ಪುರಾತನಯಿತ್ತು. ಅದರ ಬಳಿಲೆ ಹೊಲಾ ನೇಮಣೂಕ ಮಾಡಿಕೊಟ್ಟು ಅದೇ ಕರಾರು ಯಿದಕ್ಕೆ ಸಾಕ್ಷಿ.

೧. ಕ॥ ಸಿರುವಳದ ಗೌಡ ಸಾಕ್ಷಿಗಳಿವೆ. ಸುಂಕದ ಯಿರಮನಸ

❖❖

೬೩

ಕಾಲ : ಕ್ರಿ.ಶ. ೧೭೬೫ (ಪಾರ್ಥಿವ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಹಾರೊಗೇರಿ ಗೌಡ–ಶಾನುಭೋಗರು ಮತ್ತು ಸಮಸ್ತ ದೈವದವರು ಶ್ರೀತೋಂಟದಾರ್ಯಮಠಕ್ಕೆ ಖಾಸಗತಿ ಜಮೀನ ದಾನವಾಗಿ ನೀಡಿದ ವಿವರ.

* * *

ಶ್ರೀ

ಅಂನದಾನಿ

ನಮಸ್ತುಂಗ ಶಿರಶ್ಚುಂಬಿ। ಛೆತ್ರಚಾಮರ ಚಾರವೆ ತ್ರೈಯಲೊಕ್ಯ

ನಗರಾಂಭ। ಮೂಲಸ್ತಂಬಾಯ ಶಂಭವೆ। ಸಖೆ ವ ೧೬೮೭ ಪ್ರವರ್ತ ಮಾನೆ

ಪಾರಥಿವ ನಾಮ ಸಂ। ದ ಜೇಷ್ಟ ಬ ॥೧೫॥ ಯಲ್ಲು ಮೌ॥ ಹಾರೊಗೆರಿ।

ಗೌಡ ಶಾನಭೋಗರು। ವ ಸಮಸ್ತ ದೈವದವರು ಶ್ರೀ —ಸ್ವಾಮಿಗಳ

ವರಿಗೆ। ಖಾಸ್ಗತಿ ಜಮಿನ ಜಮಾ ಬಂದಿ ಬೇರಿಜು ।॥ ಪಾಲಿನ ಹೊಲವನು

ಶಿವಾರ್ಪಣ ಮಾಡಿಕೊಟ್ಟು ಯಿಧೆವೆ। ಚಂದ್ರ ಸೂರ್ಯ ಪರಿಯಂತ್ರ

ಅನುಭವಿಸಿಕೊಂಡು। ಸಮಸ್ತರಿಗೆ ಪೂರ್ಣ ಅನುಭವಿಸಿಕೊಂಡು ಯಿರಬೇಕು

ಯೆಂದು ಬರದು ಕೊಟ್ಟ ದಾನಪತ್ರದ ಕಾಗದವ।

ಸ್ವದಾತ್ತಂ ದ್ವಿಗುಣಂ। ಪುಣ್ಯಂ। ಪರದತ್ತಾನುಪಾಲನಂ।

ಪರದತ್ತಾನು ಆಪಹಾರೇಣ। ಸ್ವದತ್ತಾನು। ನಿಪ್ಪಲಂ ಭವೇತ್ತು।

❖❖

೬೪

ಕಾಲ : ಕ್ರಿ.ಶ. ೧೭೮೮ (ಕೀಲಕ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಗಾಡಗೋಳಿ ಗೌಡರು ಮತ್ತು ಕುಲಕರ್ಣಿಯವರು ತಮಗೆ ಪುಣ್ಯಪ್ರಾಪ್ತಿಯಾಗಲಿ ಎಂದು ಡಂಬಳ ಶ್ರೀತೋಂಟದಾರ್ಯಮಠಕ್ಕೆ ಆತ್ಮಸಂತೋಷದಿಂದ ಇನಾಮ ಭೂಮಿ ನೀಡಿದ ವಿವರ.

* * *

ಶ್ರೀ ಸಿದ್ಧೇಶ್ವರ

೦॥ ಶ್ರೀಮತ್ಸಚಿತಾನಂದ ನಿತ್ಯಪರಿಪೂರ್ಣ ಅವಿರಳ ಪರಂಜೊತಿ ಸ್ವರೂಪರಾದಂಥ ರಾಜೆಶ್ರೀ ಡಂಬಳದ ತೋಟಧ ಸ್ವಾಮಿಗಳವರ ಪಾದಕ್ಕೆ.

೦॥ ನೃಪಶಾಲಿವಾಹನ ಶಕ ೧೭೧೦ ಕಿಲತನ ಮ ಸಃ ॥ ಮಾರ್ಗಶಿರ ಶು ೩ ಸ್ತಿರವಾರದಲ್ಲಿ। ಗಾಡಗೊಳ್ಳಿ । ಗೌಡಪ್ಪಗೌಡ ವಾ । ತಲೆಗೌಡ ವ॥ ಬೂಂಮ್ಮನಗೌಡ ವಾ। ರಾಯನಗೌಡ ವಾ। ಹನುಮಂತಗೌಡವಾ। ನಿಂಬನಗೌಡ ವಾ। ಕುಲಕರ್ಣಿ ಮುಂತಾಗಿ। ತಂಮ್ಮ ಆತ್ಮಸಂತೋಷದಿಂದ ಕೊಟ್ಟ ಮಟದ ತೋಟ ನಂಮುಗೆ ಮೊಕ್ಷಪಾರಂಬವಾಗಿ ಪುಂಣ್ಯಯಿರಲಿ ಯೆಂದು। ಸೂರ್ಯ್ಯ ಚಂದ್ರಾದಿಗಳು ವಿರುವ ತನಕ ನಡಿಬೇಕು ಯೆಂದು ಬರಕೊಟ್ಟ ದಾನಪತ್ರವು । ಯಿನಾಮತಿ ಭೂಮಿ ವಳಗೆ ತ್ರಿಕರಣ ಶುಧವಾಗಿ ಶರಣು ಮಾಡಿಯಿದ್ದೇವೆ ।

❖❖

೬೫

ಕಾಲ : ಕ್ರಿ.ಶ. ೧೮೦೧ (ದುರ್ಮತಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಕೊಪ್ಪಳದ ಕುಲಕರ್ಣಿ ಮೌದಗದಲ್ಲಿರುವ ದೇವಪ್ಪನು ತಮ್ಮ ಹಿರಿಯರಿಗೆ ಪುಣ್ಯಪ್ರಾಪ್ತಿ ಆಗಲಿ ಎಂದು ಡಂಬಳದಲ್ಲಿರುವ ಹೊಲವನ್ನು ಮುಂಡರಗಿ ತೋಂಟದಾರ್ಯಮಠದ ಅನ್ನದಾನಸ್ವಾಮಿಗಳಿಗೆ ನೀಡಿದ ದಾನದ ವಿವರ.

* * *

೦॥ ನಮಸ್ತುಂಗ ಸಿರಶ್ಚುಂಬಿ ಚಂದ್ರ ಚಾಮರ ಚಾರವೆ ತ್ರೈಲೋಕ್ಯ
ನಗರಾರಂಭ ಮೂಲ ಸ್ತಂಬಾಯ ಶಂಭವೆ ॥
ಸ್ವಸ್ತಿ ಶ್ರೀ ಜಯಾಭ್ಯುದಯ ನೃಪಶಾಲಿವಾಹನ ಶಕ ವರ್ಷ
೧೭೨೩ ಪ್ರವರ್ತಮಾನ ದುರ್ಮತಿ ನಾಮ ಸಂವತ್ಸರದ
ಅಶ್ವಿಜ ಶು ೧೦॥ ಯಲ್ಲು ಶ್ರೀ ಮುಂಡ್ರಿಗಿ ಅಂನ್ನದಾನಸ್ವಾಮಿಗಳಿಗೆ–

ಕಿಲ್ಲೆ ಕೊಪ್ಪಳದ ಸೀಮೆ ದ। ಕುಲಕರ್ಣಿ ಮೌದ್ಗಗಲ್ಲಿ ಸೊತ್ರಾದಾ ತಾಸ್ವಲಾಮೆನ ಸೂ। ರಿಕುಶಾಖೆಧೆ ಯೊಗಳದ ದೈವಪ್ಪ ನಂಮ್ಮ ಕಾರುಂಣ್ಯಮಾನವರಾ ಪುತ್ರನಾದ ದೇವಪ್ಪನವರು ಬರದ ಕೊಟ್ಟು ಭೂದಾನದ ಪಟ್ಟಿ ಕಾಗದವು ಆಗಾಗ್ಗೆ ನಂಮು ಖಾಸಗತ ಬಹುಳಿ ಮೈನಹಳಿಪೈಕಿ ಪಶ್ಚಿಮದಿಕ್ಕಿಗೆ ಕುಂಬಾರರಾ ಬಗ್ಗೆ ಮರಿ ಹೊಲಾ ಶ॥ ಡಂಬಳದ ಹೊಲವಂನ್ನು ನಂಮ್ಮ ಹಿರೇರಿಗೆ ಅಕ್ಷ ಪೂರ್ಣ ಪುಣ್ಯಲೋಕ ಪ್ರಾಪ್ತಿ ಆಗಬೇಕು ಎಂದು ಧಾರ ಪೂರ್ವಕವಾಗಿ ಸೇವಾರ್ಪಿತವಾಗಿ ಕೊಟ್ಟು ಯಿಧೆವು. ನಮ್ಮ ಸರ್ವದ ಕಲ್ಯಾಣ ಚಿಂತಿಸಿಕೊಂಡು ಆಚಂದ್ರಾರ್ಕ। ಸರಿ ಯೊಗಳಾಗಿ ಅನುಭವಿಸಿಕೊಂಡು ಯಿಹೋದು ಆ ಭೂಮಿವಳ ಯಿಧ ನಿಧಿ ನಿಕ್ಷೇಪ ಜಲ ಪಾಶಾಣ ಮುಂತಾದ ಸಹಾವಾಗಿ ಅನುಭವಿಸಿಕೊಂಡು ಯಿಹೋದೆಂದು ನಂಮ್ಮ ಸಂತೋಷದಿಂದಾ ಬರದು ಕೊಟ್ಟ ಭೂದಾನ ಪತ್ರಿಕೆ ಉ–

೦॥ ಶ್ಲೋಕ । ಸ್ವದಾತ್ತಾಂ । ದ್ವಿಗುಣಂ ಪುಂಣ್ಯಂ ಪರದತ್ತಾನು ಪಾಲನಂ ॥
ಪರದತ್ತಾ ॥ ಪಹಾರೇಣ ಸ್ವದತ್ತಾಂ ನಿಷ್ಪಲಂ ಭವೇತ್ ।೧।
ಸ್ವದತ್ತಾ ಪೂತ್ರಿಕಾ ದಾತ್ರಿ ಪಿತ್ರುದತ್ತಾ ಸಹೋದರಿ । ಪರದತ್ತಾ

ಸ್ವಾಮಂಮ್ಮಾತಾತ್ರಿಬರ್ದಾತ್ರಿ ಪರಿತ್ಯಾಜಿತ ॥೨॥ ಬರದರಿ ॥ ದಾನಪತ್ರ

ಸಹಿ ———

❖❖

೬೬

ಕಾಲ : ಕ್ರಿ.ಶ. ೧೮೧೫ ಭಾಷೆ : ಕನ್ನಡ

ಸಾರಾಂಶ : ಹುಲಿಗಿಗೌಡರಾದ ಅಯ್ಯನಗೌಡರು ಮುಂಡರಗಿ ತೋಂಟದಾರ್ಯಮಠದ ಅನ್ನದಾನಸ್ವಾಮಿಗಳಿಗೆ ಭೂದಾನ ನೀಡಿದ ವಿವರ.

* * *

॥ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೆ
ತ್ರೈಲೋಕ್ಯ ನಗರಾರಂಭ ಮೂಲಸ್ತಂಬಾಯ
ಶಂಭವೆ ॥ ೧ ॥ ಸ್ವಸ್ತಿಶ್ರೀ ಜಯಾಭ್ಯುದಯಾ
ನೃಪಶಾಲಿವಾಹನ ಶಕವರುಷಂಗಳು ೧೭೩೭ನೇ
ಯುವನಾಮ ಸಂ॥ ಕಾರ್ತಿಕ ಶು ॥ ೧೦ಯಲ್ಲು
ರಾ॥ ರಾ॥ ಶ್ರೀ ಮುಂಡರಗಿ ಅಂನ್ನದಾನ ಸ್ವಾಮಿಗಳವರಿಗೆ–

ತಂಮ್ಮ ಅಪ್ತರಾದ ಕ॥ ಹುಲಿಗಿನಾಡ ಗೌ । ಅಯ್ಯಣಗೌ । ನು ಬರಕೊಟ್ಟ ಭೂದಾನ ಪತ್ರ ಕ್ರಮವೆಂತೆಂದರೆ: ಅದಾಗಿ ನಂಮ್ಮ ಹಿರೇರಿಗೆ ಪುಂಣ್ಯ ಲಭಿಸಿದ್ದಿ ಆಗಬೇಕೆಂದು । ಕ ॥ಮಾ॥ರಲಿ ತಂಮ್ಮ ಶಿಷ್ಯ ಸಮೂಹ × ಸಂಗನಡೊ ನಿಮಿತ್ಯರ್ಥವಾಗಿ ಊ ೧ ವಕ್ಕಳ ಗಧಿನ ಬಾಬತಿ ಗದ್ದಿ ಪೂರ್ವಕ್ಕೆ ತೋಟ ದಕ್ಷಿಣಕ್ಕೆ ಗವಿಮಟದ ಗಧಿ ಪಶ್ಚಿಮಕ್ಕೆ ಬಾಟಗರ ತೋಟ ಉತ್ರಕ್ಕೆ ಬಸ್ತಿಯೊವರ ಗದ್ದಿ ಯಿ ಪ್ರಕಾರ ಚತುರ್ದಿಕ್ಕೆನೆ ಮೊಗಮಾಡಿ ಶ್ರೀ ಸಿವಾರ್ಪ್ರಣ ಪೂರ್ವಕವಾಗಿ ಕೊಟ್ಟು ಯಿಧೆವೆ. ಆ ಭೂಮಿಯಲ್ಲಿ ನಿಧಿ ನಿಕ್ಷೇಪಾ ಜಲ ತರು ತ್ರಿಣ ಪಾಶಾಣ ತೆಜಃಪರ್ಜಿಂನ್ಯೆಯಂನ್ನು ಉಂಟಾದ್ದು ನಿಂಮ್ಮ ಶಿಷ್ಯ ಪಾರಾಂಪರ ಅಚಂದ್ರಾರ್ಕವಾಗಿ ಅನುಭವಿಸಿಕೊಂಡು ಸುಖದಲ್ಲಿ ಯಿಹೊದೆಂದು ನಂಮ್ಮ ಸಂಮ್ಮತದಿಂದ ಬರಕೊಟ್ಟ ಭೂದಾನಪತ್ರ ಸಹಿ–

ಸ್ವದಾತ್ತಂ ದ್ವಿಗುಣಂ ಪುಂಣ್ಯಂ ಪರದತ್ತಾನುಪಾಲನಂ। ಪರದತ್ತಾಪಹಾರೇಣ ಸ್ವದತ್ತಾಂ ನಿಷ್ಫಲಂ ಭವೆತ್ ॥೧॥ ಸ್ವದತ್ತ ಮಹಿತಾಭೂಮಿ ಪರದತ್ತಾನ ಸಹೋದರಿ। ಅಂನ್ಯೆದತ್ತ ಭವೆಂಣತ್ ಯಾಹರೇತ್ಸುಕ್ಷೆ ಮಾಸಾಹಂ ॥೧॥

❖❖

೬೭

ಕಾಲ : ಕ್ರಿ.ಶ. ೧೮೯೯ (ಬಹುಧಾನ್ಯ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಹಿರೇಸಿಂದೋಗಿ ಗೌಡರು, ಕುಲಕರ್ಣಿಯವರು ಹಿರೇಸಿಂದೋಗಿ ಗ್ರಾಮದಲ್ಲಿರುವ ತೋಂಟದಾರ್ಯಮಠದ ದಾಸೋಹಕ್ಕೆ ಭೂದಾನವನ್ನು ನೀಡಿದ ವಿವರ.

* * *

ಸಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೆ । ತ್ರೈಲೋಕ್ಯನಗರಾ ರಂಭ ಮೂಲಸ್ತಂಬಾಯ ಶಂಭವೆ । ಸ್ವಸ್ತಿ ಶ್ರೀ ಜಯಾಭ್ಯುದಯ ಮನ್ನೃಪ ಶಾಲಿವಾಹನ ಶಖ ೧೮೪೦ ಪ್ರವರ್ತಮಾಂನ್ಯಾ ಬಹುದಾಂನ್ಯ ನಾಮ ಸಂ। ಮಾಘ ಶು। ೩ ಗುರುವಾರ ಶ್ರೀಮತ್ಸಚ್ಚಿತಾನಂದ ನಿತ್ಯಾಪರಿಪೂರ್ಣ ಅವಿರಳ ಪರಂಜ್ಯೋತಿ ಸ್ವರೂಪಿಗಳಾದ ರಾಜಾದಿ ರಾಜಾ ಪೂಜಿತ ರಾಜಮಾಂನ್ಯ ರಾ। ರಾ। ಮುಂಡ್ರಿಗಿ ಅಂನ್ನದಾನ ಸ್ವಾಮಿಗಳವರಿಗೆ–

ನಿಂಮ್ಮ ಕಾರುಂಣ್ಯ ಭಕ್ತರಾದ ಪೊ। ಹಿರೇಸಿಂದೋಗಿ ಗೌಡ ಕುಲಕರ್ಣಿಗಳು ಬರಕೊಟ್ಟ ಭೂದಾನ ಪತ್ರಕ್ರಮವೆಂತೆಂದರೆಃ ನಂಮ್ಮ ಗ್ರಾಮದಲ್ಲಿ ಮಠ ದಾಸೊಹಕ್ಕ ಆಗಬೇಕೆಂದು ಬಹುಕಾಲಕೆ ಕೇಳಿಕೊತ್ತಾ ಬಂದಲ್ಲಿಗೆ ಯಿವತ್ತಿಗೆ ನಾಲು ಮನಸ್ಸಿಗೆ ತಂದು ಅರವತ್ತು ಬಿಗೆ ದಾನಗಳ ದಾಬಿ ಪೈಕಿ ನಾಮದವರಾ ಬಾಬತಿ ೬% ಬಿಳದಾ ಹೋಲ ಯಿದಕ್ಕೆ ಕುರಿಗಿ ಳಕ್ಕೆ ತಾಲು ಸ್ವತಂತ್ರರು ಯಂದು ಕೊಟ್ಟು ಯಿಧೇವೆ. ನಂಮ್ಮಗೆ ಕಲ್ಯಾಣ ಆಗಬೇಕೆಂದು ಯಿೂ ಭೂಮಿಯಂನ್ನು ಯಿದೆ. ಸರ್ವಕಾಲದಲ್ಲಿ ನಂಮ್ಮ ಹಿರೇರಿಗೆ ಲಕ್ಷ ಪೂಂಣ್ಯಲೋಕ ಪ್ರಾಪ್ತಿ ಆಗಬೇಕೆಂದು ಸಹಿತ ವಾಧಕ ದಾರಾಪೂರ್ವತಾ ಮಾಡಿಕೊಟ್ಟು ಯಿಧೇವೆ. ಯೀ ಭೂಮಿ ವಳಗಣ ನಿಧಿ ನಿಕ್ಷೆಪ ಜಲ ತರು ಪ್ರಾಣ ಪಾಷಾಣ ಮುಂತಾದ ತೇಜೋಪಾರ್ಜಿಸಿ ಉಂಟೆಂದು ಅಚೆಂದ್ರಾರ್ಕ ಅನುಭವಸಿಕೊಂಡು ನಮ್ಮಗೆ ಕಲ್ಯಾಣ ಭರಿಸಿಕೊಂಡು ಯಿಹುದೆಂದು ಬರಕೊಟ್ಟ ಭೂದಾನಪತ್ರ. ಸಹಿ.

ವಿರುಪಾಕ್ಷ ಗೌಡನ ಪತ್ರ ಭೀಮಣ ಗೌಡನ ವಪ್ಪಿತವು –

❖❖

೬೮

ಕಾಲ : ಕ್ರಿ.ಶ. ೧೮೪೮ ಭಾಷೆ : ಕನ್ನಡ

ಸಾರಾಂಶ : ಮಂಡಲಗೇರಿ ಗೌಡರು ಮತ್ತು ಸಮಸ್ತ ದೈವದವರು ಮುಂಡರಗಿ ತೋಂಟದಾರ್ಯಮಠದ ಅನ್ನದಾನಸ್ವಾಮಿಗಳಿಗೆ ಭೂದಾನ ನೀಡಿದ ವಿವರ.

* * *

೧।। ನಮಸ್ತುಂಗ ಸಿರಸ್ಚುಂಬಿ ಚೆಂದ್ರಚಾಮರ
ಚಾರುವೆ ತ್ರೈಲೊಕ್ಯನಗರಾರಂಭ ಮುಲಸ್ತಂಬಾಯಾ
ಶಂಭವೆ ।। ೧ ।।

ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಖ
ವರುಷಂಗಳು ೧೭೭೦ನೆಯ ಪ್ರವರ್ತಮಾನೆ
ಸಾದಾರಣ ಸಂ॥ ರ ಮಾರ್ಗಸಿ ಶು ॥ ೧೫ಯಲ್ಲು ಶ್ರೀ ಮತ್ಸಚಿತಾನಂದ
ನಿತ್ಯೆ ಪರಿಪೂರ್ಣ ಅವಿರಳ ಪರಂಜ್ಯೋತಿ ಸ್ವರೂಪಿಗಳಾದ
ಶ್ರೀ ತೋಂಟದ ಸ್ವಾಮಿಗಳಿಗೆ ಕರಕಮಲ ಸಂಜಾತರಾದ
ಶ್ರೀ ಅಂನದಾನಿ ಸ್ವಾಮಿಗಳಿಗೆ–

ನಿಂಮ ಕಾರುಂಣ್ಯ ಭಕ್ತರಾದ ಮೊ ॥ ಮಂಡಲಗೆರಿ ಗೌಡರು ॥ ಗಳು ಯೆಕಸ್ತರಾಗಿ ಬರಸಿಕೊಟ್ಟ ಭೂದಾನ ಪಟ್ಟಿಕ್ರಮವೆಂತೆಂದರೆ: ನಾಲು ನಂಮ್ಮ ಸ್ತಳಕ್ಕೆ ಕಟ್ಟಲೆ ವಾಗಬೇಕೆಂದು ಸುಭಮುಹೂರ್ತ ನೋಡಿ ನಿಂಮಗೆ ಮಟ್ಟವಾ ಮಾಂನ್ಯೆ ವ ಕಳಧು ಭೂಮಿಯಂನ್ನು ದಾರದಂತ್ತಾ ಮಾಡಿಕೊಟ್ಟು ××× ×× ×× ×××× ××× ××× ಸಂವರಕ್ಷಂಣ್ಯ ಮಾಡಿಕೊಂಡು ನಿಂಮ್ಮ ಮಟಕ್ಕೆ ಕೊಟ್ಟಿರುವಾ ಮಾಂನ್ಯೆವವಂನ್ನು ಭೋಗವಟ್ಟಿ ಮಾಡಿಕೊಂಡು ಗ್ರಾಮ ××× ಕಲ್ಲ್ಯಾಣ ಜ್ಯೊತ್ತಿಗಿ ಮಾಡಿಕೊಂಡು ಸೀವಾನಂದಯೋಗದಲ್ಲಿ ಭರಿತರಾಗಿ ಚಂದ್ರಸೂರ್ಯ ಯಿರುವಾ ಪರಿಯಂತ್ರ ಅನುಭವಿಸಿಕೊಂಡು ಬಾಹುದು ಯೆಂದು ಸನ್ಮಥದಿಂದ ಬರಸಿಕೊಟ್ಟ ಭೂದಾನ ಪಟ್ಟಿಕಾಗದ ಸಹಿ.

೧ ಲಿಂಗಣಗೌಡನ ವಪ್ಪಿತವ
೧ ಬಸವನಗೌಡನ ವಪ್ಪಿತವ

೧ ದೇಮಣಗೌಡನ ವಪ್ಪಿತವ
೧ ಕು॥ ಭೀಮಪ್ಪನ ವಪ್ಪಿತವು
೧ ಕು। ರಾಮಪ್ಪನ ವಪ್ಪಿತವ

ಬಿಂ ॥ ಮೊ ॥ ಕು ॥ ಶಿವಪ್ಪನು
ಕಳದ ಹೊಲಕ್ಕೆ ತಪಸಿಲು–

❖❖

೬೯

ಕಾಲ : ಕ್ರಿ.ಶ. ? (ನಳ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಬ್ಯಾಹಟ್ಟಿಯ ಗೌಡ–ಶಾನಭೋಗರು ಮತ್ತು ಸಮಸ್ತ ದೈವದವರು ವಿರಕ್ತಮಠದ ದೀಪಾರಾಧನೆಗೆ ನೀಡಿದ ದಾನದ ವಿವರ.

* * *

೦॥ ಶ್ರೀಮತು ಸಚ್ಚಿತಾನಂದ ಅವಿರಳ ಪರಂಜ್ಯೋತಿ ರಾಜಮಾನ್ಯರಾಜಾದಿ ರಾಜೇಶ್ರೀ ಚರಂತಿ ಗುರುಬಸಪ್ಪನವರ ಪಾದಾರವಿಂದಗಳಲ್ಲಿ ಯಿದರು ತವಯ್ಯ ಚಂನಬಸ್ಯೆಯಾಗ ನಡಿಬೇಕು. ನಂಮ ಭಕ್ತರ ನಡಸಬೇಕು ॥

॥ ನಿಂಮ ಪರಮಭಕ್ತರಾದ ಕ॥ ಬ್ಯಾಹಟಿಯ ಗೌಡ ಶಾನಭೋಗರು ವ ಬೆನಕಂಣ್ಣ ವ ಅರಳಿಶಟ್ಟಿ ರುದ್ರಂಣ ವ ತಡಹಳದ ಕಲಣ ವ ಗುಂಡೂರ ವಸ್ತ್ರದ ಕರವೀರು ವ ದಯಪ್ಪ ಗಾಣಾಗೆರ ವ ಅಪ್ಪಣಾ ವ ಬೆಟದೂರ ಬಸವಾ ಬಟಗೆರೆ ಲಿಂಗಂಣ ವಾ ಗಾಣಿಗೆರ ಸಿಧಂಣಾ ವಾ

ಬೆಂಗೆರಿ ಚನ್ನಪ್ಪ ಸರ್ವಸಮಸ್ತಯಿಹ ಸ್ಥಳದ ಪರಸ್ಥಳದ ದೈವದವರು ಬರದು ಕೊಟ್ಟ ದಾನಪತ್ರದ ಕ್ರಮಯಂತದಡೆ: ಆದಾಗಿ ಕ ।।ಮ।। ಆ ಪೂರ್ವಪರ ಬಹುಕಾಲದಲ್ಲಿ ಸ್ವಾಮಿಗಳ ವಿರಕ್ತ ಮಠದ ದೀಪಾರಾಧನೆಗೆ ಹೇರುವುದಕ್ಕೆ ಕಾಲನಡಿ ವಂದಕ್ಕೆ ೧ ರು ವಿನ ಬಹುಕಾಲ ನಡಹುತ ಬಂದರಿಂದಲಿಗೆ ಸಾಂಪ್ರತು ಕ ।।ಮ।। ವೈರಾನ ಬಿರುಗ್ರಾಮ ನಾಶವಾದ ಕಾರಣಾ ದೇವರ ವರದು ಗ್ರಾಮ ಬಿಟ್ಟು ತೊಲಗಿದವರದ ಮೇಲೆ ಯಿತ್ತಲಾಗಿಹ ।।ಸಾ।। ದಯದಿಂದೆ ಗ್ರಾಮಾವ ಸ್ವಂತವಾಗಿ ಆ ಬರಾನವಾದ ಮೇಲೆ ನಾಲು ಸಮಸ್ತ ದೈವಭಕ್ತರು ಕುಳಿತು ನಿಂಮ್ಮ ನಾವು ಗ್ರಾಮ ತೊಲಗಿದವ ಕರತಂದು ಸ್ಥಳಕ್ಕೆ ಯಿಲ್ಲಿಗೆ ನಿಮಗ ಪುರೊತ್ರ ಪ್ರಕಾರ ।। ಪ್ರತಿಧರ್ಮ ನಡಸಿ ಕೊಟ್ಟೆವೆಂದು ವಚನ ಕೊಟ್ಟು ಪ್ರ ।। ದರಗೋಣಿ ವಂದರೆ ಕಾಲನಡಿ ಆಧು ೧ರೂವಿ ದೀಪಾರಾಧನೆ ಧರ್ಮ ಸಂಗ್ರಹಕ್ಕೆ ಆತ್ಮಸಂತೋಷದಿಂದ ಮಾಡಿಕೊಟ್ಟುಯಿದ್ದೇವೆ. ಯಿದಕ್ಕೆ ದೇವರುವರು ಮಠದ ಸ್ವಧರ್ಮ ನಡಿಸಿಕೊಟ್ಟೂ ಕೊಂಡು ನಮಗೆ ಅಶೀರ್ವಾವಾದಲು ಕೊಟ್ಟುಕೊಡು ಸುಖದಿಂದಲು ಹೊದೇವರಲು. ಯಿದಕ್ಕೆ ಅಲ್ಲ ಮಾಡಿದರೆ ದೇವಲೋಕ ಮರ್ತ್ಯ ಅದು ಬರಕೊಟ್ಟ ಪ್ರ।। ದಾನಪತ್ರಲು: ನಳನಾಮ ಸಂವತ್ಸರ ಮಾರ್ಗಸಿರ ಸುಧ ೧೦ ಬುದವಾರಲು ಯಿದಕ್ಕೆ ಅಲ್ಲಮಾಡಿದರ ದೇವಲೋಕ ಮರ್ತ್ಯಲೋಕ ಹೊರ್ತು ಸ್ವದತ್ತಂ ದ್ವಿಗುಣಂ ಪುಣ್ಯಂ ಪರದತ್ತಾನುಪಾಲನಂ । ಪರದಕುಪಹರಿಣಂ । ಸ್ವದತಂ ನಿಷ್ಪಲಂ ಭವೇತ್ ।।೧।। ಯಿಗಾ ಸಂಗ್ರಾಮಾ ನಿನು ಚಕಂನ್ಯ ವಿಕ್ರಯಿತು ದ್ವಿಜಾ ಅತಿದೇವಿವಾಹಾಶ್ರೆ ಚಂಡಾಲಕೋಟಿ ಜನ್ಮ ಸು ।।೨।। ಸುಕದಯಂಕದ ವೆಂಕಣ್ಣಾ ವ ಪಟ್ಟಣ ಗುರುಬಸಯ್ಯಗೆ

ಶೆಟ್ಟಿ ರುದ್ರಂಣಾ ಕೊಲಕರ ದರಿಯಬಾಯಿ ತಳವಾರ ಲಿಂಗಣ್ಣಾ ವ ಕರಿಯಂಣ್ಣ ಬಡಿಗೆರ ಲಿಂಗಂಣ ಕಂಪುರ ಧೂಳಂಣಾ– ।। ಯಿವರಿಗೆ ಸಮಸ್ತ ದೈವದವರು ನಡಸಿಕೊಡಬೇಕು. ಯಿದಕ್ಕೆ ಅಂತರ ಮಾಡಿದರ ×××××× ನಕಲು ಉಪುಮಾಡಿದವರ ಬಾಯಿಗೆ ಸರ್ವರಿಗೂ ತಿಳಿದಿರಬೇಕು ।।

ಗೌಡಶಾನ ಭೋಗರ ವಪಿತಲು ಪತ್ರ ಪ್ರ।। ಸಮಸ್ತು ದೈವರವರು ವಪ್ಪಿತಲು
ಚಂನಪಗೌವಡನ ವಪ್ಪಿತಲು, ಕಳಶಣಗೌವಡ ವಪ್ಪಿತಲು ಕು।। ದೇವಪ್ಪನ ವಪ್ಪಿತಲು ಪಟ್ಟಣಶೆಟ್ಟಿ ರುದ್ರಣ ಸಾಕ್ಷಿ

❖❖

೭೦

ಕಾಲ : ಕ್ರಿ.ಶ. ? ಭಾಷೆ : ಕನ್ನಡ

ಸಾರಾಂಶ : ಡಂಬಳ ತೋಂಟದಾರ್ಯಮಠದ ಸಿದ್ಧೇಶ್ವರಸ್ವಾಮಿಗಳಿಗೆ ಹಿರೇಶಲವಡಿ ಮತ್ತು ಮಾಗಡಿ ಗೌಡರು ಭೂದಾನ ನೀಡಿದ ವಿವರ.

* * *

ಶ್ರೀ

ಸ್ವಸ್ತಿ ಜಯಾಭ್ಯುದಯ ಶಾಲಿವಾಹನ ಶಖ ಪ್ರವರ್ತಮಾನೆ ಡಂಬಳದಾ ತೋಟದ ಸಿಧೇಶ್ವರಾಸ್ವಾಮಿಗಳವರಿಗೆ ಹಿರೇಶೆಲವಡಿ ಮಜಕೂರ ದಾಟಕನಹಳ ವಸವಣ್ಣಗೌಡ ವ ಚೆನವಿರಗೌಡ ವ ಮಾಗಡಿ ಗೌಡ ವ ಪರವತಗೌಡ ಮುಂತಾದ ಸಮಸ್ತರು ಧಾರಣ ॥ ಜೆಸ್ಟ ಬಹುಳ ಚತುರ್ದಸಿಯಲು ಬರಕೊಟ ಭೂಧಾನಪತ್ರ ಬರಕೊಟ್ಟ ಕಾಗದಾ ಕ್ರಮವೆಂತೆಂದರೆ: ನಾವು ನಂಮ್ಮ ಆತ್ಮಸಂತೋಷವಾಗಿ ನಮಗೆ ಬರಬೇಕೆಂದು ನಂಮ ಯಿನಾಮತಿ ದಾಟಕನಹಾಳ ಪೇಠೆ ವಳಗೆ ಮೂರು ಬೆಳೆ ಲಾವಣೆ ಕೊಟ್ಟು ಯಿಧೆವೆ. ನಂಮ್ಮ ಪತ್ರವೆ ಉತ್ರರವೆಂದ ಯಂದು ಬರಕೊಟ್ಟ ದಾನಪತ್ರ. ಸಹಿ ಯಿದಕ್ಕೆ ಪತ್ರ ಮಾಡಲಿಕ್ಕೆ ಯಿಲಾವೆಂದು ಬರಕೊಟ್ಟ ಪತ್ರಉ.

ಮಜರೆ ದಾಟಕನಹಾಳ ಲಿಂಗದಹಾಳ

ಮಠದ ಕರಿವಿರೈಯ್ಯನ ಸಾಕ್ಷಿ ಬಸವಣ ಗೌಡನ ಸಾಕ್ಷಿ

❖❖

೭೧

ಕಾಲ : ಕ್ರಿ.ಶ. ? (ಜಯ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಕೊಪ್ಪಳದ ಹಿರೇನರಸಣ್ಣಗೌಡ ಮುಂತಾದವರಿಗೆ ಜಯ ಸಂವತ್ಸರದ ಚೈತ್ರ ಶುದ್ಧ ನವಮಿಯ ಕಾಲಕ್ಕೆ ದರುಶನ ತೆಗೆದುಕೊಂಡು ಹೋಗಿರಿ ಎಂದು ತೋಂಟದಾರ್ಯಶ್ರೀಗಳು ಬರೆದ ಪತ್ರಕ್ಕೆ ನೀಡಿದ ಉತ್ತರ.

* * *

೧॥ ಶ್ರೀಮತು ಸದಾಶಿವಸ

ರೂಪರಾದ ರಾಜಪೂಜಿತ

ರಾದ ರಾಜೆಶ್ರೀ ತೋಟದ ಸ್ವಾಮಿ

ಯವರ ದಿವ್ಯ ಶ್ರೀಪಾದಪದ್ಮಂಗಳಿಗೆ ------

ನಿಂಮ್ಮ ಕಾರುಂಣ್ಯಾ ಭಕ್ತರಾದ ಕಿಲ್ಲೆ ಕೊಪ್ಪಳದ ಗೌಡ ಹಿರೇನರಸಣ್ಣ ಗೌಡ ವ ಚಿಕ್ಕನರಸಣ್ಣಾಗೌಡ ಖಾನ ಬೇಗ ಹಿರಿಯಂಣ್ಣಾ ನಾಗಪ್ಪ ವ ಶೆಟ್ರು ಖಾನಾಪುರದ ರಾಚಪ್ಪ ವ ಗಣಾಚಾರಿ ಯೊರಂಣ್ಣಾ ಸಮಸ್ತರು ಮಾಡುವ ಸಾ॥ ಬಿಂನ್ನಹವು. ಆದರೆ ಶ್ರೀ ಸ್ವಾಮಿ ×× ಹಜಯ ಸಂ॥ ರದ ಚೈತ್ರ ಸು॥ ೯ ನವಮಿ ನಿಶ್ಚಯ ಮಾಡಿ ಯಿಧಿತೆ. ನೀವು ಸಕಲರು ಬಂದು ನೋಡಿ ಸ್ವಾಮಿಗಳ ದರುಶಣಾ ತೆಗೆದುಕೊಂಡು ಹೋಗಬೇಕೆಂದು ನಿ×× ಯಿಶಿಯಿದ್ರಿ ವೊದಿ ಕೇಳಿಸಿ ಸಿರಸಾವಹಿಸಿ ××× ಬರುತ್ತಾ ಯಿಧೇವೆ. ಸ್ರುತವಿರಬೇಕು. ವಿಶೇಷ ಬರಿಲಿಕ್ಕೆ ಶಕ್ತರಲ್ಲವು. ಯಿಂತಿ ಬಿ ॥ –

❖❖

ಕಾಲ : ಕ್ರಿ.ಶ. ? (ಮನ್ಮಥ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಬೇಲೂರು ಪ್ಯಾಟಿಗೌಡರು ಮತ್ತು ಸಮಸ್ತ ದೈವದವರು ಚೌಕಿಮಠದವರ ಜಗಳದ ವಿಷಯದಲ್ಲಿ ಬುದ್ಧಿ ಹೇಳಿ ಪತ್ರ ಬರೆಯಿರಿ ಎಂದು ತೋಂಟದಾರ್ಯಸ್ವಾಮಿಯವರಿಗೆ ಬಿನ್ನವಿಸಿಕೊಂಡುದು.

* * *

ಶ್ರೀಮತಾಂಯತೊವಾ ಇಮಾನಿ ಭೂತಾನಿ ಜಾಯಂತೆ

ಎನಜಾತಾನಿಜೀವಂತೆ ಯತ್ಪ್ರಯಂತ್ಯಾಭಿಷಂವಿಶಂತಿ

ತದ್ಬ್ರಹ್ಮೆತಿ ವಿಜಿಜ ಸಸ್ವ ಜನ್ಮಾದ್ಯಸ್ಯಯತಃ ಇತಿ ಶ್ರುತಿ ಸೂತ್ರಾ

ಭ್ಯಾ ಉತ್ಪತ್ಯ ಸ್ಥಿತಿ ಸಂಹ್ವಾರ ಕಾರಣಕರ್ತತ್ವಾತೆ ರಾಜಾಧಿರಾಜ

ಪೂಜಿತರಾದ ಶ್ರೀತೋಟದ ಸ್ವಾಮಿಗಳವರ ಪಾದಪದ್ಮಯುಂಗ್ಮಗಳಿಗೆ —

ಭ್ರಮರಾಯ ಮಾನರಾದ ಕ॥ ಬೇಲೂರ ಪ್ಯಾಠಿ ಗೌಡರು ॥ ಸೆಟ್ಟಿ ಸಮಸ್ತ ದೈವದವರು ಮಾ॥ ದಂಡವತ ವಿಜ್ಞಾಪನಂಗಳ್ಮದಾಗಿ ಯಿೂ ಮನ್ಮಥನಾಮ ಸಂ। ಜೇಷ್ಟವ । ೪॥ ಪರಿಯಂತ ತಂಮ್ಮ ಚರಣ ಕರುಣಕಟಾಕ್ಷದಿಂದೆ ಸೂಕ್ಷೇಮ ದೊಳಿದ್ದೇವೆ. ತಂಮ್ಮತ್ತಣ ಶುಭವಾರ್ತೆತಿಶಯಂ ಗಳಿಗನವರತ ಆಶೀರ್ವಾದ ಲೇಖನೊಕ್ತದಿಂದೆ ಪರಿತೋಸಿಸುವಲ್ಲಿ ಕರ್ತರೆ ಯಿಧಿರಿ. ತದುಪರಿ ತಾಲು ಕೃಪಿ ಮಾಡಿ ಆಶೀರ್ವಾದ ಪತ್ರದಲ್ಲು- ರಾ॥ — ನವರು ಬಂದು ಚೌಕಿಮಠದ — ನವರ ಸಂಗಡ ಗುದ್ದಾಟ ಮಾಡುತಾರ. ಅಪ್ಪಣೆ ಸಿವಾಯ ಅಲ್ಲಿ ಕಲಾಪ ಮಾಡೋ ಕಾರಣ ಯಿಲ್ಲಲು. ಅವರಿಗೆ ಬುದ್ದಿ ಹೇಳಿ. ಯ ಪರಿಯಂತ ಕಳುಹಿಸಿ ಕೊಡಬೇಕು. ಪೂರ್ವ ಪ್ರ॥ ರಾ॥ ಗಳವರನ ಮಠದೊಳಗೆ ಯಿಡಬೇಕು ಯೆಂದು ತಾಲು ಆಜ್ಞಾ ನಿರೋಪಿಸಿದಲ್ಲಿ ಶಿರಸಾವೈಹಿಸಿ ಸನಾಥರಾದಿವಿ. ಅದಕ್ಕೆ ಯಿಲ್ಲಿ ತಂಮ್ಮ ಅಜ್ಞಾನಸಾರ ವಿಚ್ಯಾರಕ್ಕೆ ತಂದು ನೋಡಲಾಗಿ ವಂದು ಅಂನ್ಯಾಯ ಕಂಡ ಹಾಗೆ ಆಗಲಿಲ್ಲಲು ಮತ್ತು ರಾ॥ ಗಳವರು ತಂಮ್ಮ ಮಠದಲ್ಲಿ ತಾಲು ಸ್ವಸ್ತು ಯಿಧಾರು. ಅವರಿಗೆ ದಾರಾಧಾರಕಡಿಲಿಂದಲು ಉಪದ್ವಾಪಯಿಲ್ಲಲು. ಸುಳ್ಳೆ ತುಫಾನ ತಂದು ಪಾದಕ್ಕೆ ಅರಿಕೆ ಮಾಡಿದ್ದಾರಾಧಿತು. ಆ ಮಾತುಗಳಲೇ ಶಂಶಾಪಾದದಲ್ಲೆ ತರಲಾಗದು. ಲಾಗಾಯತ ಪಾರಂಪರೆ ಸರ್ವೆ ಸಮಸ್ತರು ಚರಣ ಸೇವಕರು ಯಿಧೆವು. ಈ ಕಡಿಯಿಂದಲು ಅಂನ್ಯಥಾ ಮ॥ ಯೆಂದಿಗು ಆಗಲರಿಯದು ಖಚಿತ ಅರಿಯಬೇಕು. ಹಾಗೂ ಸ್ವಲ್ಪ ದಿವಸದೊಳಗೆ ಚರಣ ಸೇವೆಗೆ ಅವರೆ ಬರುತ್ತಯಿಧಾರು. ಪೂರ್ವದಲ್ಲಿ ಆದಾರು ಪಾದದ ದರುಶನ ತೈಗದುಕೊಳ್ಳಬೇಕೊಂಬೊ ಕಾಂಕ್ಷಾನು ಅವರಲ್ಲಿ ಪೂರ್ಣಯಿತ್ತು. ಅದರೊಳಗೆ ತಂಮ್ಮ ಅಜ್ಞಾ ಬ್ಯಾರೆ ಬಂತು ಯಂಬೋದು ಅರಿದು ಸಂತೋಷಿತರಾಗಿ ದರ್ಶಣಕ್ಕೆ ಬಾಹೊ ಲವಲವಿಕೆ ಯಿಧಿತು. ಅದರಂತೆ ಅವರಿಗು ಸಂನ್ನಿಧಿಗೆ ಕಳಿಸುತ್ತ ಯಿಧೆವು. ಮುಂದೆ ಸಕಲ ವಿ॥ಕ್ಕು ಬುದ್ದಿಗೊಟ್ಟು ನಡಸಿಕೊಂಬುವದಕ್ಕೆ ಕರ್ತುಗಳೆ ಯಿಧಿರಿ. ಯಿಲ್ಲಿ ಯೆನಿಕ ಕಾರ್ಯ್ಯ ತಂಮ್ಮ ಮಠದೊಳಗೆ ಸಾಗಬೇಕಾದರೆ ತಂಮ್ಮ ಅಜ್ಞಾವಿ ತರುತ್ತ ಸಾಗಲಿಕ್ಕೆ ಯಿಲ್ಲವ ರಾ॥ ಮರ್ತುರ ಮಂಡೆಪ್ಪ

ಅಂಣನವರು ಯಿದೆವು. ರುಪಾಯಿಗಳ ಮ॥ ಸಲುವಾಗಿರೊ ಮಿಟ್ಲಕೊಡ ಶಿವಬಸಪ್ಪ ಅಂಣನವರಿಗೆ ಪತ್ರಾ ಬರಿದಿದ್ದರು ಅದರಂತೆ ರೂ.ಗಳಿಗೆ ರು ೨೫ ರೂಪಾಯಿಗಳ ಕೂಡಿಸಿ ರಸಿಧಿ ತಗೊಂಡು ಸಮರ್ಪಕ ಉತ್ರಾ ಬರದಿದ್ದಾರೆ. ನೋಡಲಾಗಿ ಅರಿಕೆ ಯೊಧಿತು. ಮುಂದೆ ನಮಗೆ ಕೊಡತಕ್ಕಂತ ಬುದ್ಧಿಕ್ರಮಂಗಳ ದಯಪಾಲಿಸಲಿಕ್ಕೆ ಕರ್ತರೆ ಯಿದ್ದಿರಿ. ಯಿೊ ವಿಷಯಕ್ಕೆ॥ ಬರಕೊಳ್ಳ ಶಕ್ತರಲ್ಲವು. ತಂಮ್ಮ ಅಪ್ಪಣೆ ಬಂದ. ಪ್ರ॥ ಮಾಡಿ ಕಳುಹಿಸಿ ಯಿದಕ್ಕು ಪಾದಕ್ಕೆ ಅರಿಕಿ ಯಿರಬೇಕು. ಯಿಂತಿ ಗಂಗೆ ಮಳಲಿಗೆ ಸಮಾನವಾದಷ್ಟು ಸಾ॥ ಬಿನ್ನಹ.

❖❖

೭೩

ಕಾಲ : ಕ್ರಿ.ಶ. ? (ದುರ್ಮತಿ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಮಠವನ್ನು ಇನ್ನೊಬ್ಬರ ವಶಕ್ಕೆ ಕೊಡುವ ವಿಷಯವಾಗಿ ಹೊಳಲು ಗೌಡರು, ಪ್ಯಾಟಿಶೆಟ್ಟಿ ಸಮಸ್ತ ದೈವದವರು ಡಂಬಳ ತೋಂಟದಾರ್ಯಮಠ ಶ್ರೀಗಳವರಿಗೆ ಬರೆದ ಪತ್ರ.

* * *

ಶ್ರೀಮತ್ಸಚಿತಾನಂದ ನಿತ್ಯಪರಿಪೂರ್ಣ ಅವಿರಳ
ಪರಂಜ್ಯೋತಿ ಸ್ವರೂಪಿಗಳಾದಂತ ಅನಾದಿ
ನಿರಾಭಾರಿ ವೀರಶೈವ ಷಟ್‌ಸ್ಥಲ ಬ್ರಂಮಾನಂದ
ನಿಗ್ರಹ ಅಷ್ಟಾವರಣ ಸ್ವರೂಪ ಆತ್ಮವಿಧ
ಸಕಲ ಸಂಶೋಭಿತರಾದಂತ್ತರಾಜಾಧಿ ರಾಜಾ
ಪೂಜಿತ ರಾಜಮಾನ್ಯನಾಂ। ರಾಜೆಶ್ರೀ ಡಂಬಳದ
×××× ದಾರ್ಯರ ಚರಣ ಕಮಲಗಳಿಗೆ

ಬಸವಲಿಂಗದೇವರು

ರುದ್ರಪ್ಪ

ಭ್ಯುಂಗಾಯ ಮಾನರಾದ ಹೊಳಲ ಗವುಡರು, ಪ್ಯಾಟಿಶಟ್ಟಿ ಸಮುಸ್ತು ದೈವ, ಪಟ್ಟಣಶೆಟ್ಟಿ ಮುಂತಾದವರು ಮಾಡಿ ಮಾಡುವ ಶಿರಸಾಷ್ಟಾಂಗ ಬಿಂನಹ. ಆದರೆ ದುರ್ಮತಿ ಸಂವತ್ಸರದ ಬಾದ್ರಪದ ಶು ೭ ವರಿಗೆ ನಾವು ಕ್ಷೇಮ. ತಂಮ್ಮ ಪಾದದ ಲಿಂಗಾನಂದ ಲೀಲಾವೈಭವಗಳಂನ್ನು ಪದೆಪದೆ ಯಿತ್ತವಾಗಿ ಬರುವಂತವರ ಸಂಗಡ ಲೇಖನಾಸ್ಯದಿಂ ಪರಂಪರಿಕ್ಷೇಕ್ಕೊಳ್ಳುವಲ್ಲಿ ಕೇವಲ ಖಾವಂದರೆ ಸರಿಕತುಃ। ಯಿೊಗ ನಮ್ಮಲ್ಲಿರುವ ತಂಮ್ಮ ಮಠಕ್ಕೆ ಆರಿಕಿ ಮಾಡುವ ಬಗ್ಗೆ ರಾ ——— ×× ಕರಕೊಂಡು ಆ ಮಠದ ಜಿಂದಿಗಿಯೇನಿದ್ಯಾಗ್ಯು ಯಿವರ ವಶಕ್ಕೆ ಕೊಡುವದು ಯಂಬುವ ಹಾಗೆ ಶ್ರೀಪಾದ ಪತ್ರದಯಪಾಲಿಸಿದಂತಾ ಶಿರಸಾವಹಿಸಿ ನೋಡಿಕೊಂಡೆವು. ತದನಂತರ

ಹಿರೆಹಡಗಲಿ ರಾ ।——।। ನ ಮುಂದಿಟ್ಟುಕೊಂಡು ಜಿಂದಿಗಿ ಯೇನಿದಾಗ್ಯು ಪಾದದ ಸಂನ್ನಿದಾನದಿಂದ ಬಂದ ರಾ । ।——ಗೆ ಪಾದದ ಅಪ್ಪಣೆ ಪ್ರಕಾರ ವಪ್ಪಿಸಿಕೊಂಡು ಯಿಧರೆ ಯಿ ಪೂರ್ವಕ್ಕೆ ವಿಶೇಷ ಬಿಂನ್ನಹ ಬರಸಿ ಕೊಳ್ಳಲಿಕ್ಕೆ ಶಕ್ತರಲ್ಲವು ——

ಯಿಂತಿ ಪೊಡಮಟ್ಟು ಪಾದದ ಮೇಲೆ ಬಿದ್ದು ಮಾಡಿಮಾಡುವ ಬಿಂನ್ನಹ ಸಾಷ್ಟಾಂಗ ಬಿನ್ನಹವು –

❖❖

೭೪

ಕಾಲ : ಕ್ರಿ.ಶ. ? ಭಾಷೆ : ಕನ್ನಡ

ಸಾರಾಂಶ : ಹರ್ಲಾಪುರದ ಭೀಮಣ್ಣಗೌಡರು ಶ್ರೀ ತೋಂಟದಾರ್ಯ ಸ್ವಾಮಿಗಳಿಗೆ ಬರೆಸಿಕೊಟ್ಟ ಇನಾಮ ಹೊಲದ ರಾಜಿಪತ್ರ.

* * *

ಶ್ರೀ ತೋಂಟದ ಸ್ವಾಮಿಗಳವರ ನಿ।।

ಲಿಂಗಮರಿ ಯಿವರಿಗೆ ——

ರಾಜಿಪತ್ರ ಹನಮಗೌಡ ಬಿಂನ ಭಿಮಣ್ಣಗೌಡ ಸಾ।। ಹರ್ಲಾಪುರ ವಸ್ತಿ

ಗದಗ ನಾನು ಬರಸಿಕೊಟ್ಟ ರಾಜಿಪತ್ರ ಯೆನಂದರ ನಾನು ನಿಂಮ

ಸರ್ವ ಯಿನಾಮ ತೋಪಾವರ್ಷ ವಂದ್ಕ ೪೦ ರೂಪಾಯಿ ಬಿರಾಡ ಗೊತ್ತ

ಮಾಡಿ ಪೆರಲ ಗಿಡ ಸುಧಾ ತಗೊಂಡು ಪೈ ಯಿಂತಾದ್ದು

ನೋಡಿ ಕೊಟ್ಟ ಅಂತ ಕರಾರ ಮಾಡಿ ಮೂರು ನಾಲ್ಕು ವರ್ಷ ಮಾಡಿಕೊತ

ಬಂದು ಯಿ ವರ್ಷದ ಬಿರಾಡ ಕೊಡುದಾ ನನ್ನಿಂದ ಸಾಗದ

ಮೂಲ ತಮಗ ಹೇಳಿಕೊಂಡು ಯಿ ವರ್ಷದ ಬಿರಾಡರೊಳಗ ನಾನು

ಮಾಡಿಕೊಳ್ಳ ಪೈರವಿ ನೀವು ತಗೊಂಡು ನಂನ್ನ ಧರ್ಮಶರಿ ಬಿಡಬೇಕು.

ಅಂತ ನನ ರಾಜಿಯಿಂದ ಸದರ ತೋಟಾ ಬಿ ಟ।। ××××

ನಾನು ರಾಜಿಯಿಂದ ಬಿಟಿಸ್ಸಿದರ ಮೇಲೆ ಹಾಗೆ ವುಳ್ಳದದೆ.

ಅದರನ್ನ ಬ್ಯಾರೆ ತಿರಿಸಿಕೊಟ್ಟು ಪಾವತಿ ತಗದು ಕೊಟ್ಟು ಸದರ ತೋಟ

ಮಾತ್ರ ಯಿ ದಿನ ದಿವಸಾ ಬಿಟ್ಟು ಯಿರುತ್ತೇನೆ ಯೆಂದು ರಾಜಿಯಿಂದ

ಬರಸಿ ಕೊಟ್ಟು ಪತ್ರ ಸಹಿ ಯಿಂತಿ ಆನಂದ ಸಂ।।

ಪಾಲ್ಗುಣ ಶು।। ೧೨ ರೊಜ ಬುಧವಾರ

ಸಾಕ್ಷಿ [ಸಹಿಗಳಿವೆ.]

❖❖

ಕಾಲ : ಕ್ರಿ.ಶ. ? ಭಾಷೆ : ಕನ್ನಡ

ಸಾರಾಂಶ : ತೋಂಟದಾರ್ಯ ಸ್ವಾಮಿಗಳಿಗೆ ಕುರ್ತಕೋಟಿಗೌಡ, ಕುಲಕರ್ಣಿಗಳು ಭಿಕ್ಷಾಟನೆಯಿಂದ ಬಂದ ಹಣ ಕಳಿಸಿದ ವಿವರ.

* * *

ಶ್ರೀ

ಶ್ರೀಮತ್ಸಚ್ಚಿತಾನಂದ ನಿತ್ಯ

ಪರಿಪೂರ್ಣ ಅವಿರಳ ಪರಂಜ್ಯೋತಿ

ಸ್ವರೂಪಿಗಳಾದಂಥ ರಾಜಾಧಿ ರಾಜಪೂಜಿತ ರಾಜ ರಾಜೆಶ್ರೀ

ತೋಟದ ಸ್ವಾಮಿಯವರು

ನಂಮ ಸದ್ಭಕ್ತ ಶಿರೋಮಣಿಗಳಾದಂಥ ಕುರತುಕೋಟಿ ಗೌಡ ಕುಲಕರ್ಣಿ ಶೆಟ್ರೂ ಸಮಸ್ತ ದೈವದವರಿಗೆ ಧನಕನಕ ವಸ್ತು ವಾಹನ ಪುತ್ರಮಿತ್ರ ಕಳತ್ರಯಾದಿ ಸಕಲಸಂಪತ್ತು ಸಯಡಿಕರವಾಗಲೆಂದು ಹರಶಿ ಭರಸಿ ಕಳಿಹಿಸಿದಾನೇಕಾಶೀರ್ವಾದವು. ಆದಾಗಿ ಯಿೂ ನಂದನ ಸಂ|| ಆಶ್ವಿಜ ಬಹುಳ ೩ಪರಿಯಂತರ ಹಂಪಸಾಗರದಿಂದ ಬಂದದ್ದು.

ಶ್ರೀಗುರು ಜಯ ಸಂ||ವೂರ ಭಿಕ್ಷ ಬಂದದು । ಜೆಷ್ಟ ಶುಧ ||೫||

ಜನಗಳು	ಗಜಾಪುರ
ರು ೪ ಜಿನಗ ರುದ್ರಪ್ಪಾ	ರು ೦೧ ಗಜಾಪುರದ ವಸ್ತ್ರದಯ್ಯ
೨ ಬೂದಿ ಚ|| ದೊ||	ರು ೦೮=ಅರಹುಣಸಿ ಫಕೀರಯ್ಯ
೧ ಹನಸಿ ಅಡ್ಡಂಗಡಿ	|| ೦೩=ಕೊರಿ ರುದ್ರಪ್ಪ
೦೦|| ಹತ್ತಿ ಚ||	ರು=೧=ಹೆಸರೂರು ಜಿನಗಾ ರುದ್ರಪ್ಪ
೦೦|| ಕರಿವೀರ||	ರು–೪=ಡಾವಣಗೇರಿಯವರು
೦೦|| ಹವಳದದೊ	ರು–೪=ಕಂಟಿಕೆರಿಯವರು
೦೧|| ನ್ಯರ್ನಿಗಿಬಿ ||	ರು ೨=ಬಳ್ಳಾರಿಯವರು
೦೪|| ಹಂಮ್ಮಿಗಿ ಕೊ||	ರು ೧=ವಾವೊಜಿ ಶಿವಣ್ಣ
ರು ೦೦|| ಶೆಟ್ರಚ||	ರು ೨=ಕುರುಗೊಡ ಕೊಟ್ರಯ್ಯ
೦೧|| ಜವಳಿ ಅ||	ರು ೧=ಡಂಬಳದ ವೀರಪ್ಪ

ರು ೦೦॥ ಹಗತೊಪ್ಪಲ ಸಂ॥	ರು ೧=ಕರಡಿಕಲ್ಲ ರಾಜಪ್ಪ
೦೦॥ ಲಿಂಗದಹಳ್ಳಿ	ರು ೩=ಹೊಳಲ ಮಠದಯ್ಯ
೦೧॥ ಶೀಳವಸಿ ॥	ರು=೨ ಕರಡಿ ಕಲ್ಲರಾಚಪ್ಪ
೦೩॥ ಪ್ಯಾಟಿ	ರು=೧ ಕರಿಬಸಪ್ಪ
೦೪॥ ಹೊಟ್ಟೆಪ್ಪ	ರು=೨=ಸೊಂಡೂರ ಶಿವಪ್ಪ
೪೩ ಸರೂರಶಿ	ರು=೩ ಕಾಗನೂರು ವೀರಪ್ಪ
೦೮ ಕೋರಿ ಅ॥	ರು=೪ ಕರಡಿ ಚೆನ್ನಬಸಪ್ಪ
ರು ೦೧ ಬಾವಿ ಬ ॥	ರು ೧=ಜಿನಗಾ ತೊಲುಕೇರಿ
ರು ೦೧ ನಾಲವಾರದ ಕ	ರು ೨=ಕೌಲೂರ ಕೊಟ್ರಪ್ಪ
ರು ೦೧ ಕಡ್ಲಿಬಾಳ ಅ	ರು೮=ತಂಬ್ರಹಳ್ಳಿ
ರು ೦೪ ಹಮ್ಮಿಗಿ ಕೊ	ರು೪ ಮರ್ತೂರಚಂನ್ನಪ್ಪ
ರೂ ೦೧೦ ಕಡ್ಲಿ ಕೊ ॥	ರು೧=ಚಂನಬಸಪ್ಪ
ರೂ ೧೦ ಬ್ಯಲದ ಪ॥	ರು೨=ಡಾವಣಗೇರಿ
ರೂ ೦೧ ವಾಲಿಮಹ	ರು೪=ಟೆಂಗಿನಕಾಯಿ ಕೊಟ್ರಪ್ಪ
ರೂ ೦೪ ದಂಬಲ ಬ ॥	ರು೮=ಪಿಕಿಹಾಳ ವೀರಪ್ಪ
ರೂ ೨ ತಂಬ್ರಹಳ್ಳಿ ಸಿದ್ಧಮ್ಮ	ರು೮ ನಿಂದ್ರಿ ಲಿಂಗಪ್ಪ

❖❖

೫. ವಿಶೇಷ ಪತ್ರಗಳು

(ಎಡೆಯೂರ, ಡಂಬಳ, ಗದಗ, ಕುಣಿಗಲ್ಲ, ತುಮಕೂರು, ಮೈಸೂರು)

*

೫. ವಿಶೇಷ ಪತ್ರಗಳು

(ಎಡೆಯೂರ, ಡಂಬಳ, ಗದಗ, ಕುಣಿಗಲ್ಲ, ತುಮಕೂರು, ಮೈಸೂರು)

೭೬

ಕಾಲ : ಕ್ರಿ.ಶ. ೧೯೦೯ ಜನವರಿ ೯ ಭಾಷೆ : ಕನ್ನಡ

ಸಾರಾಂಶ : ಶ್ರೀಅರಟಾಳ ರುದ್ರಗೌಡರಿಗೆ ಬ್ರಿಟಿಶ್ ಸರಕಾರದಿಂದ ರಾವ್‌ಬಹಾದ್ದೂರ ಪದವಿ ಸಂದ ಸಂದರ್ಭದಲ್ಲಿ ಈ ಜಗದ್ಗುರುಗಳು ಬರೆದ ಆಶೀರ್ವಾದ ಪೂರ್ವಕ ಅಭಿನಂದನ ಪತ್ರಕ್ಕೆ ಉತ್ತರ.

* * *

ಲಿಂಗಾನಂದದ ||

ಶ್ರೀಮನ್ನಿರಂಜನ ಅಲ್ಲಮಾ ಪ್ರಭುವರ ನಿರಾ
ಭಾರಿ ವೀರಶೈವ ಸ್ವಾಮ್ಯಾನ್ವಯ ಸಾಂಪ್ರ
ದಾಯಕರಾದಂಥ ಗದಗಿನ ಶ್ರೀ ಜಗದ್ಗುರು
ತೋಂಟದಾರ್ಯಸ್ವಾಮಿಗಳವರ
ಚರಣಾರವಿಂದಯುಗ್ಮಕ್ಕೆ–

ಮಹಾಸಂನ್ನಿಧಿಯ ಕೃಪಾಪಾತ್ರನಾದಂಥ ರುದ್ರಗೌಡಾ
ಚೆನವೀರಗೌಡಾ ಪಾಟೀಲ ಕಸಬಾ ಅರಟಾಳ ತ್ರಿಕಾ
ಲದೊಳು ಮಾಡುವ ವಿನಿಯಾನ್ವಿತ ವಿಜ್ಞಾಪನೆಗಳಿಂದೊಡಗೂಡಿದ
ದೀರ್ಘದಂಡ ನಮಸ್ಕಾರಗಳು

ಇತ್ತ ಕಡೆಗೆ ಮಹಾಸಂನ್ನಿಧಿಯ ಆಶೀರ್ವಾದ ಬಲದಿಂದ ಕ್ಷೇಮದಿಂದದ್ದೇವೆ. ಶ್ರೀ || || ವೈಭವಕ್ಕೆ ಪದೇ ಪದೇ ಬರೆಸುತ್ತ ಇರಬೇಕು. ತರುವಾಯ ಈ ಹೊತ್ತಿನ ದಿವಸ ಮಹಾಸಂನ್ನಿಧಿಯ

೫ನೆಯ ತಾರಿಖೀನ ಆಶೀರ್ವಾದ ನಿರೂಪಣೆಯ ಪತ್ರ ಬಂದು ತಲುಪಿತು. ಅಭಿಪ್ರಾಯ ತಿಳಿದು ಮನಸ್ಸಿಗೆ ಪರಮಾನಂದವಾಯಿತು. ನನಗೆ ದೊರಕಿದ ಈ ಪದವಿಯು ಮಹಾಸಂನ್ನಿಧಿಯ ಆಶೀರ್ವಾದ ಬಲದಿಂದಲೇ ದೊರಕಿತು. ಇಂನು ಮುಂದಾದರೂ ಮಹಾಸಂನ್ನಿಧಿಯ ಆಶೀರ್ವಾದವು ಪೂರ್ಣವಾಗಿ ಇರಬೇಕೆಂದು ಹಾರೈಸುತ್ತೇನೆ, ವಿಶೇಷವೇನೂ ಇಲ್ಲ. ಆಶೀರ್ವಾದ ಪೂರ್ಣವಿರಬೇಕು. ಇತಿ ದೀರ್ಘದಂಡ ನಮಸ್ಕಾರಗಳು.

ಮಹಾಸಂನ್ನಿಧಿಯ ಕೃಪಾಪಾತ್ರನಾದಂಥ

ಮುಕ್ಕಾಮಃ ಎಲೆ ಹಡಲಗಿ — ರುದ್ರಗೌಡ ಪಾಟೀಲ

ತಾ|| ಅಥಣಿ — ಕಸಬಾ ಅರಟಾಳ

ತಾ. ೯–೧–೧೯೦೯ — ತಾ. ಬಂಕಾಪುರ, ಜಿ. ಧಾರವಾಡ

❖❖

೭೭

ಕಾಲ : ೧೯೦೯ ಮಾರ್ಚ್ ೩ — ಭಾಷೆ : ಕನ್ನಡ

ಸಾರಾಂಶ : ರುದ್ರಗೌಡರು ಬಿಜಾಪುರ ಜಿಲ್ಲೆಯ ಕಲೆಕ್ಟರ ಆದರೆಂಬ ಸುದ್ದಿ ಕೇಳಿ ಶ್ರೀತೋಂಟದಾರ್ಯ ಜಗದ್ಗುರುಗಳು ಆಶೀರ್ವಾದ ಪತ್ರ ಬರೆದರು. ಆದರೆ ಇದು ನಿಜವಲ್ಲವೆಂದು ಅರಟಾಳ ರುದ್ರಗೌಡರು ಮರಳಿ ತೋಂಟದಾರ್ಯಸ್ವಾಮಿಯವರಿಗೆ ಬರೆದ ಉತ್ತರ.

* * *

ಶ್ರೀ

'ಲಿಂಗಾನಂದ'

ಶ್ರೀಮನ್ನಿರಂಜನ ಅಲ್ಲಮಾ ಪ್ರಭುವರ

ನಿರಾಭಾರಿ ವೀರಶೈವ ಸ್ವಾಮ್ಯಾನ್ವಯ

ಸಾಂಪ್ರದಾಯಕರಾದಂಥ ಗದಗಿನ

ಶ್ರೀ ಜಗದ್ಗುರು ತೋಂಟದಾರ್ಯ

ಮಹಾಸ್ವಾಮಿಗಳವರ ಪಾದಪಂಕೇಜಯುಗ್ಮಕ್ಕೆ–

ಮಹಾಸಂನಿಧಿಯ ಕೇವಲ ಭಕ್ತನಾದಂಥ ರುದ್ರಗೌ

ಡ ಚನ್ನವೀರಗೌಡ ಪಾಟೀಲ ಕಸಬಾ ಅರಟಾಳ ಗೌಡನ

ದೀರ್ಘದಂಡ ನಮಸ್ಕಾರಗಳು, ಇತ್ತ ಕಡೆಗೆ ಮಹಾಸಂನಿ

ಧಿಯ ಆಶೀರ್ವಾದ ಬಲದಿಂದ ಯಾವತ್ತರಣ ಸುಖರೂಪದೊ

ಳಿದ್ದೇವೆ. ಮಹಾಸಂನಿಧಿಯ ಬಲದಿಂದ ಯಾವತ್ತರಣ ವೈಭವಕ್ಕೆ
ಪದೇ ಪದೇ ಬರೆಯಿಸುತ್ತ ಇರಬೇಕು. ತರುವಾಯ
ಈ ಹೊತ್ತಿನ ದಿವಸ ಮಹಾ ಸಂನಿಧಿಯ ೨೮ನೆಯ ತಾ
ರೀಖಿನ ಆಶೀರ್ವಾದ ನಿರೂಪಣೆಯ ಪತ್ರ ಬಂದು ತ
ಲುಪಿತು. ಅಭಿಪ್ರಾಯವು ತಿಳಿಯ ಬಂತು.
ಆದರೆ ನಮಗೆ ವಿಜಾಪುರ ಜಿಲ್ಲೆಯ ಕಲೆಕ್ಟರ್
ಕೆಲಸಕ್ಕೆ ನೇಮಣೂಕ ಆಯಿತೆಂದು ವರ್ತಮಾನ ಹತ್ತಿ
ರುತ್ತದೆಯಂತ ಮಹಾಸಂನಿಧಿಯಿಂದ ಬರೆಯಿಸೋ
ಣವಾಗಿದೆ. ಆದರೆ ಈ ಸಂಗತಿಯು ನಿಜವಿರುವುದಿಲ್ಲ.
ಹಾಗೂ ಇತ್ತ ಕಡೆಗೆ ಈ ಬಗ್ಗೆ ಏನೂ ವಾರ್ತೆ ಹತ್ತಿರು
ವದಿಲ್ಲ. ನಂಮ ಮುಕ್ಕಾಮ ಈಗ ಗೋಕಾಕ
ತಾಲೂಕಿನಲ್ಲಿ ''ಅಡವೀಸ್ವಾಮಿ''ಯ ಅಂಕಲಗಿ ಗ್ರಾಮ
ದೊಳಗೆ ಇರುತ್ತದೆ. ಇನ್ನು ೩, ೪ ದಿವಸಗಳಲ್ಲಿ ಹು
ಕ್ಕೇರಿ ತಾಲೂಕಿನ ಹದ್ದಿಯೊಳಗೆ ಹೋಗತಕ್ಕವರಿದ್ದೇ
ವೆ. ನಾವು ಮೊನ್ನೆ ತಾರಿಖ ೨೮ ಮತ್ತು ೧ನೆಯ ತಾರೀ
ಖಿನ ದಿವಸ ಬೆಳಗಾವಿಯೊಳಗೆ ಇದ್ದೆವು. ಶಿರಸಂಗಿ
ಯ ದೇಸಗತ ಸಂಬಂಧ ಸಾಕ್ಷಿ ಕೆಲಸ ತೀರಿಸಿಕೊಂ
ಡು ೨ನೆಯ ತಾರೀಖಿನ ದಿವಸ ತಿರುಗಿ ಅಂಕಲಗಿ
ಗೆ ಬಂದೆವು.
ಮಹಾ ಸಂನಿಧಿಯಿಂದ ಬಂದಂಥ ವಂಶಾವಳಿಯ
ಪುಸ್ತಕಗಳು ಬಂದು ಮುಟ್ಟಿರುತ್ತವೆ. ಆ ಪುಸ್ತಕವನ್ನೆ
ಪೂರ್ಣವಾಗಿ ಓದಿನೋಡಿದೆವು. ಅದರಲ್ಲಿ ಆಯಾ
ಯ ಮಹಾಸ್ವಾಮಿಗಳವರ ಕಾಲದ ಮಿತಿ ಮುಂ
ತಾದ್ದರ ಉಲ್ಲೇಖವಾಗಿದ್ದರೆ ಸದರಿ ವಂಶಾವಳಿಯು
ಇದಕ್ಕೂ ವಿಶೇಷ ಮಹತ್ವವುಳ್ಳದ್ದಾಗುತ್ತಿತ್ತು

ಅಂತಾ ನಂಮ ಅಭಿಪ್ರಾಯವದೆ. ಈ ಪುಸ್ತ

ಕವನ್ನು ತಯಾರಿಸುವ ಬಗ್ಗೆ ಪಂಡಿತ ಬಸವಪ್ಪ

ನವರು ಕೋಟೆ ಇವರು ವಿಶೇಷ ಶ್ರಮ ತೆಗೆದು

ಕೊಂಡಿರುತ್ತಾರೆ. ಇದರಲ್ಲಿ ಸಂಶಯವಿಲ್ಲ. ಈ ಬಗ್ಗೆ

ಅವರಿಗೆ ನಂಮ ಅಂಬೋಣ ತಿಳುಹಿಸೋಣಾಗಬೇಕು.

ಈಗ ನನ್ನ ಪ್ರಕೃತಿ ನೆಟ್ಟಗದೆ. ಇತ್ತ ಕಡೆ

ಯ ಹವೆ ಮುಂತಾದದ್ದು ಚಂನಾಗಿದೆ. ವಿಶೇಷ

ವೇನು ಇಲ್ಲ. ಮಹಾಸಂನಿಧಿಯ ಆಶೀರ್ವಾದ

ಪೂರ್ಣವಾಗಿ ಇರಬೇಕು. ಇತಿ ದೀರ್ಘದಂಡ ನಮ

ಸ್ಕಾರಗಳು

ಮಹಾಸಂನಿಧಿಯ ಭಕ್ತನಾದ

ತಾರೀಖ ೩-೩-೧೯೦

ಮುಕ್ಕಾಂ ಅಂಕಲಗಿ ರು.ಚೆ. ಅರಟಾಳ

❖❖

೭೮

ಕಾಲ : ೧೯೧೧ ಅಗಸ್ಟ್ ೪ ಭಾಷೆ : ಕನ್ನಡ

ಸಾರಾಂಶ : ಸಿದ್ಧಪ್ಪ ಕಂಬಳಿ ಅವರು ಸಾಕ್ಷಿದಾರರ ಯಾದಿ ಕಳಿಸಬೇಕೆಂದು ತೋಂಟದ ಜಗದ್ಗುರುಗಳಿಗೆ ಬರೆದ ಪತ್ರ.

* * *

ಶ್ರೀಮದ್ ಜಗದ್ಗುರು

ತೋಂಟದ ಸ್ವಾಮಿಗಳವರ

ವಟ್ಟ ಮೊಖ್ಯಾರವರ ಸನ್ನಿಧಿಗೆ

ಕಂಬಳಿ ವಕೀಲರ ನಮಸ್ಕಾರಗಳು.

ತಮ್ಮ ಪತ್ರಮುಟ್ಟಿತು ಅದರ ×××× ಸಾಕ್ಷಿ

ಲಿಸ್ಟ ರವಾನಿಸಿರುತ್ತೇನೆ.

ಮುದ್ದತ ವಳಗಾಗಿ ನಮಗೆ ಮುಟ್ಟುವಂತೆ

ಸಾಕ್ಷಿ ಲಿಸ್ಟ ತಯಾರಿಸಿ ಕಳಿಸುವ

ಮೆಹರ್ಬಾನಿ ಯಾಗಬೇಕು. ಯಿತಿ

ಶಿ॥ ನಮಸ್ಕಾರಗಳು.

೪–೮–೧೯೧೧ [ಸಹಿಯಿದೆ.]

❖❖

೭೯

ಕಾಲ : ಕ್ರಿ.ಶ. ೧೯೧೪ ಜನೇವರಿ ೧೫ ಭಾಷೆ : ಕನ್ನಡ

ಸಾರಾಂಶ : ಗದುಗಿನ ತೋಟದಸ್ವಾಮಿಗಳು ಗುರುಶಿಷ್ಯ ವಂಶಾನುಕ್ರಮದಿಂದ ಎಡೆಯೂರ ಸಿದ್ಧಲಿಂಗೇಶ್ವರರ ವಂಶಸ್ಥರಿದ್ದಾರೆ. ಹೀಗಾಗಿ ಇವರು ಎಡೆಯೂರು ಗದ್ದುಗೆ ದರ್ಶನಕ್ಕೆ ಹೋಗುತ್ತಲಿದ್ದು, ಮೈಸೂರು ಪ್ರದೇಶದ ಪ್ರವಾಸದಲ್ಲಿ ಜಗದ್ಗುರುಗಳಿಗೆ ರಕ್ಷಣೆ, ಗೌರವ ನೀಡಲು ದಿವಾನ್‌ರಾದ ಎಮ್.ವಿಶ್ವೇಶ್ವರಯ್ಯ ಅವರಿಗೆ ಬರೆದ ಅರ್ಜಿ ಪತ್ರ.

* * *

ಎಮ್. ವಿಶ್ವೇಶ್ವರಯ್ಯಾ ಬ.ಯ.ಸಿ.ಆ.ಯಿ. ಮಯಿಸೂರ ದಿವಾನ ಬೆಂಗಳೂರು ಯಿವರಿಗೆ–

ಶ್ರೀಮನ್ನಮಹಾರಾಜಾ ನಿರಂಜನ ಜಗದ್ಗುರು ತೋಂಟದಸ್ವಾಮಿ ಗುರು ತೋಟದಸ್ವಾಮಿ ಸಂಸ್ಥಾನಮಠ ಡಂಬಳ ಮತ್ತು ಗದಗ ಯಿವರು ಕಾಯಿದೇ ಪ್ರಕಾರ ನೇಮಿಸಿದ ತಂಮ ಯಜಂಟರಾದ ಪಟ್ಟದಸ್ವಾಮಿ ಗುರುಪಟ್ಟದ ಸ್ವಾಮಿ ಗದಗ ಯಿವರ ಮುಖಾಂತರ ಅರ್ಜಿ ಮಾಡಿದ್ದು ಯೆನಂದರೆ–

೧. ನಿಂಮ ಅರ್ಜಿದಾರ ಶ್ರೀ ಜಗದ್ಗುರು ತೋಂಟದಸ್ವಾಮಿ ಗದಗ ಯಿವರು ತುಮಕುರು ಡಿ॥ ಕುಣಿಗಲ್ಲ ತಾಲ್ಲುಕನಲ್ಲಿ ಯಿರುವಾ ಯಡೆಯೂರ ವಳಗಿನ ಶ್ರೀ ಸಿಧಲಿಂಗೇಶ್ವರಸ್ವಾಮಿಯಂಬ ಯತಿಯ ಗದ್ದುಗಿಗೆ ತಂಮ್ಮ ಭಕ್ತಿಯನ್ನುವ ಮರ್ಯಾದೆಯನ್ನು ತೋರಿಸುವದಕ್ಕಾಗಿ ಹೋಗಲಿಛಿಸಿಧಾರೆ.

೨. ನಿಂಮ ಅರ್ಜಿದಾರರು ಗುರು ಶಿಷ್ಯ ಪರಂಪರೆಯೆಂಬ ವಂಶಾನು ಕ್ರಮದಿಂದಾ ಮೇಲೆ ಹೇಳಿದ ಶ್ರೀ ಸಿಧಲಿಂಗೇಶ್ವರಸ್ವಾಮಿಗಳ ಸರಳ ವಂಶಸ್ಥರಿರುತ್ತಾರೆ. ಆ ಸಿಧಲಿಂಗೇಶ್ವರಸ್ವಾಮಿಗಳ ಎಂಟನೆಯ ತಲಿಯುವರಾದ ಕವದಿಯ ಮಹಾಂತಸ್ವಾಮಿಗಳು ಧಾರವಾಡ ಜಿಲ್ಲೆ ಪೈಕಿ ಗದಗ ಮತ್ತು ಡಂಬಳ ಯಂಬ ಯರಡು ಗ್ರಾಮಗಳಲ್ಲಿ ಮಠಗಳನ್ನು ಸ್ಥಾಪಿಸಿದ್ಧರು ಮತ್ತು ಆ ಯರಡು ಮಠಗಳಿಗೆ ಯಿ ನಿಂಮ್ಮ ಅರ್ಜಿದಾರರೆ ಯಿಗೂ ಸ್ವಾಮಿಗಳಾಗಿರುತ್ತಾರೆ.

೩. ನಿಂಮ ಅರ್ಜಿದಾರರಿಗೆ ಮೈಸೂರು ಯಿಲಾಖೆಯಲ್ಲಿ ತಂಮ ಶಾಖೆಯಲ್ಲಿರುವ ಯಷ್ಟೊ ಸಣ್ಣಮಠಗಳು ಯಿರುವವು. ಯಿದು ಅಲ್ಲದೆ ಮದ್ರಾಸ ಮತ್ತು ಮುಂಬೈ ಯಿಲಾಖೆಗಳಲ್ಲಿ

ಸಹ ಅವರ ಮಠಗಳಿರುವವು. ಯಿ ಸ್ವಾಮಿಗಳು ತಂಮ ವಿದ್ಯೆಯಿಂದ ಆ ಜಪತಪಗಳಿಂದಲೂ ಲಿಂಗಾಯತಮಠದವರಿಂದಾ ವಳ್ಳೆ ಮರ್ಯಾದೆಯನ್ನು ಮತ್ತು ಪೂಜೆಯನ್ನು ಹೊಂದುತ್ತಲಿದ್ದಾರೆ. ಗದಗಿನಲ್ಲಿ ಯಿರುವ ಅವರ ಮುಖ್ಯ ಮಠಕ್ಕೆ ಬ್ರಿಟಿಷ ಯಿಂಡಿಯಾವೊಳಗೆ ಅನೇಕ ಯಿನಾಮ ಭೂಮಿ ಗಳಿರುತ್ತವೆ ಮತ್ತು ಯಿ ಮಠಕ್ಕೆ ಸಲ್ಲುತ್ತಿರುವ ಮರ್ಯಾದೆಯೂ ಆದಕ್ಕಿರುವ ಅಡ್ಡಪಲ್ಲಕ್ಕಿ ಮತ್ತು ಯಿತರ ರಾಜಬಿರುದುಗಳ ಹಕ್ಕುಗಳಿಂದಲೇ ವಿಧಿತವಾಗುತ್ತದೆ. (ನಂಬರ ಪಿ । ೪೧೫–೧೯೧೦ರ ತಾ : ೧–೨೬–೫–೧೯೧೦ ಮುಂಬೈ ಯಿಲಾಖೆಯ ಸ.ದಿ. ಕಮಿಶನರ ಹುಕುಮು) ಮತ್ತು ಸ್ವಾಮಿಗಳು ಸಿವಿಲ್ ಕೋರ್ಟನಲ್ಲಿ ಹಾಜರ ಆಗುವ ಅವಶ್ಯಕತೆಯಿಂದಾ ಮುಕ್ತಮಾಡಲ್ಪಟ್ಟಿದ್ದಾರೆ. (ಬಾಂಬೆ ಗವರ್ನಮೆಂಟ ರಜಲೆಶನ್ನ ೩೦ × ೮೪ ತಾ। ೧೫ ಜೂನ ೧೯೦೪ ಜುಡಿಶಿಯಲ್ಲಿ ಡಿ–೧) ಮತ್ತು ಆರ್ಮ್ಸ್ರ್ಯಾಕ್ಟದ ನಿರ್ಬಂಧಗಳು ಸಹಾ ಯಿವರಿಗೆ ಜನರಲ್ಲ ಯಿನ್ನ ಕ ವು ×× ಶಿಲ್ಲ ಯಿವರ ನೋಟ್ಸ ಯಿಂಡಿಯನ್ ಆರ್ಮ್ಸ್ರ ಯಾಕ್ಟದ ೨೭ನೇ ಕಲಮಿನಲ್ಲಿ ಕಾಣಿಸಿದಂತೆ ೧೩–೧೪–೧೫–೧೬ ಕಲಮಲಗಳಲ್ಲಿ ಯಿರುವ ನಿರ್ಬಂಧಗಳ ಪ್ರತಿಬಂಧಗಳು ಸಿವಿಲ್ಲ ಕೊರ್ಟನಲ್ಲಿ ಹಾಜರ ಯಿರುವ ಅವಶ್ಯಕತೆಯಿಂದಾ ಮುಕ್ತಮಾಡಲ್ಪಟ್ಟವರಿಗೆ ಲಾಗುಯಿಲ್ಲಾ ಅನ್ನುವುದನ್ನು ನೋಡತಕ್ಕದ್ದು) ಮತ್ತು ೧೯೦೮ರಲ್ಲಿ ಯಿ ಸ್ವಾಮಿಗಳ ಕೆಲವು ಸ್ವಂತ ಶಿಷ್ಯರಿಗೆ ಯಡಯೂರ ಮತ್ತು ಮೈಸೂರಿಗೆ ಹೊದಾಗ್ಯೆ ಪೊಲಿಸ ಕಾನಿಸ್ಟೆಬಲ್ಲರ ಸಹಾಯವು ದೊರತಿತ್ತು–

೪. ಸಿಧಲಿಂಗೇಶ್ವರಸ್ವಾಮಿಗಳ ಗದ್ದುಗಿಗೆ ತಂಮ್ಮ ಭಕ್ತಿಯನ್ನು ಅರ್ಪಿಸಲು ಯಡೆಯೂರಿಗೆ ಹೋಗಬೇಕಾದರೆ ನಿಂಮ್ಮ ಅರ್ಜಿದಾರರಾದ ಗದಿಗಿನ ತೋಟದಸ್ವಾಮಿಗಳು ಚಿತ್ರಕಲ್ಲದುರ್ಗ ಮತ್ತು ತುಮಕುರ ಡಿ।ಗಳ ಯಸ್ಟೋ ಗ್ರಾಮುಗಳೊಳಗಿಂದ ಹಾಯಬೇಕಾಗುವುದು ಮತ್ತು ತಂಮ್ಮ ಮರಿಯಾದಿಗೆ ಸರಿಯಾಗಿ ಪ್ರಾಂತಗಳೊಳಗಿಂದಾ ಅವರು ೧ ಮೇಣಾ ೨ ಲಾಂಡ ೨ ಮೊಟರು ೮ಕುದುರಿಗೆ ಟಾಂಗಾ ೧೦ ಡಮಣಿಗಾಡಿ ೧೦೦ ಚಕ್ಕಡಿಗಾಡಿ ೧ ಆನಿ ೪ ವಂಟಿ ೨೫ ಕುದರಿ ೪ ಮಂದಿ ಭರ್ಚಿಗಳುಳ್ಳ ಶೂರರು ೧೦ ಹತಿಯಾರ ೧೦ ಬಂದುಕು ೨ ರಿವಾಲವರು ೫೦೦ ಮಂದಿ ಸಂಗಡಿಗರು ಮತ್ತು ೨–೩ ಲಕ್ಷ ರೂಪಾಯಿಗಳ ಬೆಳ್ಳಿ ಮತ್ತು ಬಂಗಾರದ ವಡವೆ ಯಿವುಗಳನ್ನೆ ವಯ್ಯಬೇಕಾಗುವುದು. ತಂಮ್ಮ ಜಿಂದಗಿಯ ಸಂರಕ್ಷಣೆಗಾಗಿಯು ಶಾಂತತೆಯನ್ನು ಕಾಯುವದಕ್ಕಾಗಿಯು ತಮ್ಮನ್ನು ತಂಮ್ಮ ಪರಿವಾರ ದವರನ್ನು ಹಿಂಬಾಲಿಸುವದಕ್ಕಾಗಿ ೧೨ ಜನ ಪೋಲಿಸರ ಸಹಾಯವನ್ನು ಕೊಡುವ ಮೆಹರಬಾನಿಗಿ ಆಗಬೇಕು. ತಂಮ್ಮ ಸವಾರಿಯಲ್ಲಿ ಯೋಗ್ಯ ಕಿಂಮತ್ತುನಿಂದ ಕಾಳುಕಡಿಗಳು, ಮೇವು ವಗ್ಯೆರೆ ಸಿಗುವಂತೆ ಅಪ್ಪಣೆಮಾಡಿ ಅನೇಕ ರೀತಿಯಿಂದಾ ಸಹಾಯ ಮಾಡುವದಕ್ಕಾಗಿ ತುಮಕುರ ಮತ್ತು ಚಿತ್ರಕಲ್ಲ ದುರ್ಗದ ಅಮಲದಾರರಿಗೆ ಅವರ ಡೆಪುಟಿ ಕಮಿಶನರರಿಂದಾ ರಹದಾರಿ ಕೊಡಲ್ಪಡುವ ಮೇಹರ ಬಾನಗಿ ಆಗಬೇಕೆಂದು ಕೋರುತ್ತೇನೆ–

ಯಿ ಬಗ್ಗೆ ತೋರಿಸಿದ ತಂಮ ದಯಾಳುತನಕ್ಕಾಗಿ ತಮಗೆ ಈಶ್ವರನು ದೀರ್ಗಾಯುಷ್ಯವನ್ನು ಸಂಪತ್ತನ್ನು ಕೊಡಲೆಂಬದಾಗಿ ಅರ್ಜಿದಾರನು ಬೇಡಿಕೊಳ್ಳುತ್ತಾನೆ–

ಬೇಡಿಕೊಳ್ಳುವದೇನೆಂದರೆ ಸವಾರಿಯ ಕಾಲಕ್ಕೆ ಪೋಲಿಸರ ಕಾವಲ್ಲು ಮೇಲೆ ಕಾಣಿಸಿದ ಹತ್ತಿಯಾರಗಳನ್ನು ವಯುವದಕ್ಕೆ ಮೊಕಳಿಕ ಚಿತ್ರಕಲ್ಲದುರ್ಗ ತುಮಕುರ ಡಿ।ನಲ್ಲಿ ಅಮಲದಾರರಿಗೆ ಸಾಮಾನುಗಳನ್ನು ಪೂರೈಸುವ ವಿಷಯದಲ್ಲಿ ಸಹಾಯ ಮಾಡುವದಕ್ಕೆ ರಹದಾರಿ ಕೋಡೊಣವಾಗಬೇಕು.

[ಬೆಂಗಳೂರು– ೧೫–ಜನೇವರಿ–೧೯೧೪ ಯಿಶ್ವಿ]

❖❖

೮೦

ಕಾಲ : ಕ್ರಿ.ಶ. ೧೯೧೭ (ಪಿಂಗಳ ಸಂವತ್ಸರ) ಭಾಷೆ : ಕನ್ನಡ

ಸಾರಾಂಶ : ಗದುಗಿನ ಶ್ರೀಮಠದ ಆಭರಣಗಳ ವಿವರ.

* * *

ಶ್ರೀ

ಶಕೆ ೧೮೩೯ ಪಿಂಗಳನಾಮ ಸಂವತ್ಸರದ ಚೈತ್ರ ಶು ॥೮॥ಯಲ್ಲು ಶ್ರೀ ಮನ್ನಿರಂಜನ ಜಗದ್ಗುರು ತೋಂಟದ ಸಿದ್ಧಲಿಂಗಾರ್ಯಮಹಾಸ್ವಾಮಿಗಳು ಸಂಸ್ಥಾನ ಮಠದಲ್ಲಿದ್ದ ಚರಾ ಆಸ್ತಿ (ಆಗಿ) ಬೆಳ್ಳಿ ಬಂಗಾರ ಸಾಮಾನುಗಳ ಯಾದಿ ಬುಕ್ಕು–

ತಾ ॥ ೧೫–೪–೧೯೧೭ ಯಿಶ್ವಿಯಲ್ಲಿ

೧ ಶ್ರೀ ಶಿದ್ಧೇಶ್ವರ ಮೂರ್ತಿ ಹರಳು ಕೂಡಿಸಿದ್ದು

೧ ಹರಳು ಕೆತ್ತಿದ ಭಂಗಾರದ ಕಿರೀಟ ತೂಕ ತೊಲಿ

೧ ಆಯಿದು ಯಳಿ ಬಂಗಾರದ ಪಂಚೀಸ ಕಾಡು, ದೊಡ್ಡ ಮುತ್ತು ವೊಂದು ಹಾಕಿದ್ದು ಸಹಿತ

೧ ವಂದು ಯಳಿ ಬಂಗಾರದ ರುದ್ರಾಕ್ಷಿ ಕಂಟಿ, ಅದರಲ್ಲಿ ನವರತ್ನದ ಪದಕ ಸಹಿತ

೧ ಯರಡು ಯಳಿದು ಬಂಗಾರದ ನೆಲ್ಲಿಕಾಯಿ ಸರಾ, ೫೮ ಗ್ರಾಮ ವುಳ್ಳದ್ದು. ಮತ್ತು ಯರಡು ಬಂಗಾರದ ಗೊಂಡೆಗಳು ಸಹಿತ

೧ ಭಂಗಾರದ ಕಂಠ ಮಾಲಾ, ೧೫ ಗುಂಡುವುಳ್ಳದು

೧೦ ಹರಳಿನ ವುಂಗುರುಗಳು

೩ ನೀಲದ ವುಂಗುರ

೨ ಕೆಂಪು ವುಂಗುರು

೧ ಪಂಚರತ್ನದ ವುಂಗುರ

೧ ವಜ್ರದ ವುಂಗುರು

೧ ವಜ್ರದ ವಡಕ ವುಂಗರದಲ್ಲಿ ಕೆಂಪು ಹರಳು ಹಾಕಿಸಿದ್ದು

೨ ಕೆಂಪು ಹರಳಿನ ವುಂಗುರ

೧೦ ಅಂತೂ ಹತ್ತು ವುಂಗುರ, ಯಿದರ ಪೈಕಿ ವಂದು ಸಣ್ಣದು ನೀಲದ ವುಂಗುರ ಬೆಳವಣಿಕೆ ತೋಟದ ಮರಿ ಕಡಿಗೆ ಮತ್ತುವಂದು ಮೇಲೆ ×× ಪೈಕಿ ವಂದು ವಜ್ರದ ವುಂಗರ, ವುಂಗರಾ ವೊಂದು ಸಣ್ಣದು ಕೆಂಪು ವುಂಗರಾ – ರು ವುಂಗರಾ ಬೆಳವಣಿಕಿ ತೋಟದ ಮರಿ ಕಡಿಗೆ ಅವೇ

೧ ವಂದು ಸಂಣ್ಣ ಬಂಗಾರದ ವಿಭೂತಿ ಕಾಯಿ, ಕೆಂಪು ಹರಳು ಕೆತ್ತಿದ್ದು ಭಂಗಾರದ ಸರಪಳಿ ಅದರಲ್ಲಿ ನಾಲ್ಕು ಮುತ್ತು ಸಹಿತ ವುಳ್ಳದ್ದು

೧ ಭಂಗಾರದ ಪಾದವೆರಡು ಶರು (ಶ) ಅದರ ಸದಕ ಸಹಿತಾ ಅದರಲ್ಲಿ ದೊಡ್ಡ ಪಚ್ಚ್ಯಾದ ಹರಳುಳ್ಳದ್ದು ಮುತ್ತು ಸುತ್ತಲೂ ಸಣ್ಣ ಹರಳು ಯಿದ್ದವು.

೧ ಜತಿ ಬಂಗಾರದ ಹಾವಿಗಿ ಹರಳಾ ಕೆತ್ತಿದವು. ಯಿದಿಷ್ಟು ಧೊರಿಗಳ ಬಾಬತ್ತು, ಅಣ್ಣಿಗೇರಿ ನಮ್ಮ ಮಠದಲ್ಲಿ ಭೂಗತವಾಗಿದ್ದರ ಪೈಕಿ

೧ ಜತಿ ಬಂಗಾರದ ಹಾವಿಗೆ, ಬುಳ್ಳಾ ಮಡಿವಾಳಪ್ಪನವರ ಭಕ್ತಿ

೨ ಬಂಗಾರದ ಬೆತ್ತಗಳು

೧ ಬಂಗಾರದ ಪಂಚಕಲಶ

೧ ಬಂಗಾರದ ರಾಜಗೊಂಡೆ

೧ ಪಾಲ್ಕಿ ಮಗ್ಗಿ ಭಂಗಾರದ್ದು, ಮಾನವಿ ರುದ್ರವನ ಭಕ್ತಿದು ತೊಲಿ (೬)

೧ ಬಂಗಾರದ ತೊಲಿ, ಬುಳ್ಳಾ ಮಲ್ಲಿಕಾರ್ಜುನವರ ಭಕ್ತಿದು (ತೊ ೩೨)

೩ ಜೋಡು ಬಂಗಾರದ ಸಳಿ ಯಿದರಲ್ಲಿ ಶಾಂತಾರಾಮ ವಕೀಲಗೆ ವಂದು ಜೋಡು, ವಂದು ಜೋಡು ಆರೂರ ವೆಂಕಟರಾಮಗೆ, ವಂದು ಜೋಡು ಬಸಲಿಂಗಪ್ಪಾ ಲಕ್ಕುಂಡಿ ಯಿವರಿಗೆ ಯಿ ಆಕಾರ ಯಿನಾಮು ಕೊಟ್ಟಿದ್ದು

೩೬ ಪಾಲ್ಕಿ ಬಿಳಿಗೊಂಡೆಗಳು ಭಂಗಾರದವು. ಯಿವುಗಳ ತಪಶೀಲು

ಗೊಂಡೆ	ತೊಲಿ	ಹೆಸರು
೧	೮=೦೦	ನಿಜಲಿಂಗಪ್ಪ
೨	೨೦=೦೦	ಅಳ್ಳಾವರ ಶೆಟ್ಟಿ, ಮದ್ರಾಸ
४	೩೨=೦೦	ದುಂಡಪ್ಪ ಮಾನವಿ
೨	೧೬=೦೦	ಮಡಿವಾಳಪ್ಪ ಬುಳ್ಳಾ

೨	೧೬=೦೦	ವೀರಪ್ಪ ಕೋಟಿ
೪	೩೨=೦೦	ಹೊಳಿಯಪ್ಪ ಬುಳ್ಳಾ
೨	೧೮=೦೦	ಚನವೀರಪ್ಪ ಹಂಪಸಾಗರ
೨	೧೬=೦೦	ಗುರಪ್ಪ ಮಸಗಿ
೩	೨೪=೦೦	ಮರಿಯಪ್ಪಾ ಮಾನವಿ
೩	೨೪=೦೦	ವೀರಪ್ಪ ಅಂಗಡಿ
೨	೨೪=೦೦	ದೊಡ್ಡ ಬಸಪ್ಪ ಲಕ್ಷ್ಮೇಶ್ವರ
೧	೮=೦೦	ಚನ್ನಬಸಪ್ಪ ಜೋಳದ
೧	೮=೦೦	ನೀಲಕಂಠಯ್ಯ ಶಿರಟ್ಟಿ, ಗದಗ
೧	೮=೦೦	ಕರಬಸಪ್ಪ ಮುಧೋಳ
೧	೮=೦೦	ಬಸಪ್ಪ ಗಾಳಿ, ಮುಂಡರಿಗಿ, ಹೂವಿನ ಹಡಗಲಿ
೩೨	೪=೦೦	ಸಂಗಪ್ಪ ಮುಂಡ್ರಗಿ
೨೧	೬=೦೦	ಬಸವಣ್ಣೆಪ್ಪ –

೩೬ ಅಂತು ಯಿನಾಮು

೧ ಸ್ಪಟಿಕದ ಅಡ್ಡೂಣಗಿ ಬಂಗಾರದ್ದು.

೧ ಅರಳೆಲಿ ಹರಳು ಕೆತ್ತಿದ್ದು, ೧೩ ಮುತ್ತುಗಳುಳ್ಳದ್ದು ಶ್ರೀ ಸಿದ್ಧೇಶ್ವರ ಮೂರ್ತಿ

೧ ಅರ್ಧಚಂದ್ರ, ಹರಳು ಕೆತ್ತಿದ್ದು ಮುತ್ತುಗಳ ಸಹಿತ

೨ ಕರ್ಣಕುಂಡಲಗಳು, ಹರಳು ಕೆತ್ತಿದ್ದವು ಮುತ್ತುಗಳುಳ್ಳದ್ದು
ತೋಟದ ಮರಿ ಬೆಳವಣಿಕೆ ಯಿವು ಮೈಮೇಲೆ ಯಿರೊದು

೧ ಭಂಗಾರದ ಲಿಂಗದ ಕಾಯಿ

೨ ಕಿವಿಯೊಳಗೆ ಯರಡು ವಜ್ರದ ಕಟಕು

೧ ತೊಲೆ ಹರಳಿನದು

೧ ಪೋಟು ಯಿದ್ದವಾಚು ವುಂಗುರು

ಬುಳ್ಳಾ ಯಿಶ್ವರಪ್ಪನ ಕಡಿಗಿ :

ಬಂಗಾರದ ವಡವೆಗಳ ಮುಖ ಹೋಳಿಯಪ್ಪನ ಬಂಗಾರ ದಶಿಂದ ಮಾಡಿಸುವದರ ಬಗ್ಗೆ ಸಂಸ್ಥಾನದಿಂದ ಸದರಿಯವರ ಕಡಿಗೆ ಕೊಟ್ಟ ಸಾಮಾನುಗಳು

೧ ಬಂಗಾರ ತೋಡೆ ತೊಲಿ

೧ ಲಿಂಗದ ಕಾಯಿ ಬಂಗಾರದ್ದು

೧ ಬಂಗಾರದ ಕಡಗು ತೊಲಿ ಯಿರೂವ ಸಾಮಾನುಗಳನ್ನು ಕೊಟ್ಟಿರುತ್ತದೆ. ಸದರಿಯವರು ×ಗಳು ಮುಖ ಮಾಡ್ಸಿಕೊಟ್ಟಿದ್ದೇಯಿದ್ರೆ, ಮೇಲೆ ಬರೆದ ಮೂರು ಸಾಮಾನುಗಳನ್ನು ಪರತ ಸಂಸ್ಥಾನಕ್ಕೆ ಕೊಡಬೇಕು.

ಬೆಳ್ಳಿ ಸಾಮಾನುಗಳು :

೨ ಬೆಳ್ಳಿ ದೊಡ್ಡ ಶಿದ್ಧೇಶ್ವರ ನಾಗಾಭರಣ ಅಡ್ಡುಣಿ ಸಹಿತ

೨ ಜೋಡು ಬೆಳ್ಳಿ ಆವಿಗೆಗಳು

೨ ವಂಟೆ ಕಲಶಗಳು

೨ ಪಾಲ್ಕಿ ಮೊಗ್ಗಿ ದೊಡ್ಡವು

೧ ಪಾಲ್ಕಿಗಳ ಮುಖ

೧ ಪಾಲ್ಕಿ ಪಾವು

೧ ರಾಜಗೊಂಡೆ

೨೮ ಪಾಲ್ಕಿ ಬೆಳ್ಳಿ ಸಂಣ ಗೊಂಡೆಗಳು

೮ ಪಾಲ್ಕಿ ಲಿಟ್ಟಿ ಗೊಂಡೆಗಳು

೨ ಸಂಣ ಪಾಲ್ಕಾ ಮಗ್ಗಿ ಕಲಶಗಳು

೩ ದೊಡ್ಡ ಚಿತ್ರಗಳು

೨ ಸಂಣ್ಣ ಚಿತ್ತಗಳು

೬ ದೊಡ್ಡ ಚವರಿ

೧ ಆರಿ ಚವರಿ

೨ ಸಂಣ ಚವರಿಗಳು ಕೊರವು

೨ ಸೋಟಾ

೨ ಕಳಶಚಾಮ

೨ ಬಾಲೇ ಹಣಿ ಬಳ್ಳಿವು

೧ ಕೊಡಿ ಬೆಳ್ಳಿದು ಕಲಶ ಸಹಿತಾ (ಶ್ವೇತ ಛತ್ರ)

೧ ಬೆಳ್ಳಿ ಚಿಣಿ ಕಾಳಿ

ಆಶಿ ಸಾಮಾನುಗಳು :

೧ ಬೆಳ್ಳಿ ಶಿರಿ

೧ ನಾಡಂಬಿ ಸರಾ ಮೂರು ಮಳದು ದೊಡ್ಡದು

೧ ಕಾಲಗಗ್ಗರ ಡುಮಚಿ

ಕೊಡ ಸಾಮಾನುಗಳ ವಿವರಾ :

೫ ವಾಡಂಬಿನ ರಾಯಿದ್ಕ ತಪಶೀಲು

೧೦ ಐದು ಯಳಿ ರೂ.

೪ ಮೂರು ಮೂರು ಮಳ

೪ ಗೆಜ್ಜಿ ಸರಾ –ತಪಶೀಲು

೩ – ಐದು ಯಳಿ ತು

೧ – ಮೂರು ಯಳಿದು

೪

೨ ಕೊರಕಾಲ ಗಗ್ಗರಾಗಳು

೨ ಚಂದ್ರ ಸರಾಯಳಿ ೬೦ ವ

೧ ಸರಪಳಿ ಯಳಿ ೬

೨ ಕೊರಳ ಗೊಂಡಿಗೆಜ್ಜಿ ಅಡರು ಹಾಕಿದ್ದು

೧ ಬೆಳ್ಳಿ ಲಗಾಮು

೬ ಚಮುಚಿಗಳು

೫ — ಯರಡು ಕವಲು ಯರಡು ತುರಾಯಿ

೨ ಬೆಳ್ಳಿ ತೋಡೆ —

೪ ಬೆಳ್ಳಿ ಕೊಡಸೆಗಳು ಹೋರಿವು

೬ ಶಿವಾಯ ಬೆಳ್ಳಿ ಬಿಲ್ಲೆಗಳು

ಶಿವಪೂಜಾ ಸಾಮಾನುಗಳು :

೨ ಬೆಳ್ಳಿ ದೊಡ್ಡ ಪಾದಗಳು

೧ ದೊಡ್ಡ ಯಡಿ ಮಣೆ

೧ ದೊಡ್ಡ ಚಿನ್ನಮಣೆ

೧ ಬೆಳ್ಳಿ ಸಮೇ

೬ ಬೆಳ್ಳಿ ಅಡ್ಡಣಿಗೆಗಳು

೫ ಬೆಳ್ಳಿ ತಂಬಿಗೆಗಳು ದೊಡ್ಡವು

೧ ಬೆಳ್ಳಿ ಹೂಜಾ

೧ ಬೆಳ್ಳಿ ಬಸವೇಶ್ವರ ಕರಕಮಲ ಸಹಿತ

೧ ಕಲಕಮಲ ದೊಡ್ಡದು ಮಂಡೊದಳವುಳ್ಳದ್ದು

೧ ತಾಟೊದಲ್ಲಿ ಆಕಾರವುಳ್ಳದರ ಮೇಲ

❖❖

೮೧

ಕಾಲ : ಕ್ರಿ.ಶ. ೧೯೧೭ ನವ್ಹೆಂಬರ್ ೫ ಭಾಷೆ : ಕನ್ನಡ

ಸಾರಾಂಶ : ಅರಟಾಳ ರುದ್ರಗೌಡರು ಗದುಗಿನ ಜಗದ್ಗುರುಗಳಿಗೆ ಅರ್ಪಿಸಿದ ಗೌರವ ವಸ್ತುಗಳ ವಿಷಯ.

* * *

ಶ್ರೀ

ಶ್ರೀಮನ್ ಮಹಾರಾಜಾ ನಿರಂಜನ ಜಗದ್ಗುರು ತೋಂಟ

ಮಹಾಸ್ವಾಮಿಗಳು ಸಂ॥ ಮಠ ಡಂಬಳ ಮುಕ್ಕಾಮ–ಗದಗ

ಚರಣ ಸಂನ್ನಿಧಾನಕ್ಕೆ

ಭಗವತ್ತ ಕೃಪಾಪಾತ್ರನಾದ ರು.ಚೆ. ಪಾಟೀಲ ಕಸಬಾ ಅರಟಾಳ ಮುಕ್ಕಾಮು ಬೆಳಗಾಂವ ಕೃತಾನೇಕ ದೀರ್ಘದಂಡ ಬಿಂನ್ನಹಗಳು. ತಾರೀಕು ೫ ನವಂಬರ ಸಂನ ೧೯೧೭ ಯಿಶ್ವಿವರಿಗೆ ಮನೆಯಲ್ಲಿ ಚಿರಂಜೀವಿಗಳು ಮೊದಲಾಗಿ ಸರ್ವರು ಮಹಾಪಾದ ಕೃಪಾಕಟಾಕ್ಷ ಆಶೀರ್ವಾದ ಬಲದಿಂದಾನು ಸುಖರೂಪವಾಗಿರುತ್ತೇನೆ. ಮಹಾ ಸಂನ್ನಿಧಿಯ ॥ ॥ ವೈಭವಂಗಳಿಗೆ ಪದೇ ಪದೇ ಆಶೀರ್ವಾದ ನಿರೂಪ ದೊರಿಯಬೇಕಾಗಿ ಭಿನ್ನೈಸುತ್ತೇನೆ. ತತಃ ಯಿಲ್ಲಿಂದಾ ಅಪ್ಪಯ್ಯಾ ಪಾಟೀಲ ಯಿತನು ಕೂಡಾ ತಂಬು ೧, ಬಿಚವಾ ೧, ರಾಹುಟಿ ೧, ಬಹಿರ್ದೇಶನದ ರಾಹುಟಿ ೧, ಯಿ ಪ್ರಕಾರ ಕಳಸಿರುತ್ತೇನೆ. ತಲ್ಪಿದಕ್ಕೆ ನಿರೂಪಯಿರಬೇಕು.

ಯಿತನ ಪಗಾರ ದರಮಹಾ (೧೬) ರೂಪಾಯಿ ಕರಾರ ಮಾಡಿರತದೆ. ೧ ತಿಂಗಳ ಮೇಲೆ ೮ ದಿವಸಗಳಿದ್ದರೂ ಪುನಹಾ ೧ ತಿಂಗಳ ಪಗಾರ ಕೊಡುವದು ಗೊತ್ತಾಗಿದೆ. ಬಾಕಿ ವಿಶೇಷವೇನೂ ಯಿಲ್ಲಹೆಚ್ಚು ಬರಕೊಳ್ಳಲು ಶಕ್ತನಲ್ಲಾ. ಆಶೀರ್ವಾದ ಪೂರ್ಣಯಿರಬೇಕಾಗಿ ಪ್ರಾರ್ಥಿಸುತ್ತೇನೆ. ಯಿಂತಿ

ತ್ರಿಕಾಲ ದೀರ್ಘದಂಡ ಬಿಂನಹಗಳು.

ಬೆಳಗಾವ

ತಾ. ೫-೧೧-೧೯೧೭ ಮಹಾಸನ್ನಿಧಿಯ ಕೃಪಾಭಿಲಾಷಿ

ರು. ಚೆ. ಅರಟಾಳ

❖❖

೮೨

ಕಾಲ : ಕ್ರಿ.ಶ. ೧೯೧೯ ಜನೇವರಿ ೩೧ ಭಾಷೆ : ಕನ್ನಡ

ಸಾರಾಂಶ : ಅಡ್ಡಪಲ್ಲಕ್ಕಿ ಅಧಿಕಾರವನ್ನು ಸಮರ್ಥಿಸಿ ಬರೆದ ಇಂಗ್ಲೀಷ್ ಪುಸ್ತಕವನ್ನು ಶ್ರೀಜಗದ್ಗುರುಗಳಿಗೆ ಕಳಿಸಿ ಅರಟಾಳ ರುದ್ರಗೌಡರು ಬರೆದ ಪತ್ರ.

* * *

ಓಂ

'ಲಿಂಗ'

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಗದಗಿನ

ಶ್ರೀತೋಂಟದ ಮಹಾಸ್ವಾಮಿಗಳವರ ಸನ್ನಿಧಾನಗಳಿಗೆ–

ತ್ರಿಕಾಲದಲ್ಲಿ ತ್ರಿಕರಣ ಪೂರ್ವಕ ಮಾಡುವ ಶಿ॥ ಸಾ॥ ದೀ॥ ದಂ॥ ನಮಸ್ಕಾರಗಳು. ಸನ್ನಿಧಿಯ ಶ್ರೀ ॥ ॥ ಸೂಚನಾನಂದ ಸಾಮ್ರಾಜ್ಯ ಸಂಗತಿಯನ್ನು ಆಗಾಗ್ಗೆ ಪತ್ರದ್ವಾರಾ ತಿಳಿಸುತ್ತಿರುವುದಕ್ಕೆ ಅಪ್ಪಣೆ ಕೊಡಿಸುವುದಾಗಬೇಕು. ತರುವಾಯ ಸನ್ನಿಧಿಗೆ ಪತ್ರ ಬರೆಯಲು ಕಾರಣ.

ನಾನು ಈಗ ಶ್ರೀ ಜಗದ್ಗುರು ಪೀಠದ ಅಡ್ಡಪಲ್ಲಕ್ಕಿ ಹಕ್ಕಿನ ಸಂಬಂಧವಾಗಿ ಇಂಗ್ಲೀಷಿನಲ್ಲಿ ಬರೆದ ಪುಸ್ತಕದ ಒಂದು ಪ್ರತಿಯನ್ನು ಸನ್ನಿಧಿಗೆ ಸಮರ್ಪಿಸಿರುತ್ತೇನೆ. ಇದನ್ನು ಸಮಗ್ರವಾಗಿ ಅವಲೋಕಿಸಿ ಆಧಾರಕ್ಕಾಗಿ ಸನ್ನಿಧಿಯ ಸಂಗ್ರಹದಲ್ಲಿ ಇರಿಸಬೇಕೆಂಬುದಾಗಿ ವಿಜ್ಞಪ್ತಿಯುಂಟು. ಪುಸ್ತಕವು ತಲುಪಿದ ಬಗ್ಗೆ ಉತ್ತರವನ್ನು ದಯಪಾಲಿಸುವದಾಗಬೇಕು.

ಸೊಲ್ಲಾಪುರದ ಪ್ರಯಾಣದ ಮೂಲಕ ಪ್ರಕೃತಿಯಲ್ಲಿ ತುಸು ಅಸಕ್ತತೆ ಉಂಟಾಗಿದೆ. ಮನೆಯ ಮಂಡಳಿಯಲ್ಲಿ ಸುಖ ರೂಪವುಂಟು. ಕೃಪಾತಿ ಪೂರ್ಣವಿರಬೇಕು ಇತಿ ಶಿ॥ಸಾ॥ದೀ॥ದಂ॥ ನಮಸ್ಕಾರಗಳು.

ಬೆಳಗಾವ

ತಾ. ೩೧-೧-೧೯೧೯ ಸನ್ನಿಧಿಯ ಕೃಪಾಭಿಲಾಷೆ

ರುದ್ರಗೌಡ ಪಾಟೀಲ ಕಸಬಾ, ಅರಟಾಳ

❖❖

ಕಾಲ : ಕ್ರಿ.ಶ. ೧೯೨೧ ಫೆಬ್ರುವರಿ ೯ ಭಾಷೆ : ಕನ್ನಡ

ಸಾರಾಂಶ : ಎಡೆಯೂರು ಗದ್ದಿಗೆಗೆ ನಾವೇ ಮಾಲಕರಿದ್ದು, ಮೊದಲಿನಿಂದಲೂ ಅದರ ಉಸ್ತುವಾರಿ ನೋಡಿಕೊಳ್ಳುತ್ತ ಬಂದಿದ್ದು, ಈಗ ಗದ್ದಿಗೆಯ ಉತ್ಪನ್ನವನ್ನು ನಮಗೆ ಕೊಡಬೇಕೆಂದು ಕುಣಿಗಲ್ ಮಾಮಲೇದಾರರಿಗೆ ಬರೆದ ಅರ್ಜಿ ಪತ್ರ.

* * *

ಮೆ। ಮಾಮಲೆದಾರ ಸಾಹೇಬ ತಾಲೂಕ ಕುಣಿಗಲ

ಜಿಲ್ಲಾ ಟುಮಕೂರ ಯಿವರ ಹುಜುರಿಗೆ–

ಯಾದಿ ಶ್ರೀಮನ್ ನಿರಂಜನ ಜಗದ್ಗುರು ತೋಂಟದ ಸಿದ್ಧಲಿಂಗಾರ್ಯ ಮಹಾ ಸ್ವಾಮಿಗಳವರು ಸಂಸ್ಥಾನಮಠ ಡಂಬಳ ಮತ್ತು ಗದಗ ಯಿವರ ಯಜೆಂಟ ತೋಟದ್ದೇವರು ಗುರು ತೋಟದ ಸ್ವಾಮಿಗಳು ಸಾ। ಗದಗ ನಾವು ಬರಕೊಂಡ ಯಾದಿ ಯೇನಂದರೆಃ ತಾ ೨೫–೪–೧೯೨೦/ ೨೧–೭–೧೯೨೦ನೆದ್ದು ತಮ್ಮಿಂದ ಯಾದಿ ಬರೆದದ್ದು ನಮಗೆ ಮುಟ್ಟಿ ಮಜಕೂರ ತಿಳಿಯಿತು. ಆದರೆ ಯಡೆಯೂರ ತೊಂಟದ ಸಿದ್ಧಲಿಂಗೇಶ್ವರ ಮಹಾಸ್ವಾಮಿಗಳವರ ಗದ್ದಿಗೆ ನಾವು ದರ ವರ್ಷ ನಂದಾದೀವಿಗೆ ನೈವೇದ್ಯದ ದಶೆಯಿಂದಾ ಕೊಡತಕ್ಕ ಎರಡನೂರ ರೂಪಾಯಿ (೨೦೦)ನ್ನು ನಮಗೆ ಕಚೇರಿಗೆ ತಂದು ಹಾಜರ ಮಾಡಬೇಕೆಂದು ತಮ್ಮಿಂದ ತಿಳಿಸೋಣವಾಗಿದೆ. ಆದರೆ ಸದರ ಸಿದ್ಧಲಿಂಗೇಶ್ವರ ಮಹಾಸ್ವಾಮಿಗಳವರು ನಮ್ಮ ಸಂಸ್ಥಾನದ ಮೂಲಗುರುಗಳು ಯಿದ್ದು, ಸದರ ಮಹಾಸ್ವಾಮಿಗಳವರ ಪೀಠದ ಮೇಲೆ ಶಿಷ್ಯಪರಂಪರವಾಗಿ ಈಗಿನ ಮಹಾಸ್ವಾಮಿಗಳ ವರೆಗೂ ಅಧಿಕಾರಿಗಳಾಗುತ್ತ ×××××××××× ಯಡೆಯೂರ ತೋಟದ ಸಿದ್ಧಲಿಂಗೇಶ್ವರ ಮಹಾಸ್ವಾಮಿಗಳವರ ಗದ್ದಿಗೆ ನಾವೇ ಮಾಲಕರಿದ್ದ ಕಾರಣ, ನಮ್ಮ ಮೂಲಗುರುಸ್ಥಾನದ ವ್ಯವಸ್ಥಾ ಯೇನಾದದ್ದು ನಾವೇ ನೋಡಬೇಕಾಗಿದೆ. ಆದ್ದರಿಂದ ಈಗ ಮಹಾಸ್ವಾಮಿಗಳವರ ರಥಕ್ಕೆ ಆರು ಕಲ್ಲುಗಾಲಿಗಳನ್ನು ತುರವಿಕೇರಿ ಮಲ್ಲಿಕಾರ್ಜುನಮೂರ್ತಿಗಳ ಮುಖಾಂತರವಾಗಿ ನಾವೇ ಮಾಡಿಸಿದ್ದೇವೆ. ಮತ್ತು ಸದರ ರಥಕ್ಕೆ ಯರಡಾವರ್ತಿ ಹೋರ್ತಿ×ಗಗ್ಗಳನ್ನು ನಾವೇ ಕಳಿಸಿದ್ದೇವೆ ಮತ್ತು ಸದರ ರಥದಲ್ಲಿ ಮಹಾಸ್ವಾಮಿಯನ್ನು ಮೂಹರ್ತ ಮಾಡಿಸಲಿಕ್ಕೆ ಅಲ್ಲಿ ಒಂದು ಕಟ್ಟಡ ಕಟ್ಟಿಸಲಿಕ್ಕೆ ಒಂದು ಸಾವಿರ ರೂಪಾಯಿಗಳನ್ನು (೧೦೦೦) ತುರವಿಕೇರಿ ಮಲ್ಲಿಕಾರ್ಜುನಮೂರ್ತಿಗಳ ಕೈಯಲ್ಲಿ ನೊಣವಿನಕೇರಿ ಕಾಡಸಿದ್ಧೇಶ್ವರಮಠದ ಕರಿಬಸವ ಸ್ವಾಮಿಗಳ ಮಾರಿಪ್ಪತ್ತು ಕೊಟ್ಟಿದ್ದೇವೆ. ಈಗ ಸದರ ಮಲ್ಲಿಕಾರ್ಜುನ ಮೂರ್ತಿಗಳು ಮ್ಯುತಪಟ್ಟಿದ್ದಾರೆ. ಸದರ ಕಟ್ಟಡ ತಯಾರ ಆಗಲಿಲ್ಲಾ. ನಾವು ಕೊಟ್ಟಂಥಾ ಒಂದು ಸಾವಿರ ರೂಪಾಯಿಗಳು ಮುಳಗಿ ಹೋಗಿವೆ. ಸದರ ಮಲ್ಲಿಕಾರ್ಜುನಮೂರ್ತಿಗಳ ಆಸ್ತಿಯ ಮೇಲಿಂದಾ ನಮಗೆ ಹಣ ಭರ್ತಿ ಮಾಡಿಕೊಡಿಸಲಿಕ್ಕೆ ಹುಕುಮು ಆಗಬೇಕು. ನಾವು ಸದರ ಕಟ್ಟಡವನ್ನು ಕಟ್ಟಿಸುತ್ತೇವೆ. ಮತ್ತು ಹೋದ ವರ್ಷ ಸದರ ರಥಕ್ಕೆ ಒಂದನೂರಾ ಐವತ್ತು ರೂಪಾಯಿಗಳನ್ನು (೧೫೦) ಖರ್ಚುಮಾಡಿ ಯಂಣಿ ಉಣಿಸಿದ್ದೇವೆ. ಈಗ ಯಿಷ್ಟು ಕೆಲಸಗಳು ನಮ್ಮಿಂದ ಆಗಿವೆ. ಮುಂದೆ ನಾವು ಮಾಡತಕ್ಕ ಕೆಲಸಗಳು ಅಂದರೆ

ಯಡೆಯೂರ ಮಹಾಸ್ವಾಮಿಯ ಪೂಜಾ ವಿದ್ಯುಕ್ತವಾಗಿ ಜರಗುವದರ ದಶೆಯಿಂದಾ ವೈದಿಕ ಸಂಸ್ಕೃತಪಾಠಶಾಲಾ ಸ್ಥಾಪನಮಾಡುವವರು ಯಿದ್ದೇವೆ. ಮತ್ತು ಮಹಾಸ್ವಾಮಿಯ ಗದ್ದಿಗೆಯ ಪ್ರಾಕಾರ ವಗೈರೆ ನಾದುರಸ್ತ ಆದ್ದರಿಂದ ದುರಸ್ತ ಮಾಡಬೇಕಾಗಿದೆ ಮತ್ತು ಅಲ್ಲಿ ಕೆಲವು ಉಗ್ರಾನ ವಗೈರೆ ಯಿಮಾರತುಗಳನ್ನು ಹಾಕಿಸತಕ್ಕ ಕೆಲಸಗಳು ಯಿರುತ್ತವೆ. ಆದ್ದರಿಂದಾ ಸದರ ಮಹಾಸ್ವಾಮಿಗಳ ಗದ್ದಿಗೆಯ ಉತ್ಪನ್ನವನ್ನು ಕೊಡಲಿಕ್ಕೆ ಹುಕುಮು ಆಗಬೇಕು. ಅಂದರೆ ಮುಂದೆ ನಾವು ಯಲ್ಲಾ ಸರಿಯಾಗಿ ವ್ಯವಸ್ಥಾ ಮಾಡಿಸುತ್ತೇವೆ. ಸದರ ಗದ್ದಿಗೆಯ ವ್ಯವಸ್ಥಾದ ಬಗ್ಗೆ ಯಾವಾಗಲೂ ನಾವು ಬರುತ್ತಾ ಯಿದ್ದೇವೆ. ನೀವು ಯಿದಕ್ಕೆ ಏನು ಹುಕುಮು ಆಗುತ್ತದೆ ತಿಳಿಸುವ ಮೇಹರ್ಬಾ ×××××××××××××××××× ಯರಡನೂರ ರೂಪಾಯಿಗಳು ೨೦೦ನಮ್ಮ ಕಡೆಗೆ ಯಿರುತ್ತವೆ. ಯಿನ್ನು ಕೊಟ್ಟಿಲ್ಲ. ತಮ್ಮ ಹುಕುಮು ನೋಡಿಕೊಂಡು ಸದರ ಹಣದ ವ್ಯವಸ್ಥಾ ಮಾಡುತ್ತೇವೆ. ಮೆಹರ್ಬಾನವರಿಗೆ ಶ್ರುತವಿರಬೇಕು ಯೆಂದು ಬರಕೊಂಡ ಯಾದಿ ಸಹ ತಾ। ೯–೨–೧೯೨೧.

❖❖

೮೪

ಕಾಲ : ಕ್ರಿ.ಶ. ೧೯೩೫ ಫೆಬ್ರುವರಿ ೧೮ | ಭಾಷೆ : ಕನ್ನಡ

ಸಾರಾಂಶ : ಮುಂಡರಗಿಯ ತೋಂಟದಾರ್ಯಮಠದ ಜಾತ್ರೆಯ ಮುದ್ರಿತ ಕರಪತ್ರ.

ಕೌದೀ ಮಹಾಂತ ಶಿವಯೋಗೀಶ್ವರರ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳವರು
ಸಂಸ್ಥಾನಮಠ ಡಂಬಳ ಮತ್ತು ಗದಗ ಇವರ ಕರಕಂಜಜರಾದ

ಮೃಡಗಿರಿ ಶ್ರೀಅನ್ನದಾನಿಸ್ವಾಮಿಗಳವರ ಆಶೀರ್ವಾದ ದ್ವಾರಾ

ಶ್ರೀಮದನಾದಿ ನಿರಂಜನ ಜಗದ್ಗುರು ತೋಂಟದ ಸಿದಲಿಂಗಾರ್ಯ ಪ್ರಸೀದ.

ಮ.ರಾ.ರಾ.________________________________ಇವರಿಗೆ.

ಬಳ್ಳಾರಿ ಡಿ. ಹೂವಿನ ಹಡಗಲಿ ತಾ. ತಂಬ್ರಹಳ್ಳಿ ಮತ್ತು ಬಾಚೀಗೊಂಡನ ಹಳ್ಳಿ ಸಮಸ್ತ ದೈವದವರ ವಿ.ವಿ. ಶ್ರೀ. ಮದೆಡೆಯೂರ ನಿರಂಜನ ಮಹಾಗುರುಪರಂಪರಾನ್ವಯ ಶ್ರೀ " " ಮಹಾ ಸಮಾರಂಭವು ನಮ್ಮಲ್ಲಿ ಇದೇ ಮಾಘ ವಧಿಯಲ್ಲಿ ಜರಗುವ ಕಾರ್ಯಕ್ರಮ.

೧. ಮಾಘ ವಧಿ ೧೩ ರವಿವಾರ ಪೂರ್ವರಾತ್ರಿ ಶ್ರೀರುದ್ರಾಭಿಷೇಕ ಉಪಹಾರ ಬಳಿಕ ಜಾಗರಣೆಯು ಶಿವಕೀರ್ತನ, ಭಜನೆ, ಶ್ರೀ "-----" ಮೂರ್ತಿಯ ಉತ್ಸವ.

೨. ಮಾಘ ವಧಿ ೧೪ ಸೋಮವಾರ ಗಣಾರಾಧನೆ, ಸಾಯಂಕಾಲಕ್ಕೆ ರಥೋತ್ಸವವು ಪದ್ಧತಿಯಂತೆ ಧರ್ಮಜಾಗ್ರತೆಯ ಬಗ್ಗೆ ಪಂಡಿತರ ವ್ಯಾಖ್ಯಾನ ಮುಂತಾದವು. ಇಲ್ಲಿ ಈ ಸಮಯಗಳಲ್ಲಿ ಮಾರಾಟಕ್ಕೆ ಉತ್ತಮ ದನಗಳು ಕೂಡುವವು. ಹೀಗೆ ಶ್ರೀಕೃಪಾವಿಸೇಷಣೆಯಿಂದ ಸಾಗುವ ಸಮಯಕ್ಕೆ ತಾವು ಬಂದು ಮಂಗಲ ಭಾಗಿಗಳಾಗಿ ಪೂಜ್ಯರ ದರ್ಶನಾಶೀರ್ವಾದಕ್ಕೆ ಪಾತ್ರರಾಗುವಿರೆಂದು ನಂಬಿರುವ,

ತಮ್ಮ ಅಗಮನಾಭಿಲಾಷಿಗಳು

ತಂಬ್ರಹಳ್ಳಿ

ಗುರುಶಾಂತಯ್ಯ ಹಿ. ಮಠ	ತೋಟಪ್ಪ ಕಿಲ್ಲೇದ
ಗಂಗಯ್ಯಾ ಹಿ. ಮಠ	ಕಾಳಪ್ಪ ಗಡ್ಡದ
ಕೊಟ್ರಪ್ಪಯ್ಯ ಕಾರಭಾರಿ	ಮಲಕಾರ್ಜನಪ್ಪ ಗೋಟೂರ
ಮತೀಗೌಡಾ ಪಾಟೀಲ	ವಿರಪ್ಪಣ್ಣೀ ಹಿರೆಹಾಳ
ಬಸವನಗೌಡಾ ಪಾಟೀಲ	ಶಿವಪ್ಪ ಅಕ್ಸಾಲೇರ
ಗುರಶಿದ್ದಪ್ಪ ಕಿನ್ನಾಳ	ಕೊಟ್ರಪ್ಪ ಮಡಿವಾಳರ
ಚನ್ನಬಸವಪ್ಪ ಚಿಣ್ಣದ	ಕರಿಯಪ್ಪ ಮಡಿವಾಳರ
ಲಿಂಗಪ್ಪ ಗಡ್ಡಿ	ಮಹಾದೇವಪ್ಪ ವಾಲ್ಮಿಕ
ಸ. ಲಿಂಗಪ್ಪ ಬಾಚಿನಹಳ್ಳಿ	ಬಸವಪ್ಪ ಜಾಲಗಾರ
ಬೆಟ್ಟಪ್ಪ ಬೆಟ್ಟಪ್ಪನವರ	ನಾಗೋಬಣ್ಣಾ ಕಠಾರಿ
ಮುದಿಮಲ್ಲಪ್ಪ ಮೋರಗೇರಿ	ಬಾಬುಸಾಬ ಮುಲ್ಲಾ
ವೆಂಕೋಬರಾವ ಶಾನಭೋಗ	ಬಸವಪ್ಪ ಮೇಟ

ಬಾಚಿಗೊಂಡನಹಳ್ಳಿ

ಬಸಲಿಂಗಯ್ಯ ಹಿ. ಮಠ	ಸಿದ್ಧಲಿಂಗನಗೌಡಾ ಗೌಡರ
ಸುರೇಂದ್ರಯ್ಯ ಹಿ. ಮಠ	ತೋಟಪ್ಪ ಬೊಮ್ಮನಹಳ್ಳಿ
ಗುರುಪಾದಯ್ಯ ಹಿ. ಮಠ	ಪತ್ರೆಪ್ಪ ಎಲೆಗಾರ
ಕೊಟ್ರಗೌಡಾ ಪಾಟೀಲ	ತೋಟನಗೌಡಾ ಗೌಡರ
ಕೊಟ್ರಪ್ಪ ಶೆಟ್ಟರ	ಸೋಮನಗೌಡಾ
ರೇವಣಸಿದ್ಧಪ್ಪ ಬಣಕಾರ	ನಾಗಪ್ಪ ಚಿತವಾಡಿಗಿ
ಸಿದ್ಧನಗೌಡಾ ಗೌಡರ	ಹನುಮಪ್ಪ ಚಿಲಗೋಡ
ಕೊಟ್ರಪ್ಪ ಜಗಲೂರ	ಮುಡಿಯಪ್ಪ ಹಾಲಮುತ
ಸಿದ್ಧಪ್ಪ ಜಗಲೂರ	ಬಾಳಪ್ಪ ಉಪ್ಪಾರ
ರಂಗಪ್ಪ ಕಠಾರಿ	ದಾವಲಸಾಬ ಮಸೂತಿ

ಕೌದೆಪ್ಪ ಎಲೆಗಾರ	ದೊಡ್ಡ ಹನುಮಪ್ಪ ಉಪ್ಪಾರ
ರಂಗರಾವ ಶಾನಭೋಗ	ವೀರಪ್ಪ ಎಲೆಗಾರ

ಶಕೆ ೧೮೫೬ ಭಾವನಾಮ ಸಂವತ್ಸರ ಮಾಘ ಶುದ ೧೫ ತಾ. ೧೮-೨-೩೫ ಇಸ್ವಿ.

❖❖

೮೫

ಕಾಲ : ಕ್ರಿ.ಶ. ? ಭಾಷೆ : ಕನ್ನಡ

ಸಾರಾಂಶ : ಎಡೆಯೂರಿನ ನಮ್ಮ ಮಠವನ್ನು ನಮ್ಮ ವಶಕ್ಕೆ ಕೊಡಬೇಕೆಂದು ಹದಿನಾರನೆಯ ಪೀಠಾಧಿಕಾರಿ ಶ್ರೀಸಿದ್ಧೇಶ್ವರಸ್ವಾಮಿಗಳು ಮೈಸೂರು ದಿವಾನರಿಗೆ ಬರೆದ ಅರ್ಜಿ ಪತ್ರ.

* * *

ಮೈಸೂರ ದಿವಾನ್ ಸಾಹೇಬ ಬಾಹದ್ದೂರವರಿಗೆ–

ಅರ್ಜಿದಾರ; ಶ್ರೀಮನ್ನಿರಂಜನ ಜಗದ್ಗುರು ಶ್ರೀತೋಂಟದ ಸ್ವಾಮಿ ಗುರು ಅನಾದಿ ತೋಟದ ಸಿದ್ಧಲಿಂಗಾರ್ಯ ಮಹಾಸ್ವಾಮಿಗಳವರು ಸಂಸ್ಥಾನಮಠ ಡಂಬಳ ಮತ್ತು ಗದಗ–ತಾಲ್ಲೂಕ ಗದಗ–ಜಿಲ್ಲಾ ಧಾರವಾಡ ಯಿವರ ಪಟ್ಟಿ ಮೊಖ್ತಿಯಾರ ಸದುವಿನಯ ಪೂರ್ವಕವಾಗಿ ಅರ್ಜಿಮಾಡಿಕೊಳ್ಳುವದೆನೆಂದರೆ; ತುಮಕೂರು ಜಿಲ್ಲಾ ಕುಣಿಗಲ ತಾಲ್ಲೂಕ ಕಗ್ಗೇರಿಯಲ್ಲಿಯೇ ಶ್ರೀಸಿದ್ಧೇಶ್ವರಸ್ವಾಮಿಗಳಿಂದ ನಂಮ ಸಂಸ್ಥಾನ ಮಠವು ಪ್ರಾರಂಭವಾಯ್ತು. ಸದರ ಮಹಾಯತಿಗಳಾದಂಥಾ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಯಿ ಪ್ರಾಂತ್ಯದಿಂದ ಸಂಚಾರ ಮಾಡುತ್ತ ಕಗ್ಗೇರಿಗೆ ಬಂದರು. ಮತ್ತು ಆ ಗ್ರಾಮದ ಪಾಟೀಲನ ತೋಟದಲ್ಲಿ ತಪಸ್ಸಿಗೆ ಕೂತಾಗ್ಯೆ ಮೈತುಂಬಾ ಹುತ್ತವು ಬೆಳೆದು ಅದರಲ್ಲಿಯೇ ಅನೇಕ ದಿವ್ಸಗಳವರಿಗೆ ಯಿದ್ದರು. ಮತ್ತು ಆ ಸ್ಥಳದ ನಿಂಬಣಶೆಟ್ಟಿ ಮತ್ತು ಗಿರಿಯಂಣ ಗವಡರಿಂದಾ– ಅಧಿಷ್ಠಿತುರಾದಂಥಾ ಭಕ್ತರಿಂದ ಹುತ್ತದಿಂದ ಹೊರತಗೆಯಲ್ಪಟ್ಟರು. ಆ ಮಹಾಯತಿಗಳು ತೋಟದಲ್ಲಿ ಬಹುಕಾಲದ ವರಿಗೆ ತಪಸ್ಸಿಗೆ ಕೂತದ್ದರಿಂದಾ ತೋಟದ ಸ್ವಾಮಿಗಳೆಂದು ಕರೆಯಲ್ಪಡಹತ್ತಿದರು. ತೋಟದ ಸ್ವಾಮಿಯೆಂದು ಕರೆಯಲ್ಪಡುವದರ ಇತಿಹಾಸವು ಬಹುಮನೋಹರವಿರುತ್ತದೆ ಮತ್ತು ಅವರ ಹೆಸರ್ಲಿ ಸಿದ್ಧೇಶ್ವರ ಪುರಾಣದಲ್ಲಿ ಸವಿಸ್ತಾರವಾಗಿ ವರ್ಣಿಸಲ್ಪಟ್ಟಿದೆ. ಮತ್ತು ಆ ಪುರಾಣವು ಯಲ್ಲಾ ಲಿಂಗಾಯತರಿಂದ ಬಹುಮಾನಿಸಲ್ಪಟ್ಟಿರುತ್ತದೆ. ಆ ಮಹಾಯತಿಗಳು ಅಲ್ಲಿ ಕೆಲವು ಸಂವತ್ಸರಗಳನ್ನು ಕಳೆದು ಯಡಿಯೂರ ಭಕ್ತರ ಪ್ರಾರ್ಥನೆಯ ಮೇರಿಗೆ ಎಡೆಯೂರಿಗೆ ಬಿಜಯಂಗ್ಯೆದರು. ಬಹುಕಾಲದ ವರಿಗೆ ಅಲ್ಲಿಯೇ ಯಿದ್ದು ಕಡೆಗೆ–ಅಲ್ಲಿಯೇ ಬೈಲಾದರು. ಸದರ ಗ್ರಾಮದಲ್ಲಿ ಅವರ ಮಹಾಗದ್ದಿಗೆಯು ಸ್ಥಾಪನಾ ಮಾಡಲ್ಪಟ್ಟಿತ್ತು. ಆ ಗದ್ದಿಗೆಯು ಎಲ್ಲಾ ಭಕ್ತರಿಗೂ ಪರಮಪೂಜ್ಯ ಮತ್ತು ಅತ್ಯಧಿಕ ಸ್ಥಾನವಾಗಿರುತ್ತದೆ. ಮಹಾರಾಜರು ಆ ಸ್ಥಾನಕ್ಕೆ ವಪ್ಪಿಕೊಂಡು ಪರಮ ಪ್ರೇಮದಿಂದ ಆ ಮಠದ ಚರಿತಾರ್ಥ ನಡೆಯುವುದಕ್ಕೋಸ್ಕರ ಅಜಮಾಸ ೧೦೦ ಯಕರೆ ಜಮೀನಗಳನ್ನು ಇನಾಮು ಹಾಕಿಕೊಟ್ಟರು ಮತ್ತು ಕಗ್ಗೇರಿ ಮಠಕ್ಕಾದರೂ ಯಿನಾಮು ಭೂಮಿಗಳು

ಯಿರುತ್ತವೆ. ಸ್ವಾಮಿಗಳ ದೇವಸ್ಥಾನವನ್ನು ದಳವಾಯಿ ಮನೆತನದವರು ಕಟ್ಟಿಸಿಕೊಟ್ಟಿದ್ದಾರೆ. ಎಲ್ಲಾ ಆಸ್ತಿಯು ಶಿದ್ಧೇಶ್ವರ ಸ್ವಾಮಿ ಹೆಸರ್ಲೆ ಯಿರುತ್ತದೆ. ಇತ್ತೀಚಿಗೆ ಸುಮಾರು ಯರಡು ವರ್ಷಗಳ ಹಿಂದೆ ಸದರ ಗದ್ದಿಗೆಯು ಮತ್ತು ಆಸ್ತಿಯು ಸರಕಾರಕ್ಕೆ ಸೇರಿಸಲ್ಪಟ್ಟಿರುತ್ತದೆ. ಸದರ ಶಿದ್ಧೇಶ್ವರಸ್ವಾಮಿಗಳ ಪಶ್ಚಾತ ಮಠವು ಮತ್ತು ಜಮೀನಗಳು ಅವರ ಮೊದಲನೆ ವಾರ್ಸಾದಾರ ಮತ್ತು ಪಟ್ಟಾಧಿಕಾರಿಗಳಾದಂಥ ತೋಟದಸ್ವಾಮಿಗಳೆಂದು ಕರೆಯಲ್ಪಡುವ ಬೋಳಬಸವೇಶ್ವರ ಸ್ವಾಮಿಗಳವರ ತಾಬಾಕ್ಕೆ ಬಂದವು. ಅಲ್ಲಿಂದಾ ವಂಶಾವಳಿಯು ಅಜಮಾಸ ಐದಾರುನೂರು ವರ್ಷಗಳ ಹಿಂದಿನ ಕಾಲದ ತನಕ ತೋಟದಸ್ವಾಮಿ ಹೆಸರ್ಲೆ ಅಲ್ಲೆ ನಡೆಯುತ್ತಾ ಬಂತು. ಯಾವ ತೋಟದಸ್ವಾಮಿಗಳು ಅಂಬುವ ಹೆಸರು ಶಿದ್ಧೇಶ್ವರಸ್ವಾಮಿ ವಳ್ಳಿ ಪ್ರಸಿದ್ಧಿವಾದಂಥ ಮತ್ತು ಪ್ರಿಯಕರವಾದಂಥಾ ಹೆಸರಾಗಿರುತ್ತದೆ. ಅಲ್ಲಿಂದ ತೋಟದ ಸಿದ್ಧೇಶ್ವರಸ್ವಾಮಿಗಳು ೮ನೇ ಪಟ್ಟಾಧಿಕಾರಿಗಳಾದಂಥ ತೋಟದ ಸ್ವಾಮಿಗಳೆಂದು ಕರೆಯಲ್ಪಡುವ ಕವದಿ ಮಾಹಂತಸ್ವಾಮಿಗಳು ಸಂಚಾರ ಮಾಡುತ್ತ ಮಾಡುತ್ತ ಡಂಬಳಕ್ಕೆ ಬಂದರು. ಅಲ್ಲಿ ದೇಶಾಯಿಯು ಭವ್ಯವಾದ ಮಠವನ್ನು ಕಟ್ಟಿಸಿಕೊಟ್ಟನು. ಮತ್ತು ಪುಷ್ಕಳ ಭೂಮಿಗಳನ್ನು ಯಿನಾಮು×ಕಿ ಕೊಟ್ಟನು. ಅವುಗಳು ಯಿಗ್ಯೂ ತೋಟದಸ್ವಾಮಿಗಳ ಹೆಸರ್ಲೆ ನಡಿಯುತ್ತವೆ.

ಯೀಗಿನ ಅರ್ಜಿದಾರರು ಮೊದಲನೇ ಶಿದ್ಧೇಶ್ವರ ಸ್ವಾಮಿಗಳಿಂದ ೧೮ ನೆಯವರು ಯಿರುತ್ತಾರೆ ಮತ್ತು ಯೀಗ ತೋರಿಸಿದ ಆದಾರ ಮೇಲಿಂದ ಕಗ್ಗೇರಿ ಮತ್ತು ಯಡೆಯೂರಲ್ಲಿ ಯಿರುವ ಮಠಮಾನ್ಯಗಳಿಗೆ ಹಕ್ಕುದಾರರು ಯಿರುತ್ತಾರೆ. ಯಿವರು ಲಿಂಗಾಯತರಿಗೆ ಮುಖ್ಯಗುರುಗಳೆಂದು ಯಿಂಡಿಯಾ ಸರಕರಾದವರು ವಪ್ಪಿಕೊಂಡು ಬಹುಮಾನಗಳನ್ನು ಕೊಟ್ಟಿರುತ್ತಾರೆ. ಆದ್ದರಿಂದ ಆ ಎರಡೂ ಹಳ್ಳಿಗಳಲ್ಲಿ ಯಿರತಕ್ಕಂಥಾ ಗದ್ದಿಗೆಯೂ ಯಾವತ್ತು ಆಸ್ತಿಯೂ ಶ್ರೀ ಶಿದ್ಧೇಶ್ವರ ಸ್ವಾಮಿಗಳೇ ಮುಖ್ಯ ವಾರ್ಸಾದಾರರೆಂದು ಉಪಭೋಗ ಮಾಡಲಿಕ್ಕೆ ಮತ್ತು ವಹಿವಾಟ ಮಾಡಲಿಕ್ಕೆ ತಾಬಾ ಕೊಡಲ್ಪಡಬೇಕೆಂದು ಬೇಡಿಕೊಳ್ಳುತ್ತೇನೆ ಮತ್ತು ಸದರ ಸಂಗತಿಯನ್ನು ಹಳೆಗ್ರಂಥಗಳ ಆಧಾರಗಳ ಮೇಲಿಂದ ಮತ್ತು ವಯೋವೃದ್ಧರ ತೋಂಡಿ ಪುರಾವೆಗಳ ಮೇಲಿಂದ ಶಿದ್ಧಮಾಡಿಕೊಡಲಿಕ್ಕೆ ತಯ್ಯಾರ ಯಿದ್ದೇನೆ. ಮತ್ತು ತಂಮ ಸರಕಾರ ನೇಮಗಳಿಗೆ ಅನುಸಾರವಾಗಿ ಆಸ್ತಿಯನ್ನು ಉಪಭೋಗ ಮತ್ತು ವ್ಯವಸ್ಥಾಮಾಡಲಿಕ್ಕೆ ಕಬೂಲು ಯಿದ್ದೇನೆ. ಆದ್ದರಿಂದ ಸ್ವಾ ಆಸ್ತಿಯನ್ನು ಅರ್ಜಿದಾರನಿಗೆ ಪರತು ತಾಬಾ ಮಾಡಬೇಕೆಂದು ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇನೆ.

❖❖

೮೬

ಕಾಲ : ಕ್ರಿ.ಶ. ?

ಭಾಷೆ : ಕನ್ನಡ

ಸಾರಾಂಶ : ಪ್ರತಿವರ್ಷದ ಪದ್ಧತಿಯಂತೆ ಎಡೆಯೂರು ರಥೋತ್ಸವಕ್ಕೆ ಆಗಮಿಸಬೇಕೆಂದು ಅಲ್ಲಿಯ ವಿಶೇಷ ಅಧಿಕಾರಿಯು ಜಗದ್ಗುರುಗಳಿಗೆ ಬರೆದ ಪತ್ರ.

* * *

ಶ್ರೀಮನ್‌ಮಹಾರಾಜ ನಿರಂಜನ ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳವರು. ಗದಗ ಮತ್ತು ಡಂಬಳಮಠ ಇವರ ದಿವ್ಯ ಶ್ರೀಚರಣ ಸನ್ನಿಧಾನಕ್ಕೆ ಯಡೆಯೂರು ಶ್ರೀ ಕ್ಷೇತ್ರದ ಧರ್ಮದರ್ಶಿ N.M.P. ನಂಜಪ್ಪಯ್ಯನು ಮಾಡುವ ಶಿರಸಾಷ್ಟಾಂಗ ಭಿನ್ನಹಗಳು. ಅದಾಗಿ

ಶ್ರೀ ಮಹಾಸನ್ನಿಧಿಯವರು ಆರೋಗ್ಯ ಭಾಗ್ಯದಿಂದ ಶಿವ ವೃತಾನು ×× ವೈಭವ ×××× ಕುಶಲ ×××××ರೆಂದು ನಂಬಿರುತ್ತೇನೆ. ಸರ್ವರೂ ಆರೋಗ್ಯದಿಂದ ಇರುತ್ತಾರೆ. ತತಃ

ಶ್ರೀ ಮಹಾಸ್ವಾಮಿಯ ×× ನೂತನ ವರ್ಷಾರಂಭದಲ್ಲಿ ಪದ್ಧತಿಯಂತೆ ನಡೆಯಬೇಕಾ×× ಶ್ರೀ ಜದ್ಗುಗ್ರುಗಳವರ ×× ರಥೋತ್ಸವಕ್ಕೆ ಶ್ರೀ ಮಹಾಸ್ವಾಮಿಯವರು ದಯಮಾಡಿಸುವುದಾಗಿ ಅಪ್ಪಣೆ ×× ಸುತು ದಯ ಮಾಡಿಸಲಿಲ್ಲ. ಕಾರಣ ತಿಳಿಯದು ××××× ಶ್ರೀ ರಥೋತ್ಸವಾದಿ ಸೇವಾ ಕೈಂಕರ್ಯಗಳೆಲ್ಲವೂ ×××××× ಣಾದಿ ಕಾರ್ಯಗಳು ಅಭೂತಪೂರ್ವ ××ವಾಗಿ ××ತ ರೀತಿ ಇಂದ ನೆರವೇರಿದವು.

ನೂತನವರ್ಷಾರಂಭದ ಶ್ರೀ ಜಗದ್ಗುರು ಮಹಾಸನ್ನಿಧಿಯಲ್ಲಿ ಪರಂಪರಾಗತರಾದ ತಮಗೂ ತಮ್ಮ ಪರಿವಾರ ವರ್ಗದವರಿಗೂ ಶ್ರೀ ದಯಾಮಯನಾದ ಭಗವಾನ ಪರಮಾತ್ಮನು ಸಮಸ್ತ ಸನ್ಮಂಗಳವನ್ನು ದಯ ಪಾಲಿಸಬೇಕೆಂದು ಶ್ರೀ ಗುರುಗಳವರ ಮಹಾಸನ್ನಿಧಿಯಲ್ಲಿ ಅನನ್ಯಭಕ್ತಿ ಇಂದ ಪ್ರಾರ್ಥಿಸಿ ತತ್ ಸಂಬಂಧ ×× ಶ್ರೀ ಗುರು ಮಹಾಪ್ರಸಾದವನ್ನೂ ದಿವ್ಯಮಹಾ ಸನ್ನಿಧಿಗೆ ಕಳುಹಿಸಿ ಕೊಟ್ಟಿರುತ್ತೇನೆ. ಶ್ರೀ ಕ್ಷೇತ್ರ ಸವಾರಿಯು ಯಾವಾಗ ದಯಮಾಡಿಸುತ್ತೀರೆಂಬುದಕ್ಕೂ ಜಗದ್ಗುರುಗಳವರ ಆರೋಗ್ಯ ಭಾಗ್ಯಕ್ಕು ಆಶೀರ್ವಾದ ಪತ್ರವನ್ನೂ ದಯಪಾಲಿಸಬೇಕೆಂದು ಬೇಡುತ್ತೇನೆ.

ಇತಿ ಶಿರಸಾಷ್ಟಾಂಗ ಬಿಂನಹಗಳು.

❖❖

೮೭

ಕಾಲ : ಕ್ರಿ.ಶ. ? ಭಾಷೆ : ಕನ್ನಡ

ಸಾರಾಂಶ : ಗದುಗಿನ ಜಗದ್ಗುರುಗಳನ್ನು ಎರಡನೆಯ ವರ್ಗದ ಸರದಾರರೆಂದು ಪರಿಗಣಿಸಲು ಬ್ರಿಟನ್ ಸರಕಾರಕ್ಕೆ ಅರಟಾಳ ರುದ್ರಗೌಡರು ಬರೆದ ಪತ್ರ.

* * *

ದಿ. ರಾಯಿಟ್ ಆನ್ನರೆಬಲ್ ಗವರ್ನರ ಇನ್
ಕೌನ್ಸಿಲ್ ಬಾಂಬೆ ಇವರ ಸಂನಿಧಿಗೆ–

೧. ಕೆಳಗೆ ಸಹಿಮಾಡಿದ ನಾವು ವಿನಯಪೂರ್ವಕವಾಗಿ ಬರಕೊಳ್ಳುವ ಅರ್ಜಿ ಯೇನಂದರೆ– ಜಗದ್ಗುರುಗಳಾದ ಶ್ರೀಮನ್ಮಹಾ ತೋಂಟದಾರ್ಯರು ಮಹಾತಪಸ್ವಿಗಳೆಂದು ದಿಗಂತರ ಕೀರ್ತಿಯಂನು ಹೊಂದಿರುವರು. ಪ್ರಾಚೀನ ಗ್ರಂಥಗಳ ಮೇಲಿಂದ ತಿಳಿಯುವದೇನಂದರೆ:

ಈ ಶ್ರೀಮನ್ಮಹಾ ತೋಂಟದಾರ್ಯರು ಮಹಾಪುರುಷರಿದ್ದು ತಂಮ ತಪೋಬಲದಿಂದ ಲೋಕ ಮೆಚ್ಚುವಂಥ ಅನೇಕವಾದ ಆಮಾನುಷ ಕೃತ್ಯಗಳಂನೆಸಗಿ ಧಾರವಾಡ ಜಿಲ್ಲೆ ಗದಗ ತಾಲೂಕ ಪೈಕಿ ಡಂಬಳ ಗ್ರಾಮದಲ್ಲಿ ತಂಮ ವಿರಕ್ತ ಆಶ್ರಮದ ಮೂಲಪೀಠವನ್ನು ಸ್ಥಾಪಿಸಿರುತ್ತಾರೆ. ತರುವಾಯದಲ್ಲಿ ಈ ಮಹಾಸ್ವಾಮಿಯವರ ಪೀಠದ ಮೇಲೆ ಬಂದ ಸ್ವಾಮಿ ಪರಂಪರೆಯವರೂ ಸಹ ತಂಮ ಸದ್ಗುಣಗಳಿಂದಾ ಮಹಾಯೋಗಿಗಳೆನಿಸಿ ಒಳ್ಳೇ ಘನತೆಯಂನು ಹೊಂದಿರುವರು. ಈ ಶ್ರೀಮನ್ಮಹಾ ತೋಂಟದಾರ್ಯರ ಪೀಠದ ಮೇಲೆ ಈಗಿರುವ ಸ್ವಾಮಿಗಳಾದರೂ ಮಹಾಯೋಗಿಗಳಿದ್ದು ಒಳ್ಳೇ ಸದಾಚಾರ ಸಂಪನ್ನರಿರುತ್ತಾರೆ. ಇದರಿಂದ ಆ ಸ್ಥಳವು ಲಿಂಗಾಯತ ಜಾತಿಯವರಿಗೆ ಪವಿತ್ರವಾದ ಗುರುಸ್ಥಾನವಾಗಿರುತ್ತದೆ.

೨. ಮಹಾಸ್ವಾಮಿಗಳಾದ ಮೂಲ ತೋಂಟದಾರ್ಯರ ಹೆಸರಿನಿಂದ ಇನಾಮವಾಗಿ ಪರಂಪರೆ ನಡೆಯುವ ಜಮೀನುಗಳು ನಗದ ನೇಮಣೂಕಗಳು ಬೆಳಗಾಂವ ಧಾರವಾಡ ವಿಜಾಪೂರ ಕಾನಡಾ ಜಿಲ್ಲೆಗಳಲ್ಲಿಯೂ, ಮದ್ರಾಸ ಮೈಸೂರ ನಿಜಾಮ ಇಲಾಖೆಗಳಲ್ಲಿಯೂ ಇರುವದಲ್ಲದೆ, ಬೇರೆ ಹಲವು ಕಡಿಗೆ ಸಹ ಇರುತ್ತವೆ. ಈ ಜಮೀನು ಮತ್ತು ನಗದ ನೇಮಣೂಕಗಳ ಉತ್ಪಂನವು ಪ್ರತಿ ವರುಷಕ್ಕೆ ಸುಮಾರು ೨೫,೦೦೦ ರೂಪಾಯಿ ಇದ್ದಂತೆ ತಿಳಿಯುತ್ತದೆ.

೩. ಈ ಮಹಾಸ್ವಾಮಿಗಳ ವಿರಕ್ತಾಶ್ರಮದ ಮೂಲಪೀಠವಾದ ಡಂಬಳ ಮಠಕ್ಕೆ ವಳಪಟ್ಟ ಎಷ್ಟೂ ಮಠಗಳು ಧಾರವಾಡ, ವಿಜಾಪೂರ, ಮೈಸೂರ ಮುಂತಾದ ಪ್ರಾಂತಗಳಲ್ಲಿ ಇರುತ್ತವೆ. ಈ ಮಠಗಳ ಪೈಕಿ ಕೆಲವು ಮಠಗಳು ಕಟ್ಟಿಗಿಯಿಂದಾ ಸುಂದರವಾಗಿ ಕಟ್ಟಿಸಲ್ಪಟ್ಟವುಗಳಲ್ಲದೇ ಬರೇ ಕಲ್ಲುಗಳಿಂದ ಕಟ್ಟಿಸಲ್ಪಟ್ಟ ಭವ್ಯಮಠಗಳು ಸಹ ಎಷ್ಟೋ ಇರುತ್ತವೆ. ಈ ಯಾವತ್ತು ಮಠಗಳ ಕಿಂಮತು ಸುಮಾರು ಹತ್ತು ಲಕ್ಷ ರೂಪಾಯಿ ಇದ್ದಂತೆ ತೋರುತ್ತದೆ.

೪. ಈ ಮಹಾಸ್ವಾಮಿಗಳ ಬಳಿಯಲ್ಲಿರುವ ನವರತ್ನ ರಚಿತವಾದ ಹೀರಾವಳಿಗಳ ಮತ್ತು ಆನಿ, ಒಂಟಿ, ಕುದುರೆ ಮುಂತಾದ ಚರಾಸ್ಥಿ ಕಿಮ್ಮತ್ತು ಸುಮಾರು ನಾಲ್ಕು ಲಕ್ಷದ ಮೇಲೆ ಇದ್ದಂತೆ ಕಂಡುಬರುತ್ತದೆ.

೫. ಪೂರ್ವದಲ್ಲಿ [ಕೆಳದಿ] ರಾಜ್ಯವಂನು ಆಳುತ್ತಿದ್ದ ಬೂದಿ ಬಸಪ್ಪಾನಾಯಕನೆಂಬ ಅರಸು ಮತ್ತು ಬೇರೆ ಕೆಲವರು ಆದಿ ತೋಂಟದ ಮಹಾಸ್ವಾಮಿಯವರಿಗೆ ಇನಾಮವಾಗಿ ಹಾಕಿಕೊಟ್ಟ ಎಷ್ಟೋ ಜಮೀನುಗಳು, ಕಟ್ಟಿಸಿ ಕೊಟ್ಟಂಥಾ ಎಷ್ಟೋ ಮಠಗಳು, ಸನ್ಮಾನಗೋಸ್ಕರ ಕೊಟ್ಟಂಥಾ ಮುತ್ತು ರತ್ನ ವಜ್ರ ಮುಂತಾದ ಬೆಲೆಯುಳ್ಳ ವಡವೆಗಳು ಈಗಿರುವ ಮಹಾಸ್ವಾಮಿಗಳವರ ಬಳಿಯಲ್ಲಿ ಈವರಿಗೂ ಇರುತ್ತಿದ್ದು, ಇವರಿಂದ ಸನದು ಸೂತ್ರಗಳು ಸಹ ಇರುತ್ತವೆ. ಈ ಪ್ರಕಾರದ ವೈಭವದೊಡನೆ ಈ ಮಹಾ ಸ್ವಾಮಿಯವರು ಡಂಬಳ ಗ್ರಾಮದಲ್ಲಿ ಇರುವ ಪ್ರಯುಕ್ತ ಡಂಬಳ ಸಂಸ್ಥಾನವೆಂತಲೇ ಪ್ರಸಿದ್ಧ ಇರುತ್ತದೆ.

೬. ಈ ಮಹಾಸ್ವಾಮಿಯವರಿಗೆ ಲಿಂಗಾಯತ ಜನರಲ್ಲಿ ಶ್ರೇಷ್ಠರಾದ ಶ್ರೀಶೈಲ ಉಜ್ಜನಿ ಮುಂತಾದ ಪಂಚಸಿಂಹಾಸನದವರು ಬಹುಮಾನವಂನು ಕೊಡುವದಲ್ಲದೆ ವಿಧೇಯರಾಗಿ ಸಹಾ ನಡಕೊಳ್ಳುತ್ತಾರೆ. ಈ ಮಹಾಸ್ವಾಮಿಯವರು ಪಾದಚಾರಿಗಳಾಗಿ ಒಬ್ಬರೇ ಯಲ್ಲಿಯೂ ಹೋಗುವಂತೆ ಯಿಲ್ಲಾ. ಈ ಮಹಾಸ್ವಾಮಿಯವರು ಸಂಚಾರ ಮಾಡಬೇಕಾದರೆ ಛತ್ರಚಾಮರ ಮುಂತಾದ ಅನೇಕ ವೈಭಗಳಿಂದ ಪಲ್ಲಕ್ಕಿಯಂನೇರಿ ತಂಮ ಬಿರುದಾವಳಿಗಳ ಜಯ ಘೋಷದಿಂದ ಒಳ್ಳೇ ಸಂಭ್ರಮದೊಡನೆ ಬರುತ್ತಾರೆ.

೭. ತೋಂಟದಾರ್ಯರ ಸಿಂಹ್ವಾಸನದ ಮೇಲೆ ಸಧ್ಯಕ್ಕೆ ಈಗಿರುವ ತೋಂಟದ ಸ್ವಾಮಿಗಳು ವಿರಕ್ತಾಶ್ರಮಪವರಿದ್ದು, ಸಾರ್ವಜನಿಕ ಹಿತದಗೋಸ್ಕರ ಯಾವಾಗಲೂ ತಂಮ ಉದಾರಾಶ್ರಯವಂನು ಕೊಡುತ್ತಲಿದ್ಧಾರೆ. ಈ ಮಹಾಸ್ವಾಮಿಯವರ ದರ್ಶನಕ್ಕಾಗಿ ಬಂದ ಶಿಷ್ಯರು ಎಷ್ಟೇಯಿರಲಿ, ಇವರಿಂದ ಇಡಲ್ಪಟ್ಟ ನಿತ್ಯದಾಸೋಹದಲ್ಲಿ ಅನ್ನಪಾನಾದಿಗಳಿಂದ ತೃಪ್ತಿಯಂನು ಹೊಂದಿಹೋಗುವರು.

೮. ಈಗಿನ ಕಾಲದಲ್ಲಿ ಹಿಂದುಳಿದ ಸಂಸ್ಕೃತ ವಿದ್ಯಾಭಿವೃದ್ಧಿಗೋಸ್ಕರ ಈ ಮಹಾಸ್ವಾಮಿಯವರು ಪರೋಪಕಾರಾರ್ಥವಾಗಿ ೧೦,೦೦೦ ರೂಪಾಯಿಗಳನ್ನು ಲಿಂಗಾಯತ ಎಜ್ಯುಕೇಶನಲ್ ಫಂಡ ಪ್ರಸಿಡೆಂಟರಾದ ಮೆ॥ ಕಲೆಕ್ಟರ ಸಾಹೇಬ ಬಹದ್ದೂರ ಜಿಲ್ಲಾ ಧಾರವಾಡ ಇವರ ಕಡಿಗೆ ಕೊಟ್ಟಿರುತ್ತಾರೆ. ಈ ಬಗ್ಗೆ ಸರಕಾರದ ಠರಾವು ಸಹಿತ ಆಗಿರುತ್ತದೆ. ಈ ಫಂಡಿನ ಬಡ್ಡಿಯೊಳಗೆ ಗದಿಗಿನಲ್ಲಿ ಒಂದು ಸಂಸ್ಕೃತ ಪಾಠಶಾಲೆಯು ಸ್ಥಾಪಿಸಲ್ಪಟ್ಟಿದ್ದು, ಎಷ್ಟೋ ಜನವಿದ್ಯಾರ್ಥಿಗಳು ಮತ ಸಂಮಂಧ ವ ಶಾಸ್ತ್ರೀಯ ವಿಷಯವಂನು ಈಗ್ಯೂ ಕಲಿಯುತ್ತಲಿದ್ಧಾರೆ.

೯. ದಕ್ಷಿಣ ಮಹಾರಾಷ್ಟ್ರಕ್ಕೆ ಸೇರಿದ ಈ ಕರ್ನಾಟಕ ಪ್ರಾಂತದಲ್ಲಿ ಸನ್ ೧೮೯೧ ಇಸವಿಯಲ್ಲಿ ಆದ ಖಾನೆನುಮಾರಿ ಪ್ರಕಾರ ಲಿಂಗಾಯತ ಜನರ ಸಂಖೆಯೇ ಹೆಚ್ಚಿದ್ದು, ಸರಕಾರಕ್ಕೆ ಇನಕಂ ಟ್ಯಾಕ್ಸ ವ ತೆರಿಗೆಯಂನು ಕೊಡತಕ್ಕವರು ಬಹುತರ ಲಿಂಗಾಯತರೇ ಯಿದ್ದು, ಉತ್ಪಂನ ಮುಂತಾದ್ದರಲ್ಲಿ ಈ ಮಹಾಸ್ವಾಮಿಯವರಕಿಂತಲೂ ಕಡಿಮೆ ಯೋಗ್ಯತೆಯುಳ್ಳ ಇತರ ಜಾತಿಯ ಗುರುಗಳು ಸರದಾರ ಲಿಷ್ಟಿನಲ್ಲಿ ದಾಖಲಾಗಿರುವಷ್ಟೆ. ಆದರೆ ಲಿಂಗಾಯತರು ತಂಮ ಗುರುಗಳಾದ ಈ ತೋಂಟದ ಮಹಾಸ್ವಾಮಿಯವರನ್ನು ಸರದಾರ ಲಿಸ್ಟಿನಲ್ಲಿ ದಾಖಲ ಮಾಡುವದಕ್ಕೆ ಸರಕಾರದಲ್ಲಿ ಈವರೆಗೂ ದಾದು ಮುಟ್ಟಿಸಲಿಲ್ಲಾ. ಇದರ ಕಾರಣವೇನಂದರೆ ಸುಮಾರು ೨೫ ವರ್ಷಗಳಾಚೆಯಲ್ಲಿ ಲಿಂಗಾಯತ ಜಾತಿಯವರಾದ ಕೈಲಾಸವಾಸಿ ರಾ.ಬ. ವೀರಭದ್ರ ಮಡಿವಾಳಯ್ಯ ಪಂಡಿತ ವ.ರಾ.ಸಾ. ಚನಬಸಪ್ಪಾ ಬಸಲಿಂಗಪ್ಪಾ ಧಾರವಾಡ ಈ ಉಭಯಂತರು ಸರಕಾರದಲ್ಲಿ ದೊಡ್ಡ ಅಧಿಕಾರಗಳಂನು ಬಡವರಾಗಿ ಹೆಸರು ಹೊಂದಿದವರಿದ್ದು, ತಂಮ ಗುರುಗಳಾದ ಈ ಮಹಾಸ್ವಾಮಿ ಯವರಂನು ಸರದಾರ ಲಿಷ್ಟಿನಲ್ಲಿ ದಾಖಲ ಮಾಡಬೇಕೆಂಬ ಯತ್ನ ಮಾಡುವಷ್ಟರಲ್ಲಿ, ಇವರು ತಂಮ ಅಲ್ಪಾಯುಷ್ಯದಲ್ಲಿ ಮರಣ ಪಟ್ಟರು. ಇವರು ಮರಣಪಟ್ಟ ನಂತರ ಇಂಗ್ಲೀಷ ವಿದ್ಯೆಯನ್ನು ಕುರಿತು ಸರಕಾರದ ಕಟ್ಟಳೆಗಳನ್ನೂ ಬಲ್ಲವರಾಗಿ, ತಂಮ ಗುರುಗಳನ್ನು ಸರದಾರದ ಲಿಸ್ಟಿನಲ್ಲಿ ದಾಖಲ ಮಾಡುವದಕ್ಕೆ ಸರಕಾರದಲ್ಲಿ ದಾದ ಮುಟ್ಟಿಸುವಂಥಾ ಬುದ್ಧಿವಂತರು ಲಿಂಗಾಯತರಲ್ಲಿ ಯಾರೂ ಯಿಲ್ಲದಾಗಿದ್ದರು.

೧೦. ಇತ್ತಕಡಿಗೆ ಲಿಂಗಾಯತ ಜಾತಿಯವರಾದ ಕೈಲಾಸವಾಸಿ ನಾಮದಾರ ಗುರು ಸಿದ್ದಪ್ಪಾ ಅಂಣಾ ಗಿಲಗಂಚಿ ಮತ್ತು ರಾ.ಬ. ರುದ್ರಗೌಡ್ರಾ ಅಂಣಾ ಅರಟಾಳ ಈ ಉಭಯತರು ತಂಮ ಸದ್ಗುಣಗಳಿಂದಲೂ, ವಿದ್ಯಯಿಂದಲೂ ಪ್ರಬಲರೆನಿಸಿ, ಈ ಸಕಾರದಲ್ಲಿ ದೊಡ್ಡ ಅಧಿಕಾರಗಳನ್ನು ಪಡೆದವರಾಗಿ ತಂಮ ಸ್ವಜಾತಿಯ ಜನರೊಳಗೆ ವಿದ್ಯಾಭಿವೃದ್ಧಿ ರಾಗಬೇಕೆಂದಾಲೋಚಿಸಿ ದೀರ್ಘ ಪ್ರಯತ್ನವಂನು ಮಾಡಿ, ಸರಕಾರದವರ ಆಶ್ರಯದಿಂದ ಲಿಂಗಾಯತರ ಎಜ್ಯುಕೇಶನಲ್ ಫಂಡನ್ನು ಕೂಡಿಸಿದರು. ವಿದ್ಯ ಕಲಿಯುವದರಿಂದಾಗುವ ಲಾಭಗಳನ್ನು ಇವರು ತಂಮ ಜಾತಿಬಾಂಧವರಿಗೆ ತಿಳಿಯುವಂತೆ ಬೋಧಿಸಿದರು. ಸಾಂಪ್ರತಕ್ಕೆ ಲಿಂಗಾಯತ ಫಂಡಿನ ಸಹಾಯದಿಂದ ಯಷ್ಟೋ ಜನ ಲಿಂಗಾಯತರು ಮೇಲ್ತರದ ವಿದ್ಯೆಯಂನು ಕಲಿಯಲಾರಂಭಿಸಿ ತಕ್ಕ ತಕ್ಕ ಪದವಿಗಳನ್ನು ಹೊಂದುತ್ತಲಿದ್ದಾರೆ.

೧೧. ಲಿಂಗಾಯತ ಫಂಡ ಆದಂದಿನಿಂದಾ ಈ ಕರ್ನಾಟಕದಲ್ಲಿ ಲಿಂಗಾಯತರೇ ವ್ಯಾಪಾರ, ಶೇತಕಿ ಕೆಲಸಗಳಲ್ಲಿ ಮುಂದಿದ್ದು ಒಳ್ಳೇ ಗೌರವ ಉಳ್ಳವರಿರುತ್ತಾರೆಂದು ಸಕಾರದವರ ನಜರಿಗೆ ಕಂಡುಬಂದದ್ದರಿಂದ, ಕೈಲಾಸವಾಸಿ ನಾಮದಾರ ಗುರಸಿದ್ದಪ್ಪಾ ಅಂಣಾ ಗಿಲಗಂಚಿ ಇವರಂನು ಸನ್ ೧೮೮೮ನೇ ಇಸವಿಯಲ್ಲಿ ಕಾಯಿದೆ ಕೌನ್ಸಿಲ್ ಮೆಂಬರರೊಳಗೆ ಶೇರ್ಪಡೆ ಮಾಡಿದರು. ಆಮೇಲೆ ಸರಕಾರದವರು ಸನ್ ೧೮೯೩ನೇ ಇಸ್ವಿಯಲ್ಲಿ ನಾಮದಾರ ಶ್ರೀಮಂತ ಲಿಂಗಪ್ಪಾ ಜಾಯಪ್ಪ ಸರದೇಸಾಯಿ ಸಂಸ್ಥಾನ ನವಲಗುಂದ ಇನಾಮ ಗ್ರಾಮ ಶಿರಸಂಗಿ ಇವರಂನು ಕಾಯಿದೆ ಕೌನ್ಸಿಲ್ಲದ ಮೆಂಬರರೊಳಗೆ ತಕ್ಕೊಂಡರು. ನಂತರ ಸನ್ ೧೮೯೩ ಇಸವಿಯಿಂದಾ ನಾಮದಾರ ಶ್ರೀಮಂತ ಲಕಮಗೌಡಾ ಬಸವಪ್ರಭು ಸರದೇಸಾಯಿ ಸಂಸ್ಥಾನ ವಂಟಮುರಿ ಇವರು ಕಾಯಿದೆ ಕೌನ್ಸಿಲ್ ಮೆಂಬರರಾಗಿದ್ದರು.

೧೨. ಈ ಪ್ರಕಾರ ಲಿಂಗಾಯತರು ದಿನವಂದಕ್ಕೆ ವಿದ್ಯೆಯಂನು ಕಲಿತು ಸರಕಾರದಲ್ಲಿ ಚಿಕ್ಕದೊಡ್ಡ ಉದ್ಯೋಗಗಳಂನು ಮಾಡಲಾರಂಭಿಸಿದ್ದರಿಂದ, ತಂಮ ಗುರುಗಳಾದ ಶ್ರೀ ಮನ್ಮಹಾ ತೋಂಟದಸ್ವಾಮಿಗಳಿಗೆ ತಂಮಲ್ಲಿ ಬಹುಮಾನವಿದ್ದಂತೆ ಸರಕಾರದಲ್ಲಿಯೂ ಸಹ ಇರಬೇಕೆಂಬ ಸಂಗತಿಯು ಇತ್ತಲಾಗೆ ನಮಗೆ ಗೊತ್ತಾಯಿತು.

೧೩. ನ್ಯಾಯದಿಂದ ಪರಿಪಾಲನೆ ಮಾಡುವ ಮಹಾರಾಣಿ ಸಾಹೇಬರದು ತಂಮ ಆಳುವಿಕೆಯಲ್ಲಿ ತಂಮ ಪ್ರಜರು ಸಹ ಸುಖ ಸಂಪತ್ತಿಯಿಂದ ಇರಬೇಕೆಂದು ಇಚ್ಛಿಸುವರಾದ್ದರಿಂದ, ವಿನಯಪೂರ್ವಕವಾಗಿ ಬೇಡಿಕೊಳ್ಳುವದೇನೆಂದರೆ, ಜಗದ್ಗುರುಗಳೆನಿಸುವ ಶ್ರೀಮನ್ಮಹಾ ತೋಂಟದಸ್ವಾಮಿಯವರಿಗೆ ಲಿಂಗಾಯತ ಜನರೊಳಗೆ ಬಹುಮಾನವಿದ್ದಂತೆ, ದರ್ಬಾರ ಪ್ರಸ್ತಾಪಗಳಲ್ಲಿ ಸಹ ಈ ಮಹಾಸ್ವಾಮಿಯವರಿಗೆ ಬಹುಮಾನ ಇರುವದಕ್ಕೋಸ್ಕರ ಶ್ರೀಮನ್ಮಹಾ ತೋಂಟದಸ್ವಾಮಿ ಗುರು ತೋಂಟದಸ್ವಾಮಿ ಸಂಸ್ಥಾನ ಮಠ ಡಂಬಳ ಇವರಂನು ಎರಡನೇ ವರ್ಗ ಸರದಾರ ಲಿಸ್ಟಿನಲ್ಲಿ ದಾಖಲ ಮಾಡಬೇಕು.

೧೪. ಈ ವಿನಂತಿಯಂನು ಸರಕಾರದವರು ತಂಮ ದಿವ್ಯಚಿತ್ತಕ್ಕೆ ತಂದು ಸಫಲಿ ಮಾಡಬೇಕೆಂದು ಕೆಳಗೆ ಸಹಿ ಮಾಡಿದ ನಾವೆಲ್ಲರೂ ಪ್ರಾರ್ಥನೆ ಮಾಡಿಕೊಳ್ಳುತ್ತೇವೆ.

೧೫. ಮೆ.ಜೆ. ಫೆರ್ಲಿ ಮ್ಯಾರ ಸಾಹೇಬ ಬಹಾದ್ದೂರ ಕಲೆಕ್ಟರ ಜಿಲ್ಲಾ ಧಾರವಾಡ ಇವರು ಸದರ ಸ್ವಾಮಿಯವರು ಸ್ಥಾಪಿಸಿದ ಸಂಸ್ಕೃತ ಪಾಠಶಾಲಾ ಮುಂತಾದ್ದರ ವಿಷಯಕ್ಕೂ ವ ಅವರ ಘನತೆಯ ವಿಷಯಕ್ಕೂ ಖಾವಿಂದರವರಿಗೆ ಮಾಹಿತಿ ಇರುವದರಿಂದ ಯೋಗ್ಯ ಶಿಫಾರಸ ಮಾಡಿ ಈ ಅರ್ಜಿಯಂನು ತಂಮ ವಿದ್ಯಮಾನ ಸರಕಾರಕ್ಕೆ ಕಳುಹಿಸಬೇಕೆಂದು ನಂಮ ಪ್ರಾರ್ಥನೆ ಇರುತ್ತದೆ.*

❖❖

೮೮

ಕಾಲ : ಕ್ರಿ.ಶ. ? ಭಾಷೆ : ಕನ್ನಡ ಮತ್ತು ಇಂಗ್ಲೀಷ್

ಸಾರಾಂಶ : ಪಂಚಮ ಜಾರ್ಜರಿಗೆ ಸಲ್ಲಿಸಿದ ಮಾನಪತ್ರ.

* * *

ಶ್ರೀಮತ್ ಶಿವಯೋಗ ಪರಮರಹಸ್ಯಾನುಭವ ಜನಿತ ಪರಮಾನಂದ ಸಾಮ್ರಾಜ್ಯವಿಭವ ರಾಜಮಾನ ಚರಕುಲಚಕ್ರವರ್ತಿ ಸರ್ವವೇದಾನು ಸಾರಿ ಸಿದ್ಧಾಂತ ಶಿವಾಗಮೋತ್ತರಭಾಗ ನಿರೂಪಿತ ವೀರಶೈವಮತ ಘಟಕ ಪಿಂಡಾದಿ ಜ್ಞಾನಶೂನ್ಯಾಂತ್ಯೈಕೋತ್ತರ ಶತಸ್ಥಲ ಘಟಿತ ಷಟ್‌ಸ್ಥಲಸ್ಥಾಪನಾಚಾರ್ಯವರ್ಯ ಗುರುಕುಲ ಕೇತನಾಯಮಾನ ಶಿವಾನುಭವಶಾಸ್ತ್ರ ಸುಧಾರ್ಣವ ಸಂವರ್ಧನ ರಾಕಾಂಶಶಾಂಕ ವೃಷಾಂಕ ವಾಹನಾನಾದಿಭಕ್ತ ವೃಷಭೇಶ ಹೃದಯ ವಿನರ್ಗಿತ ಶ್ರೀಮದನಾದಿ ನಿರಂಜನ ಗಣಾಧೀಶ್ವರಪರಾವತಾರಭೂತ ಎಡೆಯೂರ ವಿರಾಜಮಾನ ಶೂನ್ಯಸಿಂಹಾಸನಾಧೀಶ ಶ್ರೀತೋಂಟಸಿದ್ಧಲಿಂಗೇಶ್ವರ ಸ್ವಾಮ್ಯನ್ವಯ ಶರಧಿ ಸಮುದ್ಭವ ಕೃತುಪುರಸ್ಥ ಸ್ವೇಷ್ಟಲಿಂಗಮಧ್ಯಸ್ಥಿತಾ ಚಾರಾದಿ ಲಿಂಗಾನುಸಂದಾನಾ ನಂದನುಭವ ಮೋದಿತ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀತೋಂಟಸಿದ್ಧೇಶ್ವರಸ್ವಾಮಿ ಭ :

ಶ್ರೀಮತ್ ಪಂಚಮ ಜಾರ್ಜ ಚಕ್ರವರ್ತಿ ಶುಭ ಕೀರ್ತಿ ವಿಸ್ಫೂರ್ತಿ

ವಿರಾಜಿತ ಧರಾಮಂಡಲ ಮಂಡನಾಯಮಾನ ಮುಂಬಾಪುರ ನಿಯಮ

ನಿರ್ಮಾಣಾಸ್ಥಾನ ವಿಭೂಷಣ ವಿಚಕ್ಷಣಾಸ್ಮದ ಪಾರ ಪ್ರಮೋದ ಶರಧಿ

ವಿವರ್ಧನನೇಕ ನಾಮಧಾರ 'ಲಾರ್ಡ ವಿಲಿಂಗ್ಡನ್, ಜೀ.ಸೀ. ಐ.ಈ, ಗವ್ಹರ್ನರ

ಪ್ರಭುವರಾನುದ್ದಿಶ್ಯ ವಿರಚಿತಾನಾಂ ಸಮುಚಿತಾ ಶಿಷ್ಯಾಂ ಪರಂಪರಾ : ಪ್ರಸ್ಫುರಂತು ।

ರಾಕ್ಷಸ ಸಂವತ್ಸರೇ ಉರ್ಜಮಾಸೇ ಸಿತಪಕ್ಷೇ ಷಷ್ಠ್ಯಾ ಪರ್ಯಂತಂ ಭವದ್ಭವ್ಯ ಶಾಸನವಶವರ್ತಿ ಧಾರವಾಡ ಜಿಲ್ಲಾಧೀನ ಕೃತಪುರೀ ಮಹಾಮಲೇ ಶ್ರೀಮದಾಂಗ್ಲ ಸಾರ್ವಭೌಮ ಸಾಮ್ರಾಜ್ಯಾಭಿವೃದ್ಧ್ಯರ್ಥ ೬೦ ಸ್ವೇಷ್ಟಲಿಂಗ ಸಮಾರಾಧನೇ ಸಪ್ರಮೋದಂ ನಿರತಾಃ ಸ್ಮಃ ।

ಜಯತಿ ಜಯತಿ ಸಾರ್ವಭೌಮಃ ಪಂಚಮೋ ಜಾರ್ಜಭೂವರಃ

* ೧೨೬೫ ಗಣ್ಯಮಾನ್ಯರ ಸಹಿಗಳಿವೆ.

ಇತಃ ಪರಂ ಭವನ್ಮಂಗಲಾರ್ಥಂ ಸಂಸ್ಥಾನ ಕಾರ್ಯನಿರ್ವಾಹಕ ಅನ್ನದಾನಮರಿ, ತೋಟಮರಿ, ಕೋಟಿ ತೋಟಪ್ಪ ಇತ್ಯೇತೈಃ ಸಮಾನೀತಾನ್ ಫಲಪ್ರಸಾದಾದಿನ್ ಸ್ವೀಕರೋತು ಮಹಾಪ್ರಭುಃ ಸಂಪ್ರತಿ ।

ದೀರ್ಘಾಯುರಾರೋಗ್ಯಮಸ್ತುಲೇಡಿ ಲಾರ್ಡ ವಿಲಿಂಗ್ಡನ್ ಮಹಾಶಯಾಭ್ಯಾಂ । Victory to His most Gracious majesty George V King and Emperor of India. long life and Prosperity to Their Excellencies lord and lady Willingden.

- ಸ್ರಗರಾ -

ವಿದ್ಯಾಕೂಪಾರ ಪಾರಂಗತಮತುಲಮತೀಂ ಹೃದ್ಯ ಲಾರ್ಡಾಂಕ ರಾಜ ।
ದ್ವಿಲ್ಲಿಂಗ್ಡನ್ನಾಮಧೇಯಂ ವಿನಯ ಗುಣನಿಧಿಂ ರಾಜ್ಯ ತಂತ್ರಪ್ರವೀಣಂ ॥
ಮುಂಬಾರಾಜ್ಯಾಂಶಪಾಲಂ ಕೃತುಪುರ ವಿಲಸಚ್ಛೂನ್ಯಸಿಂಹಾಸನಸ್ಥಾ ।
ಸ್ಯಾಮೋದಂ ವ್ಯಾಹರಾಮೋ ವಯಮಮಿತದಯಂ ಸ್ವಾಗತಂ ತ್ವಾಂ ಪ್ರಶಾಂತಂ ॥೧॥

We the holy sages of Dambal Gadag math ofter a Cordial Welcome to your excelencey lord Willingden the Governor of the presidencey of Bombay, Who has traversed the Broad ocean of Education Who is qefted with unpara. Lelled inttliingence, Who is Well Versed in the management of State, affairs and who is adorned With boundless modesty.

- ಸ್ರಗರಾ -

ವಾರ್ತಂ ಸರ್ವತ್ರ ವಿದ್ಮಸ್ತ್ವಯಿಸತಿ ವಿಷಯ ಸ್ವಾಸ್ಥ್ಯಗೋಪ್ತರ್ಯ ಖಂಡಂ ।
ಧರ್ಮೋಽನುಷ್ಠೀಯತೇಽಸ್ಮಾದೃಗಖಿಲ ಮುನಿಭಿರ್ನಾಶಿತ ಪ್ರತ್ಯವಾಯೈಃ ॥
ವಿದ್ಯಾ ವಿಘ್ನ ಪ್ರಚಾರಂ ಪ್ರಸರತಿ ನಿತರಂ ಸಂಪದಾಂವೃದ್ಧಿ ಹೇತು ।
ಶ್ಲಾಘ್ಯಾ ವ್ಯಾಪಾರ ವೃತಿಃ ಕೃಷಿರಪಿ ಭವತೋತ್ತೇಜಿ ತೌನ್ನತ್ಯ ಮೇಲೆ ॥೨॥

Under your Excelenccy' Protection, We are enjoyuing un broken peace in every respect. Sages like ourselves are tredeing the path of religious duties free from molestation Learning is making un in terrupted progress Commerce and AgricuLturer, the back bones of the countries Wealth are flourishing under your excellency's Patronage.

॥ ಮಾಲಿನಿ ॥

ಪ್ರಭುವರ ಕರುಣಾತೇ ಕೀದೃಶೀ ದೀನವರ್ಗೇ।
ಪರಿಹೃತ ಗುರು ಕಾರ್ಯನ್ಯಾಗಸ್ಯೇಹ ಸದ್ಯಃ॥
ಪರತರ ಪದವೀಂ ಸನ್ಮಾನವೀ ವೀರಪಾಖ್ಯಾ।
ಯ ಲಲಿತ ಗುಣ ದಾತುಂರಾವ ಸಾಹೇಬ ನಾಮ್ನಿಂ ॥೩॥

Oh lord of Worthy qualities how great must be the Kindness of your excellency towords your Excelencey's humble subjects in : as much as your Excellency has come here setting aside other Pressing engagements to invest your devotee Mr. Veerappa manvi with the Worthy title of Rao Saheb.

❖❖

೮೯

Year : 1904 Language : English

ಸಾರಾಂಶ : ಹೂವಿನ ಹಡಗಲಿ ತಾಲೂಕು ತಂಬ್ರಹಳ್ಳಿಯ ತೋಂಟದಾರ್ಯಸ್ವಾಮಿಗಳ ಭಕ್ತರಾದ ಕೊಟ್ಟೂರಯ್ಯ, ಶಾಂತವೀರಯ್ಯ ಮತ್ತು ಇತರ ಲಿಂಗಾಯತರು ತಂಬ್ರಹಳ್ಳಿಯಲ್ಲಿರುವ ಶ್ರೀ ತೋಂಟದಾರ್ಯಸ್ವಾಮಿಗಳ ಅಡ್ಡಪಲ್ಲಕ್ಕಿ ಉತ್ಸವ ನಡೆಸಲು ಅಸಿಸ್ಟಂಟ ಮ್ಯಾಜಿಸ್ಟ್ರೇಟ್ ಹೊಸಪೇಟೆ ಇವರಿಗೆ ಮನವಿ ಸಲ್ಲಿಸಿ ಅನುಮತಿ ಪಡೆದಿದ್ದರು. (೧೯೦೩ ಡಿಸೆಂಬರ ೧೯) ಅದೇ ಗ್ರಾಮದ ವೆಂಕೋಬರಾವ ಮತ್ತು ಇತರ ಬ್ರಾಹ್ಮಣರು ಅಡ್ಡಪಲ್ಲಕ್ಕಿ ಉತ್ಸವ ನಡೆಸುವುದು ಕೇವಲ ಬ್ರಾಹ್ಮಣರ ಹಕ್ಕು ಎಂದು, ಅಡ್ಡಪಲ್ಲಕ್ಕಿ ಉತ್ಸವಕ್ಕೆ ತಡೆಯಾಜ್ಞೆ ತಂದರು. ಆಗ ಮನವಿದಾರರಾದ ಕೊಟ್ಟೂರಯ್ಯ, ಶಾಂತವೀರಯ್ಯನವರು ಅಡ್ಡಪಲ್ಲಕ್ಕಿ ಉತ್ಸವ ನಡೆಸುವುದು ಕೇವಲ ಬ್ರಾಹ್ಮಣರ ಹಕ್ಕಲ್ಲ. ಸಾರ್ವಜನಿಕ ರಸ್ತೆಯಲ್ಲಿ ಕಾನೂನು ಬದ್ಧವಾಗಿ ಉತ್ಸವ ನಡೆಸಲು ಎಲ್ಲರಿಗೂ ಹಕ್ಕಿದೆ ಎಂದು ಹಲವು ನ್ಯಾಯಾಲಯಗಳು ನೀಡಿದ ತೀರ್ಪುಗಳನ್ನು ಉಲ್ಲೇಖಿಸಿ ತಡೆಯಾಜ್ಞೆಯನ್ನು ತೆರವುಗೊಳಿಸಬೇಕೆಂದು ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ ಅರ್ಜಿ ಪತ್ರ.

* * *

To,

THE COURT OF THE HEAD ASSISTANT MAGISTRATE HASPET. BELLARY DISTRICT

Mis : appr. ____ No : of 1904

Petitioners - Kotturaya, Shantaviraya, and other Lingayats of Tambrahally village Huvinabadagally Taluk, and desciples of Shri Thota Swami

The above petitioners most respectfully beg to submit as follows -

1. That they prayed for permission & Police assistance to carry the Shri Jagadguru Thotada Swami of Dambal Sansthan of Gadag in cross-palanpuin in the public streets of Thumrahally, and the Head Assistant Magistrate was pleased to grant the permission prayed for on the 19th of December 1903.

2. That on the 22nd Deor; 1903 one of the few Brahman residents of the village by name VenkobaRao prayed for 3 weeks time alleging that he would establish his right to interdict the procession in the civil court and accordingly the above court granted his prayer and ordered that the procession should not be held till the 10th of July, 1904.

3. That the said VenkobaRao then presented a Revision petition to the court of the District Magistrate of Bellary against the order of the 19th December 1903, but here again to his disappointment, the District Magistrate rejected his petition on the 4th February, 1904.

4. That the Lingayets were making arrangements to have the religious procession conducted on the 23rd 24th & 25th of June, and had also given the required notice to the Police. Knowing this, and with an intention of causing great loss and inconvenience to the patitioners, the said VenkobaRao presented another long petition to the Assistant Supt. of Police of Haspet Division on the 18th of June 1904 in which he purposely mis-represented the situation in a very highly exaggerated light with the result that the above Court was pleased to direct the petitioners to abstain from holding the procession until further orders, on the 20th of June 1904;

5. That VenkobaRao, the Shanbhog of the village is repeatedly presenting petitions only with the object of causing vexation and annoyance to the petitioners;

6. That the said VenkobaRao is estopped by law to re-open the same question in this manner after it has been judicially decided by this Honourable Court;

7. That the petitioners respectfully beg to bring to the notice of this Honourable Court that there are not more than 7 or 8 Brahman houses in Thambrahally, were as the Lingayat houses number nearly 300; that the allegations of VenkobaRao stating that he represents the carpenters & Boyas of the village are false; that no other classes of Hindus are ever known to have taken any objections to the ceremonial observances of the Lingayats, and that there is no likelihood of a bread of the peace at all;

8. That the law contemplates to afford protection only to cogregational worship, that the objection of VenkobaRao and his few friends has no manner of reference at all to any such worship, and as such is untenable;

9. That the so called objection of the few Brahmans is unsubstantial and purely sentimental, and the prejudices of particular sects ought not to be allowed to influence the law;

10. That the right to conduct religious processions in the public Streets on lawful occasions in a lawful manner and subject to all lawful orders of a Magistrate, is a natural right inherent in every subject of the State;

11. That the Lingayets belong to an independent religion among Hindus over whom the Brahmans have not got the slightest ecelesiastical jurisdiction whatsoever that the prejudiced Brahmans heartily hate them for their religious independence and deliberately misrepresent them on all possible occasions, that this religious enmity is reterred to even in legal decisions (vide : Minute of the late Justice W. Simson, Puisne Judge of the Sadder Adaulat I.L.R- II Bombay P. 474,) and in such literary works as the Madras Journal of Literature & Science Vol. XI. P.P. 143-177, that the Brahmans therefore find it convenient to exaggerate their own claims and to forget those of their religious opponents, the Lingayets, and that the Brahmans of Tambrahally cannot have any just ground of complaint if they are compelled to recognise the natural and civil rights of their fellow citizens, the Lingayats;

12. That the authorised agent and the counsel on behalf of the Sringeri Swami have admitted that the Sringeri Swami has no jurisdiction whatsoever over the Lingayets. and their admission has been recorded in the recent Dharwar case between the Sringeri Swami and the Hubli and Gadag Swamies, and a certified copy of the order in that case has already been produced for the perusal of this Honourable Court; and as the petitioners belong to a religion which is admittedly independent of the Brahmans in every respect, neither VenkobaRao and his handiul of friends in Tambrahally, nor the other numerous Brahmans of other places and their Swamies however high, can have any manner of right to interfere with the religious observances of the petitioners ;

13. That the right which the Lingayets wish to exercise being a natural right, the special privileges claimed by the Brahmans are not compatible with the recognised principles of British administration and the equal rights of all citizens;

14. That the law of British India has considerably changed the course of decisions as to the essentials of a valid custom; that it has been repeatedly held that a custom must be proved to exist before it can claim due recognition and it has been uniformly declared by the highest courts of this Presidency that the custom of Interdicting the use of the public streets is an unreasonable custom, and as such it cannot be enforced;

15. That the chief contention of the Brahmans is that they have got the practise of interdicting such processions. That the petitioners beg to submit that the following important observation of the famous Chief Justice Sir Charles Turner in the Full Bench decision of Sundram Chetti vs. the Queen, the leading case on the subject of processions and the use of public streets, very aptly applies to the present case which is pending before this Honourable Court ;

The observation runs as follows :

"A custom has to be proved before it can be recognised by a court of law. and that a practice, however ancient, is not necessarily a valid custom.

To Constitute a valid custom, it must be reasonable as well as certain and ancient and it is not probable that any court would hold that to be a reasonable custom which requires the members of one section of the community to restrict themselves in their ordinary rights in recognition of the reverence due to a religion to which they do not belong and in which they do not believe" I.L.R. VI Madras p. 226.

16. That the above observation has been quoted and followed in the most recent decision on the point in which their Lordships of the Madras High Court observe-

"We have not been referred to a single reported case in which such a right of one sect to interdict a rival sect from the use of the public streets has been recognised by the superior courts in India.

The correct view as stated in the later cases, is that every member of the public, and every sect, has a right to use the public streets in a lawful manner." I.L.R. XXVI Madras PP : 377-383.

17. That the right of going in the public streets in cross palanquin is not an exclusive right belonging only to the Brahmans as is sometimes alleged, that in a cross-palanquin suit brought by the Sringeri Swami for Rs. 15,000-0-0 Damages and for a permanent injunction against the Lingayet Swami of Hubli the Sringeri Swami totally failed to prove the existence of such an exclusive privilege before the Bombay High-Court, with the natural result that the suit was dismissed with costs; and that the late Justice W. Simson. Puisne Judge of the Saddar Audawlat, has expressly observed that the right claimed by the Sringeri Swami was not an exclusive one & even pronounced that any other person might assume the same privileges under the British Government; I.L.B. II Bombay P. 474 para 9 s.c. 3 M.I.A.P. 198;

18. That the Thota Swami of Gadag belongs to the highest and most respectable order of priests in the Lingayet community;

19. That he is the holder of numerous sannads & enjoys extensive Inam lands under the British Government in the Bombay & Madras Presidencies, & in the Native States of Mysore and Hyderabad; and exercises spiritual jurisdiction over thousands of important branch Mutts situated in all the above countries;

20. That he is the chief Swami of a very ancient Mutt which is full of interesting traditions and to which the highest sanctity is attached and the greatest reverence is shown by all the Lingayets in Southern India; that the famous Murgi Mutt of Chitragaldoorg in the Mysore state & the well known Muroosavirda Mutt of Hubli are the branches of the same great ancient Mutt; that these swamies of this venerable ancient institution command as much respect and reverence among the Lingayets as the Sringeri Swami does among the Smartha Brahmans, and occupy a rank exactly similar to that of the Sringeri Swami; that the use of the cross-palanquin is one of the many privileges which these three Swamies have been exercising from time immemorial; that it was proved to the entire satisfaction of the District Magistrate of Dharwar that the Hubli & Gadag Swamies have been exercising this privilege from upwards of at least half a century, so that their rights have been judicially recognised in the sister Presidency of Bombay; and that the order of this Honourable Court in 1889 clearly proves the recognition of the same right in this part of British India also;

21. That the allegation that the Sringeri Swami is the only person who is entitled to exercise this right is negatived by the fact that the same privilege has been conferred on the Chitragaldurg Swami; that there are numerous sannads in which the use of the cross palanquin has been expressly referred to, and in which there is even a declaration that the Lingayet Swami is by Mamool entitled to exercise all the privileges and to use all the insignias as the Sringeri Swami.

Vide Rahadari order sent by Mr. Venkat Row, Amildar of Davanageri Dated 10[th] Bahul, Magha, Yuva year.

Vide order sent by Mr. Shama Rao Subhedar of Chitragaldoorg Dated 5th Bahul, Chaitra Iswar Samvatsar.

22. That a desciple of the Sri Thota Swami of Gadag has been recently Installed on the Seat of Chitragaldoorg only a few months ago;

23. That in recognition of the high respectability of this Thotaswami, His Excellency the Governor of Bombay has been pleased to exempt him from appearance in the Civil Courts.

Vide Bombay Government Gazette

Dated June 23, 1904, Page 837.

24. That the law as enunciated by the Highest Courts of this presidency from the earliest times to the present momet, is in full support of the claims of the petitioners.

1. Sambalingamoorthy vs: Vembara Govindachetti M.S.D. 1857, P. 233.
2. Sivappachari vs: Mahalingachetti. I Mad: High Court Reports. P. 50.
3. Muthialachetti & 9 others vs: Bapunsaib. I.L.R. II Madras. 141-142.
4. Parthasarathy Iyengar vs: Chinna Krishna Iyengar I.L.Re. V Madras. P. 309.
5. **Leading case** - Sundramchetti vs: The queen I. L. / (Full Bench) R. VI PP. 203 - 226.
6. I.L.R. XXV Madras. PP. 377-383.
7. Vide also I.L.R. II. Bombay PP. 474-475 S.C. 3 Mooris Ind: Appeals P. 198.
8. I. L. R. V Calcutta P. 132.

That under the above circumstances, the petitioners most respectfully pray that this Honourable Court may be pleased to grant them permission to conduct the Sri Thota Swami's religious prosession in cross-palanquin with the usual insigias. through the public streets of Thambrahally on.. and to direct that sufficient police assistance may also be given that may be considered necessary for the Occasion.

❖❖

ಅನುಬಂಧಗಳು

ಅನುಬಂಧ-೧


ಶ್ರೀಮದನಾದಿ ನಿರಂಜನ ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳವರ ಪೀಠ ಪರಂಪರೆ

ಅ.ನಂ.	ಶೂನ್ಯ ಸಿಂಹಾಸನಾಧಿಪತಿಗಳು	ಸಮಾಧಿ ಇರುವ ಸ್ಥಳ
೧	ಶ್ರೀ ಜಗದ್ಗುರು ತೋಂಟದ ಸಿದ್ಧಲಿಂಗ ಸ್ವಾಮಿಗಳು	ಎಡೆಯೂರು
೨.	ಶ್ರೀ ಜಗದ್ಗುರು ತೋಂಟದ ಬೋಳಬಸವ ಸ್ವಾಮಿಗಳು	ಮಧುಗಿರಿ
೩.	ಶ್ರೀ ಜಗದ್ಗುರು ತೋಂಟದ ಸಿದ್ಧವೀರ ಸ್ವಾಮಿಗಳು	ಗೂಳೂರು
೪.	ಶ್ರೀ ಜಗದ್ಗುರು ತೋಂಟದ ಉದ್ದಾನಾರ್ಯ ಸ್ವಾಮಿಗಳು	ಭದ್ರರಾಜಪೂರ
೫	ಶ್ರೀ ಜಗದ್ಗುರು ತೋಂಟದ ಹರಿಹರ ಸ್ವಾಮಿಗಳು	ಹಿರೇಹಡಗಲಿ
೬	ಶ್ರೀ ಜಗದ್ಗುರು ತೋಂಟದ ಭಿಕ್ಷುಕದ ಬಸವಲಿಂಗ ಸ್ವಾಮಿಗಳು	ರುದ್ನೂರು
೭	ಶ್ರೀ ಜಗದ್ಗುರು ತೋಂಟದ ಕಟಗಿಹಳ್ಳಿ ರಾಚೋಟಿಸ್ವಾಮಿಗಳು	ತಿಳವಳ್ಳಿ
೮	ಶ್ರೀ ಜಗದ್ಗುರು ತೋಂಟದ ಕೌದಿ ಮಹಾಂತ ಸ್ವಾಮಿಗಳು	ಬಾಚಿಗೊಂಡನಹಳ್ಳಿ
೯.	ಶ್ರೀ ಜಗದ್ಗುರು ತೋಂಟದ ಅರ್ಧನಾರೀಶ್ವರ ಸ್ವಾಮಿಗಳು	ಡಂಬಳ
೧೦	ಶ್ರೀ ಜಗದ್ಗುರು ತೋಂಟದ ನಂದೀಶ್ವರ ಸ್ವಾಮಿಗಳು	ಅಣ್ಣಿಗೇರಿ
೧೧	ಶ್ರೀ ಜಗದ್ಗುರು ಉಗ್ಗದ ತೋಂಟದ ಸ್ವಾಮಿಗಳು	ಅಣ್ಣಿಗೇರಿ
೧೨	ಶ್ರೀ ಜಗದ್ಗುರು ತೋಂಟದ ಸದಾಶಿವ ಸ್ವಾಮಿಗಳು	ಕೊಪ್ಪಳ
೧೩.	ಶ್ರೀ ಜಗದ್ಗುರು ತೋಂಟದ ಮಹಾಂತ ಸ್ವಾಮಿಗಳು	ಹಂಪಸಾಗರ
೧೪.	ಶ್ರೀ ಜಗದ್ಗುರು ವೃದ್ಧ ತೋಂಟದ ಸ್ವಾಮಿಗಳು	ಗದಗ
೧೫	ಶ್ರೀ ಜಗದ್ಗುರು ತೋಂಟದ ಮೃತ್ಯುಂಜಯ ಸ್ವಾಮಿಗಳು	ಗದಗ
೧೬	ಶ್ರೀ ಜಗದ್ಗುರು ತೋಂಟದ ಸಿದ್ಧೇಶ್ವರ ಸ್ವಾಮಿಗಳು	ಗದಗ
೧೭	ಶ್ರೀ ಜಗದ್ಗುರು ತೋಂಟದ ಗುರುಬಸವ ಸ್ವಾಮಿಗಳು	ಗದಗ
೧೮	ಶ್ರೀ ಜಗದ್ಗುರು ತೋಂಟದ ಶಿವಕುಮಾರ ಸ್ವಾಮಿಗಳು	ಗದಗ
೧೯.	ಶ್ರೀ ಜಗದ್ಗುರು ತೋಂಟದ ಸಿದ್ಧಲಿಂಗ ಸ್ವಾಮಿಗಳು ೧೯೭೪ರಿಂದ	--

❖❖


ಅನುಬಂಧ-೨

1




[ಭದ್ರರಾಜಪುರದ ತೋಂಟದಾರ್ಯವಿರಕ್ತಮಠದ ಗಣಾರಾಧನೆಗೆ ಕೆಳದಿ (ಬೂದಿ) ಬಸಪ್ಪನಾಯಕರು ದಾನ ನೀಡಿದ ವಿವರ. ಕ್ರಿ.ಶ. ೧೭೪೯, ಪತ್ರ ನಂ. ೩]

1




[ಕೆಳದಿ ಚನ್ನಬಸಪ್ಪನಾಯಕರು ಡಂಬಳದ ತೋಂಟದಾರ್ಯಮಠದ ಗದ್ದುಗೆಗೆ ತಮ್ಮ ತಂದೆ ಹೊಸದಾಗಿ ನಿರ್ಮಿಸಿದ ರಥದ ಉತ್ಸವ, ಗಣಾರಾಧನೆ ಮತ್ತು ದಾಸೋಹಕ್ಕಾಗಿ ದಾನ ನೀಡಿದ ವಿವರ. ಕ್ರಿ.ಶ. ೧೭೩೭ ಪತ್ರ ನಂ. ೧]




[ಕಿಲ್ಲೆ ಬಾದಾಮಿ ಸೀಮೆ ದೇಸಾಯಿ ಪವಾಡಿನಾಯ್ಕರ ಮಗ ಆಚಪ್ಪ ನಾಯ್ಕರು ತೊರೆನಿರಲಗಿ ಗ್ರಾಮವನ್ನು ತೋಂಟದಾರ್ಯಮಠಕ್ಕೆ ದಾನ ನೀಡಿದ ವಿವರ. ಪತ್ರ ನಂ. ೪೯]

1




[ಎಡೆಯೂರು ಗದ್ದುಗೆಗೆ ನಾವೇ ಮಾಲಕರಿದ್ದು, ಮೊದಲಿನಿಂದಲೂ ಅದರ ಉಸ್ತುವಾರಿ ನೋಡಿಕೊಳ್ಳುತ್ತ ಬಂದಿದ್ದು, ಈಗ ಗದ್ದುಗೆಯ ಉತ್ಪನ್ನವನ್ನು ನಮಗೆ ಕೊಡಬೇಕೆಂದು ಕುಣಿಗಲ್ ಮಾಮಲೇದಾರರಿಗೆ ಬರೆದ ಅರ್ಜಿ ಪತ್ರ. ಕ್ರಿ.ಶ. ೧೯೨೧. ಪತ್ರ ನಂ. ೮೩]

2



[illegible]




[ಎಡೆಯೂರಿನ ನಮ್ಮ ಮಠವನ್ನು ನಮ್ಮ ವಶಕ್ಕೆ ಕೊಡಬೇಕೆಂದು ಹದಿನಾರನೆಯ ಜಗದ್ಗುರು ಶ್ರೀಸಿದ್ಧೇಶ್ವರಸ್ವಾಮಿಗಳು ಮೈಸೂರು ದಿವಾನರಿಗೆ ಬರೆದ ಅರ್ಜಿ. ಪತ್ರ ನಂ. ೮೫]

2

[illegible]

3



1

ದಿ ರಾಯಿಟ್ ಆನರೆಬಲ್ ಗವರ್ನರ ಇನ್ ಕೌನ್ಸಿಲ್ ಬಾಂಬೆ ಇವರ ಸನ್ನಿಧಿಗೆ-

ಕೆಳಗೆ ಸಹಿಮಾಡಿದವರಾದ ನಾವು ವಿನಯ ಪೂರ್ವಕವಾಗಿ ಬರೆದುಕೊಳ್ಳುವದೇನಂದರೆ- ಜಗದ್ಗುರುಗಳಾದ ಶ್ರೀಮನ್ಮಹಾ ತೋಂಟದಾರ್ಯರು ಮಹಾ ತಪಸ್ವಿಗಳೆಂದು ದಿಗಂತ ಕೀರ್ತಿಯನ್ನು ಹೊಂದಿರುವರು. ಪ್ರಾಚೀನ ಕಾಲದಿಂದ ಶ್ರೀ ಮನ್ಮಹಾ ತೋಂಟದಾರ್ಯರು ಮಹಾ ಮಹಿಮರೆಂತಲೂ, ತಮ್ಮ ತಪೋಬಲದಿಂದ ಜಗದೋದ್ಧಾರಕ್ಕಾಗಿ ಅನೇಕ ಮಹತ್ಕಾರ್ಯಗಳನ್ನು ಮಾಡಿದಂಥವರೆಂತಲೂ, ಪ್ರಸಿದ್ಧವಿದೆ. ಮೂಲ ತೋಂಟದಾರ್ಯರು ಧಾರವಾಡ ಜಿಲ್ಹೆ ಗದಗ ತಾಲೂಕ ಪೈಕಿ ಡಂಬಳ ಗ್ರಾಮದಲ್ಲಿ ತಮ್ಮ ವಿರಕ್ತ ಕ್ರಮದ ಮೂಲ ಪೀಠವನ್ನು ಸ್ಥಾಪಿಸಿದ್ದಾರೆ. ತರುವಾಯದಲ್ಲಿ ಈ ಮಹಾಸ್ವಾಮಿಯವರ ಪೀಠದಮೇಲೆ ಬಂದ ಸ್ವಾಮಿ ಪರಂಪರೆಯವರೂ ಸಹಾ ತಮ್ಮ ಸದ್ಗುಣಗಳಿಂದ ಮಹಾ ಯೋಗಿಗಳೆನಿಸಿ ಒಳ್ಳೇ ಘನತೆಯನ್ನು ಹೊಂದಿರುವರು. ಈ ಶ್ರೀಮನ್ಮಹಾ ತೋಂಟದಾರ್ಯರ ಪೀಠದಮೇಲೆ ಈಗಿರುವ ಸ್ವಾಮಿಗಳಾದರೂ ಮಹಾಯೋಗಿಗಳಿದ್ದು ಒಳ್ಳೇ ಸದಾಚಾರ ಸಂಪನ್ನರಿರುತ್ತಾರೆ. ಇದರಿಂದ ಈ ಸ್ಥಳವು ಲಿಂಗಾಯತ ಜಾತಿಯವರಿಗೆ ಪವಿತ್ರವಾದ ಗುರುಸ್ಥಾನವಾಗಿರುತ್ತದೆ.

೨ ಮಹಾಸ್ವಾಮಿಗಳಾದ ಮೂಲ ತೋಂಟದಾರ್ಯರ ಹೆಸರಿನಿಂದ ಇನಾಮವಾಗಿ ಸರಂಜಾಮ ನಡಿಯುವ ಜಮೀನುಗಳೂ, ನಗದ ನೇಮಣೂಕಗಳೂ, ಬೆಳಗಾಂವ, ಧಾರವಾಡ, ವಿಜಾಪುರ, ಕಾರವಾರ ಜಿಲ್ಹೆಗಳಲ್ಲಿಯೂ, ಮದ್ರಾಸ ಮೈಸೂರ ನಿಜಾಮ ಇಲಾಖೆಗಳಲ್ಲಿಯೂ, ಇರುವದ್ದೆ [illegible] ಕಡಿಗೆ ಸಹಾ ಇರುತ್ತದೆ. ಈ ಜಮೀನು ಮತ್ತು ನಗದ ನೇಮಣೂಕಗಳ ಉತ್ಪನ್ನವು ಪ್ರತಿವರ್ಷಕ್ಕೆ ಸುಮಾರು ರೂಪಾಯಿ ಇಪ್ಪತ್ತೈದು ಸಾವಿರ ಇರುತ್ತದೆ.
೨೫೦೦೦

೩ ಈ ಮಹಾಸ್ವಾಮಿಗಳ ವಿರಕ್ತ ಕ್ರಮದ ಮೂಲ ಪೀಠವಾದ ಡಂಬಳ ಮಠಕ್ಕೆ ಒಳಪಟ್ಟ ಎಷ್ಟೋ ಮಠಗಳು ಧಾರವಾಡ, ವಿಜಾಪುರ, ಮೈಸೂರ, ಮುಂತಾದ ಪ್ರಾಂತಗಳಲ್ಲಿರುತ್ತವೆ. ಈ ಯಾವತ್ತು ಮಠಗಳ ಉತ್ಪನ್ನವು ಸುಮಾರು ಹತ್ತು ಲಕ್ಷ ರೂಪಾಯಿ ಇರುತ್ತದೆ.

೪ ಈ ಮಹಾಸ್ವಾಮಿಗಳ ಬಳಿಯಲ್ಲಿರುವ ನವರತ್ನ ಖಚಿತವಾದ, ಹಾರ ಕಿರೀಟಗಳ ಮುಂತಾದ ಒಡವೆಗಳು ಸುಮಾರು ನಾಲ್ಕು ಲಕ್ಷದ ಮೇಲೆ ಇರುತ್ತವೆ.

೫ ಪೂರ್ವದಲ್ಲಿ ಸ್ವಾತಂತ್ರ್ಯದಿಂದ ಆಳುತ್ತಿದ್ದ [illegible] ಮತ್ತು ಬೇರೆ ಕೆಲವರು ಆ ತೋಂಟದ ಮಹಾಸ್ವಾಮಿಯವರಿಗೆ ಇನಾಮವಾಗಿ ಹಾಕಿಕೊಟ್ಟ ಎಷ್ಟೋ ಜಮೀನುಗಳೂ, ಕಟ್ಟಿಸಿಕೊಟ್ಟಂಥ ಎಷ್ಟೋ ಮಠಗಳೂ [illegible] ಕೊಟ್ಟಂಥ ಮುತ್ತು, ರತ್ನ, ವಜ್ರ, ಮುಂತಾದ ಬೆಲೆಯುಳ್ಳ ಒಡವೆಗಳೂ, ಮೈಸೂರ, ಮತ್ತು ನಿಜಾಮ ಸರಕಾರಗಳಿಂದ ಹೊಸತ ಜಮೀನುಗಳೂ, [illegible] ಅವರಿಂದ ಮೊಹರಿನ ಸನದ ಪತ್ರಗಳೂ, ಸಹಾ ಈಗಿರುವ ಮಹಾಸ್ವಾಮಿಗಳವರ ಬಳಿಯಲ್ಲಿ ಈ ವರೆಗೂ ಇರುತ್ತವೆ. ಈ ಮಹಾ ಸ್ವಾಮಿಯವರ ಮೂಲ ಪೀಠ ಡಂಬಳ ಗ್ರಾಮದಲ್ಲಿ ಇರುವ ಪ್ರಯುಕ್ತ, ಡಂಬಳಸಂಸ್ಥಾನ ಮಠವೆಂದು ಪ್ರಸಿದ್ಧ ಇರುತ್ತದೆ. ಮೇಲೆ ಬರೆದ ಸಂಗತಿಗಳ ಮೇಲಿಂದ ಕಂಡುಬರುವದರಲ್ಲಿ ಈ ತೋಂಟದ ಸ್ವಾಮಿಗಳಿಗೆ ಲಿಂಗಾಯತ ಜಾತಿಯವರಿಂದಲೇ ಬಹುಮಾನದ-

[ಗದುಗಿನ ಜಗದ್ಗುರುಗಳನ್ನು ಎರಡನೆಯ ವರ್ಗದ ಸರದಾರರೆಂದು ಪರಿಗಣಿಸಲು ಬ್ರಿಟಿಶ್ ಸರಕಾರಕ್ಕೆ ಅರಟಾಳ ರುದ್ರಗೌಡರು ಬರೆದ ಪತ್ರ. ೧೨೬೫ ಗಣ್ಯಮಾನ್ಯರ ಸಹಿಗಳಿದ್ದ ೪೦ ಪುಟಗಳ ಪುರವಣಿ ಇದೆ. ಪತ್ರ ನಂ. ೮೭]

[illegible]


ಗುರುಸಿದ್ಧಪ್ಪ ಗಿಲಗಂಚಿ ವಗೈರೆ ನಿಸ್ಪೃಹಸ್ಥರು ತಂಮ ಸಿದ್ಧಾಂತಗಳಿಂದಲೂ ಪ್ರಯತ್ನದಲೂ, ಈ ಸರಕಾರದಲ್ಲಿ ದೊಡ್ಡ ಅಧಿಕಾರಗಳನ್ನು ಪಡೆದವರಾಗಿ, ತಂಮ ಸ್ವಜಾತಿಯ ಜನರೊಳಗೆ ವಿದ್ಯಾಭಿವೃದ್ಧಿ ಆಗಬೇಕೆಂದಾಲೋಚಿಸಿ, ದೀರ್ಘ ಪ್ರಯತ್ನವಂನು ಮಾಡಿ, ಲಿಂಗಾಯತ ಎಜ್ಯುಕೇಶನ ಫಂಡ ಎಂಬ ಹೆಸರಿನಿಂದ ಹಣಕೂಡಿಸಿ, ಸರಕಾರದವರ ಆಜ್ಞೆಯಿಂದ ಅದರ ವ್ಯವಸ್ಥೆಯ ಕಮಿಟಿ ಸ್ಥಾಪಿಸಿ ವಿದ್ಯೆಕಲಿಯುವದರಿಂದಾಗುವ ಲಾಭಗಳನ್ನು ತಂಮ ಜಾತಿ ಬಾಂಧವರಿಗೆ ತಿಳಿಯುವಂತೆ ಬೋಧಿಸಿದರು; ಸಾಂಪ್ರತಕ್ಕೆ ಲಿಂಗಾಯತ ಫಂಡಿನ ಸಹಾಯದಿಂದ ಬಹ್ಳೋಜನ ಲಿಂಗಾಯತರು ಮೇಲ್ತರದ ವಿದ್ಯೆಯನ್ನು ಕಲಿಯಲಾರಂಭಿಸಿ, ಬಹ್ಳೋಜನ ವಿದ್ಯಾಬಲದಿಂದ ತಕ್ಕತಕ್ಕ ಪದವಿಗಳನ್ನು ಹೊಂದುತ್ತಲಿದ್ದಾರೆ.

೧೧ ಈ ಕರ್ನಾಟಕದಲ್ಲಿ ಲಿಂಗಾಯತರು ದೊಡ್ಡದಾದ ಹುದ್ದೆ ಕೆಲಸಗಳಲ್ಲಿ ಮುಂದಕ್ಕೆ ಇರುತ್ತಿರುವದನ್ನು ನೋಡಿ ಸರಕಾರದವರು ೧೯೧೯ನೆಯ ಇಸವಿಯ ಜಾಹೀರನಾಮೆದಲ್ಲಿ ಅಭಿವಚನ ಕೊಟ್ಟ ಪ್ರಕಾರ ಕೈಲಾಸವಾಸಿ ರಾವಸಾಹೇಬ ಗುರುಸಿದ್ಧಪ್ಪ ಗಿಲಗಂಚಿ ಇವರನ್ನು ೧೯೨೧ ನೇ ಇಸವಿಯಲ್ಲಿ, ಕಾಯದೆ ಕೌನ್ಸಿಲ್ ಮೆಂಬರರೊಳಗೆ, ಸೇರಿಕೆ ಮಾಡಿದರು. ಆಮೇಲೆ ಸರಕಾರದವರು ೧೯೨೩ ನೇ ಇಸವಿಯಲ್ಲಿ ರಾವಸಾಹೇಬ ಶ್ರೀಯುತ ಲಿಂಗಪ್ಪ ಬಾಯಪ್ಪ ಸರದೇಸಾಯಿ ಸಂಸ್ಥಾನ ಶಿರಸಂಗಿ, ಇವರನ್ನು ಕಾಯದೆ ಕೌನ್ಸಿಲ್ದ ಮೆಂಬರರೊಳಗೆ ತಕ್ಕೊಂಡರು. ನಂತರ ೧೯೨೭ ಇಸವಿಯಿಂದಾ ರಾವಸಾಹೇಬ ಶ್ರೀಮಂತ ಒಡೆಯ ರಾಜಾ ಬಸವ ಪ್ರಭು ಸರದೇಸಾಯಿ ಸಂಸ್ಥಾನ ವಂಟಮುರಿ, ಇವರು ಕಾಯದೆ ಕೌನ್ಸಿಲ್ ಮೆಂಬರರಾಗಿದ್ದರು.

೧೨ ಲಿಂಗಾಯತರು ಇಷ್ಟರಮಟ್ಟಕ್ಕೆ ವಿದ್ಯೆಯಂನು ಕಲಿತು ಸರಕಾರದಲ್ಲಿ ದೊಡ್ಡದೊಡ್ಡ ಉದ್ಯೋಗಗಳನ್ನು ಮಾಡಲಾರಂಭಿಸಿದ್ದರಿಂದ ಸರಕಾರದಲ್ಲಿ ಬೇರೆ ಜಾತಿಯವರಲ್ಲಿ ಗುರುಗಳಿಗೆ ಬಹುಮಾನ ಸಿಕ್ಕಂತೆ ತಂಮ ಗುರುಗಳಾದ ಶ್ರೀ ಮನ್ಮಹಾ ತೋಂಟದ ಸ್ವಾಮಿಗಳಿಗೆ ಸಹಾ ಸರಕಾರದಲ್ಲಿ ಬಹುಮಾನ ಸಿಗುವದು ನ್ಯಾಯಕ್ಕೆ ಮತ್ತು ನೀತಿಗೆ ಸರಿಯಾದ ಸಂಗತಿಯಂತಾ ಈ ವರೆಗೆ ನಮ್ಮಗೆ ಸಿಗದೇ ಇರುವದು ನಮ್ಮ ದುರ್ಭಾಗ್ಯವೇ ಸರಿ.

೧೩ ನ್ಯಾಯದಿಂದ ಪರಿಪಾಲನೆ ಮಾಡುವ ಮಹಾರಾಣಿ ಸಾಹೇಬರವರು ತಂಮ ಆಳುವಿಕೆಯಲ್ಲಿ ತಂಮ ಪ್ರಜರು ಸಹಾ ಸುಖಸಂತೃಪ್ತಿಯಿಂದ ಇರಬೇಕೆಂದು ಇಚ್ಛಿಸುವದರಿಂದ ಮತ್ತು ೧೮೫೮ ನೇ ಇಸವಿಯ ಜಾಹೀರನಾಮೆಯಲ್ಲಿ ಅಭಿವಚನ ಕೊಟ್ಟ ಪ್ರಕಾರ ನಾವು ವಿನಯಪೂರ್ವಕವಾಗಿ ಬೇಡಿಕೊಳ್ಳುವದೇನಂದರೆ ಈ ಶ್ರೀ ಮನ್ಮಹಾ ತೋಂಟದ ಸ್ವಾಮಿಯವರಿಗೆ ಲಿಂಗಾಯತ ಜನರೊಳಗೆ ಬಹುಮಾನ ಸಿಕ್ಕಂತೆ ದರ್ಬಾರ ಪ್ರಸಂಗಗಳಲ್ಲಿ ಸಹಾ, ಈ ಮಹಾಸ್ವಾಮಿಯವರಿಗೆ ಬಹುಮಾನ ಇರುವದಕ್ಕೋಸ್ಕರ ಶ್ರೀ ಮನ್ಮಹಾ ತೋಂಟದ ಸ್ವಾಮಿ ಗುರು ತೋಂಟದ ಸ್ವಾಮಿ, ಸಂಸ್ಥಾನ ಮಠ ಡಂಬಳ, ಇವರಂನು ಒಂದನೇ ವರ್ಗ ಸರದಾರ ಲಿಷ್ಟಿನಲ್ಲಿ ದಾಖಲ ಮಾಡಬೇಕು.

೧೪ ಈ ವಿನಂತಿಯನ್ನು ಸರಕಾರದವರು ತಂಮ ದಿವ್ಯಚಿತ್ತಕ್ಕೆ ತಂದು ಸಫಲಮಾಡಬೇಕೆಂದು ಕೆಳಗೆ ಸಹಿ ಮಾಡಿದ ನಾವೆಲ್ಲರು ಪ್ರಾರ್ಥನೆ ಮಾಡಿಕೊಳ್ಳುತ್ತೇವೆ.



4

[illegible]

Lakhamgauda. B.
Sir Desai of Vantmuri

[illegible]

1

ಎಡೆಯೂರು ಸಿದ್ಧಲಿಂಗೇಶ್ವರಸ್ವಾಮಿ ಕ್ಷೇತ್ರ / ಮಠದ ಪ್ರಾಂಗಣದಲ್ಲಿರುವ ಶಿಲಾ ಶಾಸನ

1 ಕೊಡಗಿ[illegible]ಯುವೆ[illegible]ಉ[illegible]ವದುತಪಭೂಮಿದುರಿತ[illegible]ದಸ್ವಾಮಿ

2 ಗೆತಮುಭಕ್ತಿಯಿಂತಾಕಟ್ಟಿಸಿಕೊಟ್ಟಮಠ ಮಿಮುಖಿದ್ದೇಶ್ವರನತಿಶಯದೆಂತಂದ

3 ಡೆಶ್ರಿಮುತುಸಟಿದಾನಂದ[illegible]ಸೌಖ್ಯಸುಖಿತಸಾದಿಭಕ್ತ ಭಕ್ತನಹೃದಯದಲ್ಲಿಜಂ

4 ಗಮುಡಂಗವುದದುಕ[illegible]ದಲ್ಲಿರೂವ್ಯಲಿಂಗಲಿಂಗದಲ್ಲಿಟಿವ[illegible]ಶಕ್ತಿ ಪಂಚ

5 ಶಕ್ತಿ ಪಂಚನ[illegible]ದವ[illegible]ಪ್ರಂಪಲಿಕ್ಕತಾಷ್ಟಕಮುಖ[illegible]ಪಂಚ[illegible]ಸೆತಿ[illegible]ದ್ರೇಶಾ

6 ವರತ್ರಯುಮಯ[illegible]ತ್ಯಾಗಭೋಗ[illegible]ಟರೂತಿ[illegible]ಯಿಂತಿ[illegible]ಭತೂದುವುತ್ತಿ

7 ಯಿಲಿಂಗವಾಗಿ[illegible]ಶಸೇ[illegible]ನಾದಿ[illegible]ಭಕ್ತನ[illegible]ತಂಸ್ವ

8 ರ[illegible]ಸಿದ್ಧಲಿಂಗೇಶ್ವರ[illegible]ಸಿದ್ಧಲಿಂಗೇಶ್ವರ[illegible]

9 [illegible]ರಸು[illegible]ವೇ[illegible]ವೇದ[illegible]ಯುಷ್ಯ[illegible]ವ[illegible]ದಳವಂ

10 [illegible]ಗಳ[illegible]ದಿ[illegible]ವಜಳವ

11 [illegible]ಗಳ[illegible]ಸಯ[illegible]

12 [illegible]ಗಳ[illegible]ಲಿಂಗ[illegible]

13 [illegible]ಗಳ[illegible]ಕುಲ[illegible]ಗಳ[illegible]ಸುದ್ರಂಗ

14 [illegible]ಗಳ[illegible]ಗಳ[illegible]ಸ್ಥಲ[illegible]

15 [illegible]ಕಾಲ[illegible]

16 [illegible]ಸದ್ಗುಣ[illegible]ಕುಲ[illegible]ಯಿಂ[illegible]ಜಂಗಮವ

17 ಜಗದಿಹಾತ್ಮ[illegible]ಗಿ[illegible]ಸದಕ್ರಿಯ[illegible]ಜ್ಞಾನಕ್ರಿಯಾ[illegible]ರೂಪ[illegible]ಸರ್ವಾಂಗಲಿಂ

18 ಗಿಪಟ್ಟ[illegible]ಲಗ್ನ[illegible]ನಿಸರ್ವಾಚಾರ[illegible]ಸಂಪನ್ನ[illegible]ದರ[illegible]ಪ್ರತಿಷ್ಟಾಚಾರ್ಯ[illegible]

19 ಶಿಷ್ಯ[illegible]ಲಂಕರಣಾದ್ವೈತ[illegible]ತಿವಿರ[illegible]ನು ಯಿಂತಪ್ಪದಿವ್ಯ[illegible]ಗಿಸಿದಲಿ

20 ಂಗೇಶ್ವರಂಗೆಸಮ್ಯಗ್ಜ್ಞಾನ[illegible]ಮವಾಗಿ[illegible]ಸಿಷ್ಯಜನಂ

21 ಗಳನಾಮದರಿ[illegible]ಮಂಗಳ[illegible]ದೇವರು[illegible]ಸಿದ್ಧದೇವರುನಂಜೇದೇ

22 ವರು[illegible]ಬಸವರಾಜದೇವರುಗು[illegible]ಸಿದ್ಧಲಿಂಗದೇವ[illegible]ದೇವರು[illegible]

23 [illegible]ಸಿದ್ಧ[illegible]ದೇವರು[illegible]ದೇವರುಚಿಟ್ಟಗದೇವ[illegible]ಮುಕ್ತ[illegible]ಭಕ್ತ[illegible]

24 [illegible]ಸ್ವರಗ್ಗ[illegible]ಲಗ್ನ[illegible]ಲಿಂಗಾಂಗಸಂಬಂಧ[illegible]ಮುಕ್ತ[illegible]ನಂ

25 [illegible]ಸ್ತ[illegible]ಯವಾಗಿ[illegible]ಗಳೆಲ್ಲಾ ನಿಷ್ಪತ್ತಿಯಾಗಿಯಡೆಯೂರಲ್ಲಿ[illegible]ಗೆಕಟ್ಟ

26 ಸಿದ[illegible]ದಲ್ಲಿ[illegible]ಗ[illegible]ರಾದಾದಾ

27 ನಿವಾಸ[illegible]ಗಳ[illegible]ರಾಯ[illegible]ಯರಮಕ್ಕಳು ಲಿಂಗಪ್ಪವಡೆ

28 ಯರುಲಿಂಗಪ್ಪವಡೆಯರಮಕ್ಕಳು[illegible]ದ[illegible]ಪ್ರಸಾದ[illegible]ಚೆನ್ನ ವೀರಪ್ಪ[illegible]ಚೆಂನ

29 ವೀರಪ್ಪವಡೆಯರಸತಿ[illegible]ದಂಪತಿಗಳು[illegible]ಭಕ್ತಿಯಿಂ[illegible]ಸ್ವಾಮಿಗೆ[illegible]ಕಟ್ಟ


30 [illegible]ಚಿಟ್ಟಗದೇವರಿಗೆ[illegible]ಭಕ್ತಿ[illegible]


31 [illegible]ಸ್ವಾಮಿಗೆ[illegible]ಡೆಯ[illegible]

32 [illegible]ಚಿಟ್ಟಗದೇವರುಕಟ್ಟಿಸಿದ[illegible]ಸ್ತ[illegible]ನಿತ್ಯ[illegible]ವಂ

33 [illegible]

34 [illegible]ಮಲ್ಲಿಕಾರ್ಜುನದೇವ[illegible]ಚಿಟ್ಟಗದೇವರು[illegible]





ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ : 97390 67359